UNIVERSAL LIBRARY
OU_200058
UNIVERSAL LIBRARY

ಸದ್ಬೋಧ ಚಂದ್ರಿಕೆಯ ಗ್ರಂಥಮಾಲೆ

# ಮರಾಟರ ಅವನತಿ

ಅಥವಾ

## ಪ್ಲೈಸಿಲೀ.


—: ಲೇಖಕ :—

ರಾಮಚಂದ್ರ ತ್ರ್ಯಂಬಕ ಕರ್ಪೂರ

ಆನಂದವನ



—: ಪ್ರಕಾಶಕ :—

ವಾಮನ್. ಬಿ. ಕುಲಕರ್ಣಿ,

ಎಡಿಟರ್, ಸದ್ಬೋಧ ಚಂದ್ರಿಕೆ,

ಆನಂದವನ-ಅಗಡಿ.



( ಎಲ್ಲ ಹಕ್ಕುಗಳು ಪ್ರಕಾಶಕರಿಂದ ಕಾಯ್ದಿಡಲ್ಪಟ್ಟಿವೆ. )



1920

ಬೆಲೆ ೧೪ ಆಣೆ.

# ಪ್ರಸ್ತಾವನೆ

ಕೇವಲ ಭಾಷಾಂತರ ಮಾಡುವದರಲ್ಲಿಯೇ ಮಗ್ನನಾದ ಯಾವನೊಬ್ಬ ಲೇಖಕನು ತಾನು ಭಾಷಾಂತರಿಸುವ ಪುಸ್ತಕವು ಎಷ್ಟು ವರ್ಷಗಳ ಪೂರ್ವದಲ್ಲಿ ಬರೆಯಲ್ಪಟ್ಟದ್ದು, ಆನಂತರ ಆ ವಿಷಯದ ಬಗ್ಗೆ ಹೊಸಸಂಗತಿಗಳೇನಾದರೂ ಉಪಲಬ್ಧವಾಗಿರುವವೋ ಹೇಗೆ, ಮುಂತಾದ ಸಂಗತಿಗಳ ಕಡೆಗೆ ಲಕ್ಷಕೊಡದ್ದರಿಂದ, ಅವನಿಂಗ ಅವತರಿಸಲ್ಪಡುವ ಗ್ರಂಥವು ಸರ್ವಾಂಗ ಸುಂದರವಾಗಲಾರದೆಂಬದು ನಿರ್ವಿವಾದವು. ನಮ್ಮ ಕನ್ನಡ ಗ್ರಂಥಗಳು ಸರ್ವಾಂಗ ಸುಂದರವಾಗದಿರಲಿಕ್ಕೆ ಉಂಟಾಗುವ ಕಾರಣಗಳಲ್ಲಿ ಮೇಲೆ ವಿವರಿಸಿದ ಕಾರಣವೂ ಒಂದಾಗಿದೆ. ಆದರೆ ಇಂಗ್ಲಿಷ, ಮಹಾರಾಷ್ಟ್ರ, ಗುಜರಾಥೀ, ಬಂಗಾಲೀ ಮುಂತಾದ ಭಾಷೆಯ ಲೇಖಕರ ಪುಸ್ತಕಗಳು ಸರ್ವಾಂಗಸುಂದ ವಾಗಲಿಕ್ಕೆ ಆಯಾ ಲೇಖಕರ ಅಖಂಡವಾಚನ, ಬಹುಶ್ರುತತ್ವ ಸಾಧನ-ಸಾಮಗ್ರಿ ಮುಂತಾದವುಗಳು ಕಾರಣವಾಗಿರುತ್ತವೆ.

ಈ "ಮರಾಟರ ಅವನತಿ"ಯೆಂಬ ಕಾದಂಬರಿಯ ವಿಷಯವು ಮಹಾರಾಷ್ಟ್ರ ಭಾಷೆಗಳಲ್ಲಿ ಪ್ರಸಿದ್ಧವಾಗಿರುವ "ಪಾಲನಚ್ಯೆರಾಗೀಣ", "ಪಾನಿಪತ್ತಚಾ ಮೊಕಾಬಲಾ", "ಭಾವೂಸಾಹೇಬಾಂಚಿ ಬಖರ" ಹಾಗೂ "ದುರ್ದೈವೀ ರಂಗೂ" ಮುಂತಾದ ಪುಸ್ತಕಗಳಲ್ಲಿ ವರ್ಣಿಸಲ್ಪಟ್ಟಿದ್ದರೂ, ಆ ಎಲ್ಲ ಪುಸ್ತಕಗಳೊಳಗಿನ ಐತಿಹಾಸಿಕ ಸಂಗತಿಗಳನ್ನು ಮಾತ್ರ ತಕ್ಕೊಂಡು ನಿಜವಾದ ಇತಿಹಾಸಕ್ಕೆ ಸ್ವಲ್ಪವೂ ವ್ಯತ್ಯಯು ಬರದಂತೆ ಪ್ರಸ್ತುತ ಪುಸ್ತಕವನ್ನು ಬರೆದಿರುತ್ತದೆ. ಕಾದಂಬರಿಕಾರರು ತಮ್ಮ ಕಾದಂಬರಿಯು ಸವಿಕಟ್ಟಾಗಬೇಕೆಂದು ಅಪ್ರಾಸಂಗಿಕ ವರ್ಣನೆಗಳನ್ನು ಸೇರಿಸಿ ಕಾಲಪರಿಸ್ಥಿತಿಯ ಹಾಗು ಐತಿಹಾಸಿಕ ಸಂಗತಿಗಳ ವಿಪರ್ಯಾಸವನ್ನು ಮಾಡುತ್ತಿರುವರು; ಆದರೆ ಪ್ರಸ್ತುತ ಕಾದಂಬರಿಯನ್ನು ರಚಿಸುವಾಗ್ಗೆ ಇದರಲ್ಲಿ ಅಂಥ ಹುಚ್ಚಿಗೆ ಹೋಗಿರುವದಿಲ್ಲ. ಇದಲ್ಲದೆ ಸಾಮಾಜಿಕ ವಿಚಾರಗಳು ಅಲ್ಲಲ್ಲಿ ಕಾಲಮಾನ ಪರಿಸ್ಥಿತಿಯಂತೆ ವಿವೇಚಿಸಲ್ಪಟ್ಟಿದ್ದರಿಂದ ರಸಿಕರಾದ ನಮ್ಮ ವಾಚಕರಿಗೆ ಈ ಬೋಧಪರಕಾದಂಬರಿಯು ರುಚಿಸಿರಬಹುದೆಂದು ನಮ್ಮ ನಂಬಿಗೆಯುಂಟು. ಆದರೆ ವಾಚಕರ ಅನುಭವವನ್ನು ನಾವು ಹ್ಯಾಗೆ ಹೇಳೋಣ? ಇರಲಿ;

ನಮ್ಮ ವಾಚಕರಿಗೆ ಈ ಬೋಧಪರಕಾದಂಬರಿಯು ರುಚಿಸಿರಬಹುದೆಂದು ನಮ್ಮ ನಂಬಿಗೆಯುಂಟು. ಆದರೆ ವಾಚಕರ ಅನುಭವವನ್ನು ನಾವು ಹ್ಯಾಗೆ ಹೇಳೋಣ? ಇರಲಿ;

ಚಂದ್ರಿಕೆಯ ಆಶ್ರಯದಾತೃಗಳು ಚಂದ್ರಿಕೆಯನ್ನು ಅತ್ಯಂತ ಪ್ರೀತಿಯಿಂದ ತರಿಸಿಕೊಂಡು ಚಿಕಿತ್ಸಕಬುದ್ಧಿಯಿಂದ ಓದಹತ್ತಿದ್ದರಿಂದ ಚಂದ್ರಿಕೆಯ ಚಾಲಕರಲ್ಲಿಯೂ ಲೇಖಕರಲ್ಲಿಯೂ ಹೆಚ್ಚು ಹುರುಪು ಹುಟ್ಟುತ್ತಿರುವದು. ಅವರು ಹೆಚ್ಚು ಪರಿಶ್ರಮಬಟ್ಟು ಮುಂದಿನವರ್ಷ ಕನ್ನಡಿಗರ ಸೇವೆಯನ್ನು ಮಾಡಬೇಕೆಂದಿರುವರು. ವಾಚಕರು ಅವರ ಸೇವೆಯನ್ನು ಎಂದಿನಂತೆ ಸ್ವೀಕರಿಸಬೇಕಾಗಿ ಕೋರಿಕೆ

ಕಾಗದಗಳ ತುಟ್ಟಿಗ್ರತೆಯ ಮೂಲಕ,—ಒಂದುವೇಳೆ ಅಭಾವದ ಮೂಲಕ ಅಂದರೂ ಚಿಂತೆಯಿಲ್ಲ;—ಬಗೆಬಗೆಯ ಕಾಗದಗಳನ್ನು ಈ ಕಾದಂಬರಿಗೆ ಉಪಯೋಗಿಸಬೇಕಾಯಿತು. ಹಾಗು ಹಸ್ತದೋಷ, ಮುದ್ರಾದೋಷಗಳಿಂದ ಈ ಕಾದಂಬರಿಯಲ್ಲಿ ಕೆಲವು ತಪ್ಪುಗಳೂ ಉಳಿದಿರಬಹುದು. ವಾಚಕರು ಆ ಬಗ್ಗೆ ಕ್ಷಮಿಸಬೇಕು.

ಆನಂದವನ, ತಾ|| ೧।೨।೨೧

ವಿಧೇಯ

ಕರ್ಪೂರ.

# ಅನುಕ್ರಮಣಿಕೆಯು.


| ಪ್ರಕರಣ. | ವಿಷಯ. | ಪುಟ |
|---|---|---|
| ೧ | ದರಬಾರ. | ೧ |
| ೨ | ಭವಿತವ್ಯ. | ೧೨ |
| ೩ | ದಾಂಪತ್ಯಪ್ರೇಮ. | ೨೨ |
| ೪ | ತ್ರ್ಯಂಬಕಶಾಸ್ತ್ರಿಯು. | ೨೮ |
| ೫ | ಮಹಮ್ಮದಶಹನು ಮುಂಗನಾದನು. | ೩೮ |
| ೬ | ಭಯಂಕರಪ್ರಸಂಗ. | ೪೬ |
| ೭ | ಪೌರುಷಪ್ರದರ್ಶನ. | [illegible] |
| ೮ | ತ್ರಿದೋಷಸಂಚಯು. | ೬೫ |
| ೯ | ವಿಷವೃಕ್ಷ. | ೭೩ |
| ೧೦ | ಸಂಗ್ರಾಮದ ಮಂಗಲಾಚರಣ. | ೮೧ |
| ೧೧ | ಹಾ! ನರವೀರನೆ!! | ೯೦ |
| ೧೨ | ಸತೀಧರ್ಮ. | ೯೮ |
| ೧೩ | ಹೊನ್ನು-ಹೆಣ್ಣುಗಳ ಹುಚ್ಚು. | ೧೦೫ |
| ೧೪ | ಬೂದಿಮುಚ್ಚಿದ ಕೆಂಡ. | ೧೧೪ |
| ೧೫ | ದೈವದುರ್ವಿಲಾಸ. | ೧೨೨ |
| ೧೬ | ಶೂರರ ಕೆಚ್ಚೆದೆ. | ೧೩೧ |
| ೧೭ | ಅವನತಿಯ ಅಸ್ತಿವಾರ. | ೧೩೭ |
| ೧೮ | ಉಪಸಂಹಾರ. | ೧೪೪ |



ಆನಂದವನ-ಅಗಡಿಯ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ

ಭಿ. ಪ. ಕಾಳೆ, ಇವರಿಂದ ಛಾಪಿಸಲ್ಪಟ್ಟಿತು.

# ಮರಾಠರ ಅವನತಿ

ಅಥವಾ

# ದೈವ ಲೀಲೆ.

ಒಂದನೆಯ ಪ್ರಕರಣ.

## ದರ್ಬಾರ.

ಮಾಂಜರಾನದೀತೀರವು; ಪ್ರಶಸ್ತವಾದ ಬೈಲಲ್ಲಿ ಡೇರೆಗಳೂ, ರಾವುಟಿಗಳೂ ಒಪ್ಪುತ್ತಲಿವೆ; ಭಗವಾನ್ ಸೂರ್ಯನಾರಾಯಣನು ಆದೇ ಉದಯಹೊಂದಿದ್ದರಿಂದ, ಆತನ ಹೊಂಬಣ್ಣದ ಬಾಲ ಕಿರಣಗಳು ನದಿಯ ನೀರಮೇಲೂ, ಡೇರೆಗಳ ಸುವರ್ಣಮಯ ಕಳಸಗಳ ಮೇಲೂ ಬಿದ್ದು, ವಿಲಕ್ಷಣ ಶೋಭೆಯನ್ನುಂಟುಮಾಡುತ್ತಲಿವೆ; ಸಾಲುಸಾಲಾಗಿ ಒಪ್ಪುವ ಛಾವಣಿಯು ಬೇರೆ ಬೇರೆ ಭಾಗಗಳಿಂದ ಆ ಪ್ರದೇಶವು ಒಂದು ಸುಂದರವಾದ ಪಟ್ಟಣದಂತೆ ರಮಣೀಯವಾಗಿ ತೋರುತ್ತಲಿದೆ; ನೋಡಿದತ್ತೆಲ್ಲ ಛಾವಣಿಯ ಜನರಲ್ಲಿ ವಿಚಿತ್ರ ಚಟುವಟಿಕೆಯು ಪ್ರಕಟವಾಗುತ್ತಲಿದೆ; ಕೆಲವರು ಕುದುರೆಗಳನ್ನು ಶೃಂಗರಿಸುತ್ತಿದ್ದರೆ, ಹಲವರು ಆನೆಗಳನ್ನು ಅಲಂಕರಿಸತೊಡಗಿದ್ದಾರೆ; ಮತ್ತೆ ಕೆಲವರು ಪಲ್ಲಕ್ಕಿಗಳನ್ನೂ, ಮೇಣೆಗಳನ್ನೂ ಸಜ್ಜುಗೊಳಿಸುತ್ತಲಿದ್ದಾರೆ; ಇಂಥ ಮನೋಹರವಾದ ಪ್ರಭಾತಸಮಯದಲ್ಲಿ ಛಾವಣಿಯ ಮಧ್ಯಭಾಗದೊಳಗಿನ ಒಂದು ದೊಡ್ಡ ಬೀದಿಯಲ್ಲಿ ಒಬ್ಬ ರಾವುತನು ಅರಬೀಜಾತಿಯ ಬೆಟ್ಟದಂಥ ಕುದುರೆಯ ಮೇಲೆ ಕುಳಿತು ಸಾಗಿದ್ದನು. ಆತನು ಮೈಮೇಲೆ ಒಂದು ತಿಳುವಾದ ರೇಶ್ಮಿಯ ಸೈಲಾದ ಬಂಡಿಯನ್ನು ತೊಟ್ಟಿದ್ದು, ತಲೆಗೆ ಜರತಾರಿಯ ಶಲ್ಲೆಯನ್ನು ಸುತ್ತಿದ್ದನು. ಆತನ ಕಿವಿಯೊಳಗಿನ ದೊಡ್ಡ ಮುತ್ತುಗಳ ಶುಭ್ರಕಾಂತಿಯು, ಕೊರಳಲ್ಲಿ ಒಪ್ಪುವ ಕಂಠಿಯ ಪಚ್ಚೆರತ್ನದ ಹಸರುಪ್ರಕಾಶದಲ್ಲಿ ಮಿಶ್ರವಾಗಿ ಆತನ ಸುಂದರವಾದ ಮುಖಮಂಡಲದ ಶೋಭೆಯನ್ನು ಹೆಚ್ಚಿಸುತ್ತಿತ್ತು. ಆತನ ನಿಡಿದಾದ ತೋಳುಗಳೂ, ಉತ್ನತವಾದ ವಕ್ಷಸ್ಥಳವೂ, ಭವ್ಯವಾದ ಶರೀರವೂ ಪ್ರೇಕ್ಷಕರನ್ನು ದಂಗುಬಡಿಸುತ್ತಿದ್ದವು; ಆತನ ಮುಖಮುದ್ರೆಯು ವಿಲಕ್ಷಣ ಗಾಂಭೀರ್ಯವನ್ನು

ತಾಳಿತ್ತು; ಆತನು ಕುದುರೆಯ ಕಡಿವಾಣವನ್ನು ಸಡಿಲುಬಿಟ್ಟು, ನೆಲಕ್ಕೆ ಕೈಹಚ್ಚಿ ಮುಜುರೆಮಾಡುವ ಜನರ ಮುಜುರೆಗಳನ್ನು ಆದರದಿಂದ ಸ್ವೀಕರಿಸುತ್ತ, ಮೆಲ್ಲ ಮೆಲ್ಲನೆ ಸಾಗಿರಲು, ಸುಮಾರು ಒಂದು ತಾಸು ಹೊತ್ತು ಏರಿರುವಾಗ ಆತನ ಕುದುರೆಯು ಥುವಣಿಯ ಕಡೆಯ ಉಕ್ಕಡದಲ್ಲಿರುವ ಒಂದು ಭವ್ಯವಾದ ಮಂಟಪದ ಬಳಿಗೆ ಬಂದಿತು.

ಛತ್ರಪತಿ ಶಿವರಾಜನ ಅಷ್ಟಪ್ರಧಾನರಲ್ಲಿ ಪೇಶ್ವೆಯವರ ಮನೆತನವು ಪ್ರಸಿದ್ಧವೆಂಬದನ್ನು ಇತಿಹಾಸಜ್ಞರಾದ ನಮ್ಮ ವಾಚಕರು ಬಲ್ಲರಷ್ಟೇ; ಈ ಪೇಶ್ವೆಯ ಮನೆತನದಲ್ಲಿ ಬಾಜೀರಾವ ಬಲ್ಲಾಳನೆಂಬ ಶೂರ ಪುರುಷನು ಉದಯಿಸಿ, ಶಿವಾಜಿಯ ತರುವಾಯ ಮರುಕಳಿಗೆ ಬಂದಿದ್ದ ಮರಾಟಾ ಸಾಮ್ರಾಜ್ಯವನ್ನು ತನ್ನ ಬಾಹುಬಲದಿಂದ ಸ್ಥಿರಗೊಳಿಸಿ, ಅದನ್ನು ಕರ್ನಾಟಕದಿಂದ ಪಂಜಾಬದವರೆಗೆ ಹಬ್ಬಿಸಿದನು; ಈ ರಣಶೂರನ ಪುಣ್ಯದಿಂದ ಮರಾಟರ ಗೌರವವು ಹೆಚ್ಚಿ, ಅವರ ವಿಜಯ ದುಂದುಭಿಯ ಗಂಭೀರಧ್ವನಿಯು ಆ ಸೇತುಹಿಮಾಚಲದವರೆಗೆ ದಿಮಿಗುಟ್ಟತೊಡಗಿತು; ಮೊಗಲ ಬಾದಶಾಹೀ ಅಧಿಕಾರವು ನಾಮಶೇಷವಾಗಿ ಮರಾಟರ ಪ್ರಸ್ಥವು ಬೆಳೆಯಿತು; ಸಿಂಧೆ-ಹೋಳಕರರು ಬೆಳಕಿಗೆ ಬಂದು, ಉತ್ತರಹಿಂದುಸ್ಥಾನದಲ್ಲಿ ಮೆರೆಯುತೊಡಗಿದರು; ಹೀಗೆ ಭಾರ್ಗವ ರಾಮನಂತೆ ಪ್ರತಾಪಶಾಲಿಯಾದ ಬಾಜೀರಾಯನು ರಣಪಾಂಡಿತ್ಯವನ್ನು ತೋರಿಸದಿದ್ದರೆ, ಮಹಾರಾಷ್ಟ್ರರಾಜ್ಯವು ಯಾವಾಗಲೋ ನಿರ್ನಾಮವಾಗಿ ಹೋಗುತ್ತಿತ್ತೆಂಬದನ್ನು ಒಡೆದು ಹೇಳಲವಶ್ಯವಿಲ್ಲ.

ಈ ಮೇರೆಗೆ ಪರಮತೇಜಸ್ವಿಯಾದ ಬಾಜೀರಾವ ಪೇಶ್ವೆಯ ಕಾಲದಲ್ಲಿ ಮರಾಟರ ನಿಜವಾದ ರಾಜ್ಯಸೂತ್ರವು ಪೇಶ್ವೆಯವರ ಮನೆತನವನ್ನು ಆಶ್ರಯಿಸಿದ್ದರಿಂದ ಈ ಅಧಿಕಾರವು ಪರಂಪರಾಗತವಾಗಿ ಮುಂದೆ ಅವರ ಮನೆತನಕ್ಕೇ ನಡೆಯತೊಡಗಿತು. ಬಾಜೀರಾಯನ ತರುವಾಯ ಆತನ ಮಗನಾದ ನಾನಾಸಾಹೇಬನು ಪೇಶ್ವಾಯಿಪದಾರೂಢನಾಗಿ ಮರಾಟಾ ಸಾಮ್ರಾಜ್ಯದ ಅಧಿದೇವತೆಯಾದನು. ನಾನಾಸಾಹೇಬನು ಶೂರನೂ, ನಾಮಾಂಕಿತ ಮುತ್ಸದ್ದಿಯೂ ಇದ್ದದರಿಂದ ಮರಾಟಾಸಾಮ್ರಾಜ್ಯವಲ್ಲಿಯು ಕುಡಿಯಿಡತೊಡಗಿತು. ಈ ಕಡುಗಲಿಯಾದ ನಾನಾಸಾಹೇಬನಿಗೆ 'ರಾಘೋಬಾ' ಹಾಗು 'ಸದಾಶಿವರಾವ ಉರ್ಫ ಭಾವೂಸಾಹೇಬ' ಎಂಬ ಇಬ್ಬರು ರಣಧೀರರಾದ ತಮ್ಮಂದಿರ ಬೆಂಬಲವಿದ್ದದರಿಂದ ಹಾ ಹಾ ಅನ್ನುವಷ್ಟರಲ್ಲಿ ಸಾಮ್ರಾಜ್ಯವಲ್ಲಿಯು ಪುಷ್ಪ, ಫಲಭಾರಗಳಿಂದಲಂಕೃತವಾಗಿ ವೈಭವಶಿಖರಕ್ಕೆ ಏಱಿತು. ಮರಾಟರ ಈ ಹೆಚ್ಚಳವನ್ನೂ ಅಬ್ಬರವನ್ನೂ ಕಂಡು ಉತ್ತರ ಹಿಂದುಸ್ಥಾನದಲ್ಲಿಯ ಮುಸಲ್ಮಾನ ನರಶಾರ್ದೂಲಗಳು ಗಡಗುಟ್ಟನಡುಗುತ್ತಿ

ದ್ದರೂ ಹೊಟ್ಟೇಕಿಚ್ಚಿನಿಂದ ಬೆಂದು ಬೆಂಡಾಗುತ್ತಿದ್ದರು. ಒಹು ಕಾಲದವರೆಗೆ ಹಿಂದುಸ್ಥಾನದಲ್ಲಿ ಸಾಮ್ರಾಜ್ಯ ಸುಖವನ್ನು ಅನುಭವಿಸಿ ಸವಿಗಂಡ ಮುಸಲ್ಮಾನರಿಗೆ ಮರಾಟರ ದರ್ಪವು ಸಹನವಾಗಲಿಲ್ಲೆಂಬದು ಆಶ್ಚರ್ಯವಲ್ಲ; ಅವರು ಹೊತ್ತು ಸಾಧಿಸಿ ಮರಾಟರನ್ನು ಮುರಿಬಡಿಯುವ ಯತ್ನದಲ್ಲಿರಲು, ಅಹಮ್ಮದಶಹಾ ಅಬ್ದಾಲಿ ಎಂಬ ಪಠಾಣರಾಜನು ಅವರಿಗೆ ಬೆಂಬಲವಾಗಿ ಬಂದು ಉತ್ತರ ಹಿಂದುಸ್ಥಾನದಲ್ಲಿ ಕೊಲೆಸುಲಿಗೆಗಳನ್ನು ನಡಿಸಿದನು. ಅಬ್ದಾಲಿಯು ಕಾಟದಿಂದ ಸಿಂಧೆ, ಹೋಳಕರರು ತ್ರಸ್ತರಾದರು; ಮರಾಟರ ಒಂದೊಂದೇ ಪ್ರಾಂತಗಳು ಕೈಬಿಡತೊಡಗಿದವು; ಹೀಗೆ ಉತ್ತರ ಹಿಂದುಸ್ಥಾನದಲ್ಲಿಯು ಸ್ಥಿತಿಯಾಗಿರಲು, ಇತ್ತ ದಕ್ಷಿಣದಲ್ಲಿನಿಜಾಮನೂ ಮರಾಟರನ್ನು ವಿರೋಧಿನಿಂತದ್ದರಿಂದ ಈ ಉಭಯ ಶತ್ರುಗಳ ಪಾರುಪತ್ಯಕ್ಕಾಗಿ ಮರಾಟರ ಪ್ರಚಂಡವಾದ ಸೈನ್ಯವು ಪುಣೆಯಿಂದ ಹೊರಡಬೇಕಾಯಿತು. ಮೊದಲು ನಿಜಾಮನ ಸಮಾಚಾರವನ್ನು ತಕ್ಕೊಂಡ ಬಳಿಕ ಉತ್ತರ ಹಿಂದುಸ್ಥಾನಕ್ಕೆ ಹೋಗುವ ನಿಶ್ಚಯವಾದದ್ದರಿಂದ ಈ ದಂಡಿನ ಸಂಗಡ ಶ್ರೀಮಂತ ನಾನಾಸಾಹೇಬನೂ, ಆತನ ಇಬ್ಬರು ತಮ್ಮಂದಿರೂ, ಹಾಗು ಹಿರಿಯಮಗನಾದ ವಿಶ್ವಾಸರಾಯನೂ ಹೊರಟಿದ್ದರು! ಮರಾಟರ ಈ ಪ್ರಚಂಡವಾದ ದಂಡಿಗೂ ನಿಜಾಮನಿಗೂ ಉದಯಗಿರಿಯೆಂಬಲ್ಲಿ ಗಂಟು ಬಿದ್ದು ಬಹು ದೊಡ್ಡ ಕಾಳಗವಾಯಿತು. ಆದರಲ್ಲಿ ನಿಜಾಮನು ಪೂರ್ಣಪರಾಜಿತನಾಗಿ ಮರಾಟರಿಗೆ ಶರಣಾಗತನಾದನು. ಹೀಗೆ ಉದಯಗಿರಿಯ ಸಂಗ್ರಾಮದಲ್ಲಿ ಜಯಶಾಲಿಯಾಗಿದ್ದ ಮರಾಟರ ಅಪಾರವಾದ ಸೈನ್ಯವೇ ಉತ್ತರ ಕಡೆಯ ಪ್ರಯಾಣ ಸನ್ನದ್ಧವಾಗಿ ಮೇಲೆ ವರ್ಣಿಸಿದ ಮಾಂಜರಾ ನದಿಯ ತೀರದಲ್ಲಿ ತಳವೂರಿತ್ತು;

ಈ ಪ್ರಕಾರವಾಗಿ ಮರಾಟರ ಸೇನೆಯು, ತಮಗಿದ್ದ ಇಬ್ಬರು ಶತ್ರುಗಳಲ್ಲಿ ಒಬ್ಬ ಶತ್ರುವನ್ನು ನುಗ್ಗುಮಾಡಿ ಆವನಿಂದ ಅಗಣಿತವಾಗಿ ಕಾಣಿಕೆಯನ್ನೂ ೬೨ ಲಕ್ಷ ರೂಪಾಯಿಗಳ ಜಾಹಗೀರಿಯ ಪ್ರಾಂತವನ್ನೂ ಕಳಕೊಂಡು ವಿಶ್ರಾಂತಿಗಾಗಿ ಬೀಡು ಬಿಟ್ಟಿರಲು, ಅಬ್ದಾಲಿಯ ಉಪಟಳವು ಬಹಳವಾಯಿತೆಂದು ಸಿಂಧೆ ಹೋಳಕರರಿಂದ ಮೇಲಿಂದ ಮೇಲೆ ಪತ್ರಗಳು ಬರತೊಡಗಿದವು; ಸಾಮ್ರಾಜ್ಯದ ಕಾರಭಾರಿಯಾದ ಭಾವೂಸಾಹೇಬನು ಅಬ್ದಾಲಿಯನ್ನು ಬೇಗನೆ ಗೊತ್ತಿಗೆ ಹಚ್ಚದಿದ್ದರೆ ಇನ್ನು ಮುಂದೆ ಉತ್ತರ ಹಿಂದುಸ್ಥಾನದಲ್ಲಿ ಮರಾಟರ ಗೌರವವು ಉಳಿಯಲಾರದೆಂದು ನಾನಾಸಾಹೇಬನಿಗೆ ಆಗಾಗ್ಗೆ ಹೇಳಹತ್ತಿದನು. ರಘುನಾಥರಾಯನು ಇದಕ್ಕೂ ಮೊದಲು ಒಂದೆರಡುಸಾರೆ ಉತ್ತರ ಹಿಂದುಸ್ಥಾನದಲ್ಲಿ ಸ್ವಾರೀಮಾಡಿ ಬಂದಿದ್ದನಾದ್ದರಿಂದ ಸದ್ಯಕ್ಕೆ ಆವನೊಬ್ಬನನ್ನೇ ಕೆಲವು ದಂಡಿನೊಡನೆ ಕಳಿಸಬೇ

ಕೆಂದು ಗೊತ್ತಾಯಿತು. ಆದರೆ ಅಬ್ದಾಲಿಯು ಬಲಿಷ್ಠನಿದ್ದದರಿಂದ ಶೂರರಾದ ೮೦ ಸಾವಿರ ಜನ ಕುದುರೆಯ ಸ್ವಾರರನ್ನೂ ಖರ್ಚಿಗಾಗಿ ಒಂದು ಕೋಟಿ ರೂಪಾಯಿಗಳನ್ನೂ ಕೊಟ್ಟ ಹೊರತು ನಾನು ಹೋಗಲಾರೆನೆಂದು ರಘುನಾಥರಾಯನು ಖಂಡಿತವಾಗಿ ಹೇಳಿಬಿಡಲು, ಅವನನ್ನು ಬಿಟ್ಟುಬಿಡಬೇಕಾಯಿತು. ಕಾರ್ಯದಕ್ಷನೂ ರಾಜಕರಣದಲ್ಲಿ ಚತುರನೂ ಆದ ಭಾವೂಸಾಹೇಬನ ಕಾರಭಾರದಲ್ಲಿ ಸಾಮ್ರಾಜ್ಯದ ವ್ಯವಸ್ಥೆಯು ಸರ್ವಾಂಗಸುಂದರವಾಗಿದ್ದರೂ ಧನಸಂಚಯವು ಮಾತ್ರ ವಿಶೇಷವಾಗಿದ್ದಿಲ್ಲವೆಂದು ಹೇಳಬಹುದು. ಆದ್ದರಿಂದ ರಘುನಾಥರಾಯನಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುವದು ಅಶಕ್ಯವಾಗಲು, ದಕ್ಷಿಣದಲ್ಲಿಯ ಶಾಂತತೆಯನ್ನು ಕಾಯ್ದುಕೊಳ್ಳಲಿಕ್ಕೆ ನಾನಾಸಾಹೇಬನನ್ನೂ ರಘುನಾಥರಾಯನನ್ನೂ ಬಿಟ್ಟು ಅಬ್ದಾಲಿಯ ಶಾಸನಕ್ಕೆ ತಾನೇ ಹೊರಡಬೇಕೆಂದು ಸಾಹಸಿಯಾದ ನಮ್ಮ ಭಾವೂಸಾಹೇಬನು ನಿಶ್ಚಯಿಸಿದನು. ಆತನ ಈ ನಿಶ್ಚಯಕ್ಕೆ ಬಹಳ ಹೊತ್ತು ಅರೆದಾಟವಾಗಿ ನಾನಾಸಾಹೇಬನಿಂದಲೂ ಒಪ್ಪಿಗೆಯು ಸಿಕ್ಕಿತು. ಬಳಿಕ ಆ ಏರಿಕೆಯ ರಕ್ತದ ತರುಣವೀರನು ತನ್ನ ದಿಗ್ವಿಜಯದ ನಿಶ್ಚಯವನ್ನು ಸಮಸ್ತ ಸರದಾರರಿಗೂ ತಿಳುಹಿಸಿ, ಅವರನ್ನು ಪ್ರೋತ್ಸಹಿಸುವದಕ್ಕಾಗಿ ಪದ್ಧತಿಯಂತೆ ದರ್ಬಾರ ನೆರೆಯಿಸುವದನ್ನು ಗೊತ್ತುಪಡಿಸಿ, ಈ ದಿನ ಬೆಳಗಿನಲ್ಲಿ ಹಿಂದೆ ಹೇಳಿದಂತೆ ಅಶ್ವಾರೂಢನಾಗಿ ದರ್ಬಾರ ಮಂಟಪವನ್ನು ಬುದ್ಧಿಪೂರ್ವಕವಾಗಿ ನೋಡ ಬಂದಿದ್ದನು.

ಪ್ರಿಯ ವಾಚಕರೇ, ಆ ನಮ್ಮ ತರುಣ ರಾವುತನು ಭಾವೂಸಾಹೇಬನೆಂಬದು ಗೊತ್ತಾಯಿತಷ್ಟೆ? ಪೇಶ್ವಾಯೀ ಆಳಿಕೆಯ ಪ್ರಾರಂಭದಲ್ಲಿಯೇ ಬಾದಶಾಹೀ ವೈಭವದ ಅನುಕರಣವು ಮಾಡಲ್ಪಟ್ಟಿದ್ದರಿಂದ ದಂಡಿನ ಸಂಗಡ ಎಲ್ಲ ಸಾಮಾನುಗಳೂ ಇರುತ್ತಿದ್ದವು. ಛಾವಣಿಯು ಎಲ್ಲಿ ಹೋದರೂ ಅದರಲ್ಲಿ ಇಂಥದೊಂದು ಪದಾರ್ಥವು ಇಲ್ಲೆಂದು ಅನ್ನಲಿಕ್ಕೆ ಬರುವಹಾಗಿದ್ದಿಲ್ಲ; ಭಾವೂಸಾಹೇಬನು ದರ್ಬಾರ ಮಂಟಪವನ್ನು ರಚಿಸಲಿಕ್ಕೆ ಆಜ್ಞಾಪಿಸಿದೊಂದೇ ತಡ; ಮಂಟಪವು ಘಾ ಪಾ ಅನ್ನುವಷ್ಟರಲ್ಲಿ ಸರ್ವಾಂಗಸುಂದರವಾಗಿ ಸಿದ್ಧವಾಗಿತ್ತು. ನದಿಯ ಪಶ್ಚಿಮ ಭಾಗದಲ್ಲಿ ದಂಡಿಗೆ ಹೊಂದಿ ಮಂಟಪವು ನಿರ್ಮಿಸಲ್ಪಟ್ಟಿದ್ದರಿಂದ ಅದರ ಮೇಲೆ ಬಾಲರವಿಯ ಕಿರಣಗಳು ಬಿದ್ದು, ಅದರ ಸ್ವಾಭಾವಿಕ ಸೌಂದರ್ಯವನ್ನು ಇಮ್ಮಡಿಗೊಳಿಸಿದ್ದವು. ಮಂಟಪದ ಮೇಲ್ಭಾಗದಲ್ಲಿ 'ಸಮರ್ಥ ರಾಮದಾಸ ಸ್ವಾಮಿ'ಗಳವರಿಂದ ಪ್ರದತ್ತವಾದ ಭಗವೀ ವಸ್ತ್ರದ ನಿಶಾನೆಯು ಸಮಸ್ತ ಮರಾಟರ ವೀರರನ್ನು ಸ್ವರಾಜ್ಯಸಂರಕ್ಷಣೆಗೆ ಕರೆಯುತ್ತದೋ ಅನ್ನುವಂತೆ, ಗಾಳಿಯಿಂದ ಕೊಡಕೊಡಹಿ

ನರ್ತಿಸುತ್ತಲಿತ್ತು. ಮಂಟಪದ ಮುಂಭಾಗದಲ್ಲಿರುವ ಭವ್ಯವಾದ ಪಟಾಂಗಣದಲ್ಲಿ ನಾನಾ ಜಾತಿಯ ಹೂವಿನ ಗಿಡಗಳನ್ನು ಹಚ್ಚಿದ್ದ ಬೆಳ್ಳಿಯ ಕುಂಡಗಳು ವ್ಯವಸ್ಥೆಯಿಂದ ಇಡಲ್ಪಟ್ಟಿದ್ದುವು. ಸ್ವಾಗತಪರ ಸುವರ್ಣಾಕ್ಷರಗಳನ್ನು ಕೊರೆದಿದ್ದ ಹೆಬ್ಬಾಗಿಲವು ಮಂಟಪದ ಮುಂಗಡೆಯಲ್ಲಿ ಒಪ್ಪುತ್ತಿತ್ತು. ಆ ಮಂಟಪಕ್ಕೆ ನಾಲ್ಕು ದಿಕ್ಕಿಗೂ ನಾಲ್ಕು ಬಾಗಿಲುಗಳು ಪರಿಶೋಭಿಸುತ್ತಲಿದ್ದುವು. ಮಂಟಪದ ನಟ್ಟನಡುವಿನ ಭಾಗದಲ್ಲಿ ಪೇಶ್ವಾಯಿಯ ಪೀಠವು ರಚಿಸಲ್ಪಟ್ಟಿದ್ದು, ಅದರ ಮುಂಗಡೆಯಲ್ಲಿ ಎಡಬಲಭಾಗಗಳ ಸಾಲುಹಿಡಿದು ಸರದಾರರಿಗುಚಿತವಾದ ಆಸನಗಳು ಮಂಡಿಸಲ್ಪಟ್ಟಿದ್ದುವು; ಸಭಾಸ್ಥಾನವು ಅಷ್ಟಕೋನಾಕೃತಿಯಿಂದ ಶೋಭಿಸುತ್ತಲಿದ್ದು, ಅದರ ಸುತ್ತಲಿನ ಕಂಬಗಳು ಕೆಂಪು ರೇಷ್ಮೆಯ ಜರದ ವಸ್ತ್ರದ ಸುತ್ತಿನಿಂದ ಬಲು ಅಂದವಾಗಿ ತೋರುತ್ತಿದ್ದುವು. ರೇಷ್ಮೆಯ ಕಿಸಕಾಪಿನ ವಸ್ತ್ರದಿಂದ ಛತ್ತುಹೊದೆದು ಮೇಲೆ ಜರದ ಸುಳುವು ತಿರುವಿದ್ದರಿಂದ ಆ ಮಂಟಪದ ಮೇಲ್ಭಾಗವು ರಮಣೀಯವಾಗಿ ತೋರುತ್ತಲಿತ್ತು. ಬೇಸಿಗೆಯ ಕಾಲವಿದ್ದುದರಿಂದ ಒಳಗೆ ಕುಳಿತವರಿಗೆ ಸೆಕೆಯು ಬಾಧೆಯಾಗಬಾರದೆಂದು ತಸರು ರೇಶ್ಮೆಯ ದಪ್ಪನ್ನ ವಸ್ತ್ರದ ಪಂಖಗಳನ್ನು ಅಲ್ಲಲ್ಲಿಗೆ ಕಟ್ಟಿದ್ದು, ಅವುಗಳಿಗೆ ಹಳದೀಬಣ್ಣದ ರೇಷ್ಮೆಯ ಹಗ್ಗಗಳನ್ನು ಹಚ್ಚಿದ್ದರು. ಮಂಟಪದ ಒಂದು ಮೂಲೆಯಲ್ಲಿ ಕಾರಂಜಿಯನ್ನು ಇಟ್ಟಿದ್ದು ಅದರ ತುಂತುರ್ವನಿಗಳ ಮೇಲಿನ ತಂಗಾಳಿಯು ಸಭಿಕರ ಮೇಲೆ ಸುಳಿದಾಡುವಂತೆ ವ್ಯವಸ್ಥೆಯು ಮಾಡಲ್ಪಟ್ಟಿತ್ತು. ಹುಜುರಾತಿಯವರಿಗೂ ಬೇರೆ ಜನರಿಗೂ ಮಂಟಪದ ಮುಂಭಾಗದ ಚೌಕಿನಲ್ಲಿಯೇ ಸ್ಥಳವು ಗೊತ್ತುಮಾಡಲ್ಪಟ್ಟಿತ್ತು.

ಈ ಮೇರೆಗೆ ಪ್ರೇಕ್ಷಣೀಯವಾಗಿ ರಚಿಸಲ್ಪಟ್ಟಿದ್ದ ಆ ಮಂಟಪದ ಶೋಭೆಯನ್ನು ನೋಡಿ, ನಮ್ಮ ಆ ಕುಶಲನಾದ ಭಾವೂಸಾಹೇಬನ ಮನಸ್ಸು ಪ್ರಫುಲ್ಲಿತವಾಯಿತು. ಆತನು ಮೆಲಮೆಲ್ಲನೆ ಸಭೆಯ ಅಂತರ್ರಚನೆಯನ್ನು ನೋಡಿ ಬಹು ಆನಂದಪಟ್ಟನು. ಆ ತರುಣವೀರನು ಇಂದಿನವರೆಗೆ ಇಂಥ ಹಲವು ಕಿಂಬಹುನಾ ಇದಕ್ಕೂ ಹತ್ತುಪಟ್ಟು ಹೆಚ್ಚು ಸುಂದರವಾಗಿರುವ ಹಲವು ಸಭಾಮಂದಿರಗಳನ್ನು ನೋಡಿದ್ದರೂ, ಆತನ ಇಂದಿನ ಆನಂದದ ಬಣತಿಯೇ ಬೇರೆಯಾಗಿತ್ತು. ಯಾಕೆಂದರೆ ಆ ಪುಣ್ಯಪ್ರತಾಪಿಯು ಈ ದಿವಸ ಅದೇ ಮಂಟಪದಲ್ಲಿ ಅಬ್ದಾಲಿಯ ಪಾರುಪತ್ಯಕ್ಕಾಗಿ ತಾನು ವೀಳ್ಯವನ್ನು ಸ್ವೀಕರಿಸುವದಲ್ಲದೆ ತನ್ನ ಪ್ರೀತಿಯ ಸರದಾರರನ್ನು ಪ್ರೋತ್ಸಾಹಿಸಬೇಕಾಗಿತ್ತು. ಆದ್ದರಿಂದ ಆ ಸ್ವಾಭಿಮಾನದ ವೀರನಿಗೆ ಮಂಟಪದ ಅವಲೋಕನದಿಂದ ಬಹುಸ್ಫುರಣವಾಗಿ ಆನಂದವು ಹೆಚ್ಚಿ

ದ್ದರಲ್ಲಿ ಆಶ್ಚರ್ಯವೇನು? ಅಬ್ದಾಲಿಯ ಪ್ರಕರಣದಿಂದ ಮರಾಟರ ಭವಿತವ್ಯತೆಯು ನಿರ್ಣಯವಾಗಬೇಕಾದ್ದರಿಂದ, ಈ ಪ್ರಸಂಗವು ಆತನಿಗೆ ಅತ್ಯಂತ ಮಹತ್ವದ್ದಾಗಿ ತೋರಿದ್ದು ಅಸ್ವಾಭಾವಿಕವಲ್ಲ! ಆಗ ಆತನು ಆನಂದದ ಹೆಚ್ಚುವಿಕೆಯಿಂದ ಹರ್ಷನಿರ್ಭರನಾಗಿ ಕಾರಖಾನದಾರನನ್ನು ಕುರಿತು—"ಭಲೆ ಬಹು ಚೆನ್ನಾಗಿ ಮಂಟಪವನ್ನು ರಚಿಸಿರುವೆ! ನಿಮ್ಮ ಶ್ರಮಕ್ಕೆ ಯೋಗ್ಯ ಪಾರಿತೋಷವು ಕೊಡಲ್ಪಡುವದು" ಎಂಬಿವಿಷ್ಟೇ ಶಬ್ದಗಳನ್ನು ನುಡಿದು, ಟಣ್ಣನೆ ಕುದುರೆಯನ್ನೇರಿ ಅಲ್ಲಿಂದ ಹೊರಟು ಹೋದನು.

ಶಿವಪ್ರಭುವಿನ ಪುಣ್ಯದ ಫಲವಾದ ಮರಾಟಾ ಸಾಮ್ರಾಜ್ಯದ ಸಂರಕ್ಷಣೆಯನ್ನು ಮಾಡಲಿಕ್ಕೆ ಸ್ವಾಭಿಮಾನಸಂಪನ್ನರಾದ ಎಲ್ಲ ಮರಾಟಾ ವೀರರೂ ಏಕಕಾಲಕ್ಕೆ ಅಲ್ಲಿ ಒಟ್ಟುಗೂಡಿದ್ದರಿಂದ, ಆ ವಿಸ್ತೀರ್ಣವಾಗಿ ತೋರುವ ಆ ಛಾವಣಿಯು ಭೂಲೋಕವನ್ನು ಸಂರಕ್ಷಿಸ ಬಂದ ದೇವಸೇನೆಯ ಛಾವಣಿಯಂತೆ ಭಾಸವಾಗುತ್ತಿತ್ತು. ಇಂಥ ಪ್ರಚಂಡವಾದ ಸೇನೆಯಿಂದ ಭರತವರ್ಷದಲ್ಲಿ ಏಕಛತ್ರಾಧಿಪತ್ಯವು ನೆಲೆಗೊಳ್ಳಬಹುದೆಂದು ಸ್ಪಷ್ಟವಾಗಿ ತೋರಿತು. ಹಲವು ಯುದ್ಧಗಳಲ್ಲಿ ಯಶಸ್ಸನ್ನು ಸಂಪಾದಿಸಿದಂಥ, ಮಹಾ ಮಹಾ ರಥಿಕರನ್ನು ಹೋಲುವಂಥ ವೀರರು ಆ ಸೇನೆಯಲ್ಲಿ ಅನೇಕರಿದ್ದರು. ಇವರೆಲ್ಲರ ಸಹಾಯದಿಂದ ಅಬ್ದಾಲಿಯ ದೂಳವನ್ನು ಹಾರಿಸುವೆನೆಂದು ಭಾವೂಸಾಹೇಬನು ನಿಶ್ಚಿತವಾಗಿ ನಂಬಿದ್ದನು. ನಿಜವಾಗಿ ನೋಡಿದರೆ ಭಾವೂಸಾಹೇಬನು ಅಂಥ ಪರಾಕ್ರಮಶಾಲಿಯೇ ಆಗಿದ್ದನು. ಆತನು ದ್ರವ್ಯದ ಅಭಾವಕ್ಕೆ ಸೊಪ್ಪುಹಾಕದೆ, ಪಠಾಣರ ಬಲವನ್ನು ಗಣನೆಗೆ ತಾರದೆ ಕೇವಲ ಸ್ವಸಾಮರ್ಥ್ಯವನ್ನು ನಂಬಿ ಹೆಬ್ಬಲದೊಂದಿಗೆ ಅಬ್ದಾಲಿಯ ಮೇಲೆ ದುಮುಕುವ ಸಾಹಸವನ್ನು ಮಾಡಿದ್ದು ಆತನ ಘನತರವಾದ ಯೋಗ್ಯತೆಗೆ ಒಪ್ಪತಕ್ಕ ಮಾತೆಂತಲೇ ಹೇಳಬೇಕಾಗುವದು! ಆದರೆ ವಿಲಕ್ಷಣವಾದ ದೈವಲೀಲೆಯಮುಂದೆ ಯಾರ ಆಟವು ನಡೆಯುವದು? ಈಶ ಸಂಕಲ್ಪವೇ ಬೇರೆಯಿದ್ದ ಬಳಿಕ ಯಾರು ಮಾಡುವದಾದರೂ ಏನು? ಇರಲಿ,

ಮೇಲ್ಕಂಡಂತೆ ವರ್ಣಿಸಿದಂತೆ ಮಂಟಪದ ಶೋಭೆಯನ್ನು ನೋಡಿ ಭಾವೂಸಾಹೇಬನು ಹೊರಟು ಹೋದ ಬಳಿಕ ಕಾರಖಾನದಾರನಿಗೆ ಹೇಳಕೂಡದಷ್ಟು ಆನಂದವಾಯಿತು. ಭಾವೂಸಾಹೇಬನಂಥ ಸಾಮ್ರಾಜ್ಯಾಧಿಕಾರಿಯ ಶ್ಲಾಘನೆಯಿಂದ ಆತನಿಗೆ ಸ್ವರ್ಗವು ಮೂರೇ ಗೇಣು ಉಳಿದಂತಾಯಿತು. ಮೈಮುರಿದು ದುಡಿಯುವ ಸ್ವಾಮಿನಿಷ್ಠ ಸೇವಕರು ತಮ್ಮ ಸ್ವಾಮಿಯಿಂದ ಹೀಗೆ ಗೌರವವನ್ನು ಇಚ್ಛಿಸುವದು ಸ್ವಾಭಾವಿಕವಾಗಿರುವದು. ಈ ಆನಂದದ ಭರದಲ್ಲಿ ಆತನು ಮೈಮರೆತು ಕುಳಿತಿ

ರಲು ೧೧ ಹೊಡೆದು ಹೋಯಿತು. ಆಗ ಆತನು ಗಡಬಡಿಸಿ ಎಚ್ಚತ್ತು, ದರ್ಬಾರ ಸೂಚಕವಾದ ದುಂದುಭಿಯನ್ನು ಹೊಡೆಯಿಸಿದನು. ಅತ್ಯುತ್ಕಟ ಸ್ವಾಮಿಭಕ್ತಿಯಿಂದ ಪ್ರೇರಿತರಾದ ಮರಾಟವೀರರು ಇದೇ ಮಾರ್ಗವನ್ನು ನಿರೀಕ್ಷಿಸುತ್ತಿದ್ದರೋ ಎಂಬಂತೆ ದುಂದುಭಿಯ ಸುನಾದವನ್ನು ಕೇಳಿದ ಕೂಡಲೆ ಲಗಬಗೆಯಿಂದ ಮಂಟಪದ ಕಡೆಗೆ ಧಾವಿಸಹತ್ತಿದರು. ಸುಮಾರು ಅರ್ಧತಾಸು ಕ್ರಮಿಸುತ್ತಿರುವಷ್ಟರಲ್ಲಿ ಸರದಾರ, ದರಕದಾರ, ಅಹಲಕಾರ, ಮಾನಕರಿ ಮೊದಲಾದ ಅಧಿಕಾರಸ್ಥರಿಂದ ಸಭಾಗೃಹವು ಸಂದಣಿತವಾಯಿತು. ಯಾವನೊಬ್ಬ ಅಧಿಕಾರಿಯು ಸಭಾಮಂದಿರವನ್ನು ಪ್ರವೇಶಿಸಿದಕೂಡಲೆ ಅವನು ಮುಂಭಾಗದ ಚೌಕಿನಲ್ಲಿಯೇ ಜೋಡುಗಳನ್ನು ಬಿಟ್ಟು, ಬಂಗಾರದ ಬೆತ್ತವನ್ನು ಹಿಡಿದ ಭಾಲದಾರನು ದಾರಿಯನ್ನು ತೋರಿಸುತ್ತಿರಲು ಕಾರಖಾನವೀಸದಾರನ ಸೂಚನೆಯಂತೆ ಉಚಿತಾಸನದಲ್ಲಿ ಬಂದು ಕುಳಿತುಕೊಳ್ಳುತ್ತಿದ್ದನು. ಆಗಿನ ಕಾಲದಲ್ಲಿ ಆ ವೀರಾಗ್ರೇಸರರ ಮುಖಮಂಡಲಗಳು ವೀರಶ್ರೀಯಿಂದ ಒಪ್ಪುತ್ತಿದ್ದವು. ಸ್ವಪರಾಕ್ರಮದಿಂದ ಅಸಂಖ್ಯಕೋಟಿ ಕೊತ್ತಳಗಳನ್ನು ಕೈವಶಮಾಡಿಕೊಂಡಂಥ ವೈಭವಸಂಪನ್ನರಾದ ಸರದಾರರು ಸ್ವರಾಜ್ಯಸಂರಕ್ಷಣೆಯ ಅಭಿಮಾನ ವಹಿಸಿ ಕುಳಿತಿರುವ ಆ ಸಭೆಯ ವರ್ಣನೆಯನ್ನು ಕೇಳುವದೇ ? ಆವಾಗಿನಂಥ ನರವೀರರು ಅಡಗಿಹೋಗಿರುವ ಈಗಿನ ಕಾಲದಲ್ಲಿ ಅಂಥ ಸಭೆಗಳಾಗುವದು ಅಪರೂಪವೆಂತಲೇ ಹೇಳಬಹುದು! ದಮಾಜಿಗಾಯಕವಾಡ, ಯಶವಂತರಾವ ಪವಾರ: ತುಕೋಜಿ ಸಿಂಧೆ, ಸಮಸೇರ ಬಾಹದ್ದರ, ವಿಠ್ಠಲರಾವ ಶಿವದೇವ, ನಾನಾ ಫುರಂದರೆ, ಬಳವಂತರಾವ ಮೆಹಂದಳೆ ನರಸಿಂಗರಾವ ಬಾಂಡೆ, ಗೋಪಾಳರಾವ ಪಟವರ್ಧನ, ಸೋನಜೀ ಭಾಪಕರ, ಇಬ್ರಾಹಿಮಖಾನ ಗಾರದಿ, ಮಾನಾಜಿ ಪಾಯಗುಡೆ ಇವರೇ ಮೊದಲಾದ ಮರಾಟ, ಬ್ರಾಹ್ಮಣ, ಮುಸಲ್ಮಾನರೆಂಬ ಜಾತಿತ್ರಯದ ದೊಡ್ಡ ದೊಡ್ಡ ಸರದಾರರು ಒಂದೇ ಸ್ಥಳದಲ್ಲಿ ಒಟ್ಟುಗೂಡಿದ್ದರಿಂದ ಆ ಸಭೆಯು ಶೌರ್ಯಸಾಗರದಂತೆ ಗಂಭೀರವಾಗಿ ಕಾಣತೊಡಗಿತು.

ಹೀಗೆ ದರ್ಬಾರದ ಮಂಟಪವು ವೀರಮಂಡಲದಿಂದ ಪರಿಶೋಭಿಸುತ್ತಿರಲು, ಶ್ರೀಮಂತರ ಆಗಮನ ಸೂಚಕವಾದ ಚೌಘುಡೆಯು ಬಾರಿಸಿತು. ಸಭಿಕರೆಲ್ಲರೂ ಸಾವರಿಸಿಕೊಂಡು ಹೆಬ್ಬಾಗಿಲದ ಕಡೆಗೆ ನೋಡಲು, ಶ್ರೀಮಂತ ಪರಿವಾರವು ಆನೆಗಳ ಮೇಲಿನ ಅಂಬಾರಿಗಳಿಂದ ಕೆಳಗಿಳಿದು ಮಂಟಪದಲ್ಲಿ ಅದೇ ಕಾಲಿಟ್ಟಿತು. ಆಗ ಸುವರ್ಣದಂಡದ ಭಾಲದಾರರ ಸುಳಿದಾಟಕ್ಕೆ ಕಳೆಯೇರಿ, ಅವರು ಅತ್ತಿಂದ ಇತ್ತ, ಇತ್ತಿಂದಅತ್ತ ಕಾರ್ಯವಶಾತ್ತಾಗಿ ತಿರುಗುತ್ತಿರಲು, ಎಲ್ಲಕ್ಕೂ ಮುಂದುಗಡೆಯಲ್ಲಿ ಶ್ರೀಮಂತ ನಾನಾಸಾಹೇಬನು ಬರುವದು ಕಾಣತೊಡಗಿತು. ಆತನು

ಮೊಗಲಾಯಿ ಪದ್ಧತಿಯ ರೇಸ್ಮೆಯ ಉದ್ದನ್ನ ಅಂಗಿಯನ್ನು ತೊಟ್ಟಿದ್ದು, ಮೇಲೆ
ಸುವರ್ಣದ ಜರತಾರೀ ಗೊಂಡೆಯ ಕಸಿಗಳನ್ನು ಕಟ್ಟಿದ್ದನು. ಆತನ ತಲೆಯ
ಮೇಲೆ ಪಚ್ಚೆರತ್ನದ ಶಿರಪೇಚಿನಿಂದೊಪ್ಪುವ ಪೇಶ್ವಾಯೀ ರೀತಿಯ ಪಾಗೋಟಿಯು
ಶೋಭಿಸುತ್ತಲಿದ್ದು, ಅದರ ಬಲಗಡೆಗೆ ದೊಡ್ಡ ಮುತ್ತಿನ ಗೊಂಚಲವು ಇಳಿಬಿ
ದ್ದಿತ್ತು. ಬಹು ಮೂಲ್ಯವಾದ ಕಂಠಿಯ ಸರವು ಆತನ ಕಂಠಪ್ರದೇಶವನ್ನಲಂ
ಕರಿಸಿ ಹರವಾದ ವಕ್ಷಸ್ಥಳದ ಮೇಲೆ ಅಲೆದಾಡುತ್ತಲಿತ್ತು; ಆತನು ಕಾಲಲ್ಲಿ ಕಾಲು
ಚೀಲವನ್ನು ಏರಿಸಿದ್ದು. ಮೇಲೆ ರೇಸ್ಮೆಯ ಅಂಚಿನ ಶುಭ್ರವಾದ ದೋತರವನ್ನು
ಉಟ್ಟಿದ್ದನು. ಆತನ ಹಿಂದೆ ಆತನಂತೆಯೇ ಪೋಷಾಕನ್ನು ಧರಿಸಿದ, ಮೂರ್ತಿಮಂ
ತಸೌಂದರ್ಯವೇ ನಡೆದುಬರುತ್ತಿರುವಂತೆ ತೋರುವ ಎಳೇಪ್ರಾಯದ ವಿಶ್ವಾಸರಾ
ಯನ ಮದನಮೋಹನ ಮೂರ್ತಿಯು ಬರುತ್ತಿತ್ತು. ಇವರಿಬ್ಬರ ಹಿಂದೆ ರಘುನಾ
ಥರಾಯನು ಇದ್ದು, ಎಲ್ಲಕ್ಕೂ ಕಡೆಗೆ ಸಾದಾ ಪೋಷಾಕನ್ನು ಧರಿಸಿದ
ನಮ್ಮ ಭಾವೂಸಾಹೇಬನು ಬರುತ್ತಿದ್ದನು. ಭಾವೂಸಾಹೇಬನು ನೋಡಲಿಕ್ಕೆ
ಭವ್ಯನೂ, ಸುಂದರನೂ ಆಗಿದ್ದು, ಗಡೀಸಾಧಕದಿಂದ ಮುಂಡೆದಿರುಗಿದವನಾ
ಗಿದ್ದನು. ಆತನು ಅರ್ಥಪೂರ್ಣದೃಷ್ಟಿಯಿಂದ ಸಭೆಯನ್ನು ನೋಡುತ್ತ ಸಾವ
ಕಾಶವಾಗಿ ಸಾಗಿರುವಾಗ, ಆತನ ಗಾಂಭೀರ್ಯದ ಮುಖಮುದ್ರೆಯು ನೋಡುವ
ವರನ್ನು ಆಶ್ಚರ್ಯಗೊಳಿಸಿತು.

ಈ ಬಗೆಯ ಚಂದದಿಂದ ಶ್ರೀಮಂತ ಮಂಡಲಿಯು ಒಳಗೆ ಬರಲು, ಎಲ್ಲ
ಸರದಾರರೂ ಎದ್ದುನಿಂತು ಮುಜರೆಗಳನ್ನು ಮಾಡಿದರು. ನಾನಾಸಾಹೇಬನು
ಮುಖ್ಯಪೀಠದ ಬಳಿಗೆ ಬರಲು, ಹುಜುರಾತಿಯವರು ಗಾದಿಯಮೇಲಿನ ಗವಸಣಿಕೆ
ಯನ್ನು ತೆಗೆದರು. ಆಗ ಜರತಾರಿಯ ಲೋಡುಗಾದೀಗಳಿಂದ ಆ ದಿವ್ಯ ಪೀಠವು
ಒಪ್ಪುತ್ತಿರಲು, ಸಭಿಕರೆಲ್ಲರು ಆನಂದಾತಿಶಯದಿಂದ ಎವೆಯಿಕ್ಕದೆ ನೋಡುತ್ತಿರಲು,
ವಾರಾಂಗನೆಯರ ಮಂಜುಲವಾದ ಗೀತವು ಕೇಳಬರುತ್ತಿರಲು, ಶ್ರೀಮಂತ ನಾನಾ
ಸಾಹೇಬನು ಅದರ ಮೇಲೆ ವಿರಾಜಮಾನನಾದನು. ಬಳಿಕ ಆತನ ಬಳಿಯಲ್ಲಿಯೇ
ಯುವರಾಜನಾದ ವಿಶ್ವಾಸರಾಯನು ಕುಳಿತುಕೊಂಡನು. ರಘುನಾಥರಾಯನೂ
ಭಾವೂಸಾಹೇಬನೂ ನಾನಾಸಾಹೇಬನ ಎಡಬಲಗಳಲ್ಲಿರುವ ಸರದಾರರಿಗುಚಿತವಾದ
ಆಸನಗಳ ಮೇಲೆ ಸಭಿಕರಿಗೆ ಎದುರಾಗುವಂತೆ ಸ್ವಲ್ಪ ಓರೆಯಾಗಿ ಕುಳಿತುಕೊಂ
ಡರು. ಬಳಿಕ ಎಲ್ಲ ಸರದಾರರೂ ತಮ್ಮ ತಮ್ಮ ಆಸನಗಳ ಮೇಲೆ ಕುಳಿತುಕೊಂ
ಡರು. ಆ ಕಾಲಕ್ಕೆ ಶ್ರೀಮಂತ ನಾನಾಸಾಹೇಬನ ವೈಭವವು ಅಶ್ರುತಪೂರ್ವ
ವಾಗಿ ತೋರಿತು. ವಿಶ್ವಾಸರಾಯನಂಥ ಸುಸ್ವರೂಪಿಯೂ, ಸದ್ಗುಣಿಯೂ,

ಪರಾಕ್ರಮಿಯೂ ಆದ ಯುವರಾಜನೂ, ರಘುನಾಥರಾಯನಂಥ ಶೂರಸೇನಾಪತಿಯೂ, ಭಾವೂಸಾಹೇಬನಂಥ ಸ್ವಾಮಿಕಾರ್ಯಧುರಂಧರನಾದ ಕಾರಭಾರಿಯೂ, ಪ್ರಾಣಕ್ಕೆ ಪ್ರಾಣಕೊಡುವಂಥ ವೀರಶಿರೋಮಣಿಗಳಾದ ನೂರಾರು ಜನ ಸರದಾರರೂ ಪರಮೇಶ್ವರನ ದಯದಿಂದ ಆತನಿಗೆ ಪ್ರಾಪ್ತವಾಗಿದ್ದರೆಂದ ಬಳಿಕ, ಆಗಿನ ಆತನ ಐಶ್ವರ್ಯವು ಯಾವನೊಬ್ಬ ಚತುರಕವಿಯು ವರ್ಣನಾಶಕ್ತಿಯನ್ನು ವಿಸ್ತರಿತ್ತೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ !

ಹೀಗೆ ಸಭಿಕರೆಲ್ಲ ಕುಳಿತಬಳಿಕ ಭಾಲದಾರನು ಮರಯೋಚಿತೆಯರ ಗಾಯನವನ್ನು ನಿಲ್ಲಿಸಿದನು. ಕೂಡಲೆ ಅವರು ಅಲ್ಲಿಂದೆದ್ದು ಬೇರೆ ಸ್ಥಳದಲ್ಲಿ ಹೋಗಿ ನಿಂತುಕೊಂಡರು. ಸಭೆಯಲ್ಲಿ ಶಾಂತತೆಯ ಸಾಮ್ರಾಜ್ಯವು ನೆಲೆಗೊಂಡಿತು. ಆಗ ಭಾವೂಸಾಹೇಬನು ಎದ್ದುನಿಂತು ಸಭಿಕರು ತನ್ನನ್ನು ಆಸ್ಥೆಯಿಂದ ನೋಡುತ್ತಿರಲು, ಎಲ್ಲ ಸರದಾರರನ್ನುದ್ದೇಶಿಸಿ ಗಾಂಭೀರ್ಯದಿಂದ ನುಡಿದನೇನಂದರೆ— “ ವೀರರೇ, ಪ್ರಿಯ ದೇಶಬಾಂಧವರೆ, ಹಾಗೂ ಸನ್ಮಿತ್ರರೇ, ಪ್ರಸ್ತುತದ ಈ ಪ್ರಚಂಡ ಸಭೆಯು ಇಲ್ಲಿ ಯಾಕೆ ಕೂಡಿರುವದೆಂಬದನ್ನು ನೀವು ಬಲ್ಲಿರಷ್ಟೆ; ಅಹಮ್ಮದಶಹಾ ಅಬ್ದಾಲಿಯು ಮತ್ತಗಜದಂತೆ ಉನ್ಮತ್ತನಾಗಿ, ಸಾಮ್ರಾಜ್ಯದಲ್ಲಿ ನಡಿಸಿರುವ ಪುಂಡ ಟಿಕೆಯನ್ನು ನೋಡಿದರೆ, ಈಗಲೇ ಆತನ ಗಂಡಸ್ಥಳವನ್ನು ಸೀಳುವದಕ್ಕಾಗಿ ಮರಾಠಾ ಸಿಂಹಗಳು ಉತ್ಥಾಣಮಾಡಬೇಕೆಂಬದು ಸ್ಪಷ್ಟವಾಗುತ್ತದೆ. ಇಂದಿನವರೆಗೆ ದಿನಮೇಕಮಾಡಿದಂತೆ ಇನ್ನುಮುಂದೆ ಮಾಡಿದರೆ ನಡೆಯುವಹಾಗಿಲ್ಲ! ಅಫಗಾನರು ಪ್ರಬಲರಾಗುತ್ತ ಬಂದದರಿಂದ ಅವರ ಉಪಟಳಕ್ಕೆ ದತ್ತಾಜಿ ಸಿಂಧೆಯವರಂಥ ನಮ್ಮ ಶೂರ ಸರದಾರರು ಸಹ ಬಲಿಯಾಗಬೇಕಾಯಿತು. ದಕ್ಷಿಣದಲ್ಲಿ ನಿಜಾಮನು ಶರಣಾಗತನಾದ್ದರಿಂದ ಇಲ್ಲಿಯ ಚಿಂತೆಯನ್ನು ಬಿಟ್ಟು, ಉತ್ತರಕ್ಕೆ ದಿಗ್ವಿಜಯವನ್ನು ಬೆಳಿಸಲು ಈಗ ನಮಗೆ ತುಂಬಾ ಅನುಕೂಲವಾಗಿರುತ್ತದೆ. ಸದ್ಯಕ್ಕೆ ಆ ಪುಂಡ ಅಬ್ದಾಲಿಯ ಶಾಸನಮಾಡುವದಿಷ್ಟೇ ಕೆಲಸವು ಮಹತ್ವದ್ದಾಗಿರುವದರಿಂದ, ಆ ಕೆಲಸವನ್ನು ನಿಮ್ಮಂಥ ಶೂರ ಸರದಾರರ ಬೆಂಬಲದಿಂದ ನೆರವೇರಿಸಬೇಕೆಂದು ನನಗೆ ಶ್ರೀಮಂತ ಸರಕಾರದ ಅಪ್ಪಣೆಯಾಗಿರುತ್ತದೆ. ಪ್ರಿಯ ಸರದಾರರೇ, ನಿಮ್ಮಂಥ ಸ್ವಾಮಿನಿಷ್ಠ ವೀರಾಗ್ರೇಸರರ ಸಹಾಯವಿರುತ್ತಿರಲು, ಸಾಮ್ರಾಜ್ಯದ ಮೇಲೆ ಕೈಮಾಡಿ ಅದಾವನು ಪಾರಾಗುವನು? ಅಬ್ದಾಲಿಯು ಎಷ್ಟು ಬಲಿಷ್ಠನಿದ್ದರೂ ಮರಾಟರ ಪ್ರಚಂಡವಾದ ರಣಗರ್ಜನೆಯಿಂದ ಗರ್ಭಗಳಿತನಾಗಿಹೋಗುವನೆಂಬದರಲ್ಲಿ ಸಂಶಯವಿಲ್ಲ. ಆದ್ದರಿಂದ ಸ್ವರಾಜ್ಯ ಸಂರಕ್ಷಣೆಯ ಕಡೆಗೆ ಲಕ್ಷಗೊಟ್ಟು, ನಾವೆಲ್ಲರೂ ನಮ್ಮ ನಮ್ಮ ಪೂರ್ವಜರ ಚಾರಿತ್ರ್ಯ

ವನ್ನು ಸ್ಮರಿಸಿ, ಇಂದಿನ ಈ ದರ್ಬಾರದಲ್ಲಿ ಅಬ್ದಾಲಿಯ ಪಾರುಪತ್ಯಕ್ಕಾಗಿ ಶ್ರೀಮಂತ ಸರಕಾರದಿಂದ ವೀಳ್ಯವನ್ನು ಸ್ವೀಕರಿಸೋಣ! ಅಬ್ದಾಲಿಯನ್ನು ಸದೆ ಬಡೆದು ವಿಜಯವನ್ನು ಸಂಪಾದಿಸಿದೆನೆಂದರೆ, ಶ್ರೀಮಂತ ಸರಕಾರಕ್ಕೆ ಎಷ್ಟು ಆನಂದವಾಗುವದೆಂಬದನ್ನೂ, ಸಾಮ್ರಾಜ್ಯದ ಗೌರವವು ಎಷ್ಟು ಬೆಳೆಯುವದೆಂಬದನ್ನೂ ಸ್ವಾಭಿಮಾನಿಗಳಾದ ನೀವು ಮರೆಯತಕ್ಕದ್ದಲ್ಲ."

ಈ ಮೇರೆಗೆ ಭಾವೂಸಾಹೇಬನು ನೆರೆದ ಸಭಿಕರಲ್ಲಿ ವೀರಶ್ರೀಯು ಉಕ್ಕಿಬರುವಂತೆ ಪ್ರಸಂಗೋಚಿತವಾಗಿ ಭಾಷಣಮಾಡಿ ಕುಳಿತುಕೊಳ್ಳಲು, ದಮಾಜಿ ಗಾಯಕವಾಡನೆಂಬ ಮಧ್ಯಮ ವಯಸ್ಸಿನ ಶೂರ ಸರದಾರನು ಎದ್ದುನಿಂತು ಅರ್ಜಮಾಡಿಕೊಂಡನೇನಂದರೆ—"ಸರಕಾರ, ಭಾವೂಸಾಹೇಬರಂಥ ಕಡುಗಲಿಗಳ ಮೇಲೆ ಅಬ್ದಾಲಿಯ ಪ್ರಕರಣವನ್ನು ಚೆಲ್ಲಿಕೊಟ್ಟದ್ದು ಒಪ್ಪತಕ್ಕಮಾತಾಗಿದ್ದರೂ ನಮ್ಮಂಥ ಸೇವಕರಿರುತ್ತಿರಲು, ಸರಕಾರವು ಹೀಗೆ ಮುಂದುವರೆಯಬಾರದೆಂದು ನನ್ನ ವಿನಂತಿಯದೆ. ಇಂಥಿಂಥ ಕೆಲಸಗಳ ಸಲುವಾಗಿ ಸರಕಾರವೇ ಮುಂದೆಬೀಳಹತ್ತಿದ ಬಳಿಕ ನಮ್ಮಂಥ ಸೇವಕರ ಉಪಯೋಗವು ಹ್ಯಾಗಾಗಬೇಕು? ಅಬ್ದಾಲಿಯು ಬಲಿಷ್ಠನಿರುವದೇನೋ ನಿಜ; ಆದರೂ ಈ ಕಾಲಕ್ಕೆ ಸರಕಾರವು ಹಿಂದೆನಿಂತು ನಮ್ಮಂಥ ಸೇವಕರನ್ನು ಮುಂದೆಮಾಡಿ ಗನಿಮೀಕಾವಾದಿಂದ ಶತ್ರುವನ್ನು ಹಣ್ಣಿಗೆ ತರುವ ಹಂಚಿಕೆಯನ್ನು ಮಾಡುವದು ಸಯುಕ್ತಿಕವಾಗಿ ತೋರುತ್ತದೆ. ಉತ್ತರದಲ್ಲಿ ಸಿಂಧೆ ಹೋಳಕರರು ಇದ್ದೇ ಇರುವರಷ್ಟೇ; ಅವರ ಸಹಾಯಕ್ಕೆ ನಮ್ಮೊಳಗಿನ ಕೆಲವರಿಗೆ ಹೋಗಲಪ್ಪಣೆಯಾಗಬೇಕು; ಅಂದರೆ ಅಬ್ದಾಲಿಯು ಹ್ಯಾಗಿರುವನೆಂಬದನ್ನು ನಾವು ನೋಡಿಕೊಳ್ಳುತ್ತೇವೆ."

ದಮಾಜಿ ಗಾಯಕವಾಡನ ಈ ಭಾಷಣವು ನಾನಾಸಾಹೇಬನಿಗೆ ಅಂತರಂಗದಲ್ಲಿ ಒಪ್ಪಿಗೆಯಾಯಿತು. ಆದರೆ ಆತನು ಭಾವೂಸಾಹೇಬನ ಚಂಡಿತನದ ಸ್ವಭಾವವನ್ನು ಪೂರಾಬಲ್ಲವನಾದ್ದರಿಂದ ಒಮ್ಮೆಲೆ ಗೊತ್ತಾಗಿಹೋದದ್ದರಲ್ಲಿ ಭಾವೂಸಾಹೇಬನು ಅಂತರಮಾಡಗೊಡಲಿಕ್ಕಿಲ್ಲವೆಂದು ತಿಳಿದು, ಗೃಹಚ್ಛಿದ್ರವು ಬೈಲಿಗೆ ಬೀಳಬಾರದೆಂದು ತಮ್ಮನ ಪಕ್ಷವನ್ನೇ ಎತ್ತಿಮಾತಾಡಲುಪಕ್ರಮಿಸಿದನು. ಪ್ರಸಂಗೋಚಿತವಾಗಿ ಮಾತಾಡುವ ಧೋರಣವು ನಾನಾಸಾಹೇಬನಿಗೆ ಚೆನ್ನಾಗಿ ಸಾಧಿಸಿತ್ತೆಂದು ಹೇಳಬಹುದು. ಆಗ ಆತನು ದಮಾಜಿ ಗಾಯಕವಾಡನನ್ನು ಕುರಿತು—"ದಮಾಜಿರಾವ, ಶೂರರಾದ ನಿಮ್ಮಂಥ ಸ್ವಾಮಿನಿಷ್ಠ ಸರದಾರರಿಂದ ಅಬ್ದಾಲಿಯ ದೂಳವು ಹಾರುವದೆಂಬದರಲ್ಲಿ ಸಂಶಯವಿಲ್ಲ. ನಿಮ್ಮಂಥ ಶೂರಸರದಾರರ ಪರಾಕ್ರಮರೂಪವಾದ ಅಸ್ತಿವಾರದ ಮೇಲೆಯೇ ಛತ್ರಪತಿಯ ಸಾಮ್ರಾಜ್ಯಮಂದಿರವು ಇಂದಿಗೂ

ಭದ್ರವಾಗಿ ನಿಂತಿರುತ್ತದೆ. ಆದರೆ ಕಠಿಣಪ್ರಸಂಗದಲ್ಲಿ ಬರಿಯ ಸೇವಕರನ್ನಷ್ಟೇ ಸಂಕಟಕ್ಕೆ ಗುರಿಮಾಡಿ ಸ್ವಾಮಿಯಾದವನು ಹಿಂದೆ ನಿಂತುಕೊಳ್ಳುವದು ಸರಿಯೊ ದದ್ದಲ್ಲ! ದಮಾಜಿರಾವ, ನೀವು ರಾವಸಾಹೇಬರನ್ನು (ಬಾಜೀರಾಯನನ್ನು) ಮರೆ ತಂತೆ ತೋರುತ್ತದೆ. ಅವರ ಉದಾತ್ತವಿಚಾರವನ್ನೂ ಶೌರ್ಯೌದಾರ್ಯದ ಸಾಹ ಸಗಳನ್ನೂ ನೆನಪಿಗೆ ತಂದುಕೊಳ್ಳಿರಿ! ತಮ್ಮ ಹತ್ತೆಂಟುಜನ ಸರದಾರರು ಕಾದುತ್ತ ನಿಂತಲ್ಲಿ ಅವರು ಇದ್ದೇ ಇರುತ್ತಿದ್ದರಲ್ಲವೇ? ನಮ್ಮ ಚಿಮಣಾಜಿ ಅಪ್ಪಾನಾದರೂ ಅಂಥ ವಸ್ತಾದಿಯೇ ಇದ್ದನು! ಎಂದು ನುಡಿಯುತ್ತಿರಲು ಯಶವಂತರಾವಪವಾರರೇ ಮೊದಲಾದ ನಾಲ್ಕಾರು ಜನ ಸರದಾರರು 'ಒಮ್ಮೆಲೆ ಮುಗಿಬಿದ್ದು—ಮಹಾರಾಜ, ರಾವಸಾಹೇಬರ ಮಾತನ್ನು ಕೇಳುವದೇನು? ಪ್ರತಿಯೊಂದು ಕಠಿಣಪ್ರಸಂಗದಲ್ಲಿ ರಾವಸಾಹೇಬರು ಎಲ್ಲರಿಗಿಂತ ಮುಂದೆಯೇ ಇರುತ್ತಿದ್ದರು. ರಾವಸಾಹೇಬರೆಂದರೆ ಕೇವಲ ಪರಶುರಾಮನ ಅವತಾರ; ಎಂದು ಪ್ರಶಂಸಾತ್ಮಕಸ್ವರದಿಂದ ನುಡಿದರು. ಅವರ ಆ ಮಾತುಗಳಿಂದ ಸಭಿಕರ ಮೈಮೇಲಿನ ರೋಮಾಂಚಗಳು ನೆಟ್ಟಗಾಗಿ ಅವರಲ್ಲಿ ಒಂದು ಬಗೆಯ ಆವೇಶವು ಸಂಚರಿಸಿದಂತಾಯಿತು. ಆಗ ನಾನಾಸಾಹೇ ಬನು ಪುನಃ ನುಡಿದನೇನಂದರೆ—"ದಮಾಜಿರಾವ, ಈ ಕಾಲಕ್ಕೆ ಚರ್ಚೆಯು ಬೇಡ; ಶತ್ರುವು ಬಲಿಷ್ಠನಿದ್ದದರಿಂದ ಸರಕಾರವೇ ಮುಂದುವರೆಯುವದು ಅವಶ್ಯವಾಗಿರು ವದು. ಈ ಸಮಯದಲ್ಲಿ ನಾನೇ ಹೊರಡುವದು ಯೋಗ್ಯವಾಗಿದ್ದು ಭಾವೂಸಾ ಹೇಬನ ವಿಶೇಷಾಗ್ರಹದಿಂದ ನಾನು ನಿಂತುಕೊಂಡು ಕೇವಲ ನನ್ನ ಪಂಚಪ್ರಾಣಗ ಳಂತಿರುವ ನಮ್ಮ ಭಾವೂಸಾಹೇಬ ಹಾಗು ವಿಶ್ವಾಸರಾಯ ಇವರಿಬ್ಬರನ್ನು ಕಳುಹಿ ಸಬೇಕಾಗಿದೆ. ಸ್ವಾಮಿನಿಷ್ಠರಾದ ನೀವು ಕಾದುತ್ತಿದ್ದಲ್ಲಿ ನನ್ನ ಈ ಪಂಚಪ್ರಾಣ ಗಳಾದರೂ ಇರಲಿ."

ಈ ಮೇರೆಗೆ ನಾನಾಸಾಹೇಬನು ಭಾಷಣಮಾಡಿ ಮುಗಿಸಲು, ಎಲ್ಲ ಸರದಾ ರರೂ ತಮ್ಮ ಮುಖಮುದ್ರೆಯಿಂದ ಸಮ್ಮತಿಯನ್ನು ಪ್ರಕಟಿಸಿದರು. ಅವರೆಲ್ಲರಲ್ಲಿ ರಣೋತ್ಸಾಹವು ಕಂಡುಬರತೊಡಗಿತು. ಆಗ ಭಾವೂಸಾಹೇಬನು ಎದ್ದು ಶ್ರೀ ಮಂತರಿಂದ ವೀಳ್ಯವನ್ನು ಸ್ವೀಕರಿಸಿದನು. ಕೂಡಲೇ ದಮಾಜಿ ಗಾಯಕವಾಡ, ಯಶವಂತರಾವ ಪವಾರ, ತುಕೋಜಿ ಸಿಂಧೆ ಮೊದಲಾದ ಸರದಾರರು ಒಬ್ಬರ ಹಿಂದೊಬ್ಬರಂತೆ ಎದ್ದು ಮುಜುರೆಮಾಡಿ, ಶ್ರೀಮಂತ ನಾನಾಸಾಹೇಬನು ಕೈಮು ಟ್ಟಿಕೊಟ್ಟ ಪೋಷಾಕನ್ನು ಸ್ವೀಕರಿಸಿದರು. ಬಳಿಕ ಭಾವೂಸಾಹೇಬನು ಇಬ್ರಾ ಹಿಮಖಾನ ಗಾರದಿ ಮೊದಲಾದ ಸರದಾರರಿಗೆ ಅವರವರಿಗುಚಿತವಾದ ಪೋಷಾಕನ್ನು ಕೊಟ್ಟು ಮಿತ್ರರೇ, ನಿಮ್ಮೆಲ್ಲರ ಪರಾಕ್ರಮಕ್ಕೆ ಉಚಿತವಾಗಿ ಯೋಗ್ಯ ಸನ್ಮಾನವು

ಸರಕಾರದಿಂದ ಆಗಿರುವದಿಲ್ಲೆಂಬದನ್ನು ನಾನು ಬಲ್ಲೆನು! ಪ್ರಸ್ತುತ ಸಂಕಟವು ನಿವಾರಣವಾದಬಳಿಕ ನಿಮ್ಮ ನಿಮ್ಮ ಗೌರವಕ್ಕೆ ಸರಿಯಾಗಿ ಶ್ರೀಮಂತರಿಂದ ಸನ್ಮಾನವು ಮಾಡಲ್ಪಡುವದೆಂಬದರಲ್ಲಿ ಸಂದೇಹವಿಲ್ಲ, ಎಂದು ನುಡಿಯಲು ಸರ್ವರೂ ಸಂತೋಷದಿಂದ - ಸರಕಾರ! ನಮಗೆ ಇನಾಮಿನ ಇಚ್ಛೆಯಿಲ್ಲ; ಸ್ವರಾಜ್ಯ ಸಂರಕ್ಷಣವೇ ನಮಗೆ ಮೇಲಾದ ಪಾರಿತೋಷವು; ಎಂದು ನುಡಿದು ತಮ್ಮ ಉತ್ಸಾಹವನ್ನು ಪ್ರಕಟಿಸಿದರು. ಬಳಿಕ ದಿಗ್ವಿಜಯಕ್ಕೆ ಎಂದು ಹೊರಡುವದು? ಯಾವ ಯಾವ ಸರದಾರರು ಹೊರಡಬೇಕು? ಎಂಬದರ ನಿರ್ಣಯವಾಗಿ, ಆ ದಿವಸ ರಂಗಪಂಚಮಿಯು ಇದ್ದದರಿಂದ ಪದ್ಧತಿಯಂತೆ ಶ್ರೀಮಂತರು ಸರದಾರರಮೇಲೂ, ಸರದಾರರು ಶ್ರೀಮಂತರ ಮೇಲೂ ಕೇಶರೀ ಮಿಶ್ರಿತವಾದ ಓಕಳಿಯನ್ನು ಹಾಕುವದಾಯಿತು. ನಂತರ ದರ್ಬಾರವು ಬರಖಾಸ್ತವಾಯಿತೆಂದು ಭಾಲದಾರನು ಉಚ್ಚಸ್ವರದಿಂದ ಉಚ್ಚರಿಸಲು, ಶ್ರೀಮಂತರು ಪೀಠದಿಂದೆದ್ದರು. ಸರದಾರರು ಒಬ್ಬೊಬ್ಬರಂತೆ ಮಂಟಪದಿಂದ ಹೊರಬಿದ್ದು, ದರ್ಬಾರದ ಸಂಗತಿಯನ್ನು ಮನಸ್ಸಿನಲ್ಲಿ ಆಲೋಚಿಸುತ್ತ ಆನಂದದಿಂದ ತಮ್ಮ ತಮ್ಮ ಡೇರೆಯ ಕಡೆಗೆ ಸಾಗಿದರು.

## ಎರಡನೆಯ ಪ್ರಕರಣ.

—:o:(:o:):o:—

## ಭವಿತವ್ಯ.

ರಂಗಪಂಚಮಿಯ ಮಧ್ಯರಾತ್ರಿಯು; ಬೇಸಿಗೆಯ ಖರೋಷ್ಣತೆಯಿಂದ ತ್ರಸ್ತವಾದ ಪ್ರಾಣಿಮಾತ್ರರ ಹೃದಯಗಳು ಚಂದ್ರನ ಶೀತಲ ಕಿರಣಗಳಿಂದ ಸುಖಸಮಾಧಾನಗಳನ್ನು ಹೊಂದುತ್ತಲಿವೆ; ಗಗನಮಂಡಲದಲ್ಲಿ ಮಿನುಗುತ್ತಿದ್ದ ತಾರೆಗಳು ಪತಿಸಮಾಗಮದಿಂದ ಉಲ್ಲಾಸಪಡುವ ಪತಿವ್ರತೆಯರಂತೆ ಪರಿಶುದ್ಧವಾಗಿ ತೋರುತ್ತಲಿವೆ; ಶಾಂತಿಯ ಸಾಮ್ರಾಜ್ಯವು ಮೆಲ್ಲಮೆಲ್ಲನೆ ಭೂತಲವನ್ನು ಆಕ್ರಮಿಸತೊಡಗಿದೆ; ಇಂಥ ಪ್ರಶಾಂತವಾದ ಸಮಯದಲ್ಲಿ ಪೇಶ್ವೆಯ ಛಾವಣಿಯೊಳಗಿನ ಒಂದು ವಿಲಾಸಗೃಹದ ಬಳಿಯಲಿ ಒಬ್ಬ ಮನುಷ್ಯನು ಕುಳಿತುಕೊಂಡಿದ್ದನು. ಅವನ ಮುಖಮುದ್ರೆಯು ಯಾವದೋ ಒಂದು ಮಹಾಕಾರ್ಯವನ್ನು ಮಾಡಿದ ಜಯಶಾಲಿಯಂತೆ ಪ್ರಸನ್ನಮಯವಾಗಿತ್ತು; ಆದರೂ ಅವನ ಹಣೆಯಲ್ಲಿ ಎದ್ದು ಕಾಣುತ್ತಿರುವ ಮಡಿಕೆಗಳಿಂದ ಅವನು ಕ್ರೂರ ಸ್ವಭಾವದ

ವನೆಂದು ನೋಡುವವರು ತಟ್ಟನೆ ಕಂಡುಹಿಡಿಯಬಹುದಾಗಿತ್ತು; ಅವನು ಆಗಾಗ್ಗೆ ಆ ವಿಲಾಸಗೃಹದಕಡೆಗೆ ನೋಡುತ್ತ ಸ್ವಕಾರಸ್ಥಾನದ ಚಾತುರ್ಯವನ್ನು ಸ್ಮರಿಸಿ ಆನಂದಪಡುತ್ತಿದ್ದನು. ಆಗ ಅವನಿಗೆ ಸ್ವರ್ಗಸುಖವೇ ಪ್ರಾಪ್ತವಾದಂತಾಗಿತ್ತು; ನಡನಡುವೆ ಆತನು ಹುಬ್ಬುಗಂಟಿಕ್ಕಿ ಮುಖಮುದ್ರೆಯನ್ನು ಕರ್ರಗೆ ಮಾಡಿ—"ನೀಚರಿರಾ, ಈ ರಾವಜಿಯ ಕೈಯು ಇನ್ನೂ ನಿಮಗೆ ಗೊತ್ತಾಗಿಲ್ಲವೇ? ಆ ನೀಚ ಗಣೋಬನ ಪಾರುಪತ್ಯವನ್ನು ಮಾಡಿಸದಿದ್ದರೆ ನಾನು ರಾವಜಿಯೇ ಅಲ್ಲ" ಎಂದು ತನ್ನಷ್ಟಕ್ಕೆ ತಾನೇ ಬಡಬಡಿಸುತ್ತಿದ್ದನು.

ಈ ವೇಳೆಗೆ ಆ ಮನುಷ್ಯನು ಸ್ವಪೌರುಷದಿಂದ ಸಂತೋಷವನ್ನು ಹೊಂದುತ್ತ ಆಗಾಗ್ಗೆ ವಿಕಾರವಶನಾಗುತ್ತಿರಲು, ದೂರದಲ್ಲಿ ಯಾರೋ ತನ್ನ ಕಡೆಗೆ ಬರುತ್ತಿರುವಂತೆ ಅವನಿಗೆ ಭಾಸವಾಯಿತು. ಕೂಡಲೆ ಅವನು ಮೆಟ್ಟಿಬಿದ್ದು ದಿಟ್ಟಿಸಿನೋಡಲು, ಸುಂದರಾಕೃತಿಯ ಎರಡು ಸ್ತ್ರೀರೂಪಗಳು ಅವನ ದೃಷ್ಟಿಗೆಬಿದ್ದವು; ನೋಡನೋಡುತ್ತಿರಲು ಆ ಎರಡೂರೂಪಗಳು ಅವನಿಗೆ ಸ್ಪಷ್ಟವಾಗಿ ತೋರಹತ್ತಿದವು; ಆಗಂತೂ ಅವನ ಪ್ರಾಣವೇ ಹೋದಹಾಗಾಯಿತು. ಅವನ ಉಲ್ಲಾಸವೆಲ್ಲ ಎತ್ತಲೋ ಹೋಗಿಬಿಟ್ಟಿತು; ಅವನು ತೀರ ನಿರ್ವಿಣ್ಣನಾಗಿ—"ಅಯ್ಯೋ, ಇನ್ನೇನು ಮಾಡಲಿ? ಇಲ್ಲಿಗೆ ಶ್ರೀಮಂತಗೋಪಿಕಾಬಾಯಿಸಾಹೇಬರೇ ಬಂದುಬಿಟ್ಟರಲ್ಲ! ನನ್ನ ಕಾರಸ್ಥಾನವು ಅವರಿಗೆ ಹ್ಯಾಗೆ ಗೊತ್ತಾಗಿರಬಹುದು! ನಾನು ಸುಮ್ಮಸುಮ್ಮನೆ ಇಷ್ಟು ಯಾಕೆ ಅಂಜಬೇಕು? ಎಂಬ ಹಲವು ಬಗೆಯ ಕಲ್ಪನೆಗಳನ್ನು ಮಾಡಹತ್ತಿದನು. ಹೀಗೆ ಅವನು ಯೋಚನೆಯಲ್ಲಿ ಬಿದ್ದಿರಲು ಬಾಯಿಸಾಹೇಬರು ತಮ್ಮ ದಾಸಿಯೊಡನೆ ನೆಟ್ಟಗೆ ಅಲ್ಲಿಗೇ ಬಂದುಬಿಟ್ಟರು; ಆ ಕಾಲಕ್ಕೆ ಅವರ ಮುಖಮುದ್ರೆಯು ಅತ್ಯಂತ ಉಗ್ರವಾಗಿತ್ತು; ಅವರ ವಿಶಾಲವಾದ ಕಣ್ಣುಗಳು ಕೆಂಬಣ್ಣವನ್ನು ಧರಿಸಿದ್ದವು. ಅವರ ಕುಡಿಹುಬ್ಬುಗಳು ಅಸುರಮರ್ದಿನಿಯೊಡದೇವಿಯ ರೌದ್ರತೆಯನ್ನು ನೆನಪುಮಾಡಿಕೊಡುತ್ತಿದ್ದವು; ಹೀಗೆ ಆ ವೀರವನಿತೆಯು ಸಿಟ್ಟಿಗೆದ್ದ ನಾಗಿಣಿಯಂತೆ ಒಮ್ಮೆಲೆ ಆ ಮನುಷ್ಯನ ಮೈಮೇಲೆ ಹೋಗಿ—"ಎಲೋ ದುಷ್ಟಾ ರಾವಜಿ, ಆ ಹುಡುಗಿಯನ್ನು ಎಲ್ಲಿ ಸೆರೆ ಇಟ್ಟಿರುವಿ? ಹೇಳು ಬೇಗನೆ; ಎಂದು ಗದ್ದರಿಸಿದಳು. ಗೋಪಿಕಾಬಾಯಿಯವರ ದರ್ಪವನ್ನು ಪೂರಾ ಬಲ್ಲವನಾದ ರಾವಜಿಯು ತಡವರಿಸುತ್ತ ಅವರ ಮುಂದೆ ದೊಪ್ಪನೆ ಬಿದ್ದುಬಿಟ್ಟನು. ಬಳಿಕ ಬಾಯಿಸಾಹೇಬರವರು ಆ ನೀಚನನ್ನು ಬಿಟ್ಟು ಬಳಿಯಲ್ಲಿರುವ ವಿಲಾಸಗೃಹದ ಬಾಗಿಲವನ್ನು ತೆರೆದರು; ಆಗ ನೋಡುತ್ತಾರೆ; ಒಂದು ವಿಲಕ್ಷಣ ನೋಟವು ಅವರ ಕಣ್ಣಿಗೆ ಬಿತ್ತು; ಸುಮಾರು ೧೬।೧೭

ವರ್ಷದ ಒಬ್ಬ ಸುಂದರ ತರುಣಿಯು ಬಾಗಿಲ ಬಳಿಯಲ್ಲಿ ನಿಶ್ಚೇಷ್ಟಿತಳಾಗಿ ಬಿದ್ದುಬಿಟ್ಟಿದ್ದಳು; ಅವಳ ಸುಂದರವಾದ ಅವಯವಗಳು ವಸ್ತ್ರಾಚ್ಛಾದನವಿಲ್ಲದೆ ಸ್ಫುಟವಾಗಿ ತೋರುತ್ತಿದ್ದವು; ನೀರಲಹಣ್ಣನ್ನು ಹೀಯಾಳಿಸುವ ಆಕೆಯ ಕಪ್ಪುಬಣ್ಣದ ಮುಂಗುರುಳುಗಳು ಮೋರೆಯ ಮೇಲೆಲ್ಲ ಚೆಲ್ಲವರೆದಿದ್ದವು; ಆಕೆಯ ಎದೆಯ ಮೇಲಿನ ಸೆರಗು ಜಾರಿಬಿದ್ದದರಿಂದ ಸುಂದರವಾದ ಕುಚಗಳು ಮನೋಹರವಾಗಿ ತೋರುತ್ತಿದ್ದವು; ಆಕೆಯ ಮುಖಕಮಲವು ನಿಸ್ತೇಜವಾಗಿತ್ತು.

ಈ ಪ್ರಕಾರ ಸ್ಮೃತಿಯಿಲ್ಲದೆ ಬಿದ್ದುಬಿಟ್ಟಿರುವ ಆ ತರುಣೀಮಣಿಯನ್ನು ನೋಡಿ, ಗೋಪಿಕಾಬಾಯಿಯವರ ಮನಸ್ಸಿನಲ್ಲಿ ಹಲವು ವಿಧದ ಕಲ್ಪನೆಗಳು ತಾಕಲಾಡಿದವು; ಅವರು ಆವೇಶದ ಭರದಲ್ಲಿ—"ಏಳು ರಂಗೂ," ಎಂದು ಆಕೆಯನ್ನು ತಮ್ಮ ಕಾಲಿನಿಂದ ಒಮ್ಮೆ ಒದ್ದರು; ಆದರೆ ಮೂರ್ಚ್ಛೆ ಬಂದುಬಿದ್ದ ಆ ತರುಣಿಯು ಏಳುವ ಬಗೆ ಹ್ಯಾಗೆ? ಹೀಗೆ ಅವಳು ಎಚ್ಚರಿಯದಿರಲು, ಗೋಪಿಕಾಬಾಯಿಯವರು ಗಾಬರಿಯಾಗಿ, ತಮ್ಮ ದಾಸಿಗೆ ನೀರನ್ನು ತರಹೇಳಿ ತಾವು ಆಕೆಯ ಹತ್ತರ ಕುಳಿತು—"ರಂಗೂ, ದುಷ್ಟರು ನಿನ್ನನ್ನು ಏನು ಮಾಡಿರುವರು?" ಎಂದು ನುಡಿಯುತ್ತ ಆಕೆಗೆ ತಮ್ಮ ಸೀರೆಯ ಸೆರಗಿನಿಂದ ಗಾಳಿಯನ್ನು ಹಾಕಹತ್ತಿದರು. ಅಷ್ಟರಲ್ಲಿ ಆ ದಾಸಿಯೂ ನೀರು ತಂದದ್ದರಿಂದ, ಅವರಿಬ್ಬರೂ ಕೂಡಿ ಆಕೆಯನ್ನು ಉಪಚರಿಸಹತ್ತಿದರು.

ಪ್ರಿಯವಾಚಕರೇ, ಹೀಗೆ ನಿಶ್ಚೇಷ್ಟಿತಳಾಗಿ ಬಿದ್ದ ಆ ತರುಣಿಯು ಯಾರೆಂಬದನ್ನು ತಿಳಕೊಳ್ಳಲು ನೀವು ಆತುರಪಡುತ್ತಿರಬಹುದಲ್ಲವೇ? ಅದನ್ನು ಗೊತ್ತುಹಚ್ಚುವದಕ್ಕಾಗಿ ನಾವು ಪೇಶ್ವಾಯಿಯ ಛಾವಣಿಯ ಪರಿಚಯಮಾಡಿಕೊಳ್ಳೋಣ ನಡೆಯಿರಿ; ಪೇಶ್ವಾಯಿಯ ಛಾವಣಿಯು ಬಹು ವಿಸ್ತೃತವಾಗಿತ್ತು. ಉತ್ತರಹಿಂದುಸ್ತಾನದಲ್ಲಿರುವ ದೊಡ್ಡ ದೊಡ್ಡ ತೀರ್ಥ-ಕ್ಷೇತ್ರಗಳ ದರ್ಶನಕ್ಕೆಂದು ಪ್ರತಿಯೊಬ್ಬ ಬ್ರಾಹ್ಮಣಸರದಾರನು ತನ್ನ ಕುಟುಂಬದವರನ್ನು ಸಂಗಡ ಕರಕೊಂಡು ನಡೆದಿದ್ದನು. ಖುದ್ದ ಪೇಶ್ವೆಯವರು ಕೂಡ ತಮ್ಮ ಹೆಂಗಸರನ್ನು ಸಂಗಡ ಬರಗೊಟ್ಟಿದ್ದರು. ಯುದ್ಧದಂಥ ಕಠಿಣಪ್ರಸಂಗದಲ್ಲಿ ಹೆಂಗಸರನ್ನು ಒಯ್ಯುವದು ಅಪ್ರಶಸ್ತವಾಗಿದ್ದರೂ ತಮಗೆ ಅಪಜಯವು ಇಲ್ಲೇಇಲ್ಲವೆಂದು ನಂಬಿಕೊಂಡಿದ್ದ ಭಾವೂಸಾಹೇಬರೇ ಮೊದಲಾಗವರು ಅದಕ್ಕೆ ಸೊಪ್ಪುಹಾಕಿದ್ದಿಲ್ಲ; ಹೀಗಾಗಿ ಪೇಶ್ವೆಯವರ ಸಂಗಡ ಸಾವಿರಾರು ಜನ ಹೆಂಗಸರು ಹೊರಟದ್ದರಿಂದ ಸೋನೆ ಎಂಬ ಸರದಾರಮನೆತನದ ಯಮುನಾಬಾಯಿಯೆಂಬ ವಿಧವೆಯು ತನ್ನ ಬಾಲವಿಧವೆಯಾದ ಸೊಸೆಯನ್ನು ಕರಕೊಂಡು ತನ್ನ ಸರಂಜಾಮಿನ ದಂಡಿನೊಡನೆ ಬಂದಿದ್ದು ಛಾವಣಿಯ ದಕ್ಷಿಣಭಾಗದಲ್ಲಿ ತಳೆ

ವೂರಿದ್ದಳು. ಆ ಯಮುನಾಬಾಯಿಯ ಸೊಸೆಯಾದ ಬಾಲವಿಧವೆಯೇ ಆ ನಮ್ಮ ರಂಗೂಬಾಯಿಯು!

ರಂಗೂಬಾಯಿಯು ಬಲುಸುಂದರಿಯು. ಆಕೆಯು ಅಂಗಕಾಂತಿಯು ಸ್ವರ್ಗಾಂಗನೆಯರನ್ನು ನಾಚಿಸುತ್ತಿತ್ತು. ಅವಳ ಮುಖಮಂಡಲವು ಪೂರ್ಣಚಂದ್ರನನ್ನು ಹೋಲುತ್ತಿತ್ತು; ಆಕೆಯ ನಡವು ಬಲು ಕೃಶವಾಗಿತ್ತು; ಅವಳ ವಿಶಾಲನೇತ್ರಗಳು ಸತೇಜವಾಗಿದ್ದು, ಸರಳವಾದ ಮೂಗೂ, ಕುಡಿಹುಬ್ಬುಗಳೂ ಬ್ರಹ್ಮದೇವನ ಚಾತುರ್ಯವನ್ನು ವ್ಯಕ್ತಿಗೊಳಿಸುತ್ತಿದ್ದವು. ಆಕೆಯ ಬಹು ಮೃದವಾದ ಹಾಗು ಆರಕ್ತವರ್ಣವುಳ್ಳ ಪಾದತಲದಲ್ಲಿ ಸಾಕ್ಷಾತ್ ಮನ್ಮಥದೇವನೇ ವಾಸಮಾಡಿರುವನೊ ಎಂಬಂತೆ ಭಾಸವಾಗುತ್ತಿತ್ತು. ಹಾಗೆ ಪ್ರತಿ ಅಪ್ಸರೆಯಂತೆ ತೋರುವ ಆ ಸ್ತ್ರೀಯುವತಿಯ ದರ್ಶನದಿಂದ ಹಲವು ಜನ ತರುಣರ ಚಿತ್ತವು ಚಂಚಲವಾಗುತ್ತಿತ್ತೆಂಬದರಲ್ಲಿ ಆಶ್ಚರ್ಯವಿಲ್ಲ; ಈ ಮೇರೆಗೆ ತ್ರಿಭುವನ ಸುಂದರಿಯಂತಿರುವ ರಂಗೂಬಾಯಿಯು ಪುಣೆಯಲ್ಲಿದ್ದಾಗ ತಮ್ಮ ಅತ್ತೆಯ ತಂಗಿಯಾದ ತಾಯಿಬಾಯಿಯ ಸಂಗಡ ಪೇಶ್ವೆಯವರ ವಾಡೆಕ್ಕೆ ಪ್ರಸಂಗವಿಶೇಷದಲ್ಲಿ ಹೋಗುತ್ತಿದ್ದಳು. ಆಗ ಒಮ್ಮೆ ನಾನಾಸಾಹೇಬನು ಈ ಸ್ತ್ರೀರತ್ನವನ್ನು ನೋಡಿ ಬೆರಗಾಗಿ ಆಕೆಯ ಸೌಂದರ್ಯವನ್ನು ವರ್ಣಿಸಿದ್ದನು. ಆ ಪಾಪಭೀರುವಾದ ನಾನಾಸಾಹೇಬನು ರಂಗೂಬಾಯಿಯ ಸೌಂದಯುವನ್ನು ಸಹಜವಾಗಿ ಬಣ್ಣಿಸಿದ್ದನಲ್ಲದೆ, ಆಕೆಯ ಮೇಲಿನ ಪಾಪಬುದ್ಧಿಯಿಂದ ವರ್ಣಿಸಿದ್ದಿಲ್ಲ. ಇದನ್ನು ತಿಳಿಯದೆ ಅವನ ಕಲಾವಂತಿನಿಯರ ಕಾರಖಾನೆಯ ಮುಖ್ಯಸ್ಥನಾದ ರಾವಜಿಯೆಂಬ ದುಷ್ಟಮನುಷ್ಯನು ರಂಗೂಬಾಯಿಯನ್ನು ಶ್ರೀಮಂತರು (ನಾನಾಸಾಹೇಬ)ಪ್ರೀತಿಸುವರೆಂದು ಕುತರ್ಕವನ್ನು ಮಾಡಿ ಆಕೆಯನ್ನು ನಾನಾಸಾಹೇಬನಿಗೆ ತಂದುಕೊಡುವ ಸಾಹಸವನ್ನು ನಡಿಸಿದ್ದನು.

ರಾವಜಿಗೆ ಸಖೂಬಾಯಿಯೆಂಬ ಒಬ್ಬ ಕುಟಿಲ ಸ್ತ್ರೀಯು ಸಹಾಯವಿತ್ತು. ಅವಳು ಶ್ರೀಮಂತರ ಮನೆಯಲ್ಲಿ ಶಾಗಿರ್ದಿಯವಳಿದ್ದಳು; ಆಕೆಯು ರಾವಜಿಯ ಹೇಳಿಕೆಯಂತೆ ಹಗಲೆಲ್ಲ ರಂಗೂಬಾಯಿಯ ಕಡೆಗೆ ಹೋಗಿಬರುವ ರೂಢಿಯನ್ನಿಟ್ಟಳು; ಆದರೆ ರಂಗೂಬಾಯಿಯ ಮನೆಯಲ್ಲಿರುವ ಗಣೋಬನೆಂಬ ವೃದ್ಧಸೇವಕನು ಬಹು ಚತುರನಿದ್ದುದರಿಂದ ಅವನು ಸಖೂಬಾಯಿಯ ಸ್ವಭಾವವನ್ನು ಕಂಡು ಹಿಡಿದು, ಯಾವಾಗಲೂ ಜಾಗರೂಕನಾಗಿರುತ್ತಿದ್ದನು; ಹೀಗಿರಲು ಪೂರ್ವೋಕ್ತ ಛಾವಣಿಯು ಬೀಡುಬಿಟ್ಟಾಗ, ಸಖೂಬಾಯಿಯು ಒಮ್ಮೆ ರಂಗೂಬಾಯಿಯ ರಾಹುಟಿಗೆ ಬಂದಳು; ಆಗ ಗಣೋಬನ ಪಿತ್ತವು ತಲೆಗೇರಿ, ಆಕೆಯ ಮೈಮೇಲೆ ತನ್ನ ನಾಯಿಯನ್ನು ಛೂ ಬಿಟ್ಟನು; ನಾಯಿಯು ಬೊಗಳುತ್ತ ಹೋಗಿ ಸಖೂ

ಬಾಯಿಯು ಮೊಸಗಂಡವನ್ನು ಹಿಡಿದು ಎಳೆದುಬಿಟ್ಟಿತು; ಅದರಿಂದಳಕೆಗೆ ಭಯಂಕರವಾದ ಗಾಯುವಾಗಿ ಅವಳು ನರಳುತ್ತ ರಾವಜಿಯ ಕಡೆಗೆ ಹೋದಳು. ದುಷ್ಟನಾದ ರಾವಜಿಯು ಸಖೂಬಾಯಿಗಾದ ದುಃಖವನ್ನು ನೋಡಿ ಕಂಗೆಟ್ಟು, ರಂಗೂಬಾಯಿಯನ್ನು ಸೆರೆಹಿಡಿದು ಗಣೋಬನನ್ನು ದಂಡಿಸುವ ಪ್ರತಿಜ್ಞೆಯನ್ನು ಮಾಡಿದನು. ಅವನ ಪ್ರತಿಜ್ಞೆಗೆ ಅನುಕೂಲವಾಗಿಯೇ ಎಂಬಂತೆ ನಾನಾಸಾಹೇಬನ ಹೆಂಡತಿಯಾದ ಗೋಪಿಕಾಬಾಯಿಯು ತಮ್ಮ ಛಾವಣಿಯೊಳಗಿನ ಹೆಂಗಸರಿಗೆಲ್ಲ ಮಾಡಿಸುವ ಮೇಜವಾನಿಯು ಅದೇ ದಿವಸವೇ ಆಗಬೇಕಾಗಿತ್ತು?

ಆ ದಿವಸ ಸಂಜೆಯ ಮುಂದೆ ರಾವಜಿಯು ತನ್ನ ಕಾರಕೂನನನ್ನು ಕರೆದು, ಅವನಿಗೆ ಹೇಳತಕ್ಕದ್ದನ್ನು ಹೇಳಿ, ಅವನನ್ನು ರಂಗೂಬಾಯಿಯ ಡೇರೆಗೆ ಕಳಿಸಿಕೊಟ್ಟನು. ಕಾರಕೂನನು ಹೋದಾಗ ರಂಗೂಬಾಯಿಯ ಅತ್ತೆಯು ಕಯ್ಯಲ್ಲಿ ಜಪಮಾಲೆಯನ್ನು ಹಿಡಿದು ಜಪಮಾಡುತ್ತ ಕುಳಿತುಕೊಂಡಿದ್ದಳು. ಆಕೆಯ ಬಳಿಯಲ್ಲಿಯೇ ರಂಗೂಬಾಯಿಯು ಯಾವದೋ ಒಂದು ವಿಚಾರದಲ್ಲಿ ಮಗ್ನಳಾಗಿ ಕುಳಿತಿದ್ದಳು; ಕಾರಕೂನನು ಒಳಗೆ ಹೋಗಿ ಯಮುನಾಬಾಯಿಯನ್ನು ನಮಸ್ಕರಿಸಿ, ತಾನು ತಾಯಿಬಾಯಿಯ ಕಾರಕೂನನೆಂತಲೂ, ಶ್ರೀಮಂತ ಗೋಪಿಕಾಬಾಯಿಯವರ ಹೇಳಿಕೆಯ ಪ್ರಕಾರ ಅವರು ತನ್ನನ್ನು ರಂಗೂಬಾಯಿಯನ್ನು ಕರೆಯಲಿಕ್ಕೆ ಕಳುಹಿಸಿರುವರೆಂತಲೂ ಹೇಳಿದನು.

ತಾಯಿಬಾಯಿಯು ಯಮುನಾಬಾಯಿಯ ತಂಗಿಯೆಂಬದನ್ನು ಹಿಂದೆ ಹೇಳಿದೆಯಷ್ಟೇ; ಆಕೆಯನ್ನು ಮೋಹಂದಳೆಯ ಬಳವಂತರಾಯನೆಂಬ ಸರದಾರನಿಗೆ ಕೊಟ್ಟಿತ್ತು. ಮರುದಿನ ಮುಂಜಾನೆ ತಾಯಿಬಾಯಿಯು ಗಂಡನೊಡನೆ ದಿಲ್ಲಿಗೆ ಪ್ರಯಾಣಮಾಡತಕ್ಕವಳಿದ್ದದರಿಂದ, ಆಕೆಯು ಭೆಟ್ಟಿಯಾಗಿಬರಬೇಕೆಂದು ರಂಗೂಬಾಯಿಯು ಮೊದಲೇ ಹಾತೊರೆಯುತ್ತಿದ್ದಳು. ಅದರಲ್ಲಿ ಕರೆಯ ಕಳುಹಿದ ಬಳಿಕ ಕೇಳುವದೇನು? ಅವಳ ಇಚ್ಛೆಯು ದ್ವಿಗುಣವಾಯಿತು. ಆ ಕಾರಕೂನನಂತೂ ಒಂದೇಸವನೆ ಅವಸರ ಮಾಡಹತ್ತಿದನು ಅವನ ಉಪದ್ರವಕ್ಕೆ ಬೇಸತ್ತು, ಯಮುನಾಬಾಯಿಯು ತಮ್ಮ ಮೇಣೆಯನ್ನು ಸಿದ್ಧಪಡಿಸಲು ಸೇವಕರಿಗೆ ಆಜ್ಞಾಪಿಸಿದಳು. ಆದರೆ ಎಲ್ಲವನ್ನೂ ಸಜ್ಜುಮಾಡಿಕೊಂಡು ಬಂದಿದ್ದ ಆ ಕಾರಕೂನನು ಮುಂದುವರೆದು— “ಬೇಡ ಬಾಯಿಸಾಹೇಬ, ನಿಮ್ಮ ಮೇಣೆಯನ್ನು ಸಿದ್ಧಪಡಿಸುವ ಗೊಂದಲ ಬೇಡ; ತಾಯಿಬಾಯಿಯವರು ತಮ್ಮ ಮೇಣೆಯನ್ನೇ ಕಳಿಸಿಕೊಟ್ಟಿದ್ದಾರೆ” ಎಂದು ನುಡಿಯುತ್ತ, ತಾನು ತಂದ ಮೇಣೆಯನ್ನು ತೋರಿಸಿ—ಹೂ! ರಂಗೂಬಾಯಿಯವರೇ, ಯಾಕೆ ತಡಮಾಡುವಿರಿ? ಬೇಗನೆ ಮೇಣೆಯಲ್ಲಿ ಕುಳಿತುಕೊಳ್ಳಿರಿ,

ಹೂ, ಕುಳಿತುಕೊಳ್ಳಿರಿ ಎಂದು ದುಂಬಾಲಬಿದ್ದನು. ತಾಯಿಬಾಯಿಯ ಭೆಟ್ಟಿಗಾಗಿ ಬಹು ತವಕಿಸುತ್ತಿದ್ದ ರಂಗೂಬಾಯಿಯು ತಾನು ಹೋಗಲಿಕ್ಕೆ ಅತ್ತೆಯವರ ಸಮ್ಮತಿಯು ಇರುವದೆಂದು ತಿಳಿದು ಮೈಮೇಲೆ ಒಂದು ಶಾಲನ್ನು ಹೊತ್ತುಕೊಂಡು ಚಟ್ಟನೆ ಮೇಣೆಯಲ್ಲಿ ಹೋಗಿ ಕುಳಿತಳು. ಆಕೆಯು ಮೇಣೆಯಲ್ಲಿ ಕೂಡ್ರುವ ಮೊದಲು ಗಣೋಬನನ್ನು ಒದರಿದಳು ಮಾತ್ರ. ಗಣೋಬನು ಸಾವರಿಸಿಕೊಂಡು ಹೊರಗೆ ಬರುವಷ್ಟರಲ್ಲಿ ಮೇಣೆಯು ಹೊರಟುಹೋಗಿತ್ತು; ಕೂಡಲೆ ಅವನೂ ಆ ಮೇಣೆಯನ್ನು ಕೂಡಿಕೊಳ್ಳುವದಕ್ಕಾಗಿ ಒತ್ತರದಿಂದ ಕಾಲುಬಿಟ್ಟನು. ಗಣೋಬನು ಎಷ್ಟು ಓಡಿದರೂ ಆ ಮೇಣೆಯು ಕೈಗೆ ಸಿಗಲಿಲ್ಲ; ಮೇಣೆಯನ್ನು ಹೊತ್ತ ಭೋಯಿಗಳು ಬಹು ಬೇಗನಾಗಿ ಸಾಗಿ ಬುದ್ಧ ಪೇಶ್ವೆಯ ಪಟಾಂಗಣದಬಂದು ಚೌಕಿಯನ್ನು ಸೇರಿದರು. ಗಣೋಬನು ಹಿಂದಿನಿಂದ ಆ ಚೌಕಿನಬಾಗಿಲಬಳಿಗೆ ಹೋಗಲು ಕಾವಲುಗಾರರು ಅವನನ್ನು ತಡೆದರು; ಕೂಡಲೆ ಗಣೋಬನು ಮೆಟ್ಟಿಬಿದ್ದು ನೋಡಲು ಎದುರಿಗೆ ಕ್ರೂರನಾದ ರಾವಜಿಯು ನಿಂತಿದ್ದನು. ಆಗ ಅವನ ಎದೆಯು ಧಸ್ಸೆಂದಿತು. ಕೆಲಸವು ಘಾತವಾಯಿತು, ಎಂದು ಅವನು ತಿಳಿದುಕೊಂಡನು. ಆತನು ಬಹು ಧೂರ್ತನಾದ್ದರಿಂದ ಅಲ್ಲಿ ಕ್ಷಣಮಾತ್ರ ಸಹ ನಿಲ್ಲದೆ ಅಲ್ಲಿಂದ ಬಹುದೂರ ಹೋಗಿ ಒಂದು ಗಿಡದ ಬುಡಕ್ಕೆ ಉಸ್ಸೆಂದು ಕುಳಿತುಕೊಂಡನು. ಆಗ ಆ ಸ್ವಾಮಿಭಕ್ತನಾದ ಮುದುಕನಿಗೆ ಬಹಳ ದುಃಖವಾಯಿತು. ತನ್ನ ಸ್ವಾಮಿನಿಯಮೇಲೆ ಭಯಂಕರವಾದ ಗಂಡಾಂತರವು ಬಂದದ್ದರಿಂದ ಆಕೆಯ ಮರ್ಯಾದೆಯು ಹ್ಯಾಗೆ ಉಳಿಯುವದೋ ಎಂದು ಅವನು ಬಹು ಪರಿಯಾಗಿ ಮಿಡುಕಿದನು. ಆಕೆಯ ಸಂಕಟನಿವಾರಣೋಪಾಯವು ಅವನಿಗೆ ಏನೂ ತಿಳಿಯದಂತಾಯಿತು.

ಈ ಬಗೆಯಾಗಿ ಗಣೋಬನು ಮಿಡುಕುತ್ತ ಆ ಗಿಡದಡಿಯಲ್ಲಿ ಕುಳಿತಿರಲು ಅವನಿಗೆ ದೂರದಲ್ಲಿ ಬೆಳಕು ಬಿದ್ದಹಾಗೆ ತೋರಿತು. ಬರಬರುತ್ತ ಆ ಬೆಳಕು ದೊಡ್ಡದಾಗುತ್ತ ಹೋಗಿ ಅಲ್ಲಿ ಸಾವಿರಾರು ದೀವಟಿಗೆಗಳು ಕಂಡುಬರಹತ್ತಿದವು; ಆಗ ಗಣೋಬನು ವಿಚಾರಮಾಡಿ—"ಈ ದಿನ ಸರಕಾರದಲ್ಲಿ ಮೇಜವಾನಿ ಇದ್ದುದರಿಂದ ಬಂದ ಜನರೆಲ್ಲ ಉಂಡು ತಿರುಗಿ ಹೋಗುತ್ತಿರಬಹುದೆಂದು ತರ್ಕಿಸಿ, ಆ ಜನರಲ್ಲಿ ತಾಯಿಬಾಯಿಯವರ ಭೆಟ್ಟಿಯಾದರೂ ಆದೀತೆಂದು ತಿಳಿದು ಅವನು ಅಲ್ಲಿಂದೆದ್ದು ಆ ದೀವಟಿಗೆಗಳು ಕಾಣುವಲ್ಲಿಗೆ ಹೋದನು. ಅವನು ತನಗೆ ಹಾದಿಯಲ್ಲಿ ಭೆಟ್ಟಿಯಾಗುವ ಪ್ರತಿಯೊಬ್ಬರನ್ನೂ ನಿರೀಕ್ಷಿಸುತ್ತ ಮೇಣೆಗಳು ಹೊರಬೀಳುವ ಆ ಬಾಗಿಲಬಳಿಗೆ ಹೋದನು. ಇಷ್ಟು ಸಾಹಸಮಾಡಿದರೂ

ವ್ಯರ್ಥವಾಯಿತು: ಆ ದಿವಸ ಮೇಜವಾನಿಗೆ ತಾಯಿಬಾಯಿಯವರು ಬಂದಿಲ್ಲ ವೆಂಬದು ಗಣೋಬನಿಗೆ ಗೊತ್ತಾಯಿತು. ಈ ಸಂಗತಿಯಿಂದಂತೂ ಅವನು ಹೌ ಹಾರಿಹೋದನು. ರಂಗೂಬಾಯಿಯು ಇಲ್ಲಿಗೆ ಯಾಕೆ ಬಂದಳು ಎಂಬದು ಕೂಡಾ ಅವನಿಗೆ ತಿಳಿಯದಾಯಿತು. ಅವನು ಬಳ್ಳೇ ಪೇಚಾಟದಲ್ಲಿ ಬಿದ್ದನು: ಕೆಲಕೆಲ ವರಿಗೆ ಸಂಕಟಗಳು ಬಂದಾಗ ಇಲ್ಲದ ಧೈರ್ಯವು ಪ್ರಾಪ್ತವಾಗುತ್ತಿರುತ್ತದೆ. ಅದರಂತೆ ಆ ಗಣೋಬನಾದರೂ ಈ ಪ್ರಸಂಗದಲ್ಲಿ ಬಳ್ಳೇ ಧೈರ್ಯವನ್ನು ತಾಳಿ ಈ ಸಂಗತಿಯನ್ನು ಶ್ರೀಮಂತ ಗೋಪಿಕಾಬಾಯಿಯವರ ಕಿವಿಯಮೇಲೆ ಹಾಕಬೇ ಕೆಂದು ನಿಶ್ಚಯಿಸಿದನು: ಆದರೆ ಯಃಕಶ್ಚಿತನಾದ ತಾನು ಅವರ ಬಳಿಗೆ ಹೋಗುವ ಬಗೆ ಹ್ಯಾಗೆ? ಎಂದು ಶಂಕಿಸಿ ಅದಕ್ಕಾಗಿ ಆತನು ಒಂದು ಯುಕ್ತಿಯನ್ನು ಹುಡು ಕಿಕೊಂಡನು. ಬಳಿಕ ಅವನು ಜನರ ಸಂದಣಿಯೊಳಗಿಂದ ನುಸುಳಿ ಆ ಭವ್ಯವಾದ ಪಟಾಂಗಣವನ್ನು ಸೇರಿ ಶ್ರೀಮಂತರ ರಾಹುಟಿಯವರೆಗೆ ಹೋದನು. ಆಗ ಅವನು ಅಲ್ಲಿದ್ದ ಒಬ್ಬ ದಾಸಿಯನ್ನು ಕರೆದು ತನ್ನ ಬೆರಳಿನಲ್ಲಿರುವ ಮೋಹರಿನ ಉಂಗರ ವನ್ನು ಆಕೆಗೆ ಉಚಿತವಾಗಿ ಕೊಟ್ಟು—ತಾನು ತಾಯಿಬಾಯಿಯವರ ಸೇವಕ ನಿದ್ದು ಒಂದು ಮಹತ್ವದ ಸಂಗತಿಯನ್ನು ಸರಕಾರಕ್ಕೆ ತಿಳಿಸತಕ್ಕದ್ದಿರುವದರಿಂದ ತನ್ನನ್ನು ಶ್ರೀಮಂತ ಗೋಪಿಕಾಬಾಯಿಯವರ ಬಳಿಗೆ ಕರಕೊಂಡು ಹೋಗಬೇ ಕೆಂದು ಹೇಳಿಕೊಂಡನು. ಕೈಯೊಳಗೆ ಬಿದ್ದ ಆ ಸುವರ್ಣದ ಉಂಗುರದಿಂದ ಆ ದಾಸಿಯು ಸಂತೋಷಹೊಂದಿ ಆ ಮಾತನ್ನು ಒಪ್ಪಿಕೊಂಡು ಗಣೋಬನಿಗೆ—"ನೀನು ಕ್ಷಣಹೊತ್ತು ಇಲ್ಲಿಯೇ ನಿಂತಿರು; ನಾನು ಒಳಗೆ ಹೋಗಿಬರುತ್ತೇನೆ" ಎಂದು ನುಡಿದು ಆಕೆಯು ನೋಡನೋಡುವಷ್ಟರಲ್ಲಿ ಮಾಯವಾದಳು. ಇತ್ತ ಗಣೋಬನು ತನ್ನ ಸ್ವಾಮಿನಿಯ ದುರ್ಭಾಗ್ಯವನ್ನು ನೆನೆಯುತ್ತ ಅಲ್ಲಿಯೇ ನಿಂತುಕೊಂಡನು:

ಬಳಿಕ ಕೆಲಹೊತ್ತಿನ ಮೇಲೆ ಆ ದಾಸಿಯು ಬಂದು ಗಣೋಬನಿಗೆ ತನ್ನ ಹಿಂದೆ ಬರಲಿಕ್ಕೆ ಸನ್ನೆಮಾಡಿದಳು. ಗಣೋಬನು ಆಕೆಯ ಬೆನ್ನಟ್ಟಿ ನಡೆದನು. ೩—೪ ಸಣ್ಣ ಸಣ್ಣ ಡೇರೆಗಳನ್ನು ದಾಟಿದ ಬಳಿಕ ಒಂದು ದೊಡ್ಡ ಡೇರೆಯು ಹತ್ತಿತು; ಆ ಡೇರೆಯ ಒಳಭಾಗದಲ್ಲಿ ಬೆಲೆಯುಳ್ಳ ರೇಶ್ಮಿಯ ವಸ್ತ್ರಗಳ ಕನಾತವನ್ನು ಕಟ್ಟಿದ್ದು ಮಧ್ಯಭಾಗದಲ್ಲಿ ಗಾದಿಯಮೇಲೆ ದಿಂಬಿಗೆ ಆತು ಬಾಯಿಸಾಹೇಬರವರು ಕುಳಿತು ಕೊಂಡಿದ್ದರು. ಅವರ ಮುಂದೆ ಎರಡು ದೀಪಗಳು ಢಾಳಾಗಿ ಉರಿಯುತ್ತಿದ್ದವು. ಅವರೆದುರಿಗೆ ಒಬ್ಬ ದಾಸಿಯು ಒಂದು ಪೆಟ್ಟಿಗೆಯನ್ನು ಹಿಡಿದುಕೊಂಡು ನಿಂತಿದ್ದು, ಒಬ್ಬ ಕಾರಕೂನನು ಬಳ್ಳೇ ವಿನಯದಿಂದ ಅವರ ಮುಂದೆ ನಿಂತುಕೊಂಡಿದ್ದನು: ಗಣೋಬನು ಬಾಯಿಸಾಹೇಬರವರನ್ನು ಕಂಡಕೂಡಲೆ ಬಡ ಬಡ ೮-೧೦

ಮುಜುರೆಗಳನ್ನು ನೆಲಕ್ಕೆ ಕೈಹಚ್ಚಿ ಮಾಡಿ—"ಸರಕಾರ! ಆ ಹಿಂದಿನ ಚೌಕಿನಲ್ಲಿ ಯಾರೋ ದುಷ್ಟರು ಸೋನೆಯವರ ರಂಗೂಬಾಯಿಯನ್ನು ಪ್ರತಿಬಂಧಿಸಿ ಇಟ್ಟಿರುವರು" ಎಂದು ನುಡಿದನು. ಅವನ ಆ ಮಾತುಗಳು ಬಾಯಿಸಾಹೇಬರ ಹೃದಯಕ್ಕೆ ಸಿಡಿಲು ಬಡಿದ ಹಾಗಾದವು; ಕೂಡಲೆ ಅವರಲ್ಲಿ ಸಂತಾಪವು ಹೆಚ್ಚಿತು. ಆದರೆ ಅವರು ತಮಗಾಗಿದ್ದ ವಿಕಾರವನ್ನು ಹೊರಗೆಡವದೆ ತಮ್ಮ ಕಾರಕೂನನಿಗೆ—"ನೀನು ಆ ಮನುಷ್ಯನನ್ನು ಕರಕೊಂಡು ಹೋಗಿ ಹೆಬ್ಬಾಗಿಲ ಬಳಿಯಲ್ಲಿ ಕುಳಿತಿಕೋ" ಎಂದು ಹೇಳಿದರು. ಅದರಂತೆ ಆ ಕಾರಕೂನನು ಗಣೋಬನೊಡನೆ ಅಲ್ಲಿಂದ ಹೊರಟು ಹೋದನು. ಕಾರಕೂನನು ಹೋದ ಬಳಿಕ ಬಾಯಿಸಾಹೇಬರು ಒಂದು ದೀರ್ಘ ಶ್ವಾಸವನ್ನು ಬಿಟ್ಟು—'ಹಾಯ್, ಹಾಯ್, ಇಂಥ ಅನರ್ಥಗಳು ನಡೆಯ ಹತ್ತಿದರೆ ಮುಂದೆ ದೌಲತ್ತಿನ ಸ್ಥಿತಿಯು ಏನಾಗುವದೋ ತಿಳಿಯದು! ಈ ದುರ್ಬುದ್ಧಿಯು ಯಾಕೆ ಹುಟ್ಟಿರಬಹುದು? ಒಳ್ಳೇದು ಇದಕ್ಕೆ ಈಗಲೇ ಪ್ರತೀಕಾರ ಮಾಡಲಿಕ್ಕೇಬೇಕು" ಎಂದು ಅಂದುಕೊಂಡು ಅವರು ಆ ದಾಸಿಯೊಡನೆ ಅಲ್ಲಿಂದ ಹೊರಟು ಮೇಲೆ ಹೇಳಿದಂತೆ ರಂಗೂಬಾಯಿಯ ಬಳಿಗೆ ಬಂದರು.

ಗೋಪಿಕಾಬಾಯಿಯವರು ಒಳ್ಳೇ ಧಾರ್ಮಿಕರಾಗಿದ್ದರು; ಅವರ ಸುಶೀಲತನವೂ ಪತಿಭಕ್ತಿಯೂ ಪೂರ್ವಕಾಲದ ಋಷಿಪತ್ನಿಯರ ಆಚರಣೆಗಳನ್ನು ಸರಿಗಟ್ಟುತ್ತಿದ್ದವು; ತಮ್ಮ ಪತಿಯಾದ ನಾನಾಸಾಹೇಬನೇ ಈ ಕೆಲಸ ಮಾಡಿರಬಹುದೆಂಬ ಕಲ್ಪನೆಯು ಅವರ ಮನಸ್ಸಿನಲ್ಲಿ ಬಂದುಬಿಟ್ಟಿತು, ಆದರೂ ವಸ್ತುಸ್ಥಿತಿಯನ್ನು ಬೈಲಿಗೆಳೆಯಬೇಕೆಂದು ಹಿಂದೆ ಹೇಳಿದಂತೆ ಅವರು ರಂಗೂಬಾಯಿಯನ್ನು ಶೈತ್ಯೋಪಚಾರಗಳಿಂದ ಉಪಚರಿಸಿದರು; ಅವರ ಪ್ರಯತ್ನಕ್ಕೆ ಫಲವು ದೊರೆತು ರಂಗೂಬಾಯಿಯು ನಿಚ್ಚಳವಾಗಿ ಕಣ್ಣು ತೆರೆದಳು. ಆಗ ಗೋಪಿಕಾಬಾಯಿಯವರು ಸ್ವಲ್ಪ ಧೈರ್ಯತಾಳಿ—"ರಂಗೂ ನೀನು ಇವರ ಕೈಯಲ್ಲಿ ಹ್ಯಾಗೆ ಸಿಕ್ಕೆ?" ಎಂದು ಕೇಳಿದರು. ಅದಕ್ಕೆ ರಂಗೂಬಾಯಿಯು ನಾಚಿಕೆಯಿಂದ ತಲೆಬಗ್ಗಿಸಿ, ತಾನು ಅತ್ತೆಯ ಮನೆಬಿಟ್ಟು ಹೊರಟಾಗಿನಿಂದ ಇಲ್ಲಿಯವರೆಗೆ ಆದ ಸಂಗತಿಯನ್ನು ಹೇಳಿ, ಸಖೂಬಾಯಿಯೂ ರಾವಜಿಯೂ ತನ್ನನ್ನು ಎಳೆದು ತಂದು ಈ ಮನೆಯಲ್ಲಿ ಚಲ್ಲಿಕೊಟ್ಟರೆಂದು ಹೇಳಿದಳು. ಅದನ್ನು ಕೇಳುತ್ತ ಹೋದಹಾಗೆ ಗೋಪಿಕಾಬಾಯಿಯವರ ಕೋಪವು ಹೆಚ್ಚುತ್ತ ನಡೆಯಿತು. ಬಳಿಕ ಅವರು ರಂಗೂಬಾಯಿಯಿಂದ ತಿಳಿಯತಕ್ಕ ಸಂಗತಿಗಳನ್ನೆಲ್ಲ ತಿಳಿದುಕೊಂಡು ಆಕೆಯನ್ನು ತಮ್ಮ ದಾಸಿಯ ಸಂಗಡ ಗಣೋಬನು ಕುಳಿತಲ್ಲಿಗೆ ಕಳಿಸಿಕೊಟ್ಟರು.

ಇತ್ತ ಹೆಬ್ಬಾಗಿಲಬಳಿಯಲ್ಲಿ ಗಣೋಬನು ತನ್ನ ಪ್ರಯತ್ನವು ಏನಾಗುವದೋ, ತನ್ನ ಸ್ವಾಮಿನಿಯು ಪಾರಾಗಿ ಬರಬಹುದೋ? ಎಂದು ಚಿಂತಿಸುತ್ತ ಕುಳಿತಿದ್ದನು; ಅಷ್ಟರಲ್ಲಿ ಶಾಲನ್ನು ಹೊತ್ತುಕೊಂಡ ರಂಗೂಬಾಯಿಯ ಸುಂದರ ಮೂರ್ತಿಯು ಬಂದು ಅವನ ಮುಂದೆ ನಿಂತುಕೊಂಡಿತು. ಆ ಮನಮೋಹನಮೂರ್ತಿಯನ್ನು ನೋಡಿ ಆ ಸ್ವಾಮಿಭಕ್ತ ಸೇವಕನು ಉಲ್ಲಾಸಗೊಂಡು ಚಟ್ಟನೆದ್ದು—"ಬಾಯಿಸಾಹೇಬ ಸುಖರೂಪದಿಂದ ಪಾರಾಗಿಬಂದಿರಲ್ಲವೇ!" ಎಂದನು. ತನ್ನ ಮೇಲಿರುವ ಗಣೋಬನ ಅನಿವಾರ ಪ್ರೇಮವನ್ನು ನೋಡಿ ಆ ತರುಣಿಯು—" ಅಪ್ಪಾ, ಗಣೋಬಾ, ನೀನೇ ಇಂದಿಗೆನನ್ನ ತಂದೆಯು! ನೀನು ಬರಿಯ ನಮ್ಮ ಸೇವಕನಲ್ಲ; ನಿನ್ನ ಪುಣ್ಯದಿಂದಲೇ ನಾನು ಆ ದುಷ್ಟರ ದವಡಿಯೊಳಗಿಂದ ಪಾರಾಗಿ ಬಂದೆನು. ಅಪ್ಪಾ, ಗಣೋಬಾ, ನಮ್ಮಂಥ ವಿಧವೆಯರು ಭೂಮಿಯ ಮೇಲೆ ಇರಬಾರದು ಕಂಡಿಯಾ, ಎಂದು ಕಣ್ಣಿಗೆ ನೀರು ತಂದಳು. ಬಳಿಕ ಅವಳು ತನ್ನ ದುಃಖವನ್ನು ನುಂಗಿಕೊಂಡು—ಗಣೋಬಾ, ಇನ್ನು ನಮ್ಮ ರಾಹುಟಿಗೆ ಹೋಗೋಣ ನಡೆ, ಸುಮ್ಮನೆ ಇಲ್ಲಿ ಕೂಡುವದು ಸರಿಯಲ್ಲ ಎಂದಳು. ರಂಗೂಬಾಯಿಯ ಈ ವಿಚಾರವನ್ನು ತಿಳಿದು ಗಣೋಬನು—ಅವ್ವನವರೇ, ಕಾಲಿನಿಂದ ನಡೆಯುತ್ತ ಹೇಗೆ ಬರುವಿರಿ? ಯಾರನ್ನಾದರೂ ಕಳುಹಿಸಿ ನಮ್ಮ ಮೇಣೆಯನ್ನು ತರಿಸಲಾ! ಎಂದನು. ಅದಕ್ಕೆ ರಂಗೂಬಾಯಿಯು—ಛೀ ಛೀ ಅತ್ತೆಯವರು ಸಿಟ್ಟುಬೆಂಕಿಯಾಗಿ ಕುಳಿತಿರಬಹುದು; ನಾನು ಚಾಂಡಾಲಿಯು; ಅವರ ಮಾತು ಮೀರಿಬಂದೆನು; ಈಗ ರಾತ್ರಿಯು ಬಹಳವಾಗಿರುವದು; ಬೇಗ ಮನೆಗೆ ಹೋಗೋಣ ನಡೆ" ಎಂದಳು. ಗಣೋಬನಿಗೂ ಆ ಮಾತು ಪ್ರಶಸ್ತವಾಗಿ ತೋರಿದ್ದರಿಂದ ರಂಗೂಬಾಯಿಯನ್ನು ಸಂಗಡಕರಕೊಂಡು ತಮ್ಮರಾಹುಟಿಗೆ ಹೊರಟನು.

ರಂಗೂಬಾಯಿಯ ರಾಹುಟಿಯು ಛಾವಣಿಯ ತೀರ ಕೊನೆಯಭಾಗದಲ್ಲಿತ್ತು; ನಡುವೆ ಇಬ್ಬರು ಮೂವರು ಸರದಾರರ ಡೇರೆಗಳು ಇದ್ದುದರಿಂದ ಅವನ್ನು ತಪ್ಪಿಸಿ ಹಾಯಬೇಕೆಂದು ಗಣೋಬನು ಸುತ್ತಿನ ಹಾದಿಯನ್ನು ಹಿಡಿದು ೨-೩ ಒಡ್ಡಮುರಿಗಳ ದಾರಿಗಳನ್ನು ದಾಟಿ ರಾಜಮಾರ್ಗಕ್ಕೆ ಬರುವಷ್ಟರಲ್ಲಿ ಮತ್ತೊಂದು ಸಂಕಟವು ಅವರ ಮುಂದೆ ಸಿದ್ಧವಾಗಿ ಬಂದು ನಿಂತಿತು! ಶ್ರೀಮಂತ ಭಾವೂಸಾಹೇಬನು ಆಂದಿನ ಬೆಳಗಿನಜಾವದಲ್ಲಿಯೇ ದಿಗ್ವಿಜಯಕ್ಕಾಗಿ ದಿಲ್ಲಿಗೆ ಪ್ರಯಾಣಮಾಡತಕ್ಕವನಿದ್ದುದರಿಂದ ಆತನು ಅಣ್ಣನಾದ ನಾನಾಸಾಹೇಬನ ಭೆಟ್ಟಿಗಾಗಿ ಹೋಗಿದ್ದನು. ಆತನು ಅಣ್ಣನಿಂದ ಅಪ್ಪಣೆಯನ್ನು ಹೊಂದಿ ತನ್ನ ೩-೪ ಜನ ಶೂರಸರದಾರರೊಡನೆ ತಿರುಗಿ ಹೊರಟು ರಾಜಮಾರ್ಗಕ್ಕೆ ಬರಲು ಈ ವಿಧವೆಯ ದರ್ಶನವಾಯಿತು; ಹಿಲಾಲುಗಳ ಬೆಳಕಿನಲ್ಲಿ ರಂಗೂಬಾಯಿಯ ಸೌಭಾಗ್ಯತಿಲಕಶೂನ್ಯವಾದ ಮುಖ

ವನ್ನು ನೋಡಿ ಭಾವೂಸಾಹೇಬನು ಸಿಟ್ಟಿನಿಂದ ತಪ್ತನಾದನು. "ಪ್ರಥಮಗ್ರಾಸೇ ಮಕ್ಷಿಕಾಪಾತಃ" ಎಂಬಂತೆ ಪ್ರಾರಂಭದಲ್ಲಿಯೇ ವಿಧವೆಯ ದರ್ಶನವಾದ್ದರಿಂದ ಮಂಗಲವನ್ನಪೇಕ್ಷಿಸುವ ಆತನು ಹೀಗೆ ಸಿಟ್ಟಿನಿಂದ ಹುಚ್ಚನಾದದ್ದರಲ್ಲಿ ಆಶ್ಚರ್ಯವಿಲ್ಲ; ಅವನು ಕೂಡಲೆ ತನ್ನ ಕುದುರೆಯನ್ನು ತಡೆದು—"ದುಷ್ಟೇ, ಚಾಂಡಾಲಿ, ಈ ನಿನ್ನ ಕೆಟ್ಟಮುಸಡಿಯನ್ನು ಕಟ್ಟಿಕೊಂಡು ಎತ್ತ ಹೊರಟೆ? ಮೂರ್ಖಳೇ ಇಷ್ಟು ಅಪರಾತ್ರಿಯಲ್ಲಿ ನಮ್ಮ ಎದುರಿಗೆ ಬರಲಿಕ್ಕೆ ನಿನಗೆ ತಿಳಿಯಲಿಲ್ಲವೇ? ಶಿವ! ಶಿವ, ನೀನಾದರೂ ಏನುಮಾಡೀ, ಎಂದು ನುಡಿದು, ಆಕೆಯನ್ನು ಪ್ರತಿಬಂಧಿಸಿ ತರಲು ಸೇವಕರನ್ನು ಆಜ್ಞಾಪಿಸಿ, ಈ ಅಪಶಕುನದಿಂದ ದಿಗ್ವಿಜಯದ ಭವಿತವ್ಯವನ್ನು ಚಿಂತಿಸುತ್ತ ಮುಂದೆ ಸಾಗಿದನು. ಇತ್ತ ಗಣೋಬನೂ ರಂಗೂಬಾಯಿಯ ದುರ್ದೈವದ ಭವಿತವ್ಯಕ್ಕಾಗಿ ಮರುಗುತ್ತ ಆಕೆಯೊಡನೆ ಆ ರಾಜಸೇವಕರನ್ನು ಹಿಂಬಾಲಿಸಿ ನಡೆದನು.

## ಮೂರನೆಯ ಪ್ರಕರಣ.

—— o:ಃ(o)ಃ:o ——

### ದಾಂಪತ್ಯಪ್ರೇಮ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಗೋಪಿಕಾಬಾಯಿಯವರು ರಂಗೂಬಾಯಿಯನ್ನು ಸೆರೆಯಿಂದ ಬಿಡಿಸಿದ ಬಳಿಕ ಸಖೂಬಾಯಿಯನ್ನು ಚನ್ನಾಗಿ ದಂಡಿಸಿ, ರಾವಜಿಗೆ ಸಿಟ್ಟುಮಾಡಿ ರಾತ್ರಿಯು ಬಹಳವಾದ್ದರಿಂದ ವರ್ಷಂಪ್ರತಿಯಂತೆ ಶ್ರೀಮಂತರ ಸ್ವಾರಿಯು ಅಂತಃಪುರಕ್ಕೆ ಬಂದಿರಬಹುದೆಂದು ತರ್ಕಿಸಿ ಲಗಬಗೆಯಿಂದ ತಮ್ಮ ಡೇರೆಗೆ ಬಂದರು. ಆಗ ಶ್ರೀಮಂತರು ಇನ್ನೂ ಬಾರದ್ದರಿಂದ ಅವರು ಸಮಾಧಾನಪಟ್ಟು ತಮ್ಮ ದಾಸಿಯರನ್ನು ಕರೆದು ದೀಪವನ್ನು ಡಾಳವಾಗಿ ಮಾಡಲಿಕ್ಕೆ ಆಜ್ಞಾಪಿಸಿದರು; ಬಳಿಕ ಅವರು ಒಬ್ಬ ದಾಸಿಗೆ ಕೇಶರಿಮಿಶ್ರಿತವಾದ ಓಕಳಿಯನ್ನು ತಂದಿಡಲು ಹೇಳಿ ಮತ್ತೊಬ್ಬ ದಾಸಿಗೆ ತಾಂಬೂಲವನ್ನು ಸಿದ್ಧಪಡಿಸಲು ಸೂಚಿಸಿದರು. ಆ ಮೇಲೆ ಅವರು ಉಟ್ಟ ಸೀರೆಯನ್ನು ಕಳೆದು ಜರದ ಅಂಚಿನ ರೇಸ್ಮಿಯ ತಿಳುವಾದ ಶುಭ್ರವಸ್ತ್ರವನ್ನು ಪರಿಧಾನಮಾಡಿ ಮೈಮೇಲಿನ ಅಲಂಕಾರಗಳನ್ನೆಲ್ಲ ತೆಗೆದಿಟ್ಟು ಬಳಿಯಲ್ಲಿರುವ ಪಲ್ಲಂಗದಮೇಲೆ ವಿಶ್ರಮಿಸಿ, ಪತಿಯ ಮಾರ್ಗವನ್ನು ನಿರೀಕ್ಷಿಸಹತ್ತಿದರು. ಬಹಳ ಹೊತ್ತಿನವರೆಗೆ ದಾರೀನೋಡಿ ಬೇಸತ್ತರೂ ಶ್ರೀಮಂತ ನಾನಾಸಾಹೇಬರ ಸ್ವಾರಿಯು ಬಾರದ್ದರಿಂದ ಅವರಲ್ಲಿ ವಿಕಲ್ಪವು ಹುಟ್ಟಲಾರಂಭಿಸಿತು. ತಾವು ಉಪಸಂಹರಿಸಿಬಂದ ರಂಗೂಬಾಯಿಯ ಪ್ರಕರಣವು ಶ್ರೀಮಂತರ ಮುಂದೆ ಹೋಗಿರಬಹುದೇನೆಂಬ ಭಯವು ಅವರಲ್ಲಿ ಸ್ವಾಭಾವಿಕವಾಗಿಯೇ ಉತ್ಪನ್ನವಾಯಿತು. ಗೋಪಿಕಾಬಾಯಿಯವರು ಎಷ್ಟೇ ತೇಜಸ್ವಿಗಳಾಗಿದ್ದರೂ ಪತಿರಾಯನ ಮುಂದೆ ಅವರ ಆಟವೇನು ನಡೆಯಬೇಕು? ಹೀಗೆ ಅವರು ಚಿಂತಿಸುತ್ತಿರಲು ತಾಸೆರಡು ತಾಸುಗಳು ಕ್ರಮಿಸಿಹೋದವು; ಆಗಂತೂ ಅವರ ವಿಕಲ್ಪವು ಮತ್ತಷ್ಟು ದೃಢವಾಗಿ ತಮ್ಮ ಪತಿಯ ಭಾವೀಸ್ಥಿತಿಯನ್ನು ಮನಸ್ಸಿನಲ್ಲಿ ತಂದು ಅವರು ಅತ್ಯಂತ ಚಿಂತಾಮಗ್ನರಾದರು. ಸುಮ್ಮನೆ ಮಲಗಿಕೊಂಡೇನೆಂದರೆ ನಿದ್ರೆಯು ಕೂಡಾ ಹತ್ತದಾಯಿತು. ಅವರ ಕಣ್ಣೊಳಗಿಂದ ಅಶ್ರುಗಳು ತಮ್ಮಷ್ಟಕ್ಕೆ ತಾವೇ ಉದುರಹತ್ತಿದವು. ದುಃಖಾಗ್ನಿಯು ಅವರನ್ನು ದಹಿಸತೊಡಗಿತು.

ಇತ್ತ ನಾನಾಸಾಹೇಬನು ಭಾವೂಸಾಹೇಬನಿಗೆ ಅಪ್ಪಣೆಯನ್ನು ಕೊಟ್ಟ ಬಳಿಕ ಇಂದು ರಂಗಪಂಚಮಿಯೆಂಬದು ಧ್ಯಾಸಕ್ಕೆ ಬರಲು ಪ್ರತಿವರುಷದ ಪದ್ಧತಿ

ಯಂತೆ ಪ್ರಿಯಪತ್ನಿಯ ಸಮಾಗಮವನ್ನು ಹೊಂದುವದಕ್ಕಾಗಿ ಬಳ್ಳೇ ಉತ್ಸುಕತೆ ಯಿಂದ ಗೋಪಿಕಾಬಾಯಿಯವರ ಡೇರೆಯ ಕಡೆಗೆ ಹೊರಟನು. ಆಗ ಆತನ ಮೈಮೇಲೆ ಪೇಶ್ವಾಯಿವೈಭವದ್ಯೋತಕವಾದ ಎಲ್ಲ ಅಲಂಕಾರಗಳೂ ಒಪ್ಪುತ್ತಿದ್ದವು; ಹೆಚ್ಚಾಗಿ ಹೊರಸೂಸುವ ಪತ್ನೀಪ್ರೇಮದಿಂದ ಆತನ ಮುಖವು ಪ್ರಫುಲ್ಲಿತವಾಗಿತ್ತು; ಸೌಂದರ್ಯದಲ್ಲಿಯೂ, ದೇಹದಾರ್ಢ್ಯದಲ್ಲಿಯೂ, ತೇಜಸ್ವಿತೆಯಲ್ಲಿಯೂ ತನಗೆ ಅನುರೂಪಳಾಗಿ ದೊರೆತಿರುವ ಆ ಸಾಧ್ವೀಶಿರೋಮಣಿಯನ್ನು ಆತನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದನು. ಭರತಖಂಡದ ಪ್ರಾಚೀನರಾಜರು ಹಲವು ಜನ ಭೋಗಾಂಗನೆಯರನ್ನು ಸಲಹುತ್ತ ಬಂದ ರೂಢಿಯಂತೆ ನಾನಾಸಾಹೇಬನಾದರೂ ಹಲವು ಜನ ಕಲಾವಂತಿನಿಯರನ್ನು ತನ್ನ ಪದರಿನಲ್ಲಿ ಇಟ್ಟುಕೊಂಡಿದ್ದನಷ್ಟೇ; ಆದರೆ ಆತನು ಅತ್ಯಂತ ನೀತಿವಂತನಾದ್ದರಿಂದ ದುರ್ವ್ಯಸನದ ಹರಿಗೆ ಬಿದ್ದು ವಿವಾಹಬಂಧನದಿಂದುಂಟಾದ ದಾಂಪತ್ಯಪ್ರೇಮವನ್ನು ನೀಗಲಾಡುವ ಹುಚ್ಚಿಗೆ ಹೋಗಿದ್ದಿಲ್ಲ;

ಗೋಪಿಕಾಬಾಯಿಯವರ ಡೇರೆಯು ಸಮೀಪಕ್ಕೆ ಬರಲು ನಾನಾಸಾಹೇಬನ ಸಂಗಡ ಬಂದಿದ್ದ ಪರಿಜನರು ಅಲ್ಲಿಯೇ ನಿಂತುಕೊಂಡರು. ಆಗ ನಾನಾಸಾಹೇಬನು ಡೇರೆಯನ್ನು ಪ್ರವೇಶಮಾಡಲು ಅಲ್ಲಿದ್ದ ದಾಸಿಯರು ತಟ್ಟನೆ ಬೇರೆಕಡೆಗೆ ಹೊರಟುಹೋದರು. ಗೋಪಿಕಾಬಾಯಿಯವರು ಚಿಂತಾಮಗ್ನರಾಗಿ ಹಾಗೆಯೇ ಕುಳಿತುಬಿಟ್ಟಿದ್ದರಿಂದ ಒಬ್ಬ ದಾಸಿಯು ಓಡುತ್ತಬಂದು ಬಾಯಿಸಾಹೇಬರವರ ಕಿವಿಯಲ್ಲಿ ಮೆಲ್ಲನೆ, "ಸರಕಾರಸ್ವಾರಿಯು ಬಂದಿತು." ಎಂದು ಹೇಳಿ ಹೊರಟು ಹೋದಳು; ದಾಸಿಯ ಮುಖದಿಂದ ಹೊರಟ ಅಮೃತತುಲ್ಯವಾದ ಈ ಮಾತನ್ನು ಕೇಳಿ ಗೋಪಿಕಾಬಾಯಿಯವರು ಗಡಬಡಿಸಿ ಎಚ್ಚತ್ತರು; ಅವರು ಕಣ್ಣುಗಳನ್ನು ತಿಕ್ಕಿಕೊಳ್ಳುತ್ತ ಮೇಲಕ್ಕೆ ಮುಖವನ್ನೆತ್ತಲು ಎದುರಿಗೆ ಕುಳಿತುಕೊಂಡಿದ್ದ ಪ್ರಿಯಪತಿಯ ದರ್ಶನವಾಯಿತು. ಆಗ ಆ ಪತಿಭಕ್ತಿಪರಾಯಣಳು ಪರಮೋಲ್ಲಾಸದಿಂದ ಪಲ್ಲಂಗವನ್ನು ಬಿಟ್ಟು ಕೆಳಗಿಳಿದು ಪತಿಯ ಚರಣಗಳನ್ನು ನಮಸ್ಕರಿಸಿ ವಿನಯದಿಂದ ನಿಂತುಕೊಂಡಳು: ನಾನಾಸಾಹೇಬನು ಪತ್ನಿಯ ಮುಖಾವಲೋಕನವನ್ನು ಮಾಡಲು ಆಕೆಯ ಮುಖವು ನಿಸ್ತೇಜವಾಗಿದ್ದು, ಆಕೆಯ ವಿಶಾಲವಾದ ಕಣ್ಣುಗಳಲ್ಲಿ ಅಶ್ರುಬಿಂದುಗಳಿದ್ದಂತೆ ಅವನಿಗೆ ಸ್ಪಷ್ಟವಾಗಿ ಕಂಡುಬಂದಿತು. ಈ ವಿಲಕ್ಷಣ ಪ್ರಕಾರವನ್ನು ನೋಡಿ ಆತನಿಗೆ ಬಹಳ ಆಶ್ಚರ್ಯವಾಯಿತು. ಆಗ ಆತನು ಹೆಂಡತಿಯನ್ನು ಕುರಿತು—"ಪ್ರಿಯೇ, ಇದೇನು? ನೀನು ಇಷ್ಟೊತ್ತಿನವರೆಗೆ ಶೋಕಮಾಡಿದಂತೆ ಕಾಣುತ್ತದಲ್ಲ? ನೀನು ಇಂದಿನವರೆಗೆ ಹೀಗೆಂದಿಗೂ ಶೋಕಿಸದೆ ಇರಲು,

ಈ ದಿನ ಈ ಪ್ರಕಾರ ದುಃಖಿಸಲಿಕ್ಕೆ ನಿನಗೆ ಅಂಥ ಪ್ರಸಂಗವೇನು ಬಂದಿರುವದು?" ಎಂದು ಕೇಳಿದನು. ಪ್ರಿಯಪತಿಯ ಈ ಸವಿಮಾತುಗಳನ್ನು ಕೇಳಿ ಗೋಪಿಕಾಬಾಯಿಯು—"ಮಹಾರಾಜರೇ, ನನಗೆ ಯಾಕೋ ಈಗ ತಾಸೆರಡುತಾಸುಗಳಿಂದ ದುಃಖವು ಒತ್ತರಿಸಿಬರಹತ್ತಿರುವದು; ಎಷ್ಟು ಸಮಾಧಾನಮಾಡಿಕೊಂಡರೂ ನಿಲ್ಲಲೊಲ್ಲದು; ಅದಕ್ಕೆ ನಾನಾದರೂ ಏನುಮಾಡಲಿ? ಈ ದಿವಸ ಇಲ್ಲಿ ಒದಗಿದ್ದ ಒಂದು ಭಯಂಕರವಾದ ಪ್ರಸಂಗದಿಂದಲೂ, ತಾವು ಅಂತಃಪುರಕ್ಕೆ ಬರುವದನ್ನು ತಡಮಾಡಿದ್ದರಿಂದಲೂ ನನಗೆ ಒಂದು ಬಗೆಯ ಅಸಮಾಧಾನವಾಗಿ ಈ ರೀತಿ ದುಃಖವಾಗತೊಡಗಿದೆ" ಎಂದು ನುಡಿದಳು. ಹೆಂಡತಿಯ ಈ ಉತ್ತರದಿಂದ ನಾನಾಸಾಹೇಬನು ಮತ್ತಿಷ್ಟು ವಿಸ್ಮಿತನಾಗಿ—"ಈ ದಿನ ಅಂಥ ಭಯಂಕರಪ್ರಸಂಗವಾವುದು ಜರುಗಿತು? ನನಗೆ ಏನೂ ಗೊತ್ತಿಲ್ಲವಲ್ಲ! ನಾನು ಭಾವೂಸಾಹೇಬನನ್ನು ಕಳಿಸುವ ಕೆಲಸದಲ್ಲಿ ತೊಡಗಿದ್ದರಿಂದ ನನಗೆ ಇಲ್ಲಿಗೆ ಬರಲಿಕ್ಕೆ ತಡವಾಯಿತು. ಆದರೆ ಆ ಪ್ರಸಂಗವು ಯಾವದೆಂಬದನ್ನು ನನ್ನ ಮುಂದೆ ಹೇಳು;" ಎಂದು ನುಡಿದನು. ಆಗ ಗೋಪಿಕಾಬಾಯಿಯವರು ಸ್ವಲ್ಪಹೊತ್ತು ಸುಮ್ಮನೆನಿಂತು ಬಳಿಕ ಮೆಲ್ಲಗೆ ನುಡಿಪರೇನಂದರೆ-"ಎಲ್ಲ ಸಂಗತಿಯನ್ನು ತಮ್ಮ ಮುಂದೆ ಹೇಳಲಿಕ್ಕೇಬೇಕು! ಅದಂಥ ಸಂಗತಿಯನ್ನು ತಮಗೆ ತಿಳಿಸದೆ ಬಚ್ಚಿಡುವದು ಪತ್ನಿಯಾದ ನನ್ನ ಧರ್ಮವಲ್ಲ; ನೀಚನಾದ ರಾವಜಿಯು ಈ ದಿವಸ ಸಂಜೆಯಮುಂದೆ ಸೋನೆಯವರ ರಂಗೂಬಾಯಿಯನ್ನು ತಮ್ಮಗೋಸ್ಕರ ನೆಪಿಸಿಯು ವಿಲಾಸಗೃಹದಲ್ಲಿ ಪ್ರತಿಬಂಧಿಸಿಟ್ಟಿದ್ದನು. ಆಕೆಯ ಚಾಕರನೊಬ್ಬನು ಆ ಸಂಗತಿಯನ್ನು ನನಗೆ ತಿಳಿಸಿದ್ದರಿಂದ ನಾನು ಹೋಗಿ ಆ ಹುಡುಗೆಯನ್ನು ಬಿಡಿಸಿಬಂದೆನು."

ಪತ್ನಿಯ ಮುಖದಿಂದ ಹೊರಟ ಬೀಭಿಸ ಈ ಮಾತುಗಳನ್ನು ಕೇಳಿದ ಕೂಡಲೆ ನಾನಾಸಾಹೇಬನು ಆಶ್ಚರ್ಯ, ದುಃಖ, ನಾಚಿಕೆಗಳೆಂಬ ವಿಕಾರತ್ರಯಗಳಿಂದ ಯುಕ್ತನಾಗಿ ತಲೆಕೆಳಗೆ ಮಾಡಿದನು. ಆತನು ಆ ಕೂಡಲೆ ಎದ್ದುನಿಂತು ದೊಡ್ಡ ದನಿಯಿಂದ—ಶಿವ, ಶಿವ, ಏನು ಅನರ್ಥವಿದು! ಎಂಥ ದುಷ್ಕೃತ್ಯವಿದು!! ಹಾಯ್, ಹಾಯ್, ಆ ಹುಡುಗೆಯ ವಿಷಯವಾಗಿ ನನ್ನಲ್ಲಿ ಕಿಂಚಿತ್ತಾದರೂ ಪಾಪಬುದ್ಧಿಯಿಲ್ಲವಲ್ಲ? ನನ್ನ ಪ್ರಜೆಗಳ ಮಕ್ಕಳು-ಸೊಸೆಯಂದಿರೆಂದರೆ ನನ್ನ ಮಕ್ಕಳು-ಹಾಗು ಸೊಸೆಯಂದಿರು; ಎಂದು ನಾನು ತಿಳಿಯುತ್ತೇನೆ. ಹರ! ಹರ! ಆ ದುಷ್ಟರಾವಜಿಯು ನನ್ನ ಮೋರೆಗೆ ಮಸಿಹಚ್ಚಿದನು; ಆದರೆ ನಾನು ಅವನಿಗೆ ಈ ಕೃತ್ಯವನ್ನು ಮಾಡಲಿಕ್ಕೆ ಹೇಳಿರದೆ ಆತನು ಇಂಥ ನೀಚತನವನ್ನು ಹ್ಯಾಗೆ ಮಾಡಿದನು? ಎಂದು ನುಡಿದು, ಒಂದು ದೀರ್ಘನಿಶ್ವಾಸವನ್ನು ಬಿಟ್ಟನು. ಆಗ ಗೋಪಿಕಾಬಾ

ಯಿಯು ವಿನಯದಿಂದ—“ಮಹಾರಾಜರೇ, ಇದರಲ್ಲಿ ತಮ್ಮದೇನೂ ಅಪರಾಧವಿರುವದಿಲ್ಲ. ಈ ಮಾತನ್ನು ಆ ರಾವಜಿಯೇ ಒಪ್ಪಿಕೊಂಡನು; ಆಗ ನನಗ ಎಷ್ಟು ಆನಂದವಾಯಿತೆಂಬದನ್ನು ಏನು ಹೇಳಲಿ? ಆದರೂ ನಾನು ತಮ್ಮ ಮುಂದೆ ಒಂದು ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತೇನೆ, ಎಂದು ನುಡಿದು, ಕೈ ಜೋಡಿಸಿ ತನ್ನ ಪ್ರಿಯಕಾಂತನ ಮುಖವನ್ನು ಪ್ರೇಮದಿಂದ—ಆದರೆ ಸ್ವಲ್ಪ ಅಂಜಿಕೆಯಿಂದ ನೋಡಿ “ಪ್ರಾಣನಾಥರೇ, ನನ್ನನ್ನು ಕ್ಷಮಿಸಿರಿ, ತಾವು ಸಾರ್ವಭೌಮರೂ ನನ್ನ ಪೂಜ್ಯ ದೈವತವೂ ಆಗಿರುವಿರಷ್ಟೇ; ನಾನು ಕೇವಲ ತಮ್ಮ ಚರಣಕಮಲಗಳ ದಾಸಿಯು, ತಮ್ಮ ಮುಂದೆ ಏನು ಮಾತಾಡಲಿ? ಆದರೆ ನನ್ನ ಮಂಗಲಸೂತ್ರವು ನನ್ನನ್ನು ಮಾತಾಡಹಚ್ಚಿರುತ್ತದೆ.” ಎಂದು ನುಡಿದು ಕಣ್ಣಿಗೆ ನೀರು ತಂದಳು. ಅದನ್ನು ನೋಡುತ್ತ ನಾನಾಸಾಹೇಬನು ಕಲ್ಲಿನಂತೆ ಕುಳಿತು ಬಿಟ್ಟನು. ಬಳಿಕ ಗೋಪಿಕಾಬಾಯಿಯವರು ನುಡಿದರೇನಂದರೆ—“ಪರಸ್ತ್ರೀಯರ ಹಂಬಲವು ಬಲು ಭಯಂಕರವಾದದ್ದಷ್ಟೇ. ಈ ವಿಷಯದ ಬಲಿಗೆಬಿದ್ದು ಸಾವಿರಾರು ಜನರು ಮಣ್ಣುಗೂಡಿರುವರೆಂಬದನ್ನು ಪುರಾಣೇತಿಹಾಸಗಳು ನಾರುತ್ತಿಲ್ಲವೇ? ತಾವು ಎಲ್ಲವನ್ನೂ ತಿಳಿದವರಿದ್ದು ಹೀಗೆ ಪರಸ್ತ್ರೀಲಂಪಟರಾಗುವದನ್ನು ನೋಡಿ ನನ್ನ ಜೀವವು ಅತ್ಯಂತ ತಳಮಳಗೊಳ್ಳುತ್ತದೆ. ಪ್ರಾಣದೊಡೆಯರೇ, ನಾನು ತಮಗೆ ಹೆಚ್ಚಿಗೆನ್ನೇನು ಹೇಳಲಿ? ಆ ನೀಚಜನರು ನಿಮ್ಮನ್ನು ಯಾವ ಹೊತ್ತಿಗೆ ಯಾವ ಸ್ಥಿತಿಗೆ ಮುಟ್ಟಿಸುವರೆಂಬದನ್ನು ಯಾರು ಹೇಳಬೇಕು? ಪ್ರತ್ಯಕ್ಷ ನ್ಯಾಯಮೂರ್ತಿಗಳಾದ ತಾವೇ ಹೀಗೆ ಪರಸತಿಯರನ್ನು ಅಧಿಕಾರ ಬಲದಿಂದ ಹರಣಮಾಡಹತ್ತಿದರೆ ಅವರು ಯಾರಿಗೆ ಶರಣು ಹೋಗಬೇಕು? ಅವರ ಮರ್ಯಾದೆಯನ್ನು ಯಾರು ಸಂರಕ್ಷಿಸಬೇಕು? ಇಂಥ ರಾಜರ ರಾಜ್ಯವು ಕ್ಷಣಮಾತ್ರವಾದರೂ ನಿಲ್ಲಲಾರದು! ಮಹಾರಾಜರೇ ಇಂದಿನವರೆಗೆ ಸರ್ವಪ್ರಜೆಗಳೂ ತಮ್ಮ ಧನ್ಯವಾದವನ್ನು ಮಾಡುತ್ತಿರುವರು; ತಮ್ಮ ಕಲ್ಯಾಣವನ್ನು ಚಿಂತಿಸುತ್ತಿರುವರು; ತಮ್ಮ ನ್ಯಾಯ ಪದ್ಧತಿಯಿಂದ ಸರ್ವಪ್ರಜೆಗಳೂ ಸಂತುಷ್ಟರಿರುತ್ತಾರೆ; ಈ ಸದ್ಗುಣಗಳಿಂದಲೇ ತಮ್ಮ ರಾಜ್ಯವು ಬೆಳೆಯುತ್ತ ನಡೆದಿರುವದು; ತಮಗೆ ದೇವರು ದೀರ್ಘಾಯುಷ್ಯವನ್ನು ದಯಪಾಲಿಸಲಿ! ಕಾಶಿಯಿಂದ ರಾಮೇಶ್ವರದವರೆಗೆ ತಮ್ಮ ರಾಜ್ಯವು ಹಬ್ಬಿ ಆ ಪವಿತ್ರ ಕ್ಷೇತ್ರಗಳು ಸ್ವರಾಜ್ಯದಲ್ಲಿ ಮೆರೆಯಲಿ!! ಮಹಾರಾಜರೇ, ಈ ಎಲ ಸಂಗತಿಗಳು ತಮ್ಮೊಬ್ಬರ ಆಯುಷ್ಯದಮೇಲೆಯೇ ಅವಲಂಬಿಸಿರುವದರಿಂದ ಆ ದುರ್ಜನರ ಕೃತ್ಯಗಳನ್ನು ನೋಡಿ ನನ್ನ ಮೈಯಲ್ಲಿ ನಡಗು ಹುಟ್ಟುತ್ತದೆ. ಈಗ ಒದಗಿದ ಆ ಬಾಲವಿಧವೆಯ ಪ್ರಸಂಗದ ದುರ್ಲೌಕಿಕವು ಹಾ ಹಾ ಅನ್ನುವಷ್ಟರಲ್ಲಿ ಪಸರಿಸುವದು; ಇದೇ

ಮೂದರಿಯ ಕೃತಿಗಳು ಮುಂದೆ ನಡೆಯುಹತ್ತಿದರೆ ಈಗಿದ್ದ ವೈಭವವು ಮುಕ್ಕಾಲುಗಳಿಗೆಯುವರೆಗೆ ಸಹನಿಲ್ಲಲಿಕ್ಕಿಲ್ಲ; ಇಂಥ ಪ್ರಚಂಡವಾದ ದೌಲತ್ತು ಕ್ಷಣದಲ್ಲಿ ಹೇಳ ಹೆಸರಿಲ್ಲದೆ ಹೋದೀತು. ಮಹಾರಾಜರೇ, ಪರಸ್ತ್ರೀಯರ ದ್ರೋಹವು ಬೆಂಕಿಯಸಮಾನವಿರುವದು; ಅದನ್ನು ಸಂಪಾದಿಸಿದವನ ಜೀವಿತವು ಸುಟ್ಟು ಬೂದಿಯಾಗುವದರಲ್ಲಿ ಸಂದೇಹವಿಲ್ಲ; ತಾಯಿ ಜಗದಂಬೇ, ನೀನೇ ನನ್ನ ಪ್ರಾಣಕಾಂತರಿಗೆ ಸದ್ಬುದ್ಧಿಯನ್ನು ದಯಪಾಲಿಸು"! !

ಈ ಮೇರೆಗೆ ನುಡಿದು ಆ ಸತೀಶಿರೋಮಣಿಯು ಪತಿಯ ಕೊರಳಿಗೆ ಕೈನೀಡಿ ತನ್ನ ಸುಂದರವಾದ ಮುಖವನ್ನು ಆತನ ಹೆಗಲಮೇಲಿಟ್ಟು ಬಳ ಬಳ ಅಶ್ರುಗಳನ್ನು ದರಿಸತೊಡಗಿದಳು. ನಾನಾಸಾಹೇಬನು ಪ್ರಿಯಸತಿಯ ಈ ಬಗೆಯ ನೀತಿಪೂರ್ಣವಾದ ಭಾಷಣವನ್ನು ಶಾಂತಮನಸ್ಸಿನಿಂದ ಕೇಳಿ ಅತ್ಯಂತ ಆನಂದಭರಿತನಾದನು. ಆಗ ಆತನು ತನ್ನ ಕೊರಳಿಗೆ ಜೋತುಬಿದ್ದಿರುವ ಆ ಸಾಧ್ವಿಯನ್ನು ಸಂತೈಸಿ, ಆಕೆಯ ಮುಂಗುರುಳುಗಳನ್ನು ತನ್ನ ಕೈಬೆರಳಿನಿಂದ ತೀಡುತ್ತ—"ಪ್ರಿಯೇ, ನಿನ್ನ ಭಾಷಣವನ್ನು ಕೇಳಿ ನನಗೆ ಬಹಳ ಕೌತುಕವಾಯಿತು! ನಿನ್ನಂಥ ಸದ್ಗುಣಮಂಡಿತಳಾದ ಪತ್ನಿಯನ್ನು ನನಗೆ ಒದಗಿಸಿಕೊಟ್ಟದ್ದಕ್ಕಾಗಿ ನಾನು ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ನನಗೆ ಪರಮೇಶ್ವರನ ಅನುಗ್ರಹದಿಂದ ದೊರೆತಿರುವ ರಾಜ್ಯಾದಿವೈಭವಕ್ಕಿಂತಲೂ ನಿನ್ನಂಥ ಹೆಂಡತಿಯು ದೊರೆತದ್ದು ಅಲಭ್ಯಲಾಭವಾಗಿರುತ್ತದೆ. ಆದರೆ ನಾನು ಮಾತ್ರ ನಿನ್ನ ಗೌರವವನ್ನು ಮಾಡತಕ್ಕಷ್ಟು ಮಾಡಿರುವದಿಲ್ಲ, ಇದಕ್ಕಾಗಿ ನಾನು ಅಪರಾಧಿಯೇ ಸರಿ. ನಿನ್ನನ್ನು ಅನಾದರಿಸಿದ ಬಗ್ಗೆ ನನಗೆ ಕ್ಷಮೆಯನ್ನು ಮಾಡು; ಪ್ರಿಯೇ, ನೀನು ನನ್ನ ಕಲ್ಯಾಣವನ್ನು ಇಚ್ಛಿಸಿ ನನ್ನ ಮುಂದೆ ನಿರ್ಭಿಡೆಯಿಂದ ಮಾತಾಡಿದ್ದಕ್ಕಾಗಿ ನಿನ್ನ ಅಭಿನಂದನವನ್ನು ಎಷ್ಟುಮಾಡಿದರೂ ಅಲ್ಪವೇ ಇರುವದು; ನಾನು ಈವೊತ್ತಿನಿಂದ ವೇಶ್ಯಾಂಗನೆಯರ ಸಂಗತಿಯನ್ನು ನಿಶ್ಚಯವಾಗಿ ಬಿಟ್ಟುಬಿಡುತ್ತೇನೆ. ನಾನು ಸ್ವಲ್ಪ ಸಲಗಿಯನ್ನು ಕೊಟ್ಟದ್ದಕ್ಕಾಗಿ ಆ ನೀಚನಾದ ರಾವಜಿಯು ಇಂಥ ಅನರ್ಥವನ್ನು ಮಾಡಿದನು. ಇನ್ನು ಮುಂದೆ ಆ ಕಲಾವಂತಕಾರಖಾನೆಯನ್ನೇ ತೆಗೆದುಬಿಡುವೆನು. ನೀನು ಒಳ್ಳೇ ಹೊತ್ತಿಗೆ ಎಚ್ಚರಗೊಳಿಸಿದೆ; ದುರ್ಜನರ ಸಂಗತಿಯು ಒಂದಿಲ್ಲೊಂದು ದಿನ ಅನರ್ಥವನ್ನುಂಟುಮಾಡದೆ ಬಿಡದು! ಪ್ರಿಯೇ, ಇನ್ನುಮೇಲಾದರೂ ಸಮಾಧಾನವನ್ನು ಹೊಂದು, ಬಿಡು ಮನಸ್ಸಿನ ಚಿಂತೆಯನ್ನು, ಎಂದು ನುಡಿದನು.

ಈ ಪ್ರಕಾರ ಪತಿಯು ಆಡಿದ ಮಾತುಗಳನ್ನು ಕೇಳಿ ಗೋಪಿಕಾಬಾಯಿಯವರು—"ಛೀ, ಛೀ, ಹೀಗೆ ಯಾವ ಚಾಂಡಾಲಿನಿಯು ಅಂದಾಳು? ಮಹಾರಾಜರೇ,

ನಾನು ತಮಗೆ ದಾಸಿಯರನ್ನು ಇಟ್ಟುಕೊಳ್ಳಲಿಕ್ಕೆ ಬೇಡವೆನ್ನುವದಿಲ್ಲ; ವೈಭವಕ್ಕೆ ವೇಶ್ಯಾಂಗನೆಯರು ಬೇಕೇಬೇಕು! ಆದರೆ ಕೇವಲ ಅವರ ತಂತ್ರಕ್ಕೊಳಗಾಗುವದು ಮಾತ್ರ ಭೂಷಣವಲ್ಲ; ಪ್ರಾಣಕಾಂತರೇ, ಇನ್ನೊಂದು ವಿಚಾರವು ನನ್ನ ಮನಸಿನಲ್ಲಿ ಬರಹತ್ತಿದೆ. ಅದನ್ನೂ ಹೇಳಿಬಿಡಲಿಯಾ? ನನಗೆ ಹ್ಯಾಗೂ ದಿವಸಗಳಾಗುತ್ತ ಬಂದವು. ಆದ್ದರಿಂದ ತಾವು ಇನ್ನೊಂದು ಲಗ್ನವನ್ನು ಮಾಡಿಕೊಂಡು ತೃಪ್ತಿಯನ್ನು ಹೊಂದಬೇಕು. ರಾಜರಿಗೆ ೪-೬ ಜನ ಹೆಂಡರು ಇದ್ದೇ ಇರುವರಷ್ಟೇ; ಆದ್ದರಿಂದ ತಮ್ಮ ದ್ವಿತೀಯ ವಿವಾಹಕ್ಕೆ ನಾನು ಸಂಪೂರ್ಣವಾಗಿ ಅನುಮತಿಯನ್ನು ಕೊಡುತ್ತೇನೆ. ಆದರೆ ನನ್ನ ಪ್ರಾರ್ಥನೆಯಿಷ್ಟೆ, ತಾವು ಪರಸ್ತ್ರೀಯರ ಕಾಲಕೆಳಗೆ ಮಾತ್ರ ಹೊರಳಾಡಬಾರದು!!

ನಾನಾಸಾಹೇಬನು ಹೆಂಡತಿಯ ಈ ಮಾತುಗಳಿಂದ ಅತ್ಯಂತ ಲಜ್ಜಿತನಾದನು. ಸವತೀಮತ್ಸರವು ಹೆಂಗಸರಿಗೆ ದುಸ್ಸಹವಾಗಿದ್ದು ಅದನ್ನು ಕೂಡಾ ಬಿಟ್ಟುಕೇವಲ ಪತಿಯ ಸದಾಚರಣವನ್ನು ಕಾಯಲಿಚ್ಛಿಸುವ ಆ ಸಾಧ್ವೀಮಣಿಯ ಆಗಿನ ಬೋಧದಿಂದ ಆತನು ಪೂರಾ ಎಚ್ಚತ್ತು—"ಪ್ರಿಯೇ, ನಿನ್ನ ದೊಡ್ಡಿಸ್ತನವನ್ನು ನೋಡಿ ನನಗೆ ಹೇಳಕೂಡದಷ್ಟು ಆನಂದವಾಗುತ್ತದೆ. ಆದರೆ ಎರಡನೇಲಗ್ನದ ಗೊಂದಲವನ್ನೆಬ್ಬಿಸಿ ನನಗೆ ಇದಕ್ಕೂ ದೊಡ್ಡ ಶಿಕ್ಷೆಯನ್ನು ಮಾಡಬೇಡ; ನಿನ್ನಂಥ ಸದ್ಗುಣವತಿಯಾದ ಹೆಂಡತಿಯನ್ನು ಬಿಟ್ಟು ನಾನು ಅನ್ಯಸ್ತ್ರೀಯಲ್ಲಿ ರಮಿಸಲಾರೆನು. ವಿವಾಹಬಂಧನದಿಂದ ಪವಿತ್ರರಾದ ಪತಿ-ಪತ್ನಿಯರ ಪ್ರೇಮದಲ್ಲಿ ಅಮೃತವೇ ತುಂಬಿಕೊಂಡಿರುತ್ತದೆ; ಅದನ್ನು ಬಿಟ್ಟು ಕತ್ತೆಯಂತೆ ಕಂಡ ಕಂಡ ತಿಪ್ಪೆಯನ್ನು ಕೆದರುತ್ತ ಹೋಗುವದು ಮೂರ್ಖತನವೇ ಸರಿ! ಪ್ರಿಯೇ, ಅವದ್ದು ಆಗಿಹೋಯಿತು; ಇನ್ನು ಮುಂದೆ ಆ ಕಲಾವಂತಕಾಮಿನಿಯ ಮುಖಾವಲೋಕನವನ್ನು ಕೂಡಾ ನಾನು ಮಾಡುವದಿಲ್ಲ; ನಮ್ಮ ಪೂರ್ವಜರು ಸುಮ್ಮನೆ ವಾರಾಂಗನೆಯರ ಪ್ರಸ್ಥವನ್ನು ಬೆಳಿಸುತ್ತ ಬಂದಿರುವರು! ಇಂದಿನವರೆಗೆ ಆಗಿ ಹೋದ ನಮ್ಮ ಭರತಖಂಡದ ರಾಜರಲ್ಲಿ ಈ ಮಾತಿಗೆ ಅಪವಾದನಾಗಿ ನಡೆದವರೆಂದರೆ, ಶಿವಾಜಿ ಮಹಾರಾಜರೊಬ್ಬರೇ; ಅವರೇ ಧನ್ಯರು!! ಅವರೇ ನಿಜವಾದ ದಾಂಪತ್ಯಪ್ರೇಮಕ್ಕೆ ಪಾತ್ರರು!!! ಪ್ರಿಯೇ, ಇಂದಿನಿಂದ ನಿನ್ನ ಮನಸ್ಸಿನ ಭೀತಿಯು ಸಂಪೂರ್ಣವಾಗಿ ಅಳಿದುಹೋಗಲಿ; ಆಡಿದ ಮಾತಿನಲ್ಲಿ ಅಂತರಮಾಡುವದು ಮನುಷ್ಯರ ಶೀಲವಲ್ಲ" ಎಂದು ನುಡಿದನು. ಆಗ ಗೋಪಿಕಾಬಾಯಿಯವರು ಅತಿ ಸಂಭ್ರಮದಿಂದ—"ಕುರುಡನು ದೇವರಬಳಿಯಲ್ಲಿ ಒಂದೇಕಣ್ಣನ್ನು ಬೇಡಿಕೊಂಡಾಗ ಎರಡೂಕಣ್ಣುಗಳೂ ಪ್ರಾಪ್ತನಾದಂತೆ ನನ್ನ ಮನೋರಥವು ಕಸರಿಲ್ಲದೆ ಪರಿಪೂರ್ಣವಾಯಿತು. ಇಂದಿಗೆ

ನಾನು ಧನ್ಯಳು! ಮಹಾರಾಯರೇ, ಸತಿಗೆ ಪತಿಯೇ ಸರ್ವಸ್ವವಾದ್ದರಿಂದ ನಿಮ್ಮ ಮುಂದಲ್ಲದೆ ಇನ್ನಾರಮುಂದೆ ನಮ್ಮ ದುಃಖವನ್ನು ತೋಡಿಕೊಳ್ಳಬೇಕು? ನೀವು ಈ ದಾಸಿಯ ವಿನಂತಿಯನ್ನು ನಡಿಸಿಕೊಟ್ಟಿದ್ದರಿಂದ ನನ್ನ ಜನ್ಮವು ಸಫಲವಾಯಿತು. ಎಂದು ನುಡಿಯುತ್ತಿರಲು, ಅವರ ಪ್ರೇಮೋದಧಿಯು ಮೇರೆದಪ್ಪಿತು; ಆಗ ಆ ಪತಿಭಕ್ತಿಪರಾಯಣಳು ಗಂಡನ ಕೊರಳಿಗೆ ಗಟ್ಟಿಯಾಗಿ ಆಲಿಂಗಿಸಿದಳು. ಪತ್ನಿಯ ಈ ದೃಢಾಲಿಂಗನದಿಂದ ಪ್ರಮುದಿತನಾದ ನಾನಾಸಾಹೇಬನು—ಹೆಂಡತಿಯ ಬೆನ್ನಮೇಲೆ ಕೈಯಾಡಿಸುತ್ತ—ಪ್ರಿಯೇ, ಇಂದಿನ ರಂಗಪಂಚಮಿಯು ನಮ್ಮ ಆಯುಷ್ಯದಲ್ಲಿ ಸಂಸ್ಮರಣೀಯವಾಯಿತು. ನಿನ್ನ ಉಪದೇಶದಿಂದಲೇ ನಾನು ಒಂದು ದೊಡ್ಡ ಗಂಡಾಂತರದಿಂದ ಪಾರಾದೆನು. ಎಂದು ನುಡಿದನು. ಪತಿಯ ಪ್ರೇಮದಲ್ಲಿ ಮುಳುಗಿ ಹೋಗಿದ್ದ ಗೋಪಿಕಾಬಾಯಿಯವರು ಇಂದು ರಂಗಪಂಚಮಿಯೆಂಬದನ್ನೇ ಮರೆತುಬಿಟ್ಟಿದ್ದರು; ಈಗ ಅವರಿಗೆ ನಾನಾಸಾಹೇಬನ ಮಾತಿನಿಂದ ಅದು ಸ್ಮರಣದಲ್ಲಿ ಬರಲು ಅವರು ಫಕ್ಕನೆ ಎದ್ದು ತಮ್ಮ ಪತಿಯನ್ನು ಪ್ರಾರ್ಥಿಸಿ, ಆತನನ್ನು ಮಣೆಯಮೇಲೆ ಕುಳ್ಳಿರಿಸಿ ಓಕಳಿಯನ್ನು ಹಾಕಿದರು. ಬಳಿಕ ನಾನಾಸಾಹೇಬನೂ ಹೆಂಡತಿಯಮೇಲೆ ಓಕಳಿಯನ್ನು ಕಿಂಬಹುನಾ ತನ್ನ ಪ್ರೇಮರಸವನ್ನು ಸುರವಿ ತನ್ನ ಅನುರಾಗದಿಂದ ಆಕೆಯನ್ನು ಧನ್ಯಳಾಗಮಾಡಿದನು. ಅಂದಿನ ದಿನ ಆ ದಂಪತಿಗಳು ಅನುಭವಿಸಿದ ಪ್ರೇಮವೇ ನಿಜವಾದ ದಾಂಪತ್ಯಪ್ರೇಮವೆಂದು ಹೇಳಬಹುದು!

## ನಾಲ್ಕನೆಯ ಪ್ರಕರಣ

# ತ್ರ್ಯಂಬಕ ಶಾಸ್ತ್ರಿಯು.

ಪ್ರಿಯವಾಚಕರೇ, ದಾಂಪತ್ಯ ಪ್ರೇಮಾನುಭವದಲ್ಲಿ ಮಗ್ನರಾದ ಆ ನಮ್ಮ ಶ್ರೀಮಂತ ದಂಪತಿಗಳನ್ನು ಬಿಟ್ಟುಕೊಟ್ಟು ನಾವು ರಂಗೂಬಾಯಿಯ ಸ್ಥಿತಿಯು ಏನಾಯಿತೆಂಬದನ್ನುನೋಡುವಾ. ರಾವಜಿಯ ಕಾರಸ್ಥಾನದಿಂದ ಪಾರಾದ ಆ ಲೋಕಸುಂದರಿಯು ಅಕಸ್ಮಾತ್ತಾಗಿ ಮಾರ್ಗದಲ್ಲಿ ತನ್ನ ಸೇವಕನೊಡನೆ ಭಾವೂಸಾಹೇಬನ ಕೋಪಾಗ್ನಿಗೆ ಈಡಾದಳಷ್ಟೇ; ತಾತ್ಯಾಜಿ ಎಂಬವನೊಬ್ಬ ಭಾವೂಸಾ

ಹೇಬನ ಸೇವಕನು ಆಕೆಯನ್ನೂ ಗಣೋಬನನ್ನೂ ಸೆರೆಹಿಡಿದೊಯ್ಯುತ್ತಿರಲು ಆಕೆಯ ಮೈಮೇಲಿನ ಬೆಲೆಯುಳ್ಳ ವಸ್ತ್ರಾಭರಣಗಳನ್ನು ನೋಡಿ ಆತನಿಗೆ ರಂಗೂ ಬಾಯಿಯ ವಿಷಯದಲ್ಲಿ ಕನಿಕರವು ಹುಟ್ಟಿತು. ಅಷ್ಟರಲ್ಲಿ ಗಣೋಬನು ಆಕೆಯ ಕುಲಶೀಲಗಳನ್ನು ಹೇಳಿ ಪ್ರಾರ್ಥಿಸಿದ್ದರಿಂದ ತಾತ್ಯಾಬನು ಮನಸ್ಸು ಕರಗಿ ಆವನು ಗಣೋಬನ ಪ್ರಾರ್ಥನೆಯಂತೆ ರಂಗೂಬಾಯಿಯನ್ನು ಒಂದು ಕುದುರೆಯ ಮೇಲೆ ಕುಳ್ಳಿರಿಸಿದನು. ಕುದುರೆಯು ಒಳ್ಳೇ ಸಭ್ಯವಿದ್ದುದರಿಂದ ಆಕೆಯು ಅದರ ಕಡಿವಾ ಣವನ್ನು ಹಿಡಿದು ಅದನ್ನು ಮೆಲ್ಲಮೆಲ್ಲನೆ ಸಾಗಿಸಿದಳು.

ರಂಗೂಬಾಯಿಯು ಕುದುರೆಯ ಮೇಲೆ ನಿಮಿತ್ತ್ಯಮಾತ್ರವಾಗಿ ಕುಳಿತಿದ್ದಳು ಆಗ ಆಕೆಗೆ ಉಂಟಾಗಿರುವ ಮನೋವ್ಯಥೆಯು ದುರ್ನಿವಾರವಾಗಿತ್ತು. ತನ್ನನ್ನು ಭಾವೂಸಾಹೇಬನ ಮುಂದೆ ಒಯ್ದು ನಿಲ್ಲಿಸಿದಾಗ ಆತನು ತನಗೆ ಯಾವ ಶಿಕ್ಷೆಯನ್ನು ವಿಧಿಸುವನೋ ತನ್ನ ವಿಡಂಬನೆಯು ಎಷ್ಟುರೀತಿಯಿಂದ ಆಗುವದೋ ಎಂದು ಆಕೆಯು ಚಿಂತಿಸುತ್ತಿದ್ದಳು. ಈ ವಿಪತ್ಪರಂಪರೆಯಿಂದ ಆಕೆಯು ತೀರಾ ನಿರ್ವಿಣ್ಣ ಳಾಗಿ ತನ್ನ ದುರ್ದೈವವನ್ನು ಹಳಿದುಕೊಳ್ಳಹತ್ತಿದಳು. "ಹಾ! ದೈವವೇ, ನನ್ನ ದುರ್ದೆಸೆಯನ್ನು ಇನ್ನೂ ಎಷ್ಟುಮಾಡುವಿ? ದುಷ್ಟೇ ಚಾಂಡಾಲಿನೀ, ಸುಮ್ಮನೆ ದೈವವನ್ನು ಹಳಿಯುತ್ತೀ ಏನು? ಜನರ ಸಮೂಹದಲ್ಲಿ ಹೋಗಬೇಡವೆಂದು ಗಣೋಬನು ನಿನಗೆ ಎಷ್ಟುಸಾರೆ ಹೇಳಿರುವದಿಲ್ಲ? ಪಾಪಿಷ್ಠೇ, ಇಲ್ಲದ ಇಂಥ ಉಸಾಬರಿಯು ನಿನಗೆ ಯಾಕೆ ಬೇಕಾಗಿತ್ತು? ದುಷ್ಟಳೇ, ನಿನಗೆ ದೇಹಾಂತ ಶಿಕ್ಷೆ ಯೇ ಯೋಗ್ಯವಿರುತ್ತದೆ!! ಎಂಬ ಹಲವು ಬಗೆಯ ವಿಚಾರಗಳು ಆಕೆಯ ಮನಸಿ ನಲ್ಲಿ ಬರಹತ್ತಿದವು. ಬರಬರುತ್ತ ಆಕೆಯ ಮನಸ್ಸು ತೀರಾ ಅಸ್ವಸ್ಥವಾಯಿತು. ದುಃಖಾಶ್ರುಗಳು ಆಕೆಯ ಕಣ್ಣೊಳಗಿಂದ ಧಾರೆಗಟ್ಟಿ ಸುರಿಯತೊಡಗಿದವು; ಬೆಳ ಗಿನ ಜಾವದಲ್ಲಿ ತಂಗಾಳಿಯು ಬೀಸಹತ್ತಿದ್ದರಿಂದ ಆಕೆಯ ಮೈಯಲ್ಲಿ ನಡುಗು ಹುಟ್ಟಿ ಆಕೆಗೆ ಭಯಂಕರ ಜ್ವರಬಂದವು.

ಬೆಳಗುಮುಂಜಾವಿನ ಸ್ವಚ್ಛವಾದ ಬೆಳ್ದಿಂಗಳದಲ್ಲಿ ಭಾವೂಸಾಹೇಬನ ಛಾವಣಿಯ ಡೇರೆಗಳು ದೂರದಿಂದಲೇ ಕಾಣತೊಡಗಿದವು. ಅವನ್ನು ನೋಡಿ ಇದೇ ನಮ್ಮ ಛಾವಣಿಯೆಂದು ತಾತ್ಯಾಬನು ಕೂಗಿದ್ದರಿಂದ ಆ ಶಬ್ದವು ರಂಗೂ ಬಾಯಿಯ ಕರ್ಣಛಿದ್ರದಿಂದ ಆಕೆಯ ಹೃದಯದಲ್ಲಿ ಸೇರಿ ಕಾಲಕೂಟವಿಷದಂತೆ ಆಕೆಯನ್ನು ದಹಿಸತೊಡಗಿತು. ಆಗ ಆಕೆಯ ಹೃದಯವಿಕಾರವು ಹೆಚ್ಚಿ ಆಕೆಯು ಒಮ್ಮಿಂದೊಮ್ಮೆಲೆ ಮೂರ್ಛಾಕ್ರಾಂತಳಾಗಿ ನೆಲಕ್ಕೆಬಿದ್ದಳು. ಅದರಿಂದ ಕುದುರೆಯು ಎಷ್ಟು ಸಭ್ಯವಿದ್ದರೂ ಬೆದರಿ ಆಕೆಯನ್ನು ದರದರ ಎಳೆಯುತ್ತ ಓಡಹತ್ತಿತು;

ಅದನ್ನು ನೋಡಿ ಗಣೋಬನು ಹಾ ಹಾರಿ,—"ನನ್ನ ಯಜಮಾನತಿಯನ್ನು ಬಿಡಿಸಿರೋ? ಆಕೆಯು ಸತ್ತಳು, ಸತ್ತಳು;" ಎಂದು ಒದರಾಡಲು ತಾತ್ಯಾಜಿಯು ಮೆಟ್ಟಬಿದ್ದು, ರಂಗೂಬಾಯಿಯ ದುರವಸ್ಥೆಯನ್ನು ನೋಡಿ ಘಾಬರಿಯಾದನು; ಆಗ ಆತನು ತನ್ನ ಕುದುರೆಯನ್ನೋಡಿಸಿ ರಂಗೂಬಾಯಿಯ ಕುದುರೆಯನ್ನು ತಡೆದು ಆಕೆಯನ್ನು ಕುದುರೆಯಿಂದ ಇಳಿಸಿದನು. ಅಷ್ಟರಲ್ಲಿ ಗಣೋಬನೂ ಕೈಬಿಚ್ಚಿಸಿಕೊಂಡು ಅಲ್ಲಿಗೆ ಓಡುತ್ತಬಂದನು. ಕುದುರೆಯು ಮನಬಂದತ್ತ ಎಳೆದಾಡಿದ್ದರಿಂದ ರಂಗೂಬಾಯಿಯ ತಲೆಗೆ ೩।೪ ಸ್ಥಳದಲ್ಲಿ ಪೆಟ್ಟುಹತ್ತಿತ್ತು; ಆಕೆಯ ಮೊಳಕೈ-ಮೊಳಕಾಲುಗಳು ಕೆತ್ತಿ ರಕ್ತಮಯವಾಗಿದ್ದವು; ಆಕೆಯ ಸೀರೆಯು ಹರಿದುಹೋಗಿತ್ತು; ಆಕೆಗೆ ಮೈಮೇಲೆ ಎಚ್ಚರವೇ ಇದ್ದಿಲ್ಲ. ಗಣೋಬನು ಲಗಬಗೆಯಿಂದ ಆಕೆಯ ತಲೆಯನ್ನು ಎತ್ತಿ ತನ್ನ ತೊಡೆಯಮೇಲಿಟ್ಟುಕೊಂಡು ಒಂದು ದೀರ್ಘನಿಶ್ವಾಸವನ್ನು ಬಿಟ್ಟನು; ಆಗ ಆತನ ಕಣ್ಣುಗಳೊಳಗಿಂದ ತಾವಾಗಿಯೇ ನೀರು ಹೋಗಹತ್ತಿದವು; ಕ್ಷಣಹೊತ್ತಿನವರೆಗೆ ಅವನ ಬಾಯಿಯಿಂದ ಮಾತುಗಳೇ ಹೊರಡಲಿಲ್ಲ; ಬಳಿಕ ಆತನು ದುಃಖವೇಗವನ್ನು ಸಹನಮಾಡಿಕೊಂಡು "ಇಂದಿನ ರಾತ್ರಿಯು ಎಷ್ಟು ಭಯಂಕರವಾಯಿತಲ್ಲ? ಸಾಯಂಕಾಲದವರೆಗೆ ಎಲ್ಲವೂ ಆನಂದಮಯವಾಗಿದ್ದು ಈಗ ನಾಲ್ಕೇಪ್ರಹರಗಳಲ್ಲಿ ಕಾಲಚಕ್ರವು ತಿರುಗಿಹೋಯಿತು; ಶಿವ! ಶಿವ! ಇನ್ನು ಈ ಅಪ್ಪನವರು ಹ್ಯಾಗೆ ಬದುಕುವರು? ಏನಿರೀ ತಾತ್ಯಾಜಿರಾಯರೇ, ಸ್ವಲ್ಪ ನೀರು ತರಿಸುವಿರಾ? ನಿಮಗಾದರೂ ಮಕ್ಕಳು ಮರಿ ಇರಬಹುದಲ್ಲವೇ? ಎಂದು ನುಡಿದನು. ಈ ವಿಲಕ್ಷಣಪ್ರಸಂಗದಿಂದ ತಾತ್ಯಾಜಿಯಾದರೂ ಗೊಂದಲದಲ್ಲಿ ಬಿದ್ದಿದ್ದನು; ಆಗ ಅವನಿಗೆ ರಂಗೂಬಾಯಿಯನ್ನು ಕುದುರೆಯಮೇಲೆ ಕುಳ್ಳಿರಿಸಿದ್ದೇ ಬಹು ದೊಡ್ಡ ತಪ್ಪಾಗಿತೋರಿತು; ಕಡೆಗೆ ಆತನು ಸ್ವಲ್ಪ ಧೈರ್ಯವನ್ನು ತಂದುಕೊಂಡು ನೀರನ್ನು ತರುವದಕ್ಕಾಗಿ ಒಬ್ಬ ಮನುಷ್ಯನನ್ನು ಛಾವಣಿಗೆ ಕಳಿಸಿಕೊಟ್ಟನು.

ಹೀಗೆ ಗಣೋಬನು ಹತಾಶನಾಗಿ ರಂಗೂಬಾಯಿಯ ತಲೆಯನ್ನು ತನ್ನ ತೊಡೆಯಮೇಲಿಟ್ಟುಕೊಂಡು ಕುಳಿತಿರಲು, ಆತನಿಗೆ ಒಂದೊಂದು ನಿಮಿಷವು ಕೂಡಾ ಒಂದೊಂದು ಸಂವತ್ಸರದಂತೆ ಕಾಣತೊಡಗಿತು; ರಂಗೂಬಾಯಿಯು ಏನುಮಾಡಿದರೂ ಎಚ್ಚರಿಯಲಿಲ್ಲ. ಛಾವಣಿಗೆ ನೀರು ತರಹೋದ ಮನುಷ್ಯನು ಇನ್ನೂ ಬಾರದ್ದರಿಂದ ಗಣೋಬನು ತಾತ್ಯಾಜಿಗೆ ಮತ್ತೊಮ್ಮೆ ಹೇಳಿಕೊಂಡನು. ತಾತ್ಯಾಜಿಯು ಮತ್ತೊಬ್ಬ ಸೇವಕನನ್ನು ಓಡಿಸಿದನು; ಹೀಗೆ ಎಷ್ಟುಹೊತ್ತಾದರೂ ನೀರು ದೊರೆಯದ್ದರಿಂದ ಗಣೋಬನು ಕಂಗೆಟ್ಟು—"ತಾತ್ಯಾಜಿರಾಯರೇ, ಬಹಳ ಹೊತ್ತಾಯಿತು.

ನೀರಿಲ್ಲದೆ ಅವ್ವನವರ ಪ್ರಾಣವು ಹಾರುತ್ತಿರುವದು, ಇವರನ್ನು ಕುದುರೆಯ ಮೇಲೆ ಹಾಕಿಕೊಂಡು ಛಾವಣಿಯವರೆಗೆ ಒಯ್ಯುವ ಕೃಪೆಮಾಡಬೇಕು. ಇಲ್ಲದಿದ್ದರೆ ಇವರು ಇಲ್ಲಿಯೇ ಅಡವೀಹೆಣವಾಗಿ ಸಾಯುವರು" ಎಂದು ನುಡಿದನು. ತಾತ್ಯಾಜಿಯು ಸ್ವಲ್ಪ ಎಡವಟ್ಟ ಸ್ವಭಾವದವನಿದ್ದು ಅವನಿಗೆ ಈಗ ಸ್ವಲ್ಪ ಸಿಟ್ಟು ಬಂದಿತ್ತು; ಆದ್ದರಿಂದ ಆತನು ಗಣೋಬನ ಮೈಮೇಲೆ ವಸಕ್ಕನೆ ಹೋಗಿ— "ಎಲೋ ಮುದುಕಾ, ಸುಮ್ಮನೆ ಕುಳಿತುಕೋ; ನಿನ್ನ ಮಾತು ಕೇಳಿಯೇ ಈ ಹಾಡಾಯಿತು! ಇಂಥ ಸಾಯುವ ಪ್ರಾಣಿಯನ್ನು ಕುದುರೆಯ ಮೇಲೆ ಹ್ಯಾಗೆ ಹಾಕುತ್ತೀ? ಸ್ವಲ್ಪಾದರೂ ಬುದ್ಧಿ ಅದೆಯೋ ನಿನಗೆ" ಎಂದು ಮರ್ಮಭೇದಕ ಸ್ವರದಿಂದ ಮಾತಾಡಿದನು. ತಾತ್ಯಾಜಿಯ ಈ ಬಿರಿ ನುಡಿಗಳಿಂದ ಗಣೋಬನಿಗೆ ಮರಣಪ್ರಾಯವಾದ ದುಃಖವಾಯಿತು. ಆದರೆ ಮಾಡುತ್ತಾನೇನು? ದೇವರೇಗತಿಯೆಂದು ಸುಮ್ಮನೆ ಕಣ್ಣೀರುದುರಿಸುತ್ತ ಕುಳಿತುಬಿಟ್ಟನು!

ಯಾವದೊಂದು ಸಂಗತಿಯು ಪರಮಾವಧಿಯಾದ ಕೀಳಾವಸ್ಥೆಯನ್ನು ಹೊಂದಿತೆಂದರೆ ಆ ಕೂಡಲೆ ಆ ಸಂಗತಿಯು ಸ್ಥಿತ್ಯಂತರವಾಗುವದು ಸೃಷ್ಟಿಯನಿಯಮವೇ ಆಗಿರುತ್ತದೆಂದು ಹೇಳಬಹುದು. ಆದರಂತೆ ರಂಗೂಬಾಯಿಯ ದುರ್ದೆಶೆಯು ಪರಮಾವಧಿಗೆ ಮುಟ್ಟಿ ಕೆಲವು ನಿಮಿಷಗಳು ಗತಿಸುವಷ್ಟರಲ್ಲಿ ಅದೇ ಹಾದಿಯಿಂದ ತಾಯೀಬಾಯಿಯವರು ಬಂದರು. ಅವರ ಸಂಗಡ ನೂರಾರುಜನ ಸಿಪಾಯಿಗಳೂ ಸ್ವಾರರೂ ಎಷ್ಟೋ ದೀವಟಿಗೆಗಳೂ ಇದ್ದವು; ಭೋಯಿಗಳು ಮೇಣೆಯನ್ನು ಹೊತ್ತುಕೊಂಡು ಒತ್ತರದಿಂದ ಸಾಗಿದ್ದರು; ಗಣೋಬನಿಗೂ, ಆ ಸ್ವಾರರಿಗೂ ಪೂರ್ವಪರಿಚಯವಿದ್ದದರಿಂದ ಅವರು ಅವನನ್ನು 'ಇದೇನು ಗೊಂದಲವೆಂದು' ಕೇಳಿದರು; ರಂಗೂಬಾಯಿಯು ದುಃಖದಿಂದ ಕಂಗೆಟ್ಟ ಗಣೋಬನ ಕಿವಿಗಳಿಗೆ ಆ ಗುರ್ತಿನ ಶಬ್ದಗಳು ಬಿದ್ದಕೂಡಲೆ ಅಮೃತಸೇಚನವಾದಂತಾಗಿ ಅವನು ಎಚ್ಚತ್ತು ನೋಡುತ್ತಾನೆ; ಎದುರಿಗೆ ತಾಯೀಬಾಯಿಯವರ ಸೇವಕರು ನಿಂತುಕೊಂಡಿದ್ದರು; ಅವರನ್ನು ಕಂಡು ಗಣೋಬನಿಗಾದ ಆನಂದವು ಆಕಾಶದಲ್ಲಿ ಹಿಡಿಸದಾಯಿತು. ಆ ಕೂಡಲೆ ಅವನು ಆ ಸ್ವಾರರನ್ನು ವಿಚಾರಿಸಿ ರಂಗೂಬಾಯಿಯನ್ನು ಬಿಟ್ಟುಕೊಟ್ಟು ತಾಯೀಬಾಯಿಯವರ ಮೇಣೆಯಕಡೆಗೆ ಓಡಿದನು.

ತಾಯೀಬಾಯಿಯವರಿಗೆ ಈ ಯಾವಸುದ್ದಿಯೂ ಗೊತ್ತಿದ್ದಿಲ್ಲ; ಅವರು ಆನಂದದಿಂದ ತಮ್ಮ ಮೇಣೆಯಲ್ಲಿ ಕುಳಿತುಕೊಂಡಿದ್ದರು. ಅವರು ಅಲ್ಲಿ ನೆರೆದ ಜನರ ಗದ್ದಲವನ್ನು ನೋಡಿ ಸಹಜವಾಗಿ ಕಿಂಡಿಯೊಳಗಿಂದ ನೋಡಲು ಗಣೋಬನು ಓಡಿಬರುವನೆಂಬದು ಗೊತ್ತಾಯಿತು. ಆಗ ಅವರು ಮನಸಿನಲ್ಲಿ ಯೋಚಿ

ಸುತ್ತ ಮೇಣೆಯ ಪಡಕುಗಳನ್ನು ತೆರೆಯುತ್ತಿರಲು, ಗಣೋಬನು ಬಂದು—"ದೇವರೂ, ಸೋನೆಯವರ ರಂಗೂಬಾಯಿಯವರು ಇಲ್ಲಿ ಗಾಯವಾಗಿ ಬಿದ್ದುಕೊಂಡಿದ್ದಾರೆ;" ಎಂದು ನುಡಿದನು. ಅವನ ಮಾತುಗಳು ತಾಯೂಬಾಯಿಯವರ ಕಿವಿಗೆ ಸಿಡಿಲು ಬಡಿದಂತಾದವು; ಅವರು ತಟ್ಟನೆ ಮೇಣೆಯನ್ನು ನಿಲ್ಲಿಸಿ, ರಂಗೂಬಾಯಿಯು ಇದ್ದಲ್ಲಿಗೆ ಆ ಮೇಣೆಯನ್ನು ತಿರುಗಿಸಿದರು.

ರಂಗೂಬಾಯಿಯನ್ನು ನೋಡಿದ ಕೂಡಲೆ ತಾಯೀಬಾಯಿಯವರ ದುಃಖವು ಒತ್ತರಿಸಿತು. ಆಗ ಆಕೆಯ ಕೂದಲುಗಳು ಅಸ್ತವ್ಯಸ್ತವಾಗಿದ್ದವು; ಕಣ್ಣುಗಳು ಅರ್ಧಮುಚ್ಚಿ ಅರ್ಧ ತೆರೆದಿದ್ದವು; ಆಕೆಯ ಮುಖವೆಲ್ಲ ರಕ್ತಮಯವಾಗಿತ್ತು; ಮೈಯೆಲ್ಲ ಧೂಳಿ ಮುಣುಗಿತ್ತು; ಆಕೆಯ ಸುಂದರ ತನುಲತೆಯು ಭೂಮಿಯಮೇಲೆ ಒರಗಿತ್ತು; ಇಂಥ ಸ್ಥಿತಿಯಲ್ಲಿದ್ದ ಆ ಅನಾಥೆಯನ್ನು ನೋಡಿ ಕೋಮಲಸ್ವಭಾವದ ಆ ತಾಯೀಬಾಯಿಯವರ ದುಃಖವು ಹೆಚ್ಚಿದ್ದರಲ್ಲಿ ಆಶ್ಚರ್ಯವೇನು? ಆಗ ಅವರು ಧಾರೆಗಟ್ಟಿ ಹರಿಯುತ್ತಿರುವ ತಮ್ಮ ಅಶ್ರುಗಳನ್ನು ಒರೆಸಿಕೊಂಡು—"ದೈವಗೇಡಿ ಹುಡುಗಿಯಿದು" ಎಂಬ ಉದ್ಗಾರವನ್ನು ತೆಗೆದು ಮೇಣೆಯಿಂದ ಕೆಳಗಿಳಿದರು; ಅವರು ಅತ್ಯಂತ ಮಮತೆಯಿಂದ ರಂಗೂಬಾಯಿಯ ಮೋರೆಯಮೇಲೆ ಕೈಯಾಡಿಸಿ—ರಂಗೂ! ರಂಗೂ! ಎಂದು ಒದರಿದರು; ಆದರೆ ಅದು ವ್ಯರ್ಥವಾಯಿತು. ಬಳಿಕ ಅವರು ಆಕೆಯ ಮೈಯನ್ನು ಹಿಡಿದು 'ನೋಡಿ—"ಓಹೋ, ಈಕೆಗೆ ಬಹಳ ಜ್ವರಬಂದಿರುವವು; ಎಲೋ ಯಾರಿದ್ದೀರಿ; ಈಕೆಯನ್ನು ಬೇಗನೆ ಮೇಣೆಯಲ್ಲಿ ಮಲಗಿಸಿರಿ" ಎಂದು ನುಡಿದರು. ತಾಯೀಬಾಯಿಯವರು ಹೀಗೆ ಅಂದಕೂಡಲೆ ತಾತ್ಯಾಜಿಯು ಮುಂದೆ ಬಂದು ಕೈಜೋಡಿಸಿ—"ಅವ್ವನವರೇ, ಭಾವೂಸಾಹೇಬರವರು ಇವರನ್ನು ಪ್ರತಿಬಂಧಿಸಿತರಲು ನನಗೆ ಆಜ್ಞಾಪಿಸಿರುವರು" ಎಂದು ನುಡಿದನು. ಅವನ ಮಾತುಗಳನ್ನು ಕೇಳಿದ ಕೂಡಲೆ ತಾಯೂಬಾಯಿಯವರು ಬಹಳ ಸಂತಾಪದಿಂದ—"ಈಕೆಯನ್ನು ಹೀಗೆಯೇ ಅಡವೀಪಾಲುಮಾಡಿ ಕೊಲ್ಲಬೇಕೆಂದು ಮಾಡಿರುವಿರೋ ಏನು? ನಾನು ಈಕೆಯನ್ನು ಬಿಟ್ಟುಹೋಗುವದಿಲ್ಲ; ನನ್ನ ಮನೆಗೆ ಕರೆದುಕೊಂಡು ಹೋಗುತ್ತೇನೆ; ಬೇಕಾದರೆ ಈಕೆಗೆ ನೆಟ್ಟಗಾದ ಬಳಿಕ ನೀವು ಕರಕೊಂಡು ಹೋಗಬಹುದು! ಗಣೋಬಾ, ಏನು ನೋಡುತ್ತೀ; ಈಕೆಯನ್ನು ಮೇಣೆಯಲ್ಲಿ ಮಲಗಿಸು; ಎಂದು ಅನ್ನಲು ತಾತ್ಯಾಜಿಯು ಸುಮ್ಮನಾದನು. ಆಗ ತಾಯೂಬಾಯಿಯವರು ತಮ್ಮ ಮೇಣೆಯಲ್ಲಿ ರಂಗೂಬಾಯಿಯನ್ನು ಮಲಗಿಸಿಕೊಂಡು ಅಲ್ಲಿಂದ ಹೊರಟು ನಡೆದರು.

ಮರುದಿನ ತಾತ್ಯಾಜಿಯು ಈ ಎಲ್ಲ ಸಂಗತಿಯನ್ನು ಭಾವೂಸಾಹೇಬನ ಮುಂದೆ ಹೇಳಿದನು; ಆದರೆ ಆ ವಿಧವೆಯು ತನ್ನ ಪ್ರೀತಿಯ ಸರದಾರನಾದ ಮೋಹಂದಳೆ ಬಳವಂತರಾಯನ ಆಪ್ತಳೆಂಬದನ್ನು ತಿಳಿದು ಆತನು ಆ ವಿಷಯವನ್ನು ಅಲ್ಲಿಗೆ ಬಿಟ್ಟು ಬಿಟ್ಟನು; ಶಕುನಗಳಮೇಲೆ ಆತನ ವಿಶ್ವಾಸವಿದ್ದರೂ ದರ್ಬಾರದಲ್ಲಿ ಒಡನುಡಿದಂತೆ ಆತನು ಕೆಲಸಮಾಡಿಯೇ ತೀರಬೇಕಾದ್ದರಿಂದ, ಬೇರೊಂದು ಶುಭಮುಹೂರ್ತವನ್ನು ನೋಡಿ ಅವನು ಪ್ರಯಾಣಬೆಳೆಸಿದನು; ಆತನ ಪ್ರಚಂಡವಾದ ಸೈನ್ಯವು ಸಿಂಹಗರ್ಜನೆಯನ್ನು ಮಾಡುತ್ತ ನರ್ಮದಾ ನದಿಯನ್ನು ದಾಟಿ ವಿಂಧ್ಯ ಪರ್ವತವನ್ನು ಏರತೊಡಗಿತು; ದಕ್ಷಿಣ-ಉತ್ತರ ಹಿಂದುಸ್ಥಾನಗಳನ್ನು ವಿಂಗಡಿಸಿರುವ ಈ ದೊಡ್ಡ ಪರ್ವತವು ನರ್ಮದೆಯ ಉತ್ತರದಲ್ಲಿ ಆ ನದಿಯಗುಂಟ ಗೋಡೆಯಂತೆ ಬಹುದೂರ ಹಬ್ಬಿರುತ್ತದೆ; ಉತ್ತರಹಿಂದುಸ್ಥಾನಕ್ಕೆ ಹೋಗುವವರು ಅದನ್ನು ಏರದೆ ಹೋಗುವಹಾಗಿಲ್ಲ; ಆ ಪರ್ವತದಲ್ಲಿ ಹಲವು ತರದ ವನಸ್ಪತಿಗಳಿದ್ದು ಅವು ದಟ್ಟವಾಗಿ ಬೆಳೆದದ್ದರಿಂದ ಆ ಪರ್ವತವು ಭಯಂಕರವಾಗಿ ತೋರುವದು; ಅದರ ಎತ್ತರವಾದ ಶಿಖರಗಳು ನೋಡುವವರನ್ನು ಅಚ್ಚರಿಗೊಳಿಸುತ್ತಿರುವವು; ಅದನ್ನು ಹತ್ತಿಹೋಗಲಿಕ್ಕೆ ಬೇರೆ ಬೇರೆ ಕಡೆಗಳಲ್ಲಿ ಕಣಿವೆಯ ಮಾರ್ಗಗಳುಂಟು; ಭಾವೂಸಾಹೇಬನ ಸೈನಿಕರು ಸಮೀಪದಲ್ಲಿರುವ ಎರಡುಕಣಿವೆಯ ಮಾರ್ಗಗಳಿಂದ ಆ ಪರ್ವತವನ್ನು ಏರಿ ಅದರ ಮೇಲ್ಭಾಗವನ್ನು ಮುಟ್ಟಿದರು. ಆ ಪರ್ವತದ ಮೇಲಿನ ತಂಗಾಳಿಯಿಂದ ಆ ಸೈನಿಕರು ಮಾರ್ಗಾಯಾಸವನ್ನು ಮರೆತುಬಿಟ್ಟು ಪರ್ವತದ ಶೋಭೆಯನ್ನು ಮನದಣಿಯುವಾಗಿ ನೋಡಿದರು. ಭಾವೂಸಾಹೇಬನೂ ಆ ವನಶ್ರೀಯನ್ನು ಕೌತುಕದಿಂದ ನೋಡುತ್ತ 'ಭೇಲಶಾ' ಎಂಬಲ್ಲಿಗೆ ಸಾಗಿ ಅಲ್ಲಿ ತಳವನ್ನು ಊರಿದನು.

ಭೇಲಶಾ ಪಟ್ಟಣವು ಬಹು ಪುರಾತನಕಾಲದಿಂದ ಪ್ರಸಿದ್ಧಿಯಾದದ್ದು; ಬೋಡಶಾ ಎಂಬ ಘಟ್ಟದ ಮಾರ್ಗದಿಂದ ವಿಂಧ್ಯಾದ್ರಿಯನ್ನು ಏರಿದವರು ಭೇಲಶಾ ಶಹರದ ಮೇಲೆ ಹಾಯ್ದು ಹೋಗುವದೇ ಪ್ರಾಚೀನಕಾಲದಿಂದ ನಡೆದುಬಂದ ರಾಜಮಾರ್ಗವಾಗಿರುತ್ತದೆ. ಕಾಲಿದಾಸನು ತನ್ನ ಕಾವ್ಯಸೃಷ್ಟಿಯಲ್ಲಿ ಮೋಡಗಳಿಗೆ ಕಾಶ್ಮೀರದ ಮಾರ್ಗವನ್ನು ತೋರಿಸುವಾಗ ಇದನ್ನೇ ಉಲ್ಲೇಖಿಸಿರುತ್ತಾನೆ; ಆದರೆ ಆ ಕವಿಶ್ರೇಷ್ಠನು ಮೇಘದೂತಕಾವ್ಯದಲ್ಲಿ ಬರೆದಂತೆ ಇಲ್ಲವೆ ದಂಡಿಯು ದಶಕುಮಾರ ಚರಿತ್ರದಲ್ಲಿ ವರ್ಣಿಸಿದಂತೆ ಭೇಲಶಾ ಪಟ್ಟಣವು ಈಗ ಅಷ್ಟು ವೈಭವಸಂಪನ್ನವಾಗಿದ್ದಿಲ್ಲವೆಂದು ಮಾತ್ರ ಹೇಳಲಾಗುವದು. ಆದರೂ ಹಳೆಯಪೇಟೆಯ ಸಾಲುಗಳು, ದೊಡ್ಡ ದೊಡ್ಡ ಮನೆಗಳು, ಕೋಟೆಯ ಗೋಡೆಗಳು ಅದರ ಪ್ರಾಚೀ

ನ ವೈಭವವನ್ನು ನೆನಪುಮಾಡಿಕೊಡುತ್ತಿರುವವು; ಇಲ್ಲಿ ಭೂಮಿಯು ಬಹಳ ಬೆಳೆಯುಳ್ಳದ್ದಾದ್ದರಿಂದ ಇನ್ನೂವರೆಗೆ ಇಲ್ಲಿಯ ಸಂಪತ್ತು ಸ್ಥಿರವಾಗಿರುವದು; ಈ ಪ್ರಾಂತವು ಮರಾಟರ ವಶದಲ್ಲಿ ಇದ್ದದರಿಂದಲೂ ಇಲ್ಲಿ ಧಾನ್ಯಾದಿ ಆಹಾರದ ಪದಾರ್ಥಗಳು ಬಹಳ ಅಗ್ಗವಾಗಿ ದೊರೆಯುತ್ತಿದ್ದದರಿಂದಲೂ ಭಾವೂಸಾಹೇಬನು ಅಲ್ಲಿಯ ತಳವನ್ನು ಬೇಗ ಕಿತ್ತಲಿಲ್ಲ.

ಹಿಂದೂಜನರು ಭಾವಿಕರೂ, ದೇವ ಭೋಳೆಸ್ವಭಾವದವರೂ ಎಂಬದು ಜಗತ್ಪ್ರಸಿದ್ಧವಿರುವದು; ಭೇಲಶಾಪಟ್ಟಣವು ವೇತ್ರಾವತಿಯೆಂಬ ನದೀತೀರದಲ್ಲಿದ್ದು ಪುಣ್ಯಸ್ಥಳವೆಂದು ಹೆಸರಾಗಿತ್ತು; ಆದ್ದರಿಂದ ಆ ಪಟ್ಟಣದಲ್ಲಿ ಭಾವಿಕರಾದ ಮರಾಟಾಸೈನಿಕರ ಧರ್ಮಕೃತ್ಯಗಳು ನಡೆದವು; ಆ ಊರಲ್ಲಿ ಭೈರೋಜಿಯ ದೇವಸ್ಥಾನವಿದ್ದು ಅದರ ಪ್ರಸಿದ್ಧಿಯು ಆ ಪ್ರಾಂತದಲ್ಲಿ ವಿಶೇಷವಾಗಿತ್ತು; ಭೂತ ಬಾಧೆಯುಳ್ಳ ಹಲವು ಜನರು ದೂರ ದೂರದಿಂದ ಆ ಗುಡಿಗೆ ಬರುತ್ತಿದ್ದರು; ಆ ಗುಡಿಯು ನೋಡಲಿಕ್ಕೆ ಭವ್ಯವೂ, ಸುಂದರವೂ ಆಗಿತ್ತು; ಅದರಲ್ಲಿ ಭೈರೋಜಿ ಮಾರುತಿ, ಭೂತ, ವೇತಾಳ ಮೊದಲಾದ ಹಲವು ಪ್ರತಿಮೆಗಳು ಇದ್ದವು; ಆ ಭೈರೋಜಿಯ ದರ್ಶನಕ್ಕೆ ಪ್ರತಿನಿತ್ಯ ಮರಾಟಾಸೈನ್ಯದಲ್ಲಿ ಅನೇಕರು, ವಿಶೇಷವಾಗಿ ಹೆಂಗಸರು ಹಿಂಡುಗಟ್ಟಿ ಹೋಗಹತ್ತಿದರು.

ತ್ರ್ಯಂಬಕಶಾಸ್ತ್ರಿಯೆಂಬ ಒಬ್ಬ ಬ್ರಾಹ್ಮಣನು ಭೈರೋಜಿಯ ವಂಶಪರಂಪರೆಯ ಪೂಜಾರಿಯಾಗಿದ್ದನು; ಆತನು ಬರಿಯ ಪೂಜಾರಿಯಾಗಿರದೆ ಒಳ್ಳೇ ಕಾರಸ್ಥಾನಿಯೂ ಆಗಿದ್ದನು; ರಾಜಕರಣನೈಪುಣ್ಯತೆಯು ಅವನಲ್ಲಿ ವ್ಯಕ್ತವಾಗುತ್ತಿತ್ತು; ಆತನಿಗೆ ಹಿಂದುಗಳೂ, ಮುಸಲ್ಮಾನರೂ ಸರಿಯಾಗಿಯೇ ನಡಕೊಳ್ಳುತ್ತಿದ್ದರು' ಮುಸಲ್ಮಾನರಲ್ಲಿ ದೊಡ್ಡ ದೊಡ್ಡ ಜನರು ಸಹ ಅವನ ಕಡೆಗೆ ಬರುತ್ತಿದ್ದು ಮಹಮ್ಮದಬಾದದ ನಬಾಬನಾದ ಮಹಮ್ಮದಶಹನು ಆತನ ಪ್ರೀತಿಯ ಶಿಷ್ಯನಾಗಿದ್ದನು; ಶಾಸ್ತ್ರಿಯು ಮೇಲಾದ ಜ್ಯೋತಿರ್ವಿದನಿದ್ದರಮೂಲವನ್ನು ಕೂಡ ಬಲ್ಲವನಾಗಿದ್ದನು; ಅವನು ಹೇಳಿದ ಪ್ರಶ್ನೆಗಳು ಬಹುತರ ಎಂದೂ ಹುಸಿಹೋಗುತ್ತಿದ್ದಿಲ್ಲ; ಆತನು ತನ್ನ ಮುಂದೆ ಬಂದವರ ಮನೋಗತವನ್ನು ತಟ್ಟನೆ ಹೇಳಿಬಿಡುತ್ತಿದ್ದನು; ಬಹುದಿವಸಗಳ ಮುಸಲ್ಮಾನರ ಸಂಸರ್ಗದಿಂದ ಅಳಿದುಹೋಗಿದ್ದ ಹಿಂದೂಜನರ ವಿದ್ಯಾವೈಭವವು ಈತನಿಂದ ಪುನಃ ಉದಯಕ್ಕೆ ಬಂದಂತಾಗಿತ್ತು; ಮಂತ್ರ-ತಂತ್ರಗಳಲ್ಲಂತೂ ಆವನ ಕೈಹಿಡಿಯುವವರೇ ಇದ್ದಿಲ್ಲ. ಇಂಥ ಲೋಕೋತ್ತರ ಸುಗುಣಗಳು ಆತನಲ್ಲಿದ್ದಂತೆ ಲೋಕೋತ್ತರದುರ್ಗುಣಗಳೂ ಆತನಲ್ಲಿ ಇದ್ದವು; ಕಪಟ-ವಿಶ್ವಾಸಘಾತುಕತನ ಮೊದಲಾದವುಗಳಲ್ಲಿ ಆತನು ಪೂರ್ಣಪ್ರಾವೀಣ್ಯತೆಯನು

ಪಡೆದಿದ್ದನು; ಅವನನ್ನು ವಿಶೇಷವಾಗಿ ಸ್ವಾರ್ಥಿಗಳಾದ ಪುಂಡರೇ ಆಶ್ರಯಿಸುತ್ತಿದ್ದರು. ಆತನು ಹಿಂದೂಜನರ ಉತ್ಕರ್ಷವನ್ನು ಮನಃಪೂರ್ವಕವಾಗಿ ನಿಷೇಧಿಸುತ್ತಿದ್ದನು; ಅವನಿಗೆ ಮರಾಟರು ತಮ್ಮ ಪ್ರಾಂತವನ್ನು ಆಕ್ರಮಿಸಿದಾಗಿನಿಂದ ಸ್ವಲ್ಪದರೂ ಸಮಾಧಾನವಿದ್ದಿಲ್ಲ. ಅವನು ತೋರಿಕೆಯಲ್ಲಿ ಬಹು ಸಭ್ಯನಾಗಿದ್ದನು. ಆದರೆ ಅವನ ಸಭ್ಯತನವು ಗೋಮುಖ ವ್ಯಾಘ್ರವನ್ನೇ ಹೋಲುತ್ತಿತ್ತು.

ತ್ರ್ಯಂಬಕಶಾಸ್ತ್ರಿಯು ಯಾವಾಗಲೂ ಭೈರೋಜಿಯ ಗುಡಿಯಲ್ಲಿಯೇ ಇರುತ್ತಿದ್ದನು. ಆತನು ತನಗೋಸುಗ ಆ ಗುಡಿಯಲ್ಲಿ ಒಂದು ಸ್ವತಂತ್ರಕೋಣೆಯನ್ನು ಮಾಡಿಕೊಂಡಿದ್ದನು ಅಲ್ಲಿ ಯಾವಾಗಲೂ ಕತ್ತಲುಕವಿದಿರುತ್ತಿತ್ತು; ರಾಜಕಾರಸ್ಥಾನದ ಗುಪ್ತ ಕೆಲಸಗಳನ್ನೆಲ್ಲ ಅವನು ಆ ಕೋಣೆಯಲ್ಲಿಯೇ ವಿಚಾರಿಸುತ್ತಿದ್ದನು; ಭೈರೋಜಿಯ ತ್ರಿಕಾಲಪೂಜೆಯ ಮಟ್ಟಿಗೆ ಮಾತ್ರ ಅವನು ಹೊರಗೆ ಬರುತ್ತಿದ್ದನು; ಆತನ ತ್ರಿಕಾಲಸ್ನಾನ, ತ್ರಿಕಾಲಪೂಜೆ ಇವುಗಳ ಆಡಂಬರವು ಜನರನ್ನು ಮರಳುಮಾಡುತ್ತಿತ್ತು; ಮರಾಟಾ ಸೈನಿಕರಂತೂ ಆತನ ಅದ್‌ಭುತಕೃತಿಗಳಿಗೆ ಬೆರಗಾಗಿಹೋಗಿದ್ದರು; ಭೂತ-ಪಿಶಾಚಿಗಳನ್ನು ಬಿಡಿಸುವ ಆತನ ಕೀರ್ತಿಯು ಮರಾಟರ ಸೈನ್ಯದಲ್ಲೆಲ್ಲ ಹಬ್ಬಿತು; ಭೋಳೇಸ್ವಭಾವದ ತಾಯೀಬಾಯಿಯು ರಂಗೂಬಾಯಿಯ ಬೇನೆಯು ಇನ್ನೂ ಹಿಂಗದ್ದನ್ನು ನೋಡಿ ಆಕೆಯನ್ನು ಒಂದು ದಿನ ತ್ರ್ಯಂಬಕಶಾಸ್ತ್ರಿಯ ಬಳಿಗೆ ಕರಕೊಂಡುಹೋದಳು; ಆಗ ಶಾಸ್ತ್ರಿಯು ಭೈರೋಜಿಯ ಪೂಜೆಯನ್ನು ನಡಿಸಿದ್ದನು. ತಾಯೀಬಾಯಿಯು ರಂಗೂಬಾಯಿಯೊಡನೆ ಗುಡಿಯನ್ನು ಪ್ರವೇಶಿಸಿದಳು; ಭೀಲಶಾದ ಕಮಾವೀಸದಾರನು ನೆರೆದ ಗದ್ದಲವನ್ನು ಸರಿಸಿ ಅವರನ್ನು ಭೈರೋಜಿಯಮುಂದೆ ನಿಲ್ಲಿಸಿದನು; ಆಗ ಗುಡಿಯಲ್ಲಿ ದೊಡ್ಡದೊಂದು ಜಾತ್ರೆಯು ನೆರೆದಂತಾಗಿತ್ತು; ತ್ರ್ಯಂಬಕಶಾಸ್ತ್ರಿಯು ಭೈರೋಜಿಗೆ ಧೂಪಾರತಿಯನ್ನು ಬೆಳಗಿ ವೇತಾಳಪೂಜೆಗಾಗಿ ಹೊರಗೆ ಬಂದನು. ಆಗ ಅವನ ಮೈಮೇಲೆ ವೇತಾಳಸಂಚಾರವಾಗಿ ಅವನು ಕೈಗಳನ್ನು ಮೇಲಕ್ಕೆ ಎತ್ತಿದನು. ಕೂಡಲೆ ಅವನ ಶಿಷ್ಯರು ಕೈಯೊಳಗಿನ ಧೂಪಾರತಿಯನ್ನು ಕಸಗೊಂಡರು; ಬಳಿಕ ಆತನ ಮೈಯೊಳಗಿಂದ ಅಬೀರ (ಬೂಕ) ಗಳು ರಾಶಿರಾಶಿಯಾಗಿ ಸುರಿದವು; ಈ ಅದ್‌ಭುತವನ್ನು ನೋಡಿ ತಾಯೀಬಾಯಿಯು ಅಂಜಿದಳು; ನಂತರ ಶಾಸ್ತ್ರಿಯು ಶುದ್ಧಿಯ ಮೇಲೆ ಬಂದು ಅರ್ಧಮರ್ಧವಾಗಿದ್ದ ಪೂಜೆಯನ್ನು ಪೂರ್ತಿಗೊಳಿಸಿ ಕಲ್ಲುಸಕ್ಕರಿ, ಕೊಬ್ಬರಿ, ಬಾದಾಮುಗಳಿಂದ ಮಿಶ್ರಿತವಾದ ಪ್ರಸಾದವನ್ನು ಎಲ್ಲರಿಗೂ ಕೊಟ್ಟನು. ಪ್ರಸಾದವನ್ನು ಕೊಡುವದಾದಮೇಲೆ ತ್ರ್ಯಂಬಕಶಾಸ್ತ್ರಿಯು ತನ್ನ ಕೋಣೆಯೊಳಗೆ ಹೋಗಿ ಕುಳಿತು ರಂಗೂಬಾಯಿಯನ್ನು ಕರೆಯಿಸಿಕೊಂಡನು. ಆಗ ತಾಯೀಬಾ

ಯಿ, ರಂಗೂಬಾಯಿ, ಗಣೋಬಾ, ಕವಾವೀಸದಾರ ಹೀಗೆ ನಾಲ್ವರು ಒಳಗ ಹೋದರು. ಶಾಸ್ತ್ರಿಯು ರಂಗೂಬಾಯಿಯ ಕೈಯನ್ನು ಹಿಡಿದು ನೋಡಿ ಈಕೆಗ ವೇತಾಳಬಾಧೆಯಾಗಿರುವದು. ಹಾಗಿಲ್ಲದಿದ್ದರೆ, ಈ ದಿನ ನನ್ನ ಮೈಮೇಲೆ ವೇತಾಳನ ಸಂಚಾರವಾಗುತ್ತಿದ್ದಿಲ್ಲ. ಇಕೋ ನೋಡಿರಿ; ಈಕೆಯ ತಲೆಯಮೇಲೆ, ಮೈಮೇಲೆ ಎಷ್ಟು ಅಬೀರಗಳು ಬಿದ್ದಿರುವವು? ಎಂದು ನುಡಿದನು. ನಿಜವಾಗಿಯೇ ರಂಗೂಬಾಯಿಯ ತಲೆಯಮೇಲೆ ಸೀರೆಯಮೇಲೆ ಅಬೀರಗಳು ಬಿದ್ದಿದ್ದವು; ಅವನ್ನು ನೋಡಿ ತಾಯಿಬಾಯಿಯು ಚಕಿತಳಾದಳು; ಬಳಿಕ ಶಾಸ್ತ್ರಿಯು ರಂಗೂಬಾಯಿಗೆ ಒಂದು ದಾರವನ್ನು ಮಂತ್ರಿಸಿ ಕೊಟ್ಟು ಅವರನ್ನು ಕಳಿಸಿದನು.

ಈ ಮೇರೆಗೆ ಮರಾಟಾಸೈನಿಕರಲ್ಲಿ ಎಷ್ಟೋ ಜನರಿಗೆ ತ್ರ್ಯಂಬಕಶಾಸ್ತ್ರಿಯ ಕರಾಮತಿಯು ಅನುಭವಕ್ಕೆ ಬರಲು, ಅವರಲ್ಲಿ ಅವನ ವಿಷಯಕ್ಕೆ ಪೂಜ್ಯಬುದ್ಧಿಯುಂಟಾಯಿತು; ಈ ಸುದ್ದಿಯು ಕರ್ಣೋಪಕರ್ಣವಾಗಿ ಭಾವೂಸಾಹೇಬನ ಕಿವಿವರೆಗೆ ಹೋಯಿತು. ಆತನಿಗಾದರೂ ಮೊದಮೊದಲು ಶಾಸ್ತ್ರಿಯಲ್ಲಿ ಪೂಜ್ಯಬುದ್ಧಿಯು ಹುಟ್ಟಿ ಅವನನ್ನು ಕಾಣುವ ಆಪೇಕ್ಷೆಯಾಯಿತು. ತ್ರ್ಯಂಬಕಶಾಸ್ತ್ರಿಯಾದರೂ ಇದೇ ಸಮಯವನ್ನೇ ನೋಡುತ್ತಿದ್ದನು. ಮರಾಟಾಸೈನಿಕರ, ವಿಶೇಷವಾಗಿ ಭಾವೂಸಾಹೇಬನಂಥ ಸೇನಾಪತಿಯ ಸಖ್ಯವನ್ನು ಬೆಳಿಸಿ ಅವರ ಸೈನ್ಯದಲ್ಲಿಯ ಗುಪ್ತರಹಸ್ಯಗಳನ್ನು ತಿಳಿಯುವ ಮಹತ್ವಾಕಾಂಕ್ಷೆಯನ್ನು ಆತನು ತಾಳಿದ್ದನು; ಆದ್ದರಿಂದ ಪ್ರಯತ್ನಪೂರ್ವಕವಾಗಿ ಸಂಪಾದಿಸಿದ್ದ ಈ ಸಂಧಿಯನ್ನು ಕಳಕೊಳ್ಳದೆ, ಒಂದುದಿನ ಮುಂಜಾನೆ ಎರಡುತಾಸು ಹೊತ್ತಿನಸುಮಾರಕ್ಕೆ ಆತನು ಭಾವೂಸಾಹೇಬನ ಡೇರೆಯಕಡೆಗೆ ಹೊರಟನು. ಆಗ ಆತನ ವೇಷವು ವರ್ಣಿಸುವ ಹಾಗೆ ಇತ್ತು; ಆತನು ತನ್ನ ಜಟಾವಿಭೂಷಿತವಾದ ತಲೆಯಮೇಲೆ ಕೆಂಪು ಸಕಲಾತಿಯ ಕಿವಿಟೊಪ್ಪಿಗೆಯನ್ನು ಹಾಕಿದ್ದನು; ಕೊರಳಲ್ಲಿ ರುದ್ರಾಕ್ಷಿಯ ಸರಗಳು ಅಳೆದಾಡುತ್ತಿದ್ದವು; ಅವನ ಸರ್ವಾಂಗದಲ್ಲಿ ಭಸ್ಮವು ಪರಿಶೋಭಿಸುತ್ತಿತ್ತು; ಆತನು ಕಾಲಲ್ಲಿ ಪಾದುಕೆಗಳನ್ನು ಮೆಟ್ಟಿದ್ದು, ಮೈಮೇಲೆ ಕೆಂಪು ಬಣ್ಣದ ಶಾಲನ್ನು ಹೊತ್ತಿದ್ದನು. ಅವನ ದೇಹವು ಭವ್ಯವಾಗಿದ್ದರೂ ಸ್ವಲ್ಪಕೃಶವಾಗಿದ್ದರಿಂದ ಅವನ ತಪಸ್ವಿತೆಯನ್ನು ವ್ಯಕ್ತಗೊಳಿಸುತ್ತಿತ್ತು; ಅವನ ಕೈಯೊಳಗಿನ ಜಪಮಾಲಿಕೆಯಿಂದಲೂ, ಉದ್ದವಾದ ಗಡ್ಡಗಳಿಂದಲೂ ಆತನ ಸಾಧುತ್ವಕ್ಕೆ ಕಳೆಯೇರಿದಂತಾಗಿತ್ತು;

ಈಪ್ರಕಾರ ಸಾಧುವೇಷದ ತ್ರ್ಯಂಬಕಶಾಸ್ತ್ರಿಯನ್ನು ನೋಡಿ ಭಾವೂಸಾಹೇಬನು ಕುಳಿತಸ್ಥಳದಿಂದೆದ್ದು ಆತನನ್ನು ನಮಸ್ಕರಿಸಿದನು: ಆಗ ಶಾಸ್ತ್ರಿಯು ಭಾವೂ

ಸಾಹೇಬನಿಗೆ ತಿರುಗಿ ನಮಸ್ಕಾರಮಾಡಿ 'ವಿಜಯೀಭವ' ಎಂದು ಆಶೀರ್ವದಿಸುತ್ತ ಆತನು ತೋರಿಸಿದ ಆಸನದ ಮೇಲೆ ಕುಳಿತುಕೊಂಡನು. ಬಳಿಕ ಭಾವೂಸಾಹೇಬನೂ ಕುಳಿತನು; ಅನಂತರ ಶಾಸ್ತ್ರಿಯ ಶಿಷ್ಯನು ಒಂದು ತಾಟಿನಲ್ಲಿ ಹಾಕಿತಂದಿದ್ದ ಪ್ರಸಾದವನ್ನು ಅವನ ಮುಂದಿಟ್ಟು ದೂರ ಸರಿದನು; ಅದರಲ್ಲಿ ಬಾದಾಮು-ಕಲ್ಲು ಸಕ್ಕರಿ, ಕೊಬ್ಬರಿಯ ಚೂರುಗಳು ಇವೇ ಮೊದಲಾದ ಪದಾರ್ಥಗಳಿದ್ದು ಒಂದು ಒಣಗಿದ ಟೆಂಗಿನಕಾಯಿಯೂ ಇತ್ತು; ಆಗ ಶಾಸ್ತ್ರಿಯು ಆ ತಾಟನ್ನು ಭಾವೂಸಾಹೇಬನ ಮುಂದಿಟ್ಟು ಆತನ ಕೈಯಲ್ಲಿ ಭೈರೋಜಿಯ ಅಂಗಾರವನ್ನು ಹಾಕಿದನು; ಆ ಅಂಗಾರವು ಕಪ್ಪುವರ್ಣದಿದ್ದು ಅತ್ಯಂತ ಸುವಾಸಿಕವಾಗಿತ್ತು; ಅದನ್ನು ಭಾವೂಸಾಹೇಬನು ಹಣೆಗೆ ಹಚ್ಚಿಕೊಂಡು ಶಾಸ್ತ್ರಿಯು ಕೊಟ್ಟ ಪ್ರಸಾದವನ್ನು ಒಳ್ಳೇ ಆದರದಿಂದ ಸ್ವೀಕರಿಸಿದನು; ಬಳಿಕ ಶಾಸ್ತ್ರಿಯು ಭಾವೂಸಾಹೇಬನ ಕುಶಲವನ್ನು ವಿಚಾರಿಸಿ—"ಸರಕಾರ, ಮಹಾರಾಜ, ಭೈರೋಜಿಯು ಪೇಶ್ವೆಯಿಯ ಅಖಂಡ ಕಲ್ಯಾಣವನ್ನು ಮಾಡುವನು; ನಾನು ಪೇಶ್ವೆಯಿಯ ಕಲ್ಯಾಣಾರ್ಥವಾಗಿ ಭೈರೋಜಿಯ ಒಳಿಯಲ್ಲಿ ಹಗಲಿರಳೂ ಪ್ರಾರ್ಥಿಸುತಿರುವೆನು; ತಮ್ಮಂಥ ಧಾರ್ಮಿಕಪುರುಷರು ಮರಾಟಸಾಮ್ರಾಜ್ಯದ ಸೂತ್ರಧಾರಿಗಳಾದ್ದರಿಂದ ಆ ಸಾಮ್ರಾಜ್ಯದ ಹೆಚ್ಚಳವು ನಿಶ್ಚಯವಾಗಿ ಆಗುವದು" ಎಂದು ಅವನನ್ನು ಸ್ತುತಿಮಾಡುತ್ತಿರಲು, ಜಾಸೂದನು ಬಂದು ಭಾವೂಸಾಹೇಬನ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟನು; ಆ ಪತ್ರವನ್ನು ನೋಡುತ್ತ ಭಾವೂಸಾಹೇಬನು ಶಾಸ್ತ್ರಿಯನ್ನು ಕುರಿತು—"ಶಾಸ್ತ್ರಿಗಳೇ, ನೀವು ಜ್ಯೋತಿಷವನ್ನು ಬಲ್ಲಿರಷ್ಟೇ; ಆದರೆ ಈ ಪತ್ರದಲ್ಲಿ ಏನು ಬರೆದದೆ ಎಂಬದನ್ನು ಹೇಳಬೇಕು" ಎಂದು ನುಡಿದು, ಪತ್ರವನ್ನು ಮನಸ್ಸಿನಲ್ಲಿ ಓದಹತ್ತಿದನು; ಶಾಸ್ತ್ರಿಯು ಬಹು ಧೂರ್ತನಿದ್ದುದರಿಂದ ಅವನು ಅನಾಯಾಸವಾಗಿ ಒದಗಿರುವ ಈ ಪರೀಕ್ಷೆಯ ಸಮಯದ ಲಾಭವನ್ನು ಪಡೆಯಲಿಚ್ಛಿಸಿ ಶಿಷ್ಯನಿಂದ ಕವಡಿಗಳನ್ನು ಇಸಗೊಂಡು ಅವನ್ನು ಒಂದು ಕಾಗದದ ಮೇಲೆ ಮೂರು-ನಾಲ್ಕು ಸಾರೆ ಹಾಕಿ ನೋಡಿ ಬಳಿಕ ಬಾಯಲ್ಲಿ ಏನೇನೋ ಗುಣಗುಟ್ಟುತ್ತ ಬೆರಳುಗಳನ್ನು ಎಣಿಸಿ ಆ ಪ್ರಶ್ನೆಯ ಉತ್ತರವನ್ನು ತೆಗೆದನು; ಶಾಸ್ತ್ರಿಯು ಸುಮ್ಮನಾದದ್ದನು ನೋಡಿ ಭಾವೂಸಾಹೇಬನು ಪತ್ರಓದುವದನ್ನು ನಿಲ್ಲಿಸಿ ಶಾಸ್ತ್ರಿಯ ಮೋರೆಯನ್ನು ನೋಡಿದನು; ಆ ಕೂಡಲೆ ಶಾಸ್ತ್ರಿಯು ವಿನಯದಿಂದ—"ಮಹಾರಾಜ, ನಿಮಗೆ ಈ ಪತ್ರದಿಂದ ಆನಂದವಾಗುವದಿಲ್ಲ; ಇದರಲಿ ನಿಮ್ಮ ವಿರೋಧಿ ಮನುಷ್ಯನ ಸಂಗತಿಯು ಬರೆದಿರುತ್ತದೆ" ಎಂದು ನುಡಿದು ಸುಮ್ಮನಾದನು; ಬಳಿಕ ಭಾವೂಸಾಹೇಬನು ಪತ್ರವನ್ನು ಪೂರ್ಣವಾಗಿ ಓದಿನೋಡಿ—ಶಾಸ್ತ್ರಿಗಳೇ, ನಿಮ್ಮ ಜ್ಯೋತಿಷಜ್ಞಾನವು

ಅಗಾಧವಾಗಿರುವದು; ನೀವು ಹೇಳಿದ್ದು ಸತ್ಯವಾಯಿತು; ಎಂದು ನುಡಿದು ಒಂದು ಬೆಳ್ಳಿಯ ತಾಟನ್ನು ತರಿಸಿ, ಅದರಲ್ಲಿ ಕೆಲವು ರೂಪಾಯಿಗಳನ್ನಿಟ್ಟು ಅದನ್ನು ಶಾಸ್ತ್ರಿಗಳವರಿಗೆ ಸಮರ್ಪಿಸಿದನು; ಶಾಸ್ತ್ರಿಯು ಆ ಬಹುಮಾನವನ್ನು ಸ್ವೀಕರಿಸಿ ಗುಡಿಗೆ ಹೊರಡಲುದ್ಯುಕ್ತನಾಗಲು, ಭಾವೂಸಾಹೇಬನು ಅಂಧಶ್ರದ್ಧೆಯಿಂದ— ಶಾಸ್ತ್ರಿಗಳೇ, ನಿಮ್ಮ ಯೋಗ್ಯತೆಯು ಘನವಾದದ್ದಿರುವದು; ನಿಮ್ಮನ್ನು ನಾನು ಇಂದಿನವರೆಗೆ ಕಾಣದೆ ಇದ್ದದ್ದಕ್ಕಾಗಿ ನನ್ನನ್ನು ಕ್ಷಮಿಸಿ, ತಾವು ಮರಾಟರ ಅಭ್ಯುದಯಕ್ಕಾಗಿ ಅನುಷ್ಠಾನವನ್ನು ಮಾಡಬೇಕು, ಎಂದು ವಿನಯಪೂರ್ವಕವಾಗಿಕೇಳಿಕೊಂಡನು; ಪ್ರಥಮ ಭೆಟ್ಟಿಯಲ್ಲಿಯೇ ತನ್ನ ಮೇಲೆ ಭಾವೂಸಾಹೇಬನ ಭಕ್ತಿಯು ಈಪರಿಯಾಗಿ ಕುಳಿತದ್ದಕ್ಕೆ ಶಾಸ್ತ್ರಿಯು ಮನಸ್ಸಿನಲ್ಲಿಯೇ ನಕ್ಕು ತನ್ನ ಕೆಲಸವು ಸಾಧಿಸಿತೆಂದು ಹಿಗ್ಗಿ—"ಸರಕಾರ! ಪೇಶ್ವೆಯವರ ಅಭೀಷ್ಟಚಿಂತನವೇ ನನಗೆ ಅತ್ಯಂತ ಇಷ್ಟವಾಗಿರುವದರಿಂದ ನಾನು ಅನುಷ್ಠಾನವನ್ನು ಅವಶ್ಯವಾಗಿ ಮಾಡುವೆನು" ಎಂದು ನುಡಿದು, ಭಾವೂಸಾಹೇಬನ ಪ್ರಸನ್ನತೆಯಿಂದ ಸಂತುಷ್ಟನಾಗಿ ಆತನು ಅಲ್ಲಿಂದ ಹೊರಟು ಹೋದನು.

---

### ಐದನೆಯ ಪ್ರಕರಣ.

## ಮಹಮ್ಮದಶಹನು ಮಂಗನಾದನು.



ಒಳಸ್ಥಿತಿಯು ತಿಳಿಯದೆ ಬರಿಯ ವೇಷದ ಮೇಲಿಂದಾಗಲಿ ಇಲ್ಲವೆ ಮಾತಿನಮೇಲಿಂದಾಗಲಿ ಒಬ್ಬರಲ್ಲಿ ಕುಳಿತ ಭಕ್ತಿಯು ಬಹಳ ಹೊತ್ತು ನಿಲ್ಲಲಾರದು! ಅವರ ವಿಷಯವಾಗಿ ಸ್ವಲ್ಪ ಸಂಶಯವು ಬಂದರೆ ಸಾಕು, ಭಕ್ತಿಯು ಅಳಿದು ಹೋಗುವದಲ್ಲದೆ ಅವರ ವಿಷಯವಾಗಿ ದ್ವೇಷಭಾವವು ಉತ್ಪನ್ನವಾಗುವದು; ಅದರಂತೆ ತ್ರ್ಯಂಬಿಕ ಶಾಸ್ತ್ರಿಯ ವಿಷಯವಾಗಿ ಭಾವೂಸಾಹೇಬನ ಸ್ಥಿತಿಯಾದರೂ ಆಯಿತು; ಪೇಶ್ವೆಯವರಲ್ಲಿ ಭಾವೂಸಾಹೇಬನಂಥ ಚತುರ ಮುತ್ಸದ್ದಿಯು ಯಾರೂ ಹುಟ್ಟಲಿಲ್ಲವೆಂದು ಹೇಳಬಹುದು; ಆತನು ಬುದ್ಧಿಶಾಲಿಯಿದ್ದಷ್ಟು ಚತುರನೂ, ಚತುರನಿದ್ದಷ್ಟು ಶೂರನೂ, ಶೂರನಿದ್ದಷ್ಟು ಸಾಹಸಿಯೂ ಆಗಿದ್ದನು; ಆತನು ಪ್ರತಿಯೊಂದು ಸಂಗತಿಯನ್ನು ಬಹು ಸೂಕ್ಷ್ಮವಾಗಿ ಬಹು ಎಚ್ಚರಿಕೆಯಿಂದ ಪರೀಕ್ಷಿ

ಸುತ್ತಿದ್ದನು; ಆತನ ಆ ಸೂಕ್ಷ್ಮ ಪರೀಕ್ಷೆಯಲ್ಲಿ ಕಪಟಿಗಳು ಒರೆಗೆ ಇಳಿಯುತ್ತಿದ್ದಿಲ್ಲ; ತ್ರ್ಯಂಬಕ ಶಾಸ್ತ್ರಿಯು ಬಹಿರಾಚರಣೆಯಿಂದ ಮೋಸಹೋಗಿದ್ದ ಭಾವೂಸಾಹೇಬನು ತಟ್ಟನೆ ಅವನ ರಹಸ್ಯವನ್ನು ಕಂಡುಹಿಡಿದು ತನ್ನಿಂದಾಗುತ್ತಿದ್ದ ಪ್ರಮಾದವನ್ನು ಬೇಗನೆ ಸುಧಾರಿಸಿಕೊಂಡನು. ಶಾಸ್ತ್ರಿಯು ನಿಜವಾದ ಸಾಧುವಾಗಿರದೆ ಮುಸಲ್ಮಾನರ ಹಿತಕ್ಕಾಗಿ ಯತ್ನಿಸುವ ಒಬ್ಬ ಕಪಟ ಸಾಧುವೆಂದು ಅವನ ನಂಬಿಕೆಯಾಯಿತು; ಆಗ ಆತನು ತ್ರ್ಯಂಬಕ ಶಾಸ್ತ್ರಿಯನ್ನೂ ಅವನ ಶಿಷ್ಯನಾದ ಮಹಮ್ಮದಶಹನನ್ನೂ ಸ್ವತಂತ್ರವಾಗಿ ಇರಗೊಡದೆ, ಅವರನ್ನು ದಂಡಿನ ಸಂಗಡ ಕರಕೊಂಡು ಹೋಗಬೇಕೆಂದು ನಿಶ್ಚಯಿಸಿದನು.

ಮಹಮ್ಮದಶಹನು ಫಕೀರವಂಶದವನು; ಅವನಿಗೆ ಭೇಲಶಾ ಪ್ರಾಂತದಲ್ಲಿ ಜಹಗೀರಿಯ ಕೆಲವು ಊರುಗಳಿದ್ದವು; ಅವನು ಮಹಮ್ಮದಾಬಾದದಲ್ಲಿರುತ್ತಿದ್ದನು; ಅವನಿಗೆ ನಬಾಬನೆಂದೂ ಒಮ್ಮೊಮ್ಮೆ ಅನ್ನುತ್ತಿದ್ದರು; ದಿಲ್ಲಿಯಲ್ಲಿಯ ದೊಡ್ಡ ದೊಡ್ಡ ಸರದಾರರೂ ಜಾಹಗೀರದಾರರೂ ಅವನಿಗೆ ಆಪ್ತರಾಗಿದ್ದರು; ಮುಸಲ್ಮಾನರೆಲ್ಲರು ಒಂದಾಗಿ ಹಿಂದುಗಳನ್ನು ಹಣಿಯಬೇಕೆನ್ನುವ ಜನರಲ್ಲಿ ಮಹಮ್ಮದಶಹನು ಒಬ್ಬನಾಗಿದ್ದನು; ಅವನು ಆ ಬಗ್ಗೆ ದಿಲ್ಲಿಯಲ್ಲಿದ್ದ ದೊಡ್ಡ ದೊಡ್ಡ ಮುಸಲ್ಮಾನ ಸರದಾರರೊಡನೆ ಪತ್ರವ್ಯವಹಾರಗಳನ್ನು ನಡಿಸುತ್ತಿದ್ದನು; ಅವನು ಭೇಲಶಾದಲ್ಲಿ ಭಾವೂಸಾಹೇಬನನ್ನು ಮೊದಲನೆಯಸಾರೆ ಕಂಡಾಗ ಅವನ ಚಾಣಾಕ್ಷತನವನ್ನು ಗೊತ್ತುಹಿಡಿದು ಇನ್ನು ಇಲ್ಲಿ ನಮ್ಮ ಆಟವು ಸಾಗದೆಂದು ಆ ಮಹಮ್ಮದಶಹನು ತಿಳಿದಿದ್ದನು; ಅದಕ್ಕಾಗಿ ಅವನು ಹೊತ್ತುಸಾಧಿಸಿ ದಿಲ್ಲಿಯ ಕಡೆಗೆ ಪಲಾಯನ ಬೆಳಿಸಬೇಕೆಂದು ಹಂಚಿಕೆ ಹಾಕುತ್ತಿದ್ದನು. ಭಾವೂಸಾಹೇಬನು ಅತ್ಯಂತ ಕಾರ್ಯದಕ್ಷನಿದ್ದದರಿಂದ ಅವನು ಪ್ರತಿಯೊಂದು ಮುಕ್ಕಾಮಿನಲ್ಲಿ ಪೇಶ್ವಾಯಿಗೆ ಅನುಕೂಲರು ಯಾರು? ವಿರುದ್ಧಜನರು ಯಾರು? ಎಂಬದನ್ನು ಗೊತ್ತು ಹಚ್ಚಿ ಬಂಡುಗಾರ ಜನರನ್ನು ದಂಡಿಸಿ ಯೋಗ್ಯಬಂದೋಬಸ್ತನ್ನು ಮಾಡುತ್ತಿದ್ದನು; ಅದರಂತೆ ಆತನು ಸ್ವಭಾವಾದಿಗಳನ್ನು ಪರೀಕ್ಷಿಸುವದಕ್ಕಾಗಿ ಮಹಮದ್ದಶಹನಿಗೆ 'ಬೇರಛಾ' ಮುಕ್ಕಾಮಿನಲ್ಲಿ ಪುನಃ ಭೆಟ್ಟಿಯಾಗಲಿಕ್ಕೆ ಅಪ್ಪಣೆಮಾಡಿದ್ದನು;

ರಂಗೂಬಾಯಿಯು ಭೈರೋಜಿಯ ಗುಡಿಗೆ ಹೋದ ದಿವಸ ಮಹಮ್ಮದಶಹನು ಅಲ್ಲಿಗೆ ಬಂದಿದ್ದನು; ಆ ಸ್ತ್ರೀರತ್ನವನ್ನು ನೋಡಿ ಆತನಲ್ಲಿ ದುಷ್ಟಬುದ್ಧಿಯು ಉತ್ಪನ್ನವಾಯಿತು. ಹ್ಯಾಗಾದರೂ ಮಾಡಿ ಆಕೆಯನ್ನು ಅಪಹರಿಸುವ ಆತುರತೆಯು ಅವನಲ್ಲಿ ಹೆಚ್ಚಿತು; ಆ ದಿನ ರಾತ್ರಿಯಲ್ಲಿ ಅವನು ತ್ರ್ಯಂಬಕ ಶಾಸ್ತ್ರಿಯ ಮುಂದೆ ಆ ವಿಷಯವನ್ನು ತೆಗೆದನು. ಜಾತ್ಯಾನೀಚನಾಗಿದ್ದ ತ್ರ್ಯಂಬಕಶಾಸ್ತ್ರಿಯು ಆ ಕೆಲ

ಸಕ್ಕೆ ಹೇಸಲಿಲ್ಲ. ಅವನು ಮಹಮ್ಮದಶಹನ ಇಚ್ಛಾಪೂರ್ತಿಗಾಗಿ ಒಂದೆರಡ ಹಂಚಿಕೆಗಳನ್ನು ಹೇಳಿ, ಬ್ರಾಹ್ಮಣರಲ್ಲಿ ಅತ್ಯುತ್ತಮ ಜನರು ಹುಟ್ಟುವಂತೆ ಅತಿ ನೀಚಜನರಾದರೂ ಹುಟ್ಟುತ್ತಿರುವರೆಂಬದನ್ನು ಜಗತ್ತಿನ ಅನುಭವಕ್ಕೆ ತಂದುಕೊಟ್ಟನು; ಆ ನೀಚನು ಬುದ್ಧಿಸಫಲುವಾಗಿ ಜಾತಿ-ಕುಲ-ದೇಶ ಮೊದಲಾದವುಗಳನ್ನು ಕಟ್ಟಿ ಒಗೆಯಲಿಕ್ಕೆ ಸಿದ್ಧನಿದ್ದನು; ಮಹಮ್ಮದನು ತ್ರ್ಯಂಬಕ ಶಾಸ್ತ್ರಿಯ ಈ ಪರಮಾನುಗ್ರಹದಿಂದ ಪರಮಧನ್ಯನಾಗಿ ಅವನೊಡನೆ ಬೇರೆ ಹಲವು ಗುಪ್ತವಿಚಾರಗಳನ್ನು ಮಾಡಿದನು; ಭಾವೂಸಾಹೇಬನು ಒಳ್ಳೇಚತುರನಿದ್ದದರಿಂದ ಅವನ ಕೈಯಲ್ಲಿ ಸಿಗುವದು ಪ್ರಶಸ್ತವಾಗದೆ, ಎಲ್ಲಿಗಾದರೂ ತಪ್ಪಿಸಿಕೊಂಡುಹೋಗುವ ತನ್ನ ಆಲೋಚನೆಯನ್ನು ಮಹಮ್ಮದಶಹನು ಶಾಸ್ತ್ರಿಗೆ ಹೇಳಿದನು. ಶಾಸ್ತ್ರಿಯು ಅದಕ್ಕೆ ಒಪ್ಪಿಕೊಂಡು ತಾನು ಭಾವೂಸಾಹೇಬನ ಒಳಿಯಲ್ಲಿ ಅನುಷ್ಠಾನದ ನಿಮಿತ್ತದಿಂದ ಇದ್ದುಕೊಂಡು ಸಮಯಸಿಕ್ಕಾಗ ಮುಸಲ್ಮಾನರ ಹಿತವನ್ನು ಸಾಧಿಸುವದಕ್ಕೆ ಅಭಿವಚನ ಕೊಟ್ಟನು; ಬಳಿಕ ಅವರಿಬ್ಬರಲಿ ಹೀಗೆ ಹೀಗೆಯೇ ಕೆಲಸಮಾಡಬೇಕೆಂಬ ಕೆಲವು ಮಾತುಗಳು ನಡೆದು ಮಹಮ್ಮದಶಹನು ಮುಂದಿನ ಸಿದ್ಧತೆಗಾಗಿ ತನ್ನ ಊರ ಕಡೆಗೆ ತೆರಳಿದನು.

ಬೇರಭಾ ಪರಗಣೆಯು ಯಶವಂತರಾವ ಪವಾರನೆಂಬ ಶೂರಸರದಾರನಿಗೆ ಉಂಬಳಿಯಾಗಿತ್ತು; ಆತನು ಅತ್ಯಂತ ಸ್ವಾಮಿನಿಷ್ಠನಾಗಿದ್ದನು; ಆತನ ವಿಶೇಷ ಆಗ್ರಹದಿಂದ ಭಾವೂಸಾಹೇಬನು ಘೇಲರ ದಿಂದ ಹೊರಟು ಬೇರಭಾದಲ್ಲಿ ಬೀಡು ಬಿಟ್ಟನು;ಯಶವಂತರಾಯನು ಒಳ್ಳೇ ಆದರದಿಂದ ಭಾವೂಸಾಹೇಬನನ್ನು ಬರಮಾಡಿಕೊಂಡನು. ಆತನು ಒಂದುದಿನ ಸಂಜೆಯ ಮುಂದೆ ಭಾವೂಸಾಹೇಬನ ಭೆಟ್ಟಿಗಾಗಿ ಆತನ ಛಾವಣಿಯ ಕಡೆಗೆ ಹೊರಟನು; ಆಗ ಅವನು ಒಂದು ದೊಡ್ಡ ಕುದುರೆಯ ಮೇಲೆ ಕುಳಿತಿದ್ದನು; ಆತನ ಟೊಂಕದಲ್ಲಿ ಖಡ್ಗವು ಅಲೆದಾಡುತ್ತಿತ್ತು; ಒಬ್ಬ ಹುಜುರಾತಿಯವನೂ, ಒಬ್ಬ ಮೋತದ್ದಾರನೂ ಆ ಕುದುರೆಯ ಎಡಬಲಗಳಲ್ಲಿ ಅದರ ಕಡಿವಾಣದ ಹಗ್ಗವನ್ನು ಹಿಡಿದು ಮೆಲ್ಲಮೆಲ್ಲನೆ ಸಾಗಿದ್ದರು; ಬೇರಭಾ ಪರಗಣೆಯಲ್ಲಿಯ ಮುಖ್ಯ ಜಮಿನದಾರನಾದ ಹಿಮ್ಮತಸಿಂಗನೆಂಬವನು ತನ್ನ ಇಬ್ಬರು ಸಂಗಡಿಗರನ್ನು ಕರಕೊಂಡು ಆ ಕುದುರೆಯನ್ನು ಹಿಂಬಾಲಿಸಿ ನಡೆದಿದ್ದನು; ಯಶವಂತರಾಯನು ತೇಜಸ್ವಿಯಾಗಿದ್ದನು; ಆತನ ದರ್ಪವು ಆ ಪ್ರಾಂತದಲ್ಲಿ ವಿಶೇಷವಾಗಿತ್ತು; ಆತನು ಶರೀರದಿಂದ ಭವ್ಯಪುರುಷನಾಗಿದ್ದನು; ಆತನ ಕಣ್ಣುಗಳು ತೀಕ್ಷ್ಣವಾಗಿದ್ದು ತೇಜೋವಿಶೇಷದಿಂದ ಒಪ್ಪುತ್ತಿದ್ದವು.

ಯಶವಂತರಾಯನ ಕುದುರೆಯು ಛಾವಣಿಯ ಸಮೀಪಕ್ಕೆ ಬರಲು, ಸೈನಿಕ

ರೆಲ್ಲರೂ ಆತನಿಗೆ ಮುಜುರೆಗಳನ್ನು ಮಾಡಿದರು; ಪೇಶ್ವೆಯವರ ಹುಜುರಾತಿಯವರು ಸಹ ಅವನಿಗೆ ಅಂಜಿನಡೆಯುತ್ತಿದ್ದರು; ಆತನಿಗೆ ಅಪಮಾನವು ಎಂದೂ ಸಹನವಾಗುತ್ತಿದ್ದಿಲ್ಲ; ಆತನು ಕುದುರೆಯ ಮೇಲೆ ಕುಳಿತುಕೊಂಡೇ ಪೇಶ್ವೆಯ ಪಟಾಂಗಣವನ್ನು ಪ್ರವೇಶಿಸಿದನು; ಭಾವೂಸಾಹೇಬನು ವ್ಯವಸ್ಥೆಯ ಪ್ರಿಯನಾದ್ದರಿಂದ ಆತನ ಛಾವಣಿಯ ರಚನೆಯು ಮನೋಹರವಾಗಿರುತ್ತಿತ್ತು; ಯಶವಂತರಾಯನು ಕನಾತುಗಳಿಂದ ಸುತ್ತುಗಟ್ಟಿದ ಒಂದು ಚೌಕಿನಲ್ಲಿ ಸೇರಿದ ಬಳಿಕ ಆತನಿಗೆ ಮತ್ತೊಂದು ಚೌಕುಹತ್ತಿತು; ಆ ಚೌಕಿನ ಹೆಬ್ಬಾಗಿಲದ ಬಳಿಯಲ್ಲಿಯೇ ಹುಜುರಾತಿಯವರ ರಾಹುಟಿಗಳು ಇದ್ದವು; ಒಬ್ಬ ಹುಜುರಾತಿಯವನು ಧಾವಿಸಿಹೋಗಿ ಭಾವೂಸಾಹೇಬನಿಗೆ ಯಶವಂತರಾಯನ ಆಗಮನವನ್ನು ತಿಳಿಸಿದನು; ಆಗ ಯಶವಂತರಾಯನು ಆ ಎರಡನೇ ಚೌಕಿನ ಬಾಗಿಲ ಬಳಿಯಲ್ಲಿ ಕುದುರೆಯಿಂದಿಳಿದು ಎದುರಿಗೆ ಕಾಣುವ ಭಾವೂಸಾಹೇಬನ ಡೇರೆಯ ಕಡೆಗೆ ನಟ್ಟಗೆ ಸಾಗಿದನು; ಹಿಮ್ಮತಸಿಂಗನು ತನ್ನ ಸಹೋದರರೊಡನೆ ಕುದುರೆಯ ಬಳಿಯಲ್ಲಿಯೇ ಉಳಿದನು; ಚೌಕಿನ ಮಧ್ಯದಲ್ಲಿ ಭಾವೂಸಾಹೇಬನ ಡೇರೆಯು ಬಂಗಾರದ ಕಳಸದಿಂದ ಒಪ್ಪುತ್ತಿತ್ತು; ಆ ಡೇರೆಯ ಬಳಿಯಲ್ಲಿಯೇ ಮತ್ತೊಂದು ಡೇರೆಯು ಇದ್ದು ಅದರಲ್ಲಿ ವಿಶ್ವಾಸರಾಯನು ಇರುತ್ತಿದ್ದನು; ವಿಶ್ವಾಸರಾಯನ ಡೇರೆಗೂ ಬಂಗಾರದ ಕಳಸವಿತ್ತು; ಅವೆರಡು ಡೇರೆಗಳ ಹಿಂಭಾಗದಲ್ಲಿ ಅಡಿಗೆ, ಊಟಗಳ, ಸ್ನಾನದ,ಹೆಂಗಸರು ಇರುವ ಬೇರೆ ಬೇರೆ ನಾಲ್ಕಾರು ಡೇರೆಗಳಿದ್ದವು; ಯಶವಂತರಾಯನು ಹುಜುರಾತಿಯವನ ಸೂಚನೆಯಂತೆ ಭಾವೂಸಾಹೇಬನ ಡೇರೆಯನ್ನು ಪ್ರವೇಶಿಸಿದನು; ಬಳಿಕ ಸ್ವಲ್ಪ ಹೊತ್ತಿನ ಮೇಲೆ ಭಾವೂಸಾಹೇಬನು ಯಶವಂತರಾಯನ ಸಂಗಡಬಂದಿದ್ದ ಆ ಮೂವರು ಜಮೀನದಾರರನ್ನು ಒಳಗೆ ಕರೆಯಿಸಿಕೊಂಡನು; ಆಗ ಅವರು ತಮ್ಮ ಬಲಗೈಗಳ ಮೇಲೆ ಮೋಹರುಗಳನ್ನು ಇಟ್ಟುಕೊಂಡು ಭಾವೂಸಾಹೇಬನಿಗೆ ಕಾಣಿಕೆಯನ್ನು ಒಪ್ಪಿಸಿದರು; ಕೂಡಲೆ ಅವುಗಳನ್ನು ಹುಜುರಾತಿಯವರು ತಕ್ಕೊಂಡು ಖಜೀನದಾರನ ಸ್ವಾಧೀನಪಡಿಸಿದರು; ಒಂದೆರಡು ಯೋಗಕ್ಷೇಮದ ಮಾತುಗಳಾದ ಬಳಿಕ ಭಾವೂಸಾಹೇಬನು ಆ ಜಮೀನದಾರರಿಗೆ ಪಾಗೋಟಿಗಳನ್ನು ಉಡುಗರೆಯಾಗಿ ಕೊಟ್ಟನು; ಅವರು ಆ ಉಡುಗರೆಯನ್ನು ಪ್ರೇಮದಿಂದ ಸ್ವೀಕರಿಸಿ, ಅಪ್ಪಣೆತಕ್ಕೊಂಡು ಹೊರಬಿದ್ದು ಬಂದು ಮೊದಲಿನ ಸ್ಥಳದಲ್ಲಿ ನಿಂತುಕೊಂಡರು. ಅತ್ತ ಡೇರೆಯಲ್ಲಿ ಭಾವೂಸಾಹೇಬನೂ, ಯಶವಂತರಾಯನೂ ಬಹಳ ಹೊತ್ತು ಮಾತಾಡುತ್ತ ಕುಳಿತುಕೊಂಡರು.

ಇತ್ತ ಮಹಮ್ಮದಾಬಾದದಲ್ಲಿ ಮಹಮ್ಮದಶಹನು ಭಾವೂಸಾಹೇಬನ ಭೆಟ್ಟಿ

ಗೆ ಹೊರಡುವ ಸಿದ್ಧತೆಯನ್ನು ನಡಿಸಿದ್ದನು. ಆತನು ರಂಗೂಬಾಯಿಯನ್ನು ಅಪ ಹರಿಸುವ ಯುಕ್ತಿಯನ್ನು ಸಜ್ಜುಗೊಳಿಸಿ ತನ್ನ ಹೆಂಡಿರುಮಕ್ಕಳನ್ನು ಬೇರೊಂದು ಭದ್ರವಾದ ಸ್ಥಳಕ್ಕೆ ಕಳುಹಿಸಿ ತಾನು ಒಂದು ಕುದುರೆಯನ್ನೇರಿ ಭಾವೂಸಾಹೇಬನ ಕಡೆಗೆ ಹೊರಟನು. ಆಗ ಅವನ ಸಂಗಡ ಅವನ ಪರಮಮಿತ್ರರಾದ ರೂಪಜೀ ಆ ಹೀರ, ಹಾಗು ಮಾನಸಿಂಗ ಠಾಕೂರ ಎಂಬ ಇಬ್ಬರು ಪ್ರತಿಷ್ಠಿತ ಜಮೀನದಾರರು ಒಂದೊಂದು ಕುದುರೆಯುಮೇಲೆ ಕುಳಿತು ಸಾಗಿದ್ದರು ಇವರ ಹೊರತು ಮಹ ಮ್ಮದಶಹಾ ನಬಾಬನಸಂಗಡ ಹುಜುರಾತಿಯು ಜನರಾಗಲಿ, ಮೋತದ್ದಾರರಾಗಲಿ ಯಾರೂ ಇದ್ದಿಲ್ಲ. ಅವನು ಅವರನ್ನು ಬೇಕಂತಲೇ ಬಿಟ್ಟು ಬಿಟ್ಟಿದ್ದನು; ತಾನು ಭಾವೂಸಾಹೇಬನ ಭೆಟ್ಟಿಗೆ ಹೋದಾಗ ಅವನು ಏನೋ ಯಾಕೆ ಹೇಳಲೊಲ್ಲನು; ಅವನ ಮಾತನ್ನು ಲೆಕ್ಕಿಸದೆ ತಾನು ಗೊತ್ತುಪಡಿಸಿದಂತೆ ಓಡಿಹೋಗಲಿಕ್ಕೆ ಅನುಕೂ ಲವಾಗಬೇಕೆಂದು ಹಾಗೆ ಮಾಡಿದ್ದನು; ಭಾವೂಸಾಹೇಬನ ಭೆಟ್ಟಿಗಾಗಿ ಒಳಗೆ ಹೋಗುವಾಗ ಅಲ್ಲಿಯೇ ಯಾರಕೈಯಲ್ಲಾದರೂ ಕುದುರೆಯನ್ನು ಕೊಟ್ಟು ಹೋದ ರಾಯಿತೆಂದು ಆ ಸೊಕ್ಕಿನ ನಬಾಬನು ಗ್ರಹಿಸಿದನು.

ಮೇಲೆ ಹೇಳಿದಂತೆ ಯಶವಂತರಾಯನು ಭಾವೂಸಾಹೇಬನ ಸಂಗಡ ಮಾತಾ ಡುತ್ತಕುಳಿತಾಗ ಮಹಮ್ಮದಶಹಾ ನಬಾಬನು ಅಲ್ಲಿಗೆ ಬಂದನು; ಅವನು ಈ ಮೊ ದಲೇ ಒಂದೆರಡುಸಾರೆ ಭಾವೂಸಾಹೇಬನ ಭೆಟ್ಟಿಗೆ ಬಂದದ್ದರಿಂದ ಕಾವಲುಗಾರರು ಅವನನ್ನು ತಡೆಯಲಿಲ್ಲ. ಆತನು ತನ್ನ ಸ್ನೇಹಿತರೊಡನೆ ನೆಟ್ಟಗೆ ಎರಡನೇ ಚೌಕಿನ ಬಳಿಗೆ ಬಂದನು; ಅಲ್ಲಿ ಮೂವರೂ ಕುದುರೆಯಿಂದ ಇಳಿದರು. ಆಗ ನಬಾಬನು ಕುದುರೆಯನ್ನು ಯಾರ ಕೈಯಲ್ಲಿ ಕೊಡಬೇಕೆಂದು ಯೋಚಿಸುತ್ತಿರಲು, ಅಲ್ಲಿಯೇ ಬಳಿಯಲ್ಲಿ ಹುದುಗಿಕೊಂಡು ನಿಂತಿದ್ದ ಹಿಮ್ಮತಸಿಂಗನು ಅವನ ದೃಷ್ಟಿಗೆ ಬಿದ್ದನು; ಅವನು ಯಾರೆಂಬದನ್ನು ಸಹ ವಿಚಾರಿಸದೆ ನಬಾಬನು ಉನ್ಮತ್ತತನದಿಂದ—"ಎಲೇ ಹಳ್ಳಿಯ ಕೆಂಚಾ ಇತ್ತಬಾ" ಎಂದು ಹಿಮ್ಮತಸಿಂಗನನ್ನು ಒದರಿದನು. ಹಿಮ್ಮ ತಸಿಂಗನು ಅವನ ನಬಾಬೀ ಪೋಷಾಕನ್ನು ನೋಡಿ ಅಂಜಿಕೊಂಡು ಓಡಿಹೋಗಿ ಅವನ ಕುದುರೆಯನ್ನು ಹಿಡಕೊಂಡು ನಿಂತನು; ಅವನ ಸಂಗಡಿರು ರೂಪಜಿಯು ಹಾಗೂ ಮಾನಸಿಂಗ ಇವರ ಕುದುರೆಗಳನ್ನು ಹಿಡಿದುಕೊಂಡರು. ಬಳಿಕ ನಬಾಬನು ಅಲ್ಲಿದ್ದ ಒಬ್ಬ ಹುಜುರಾತಿಯುವನನ್ನು ಕರೆದು ಅವನಿಗೆ ತನ್ನ ಹೆಸರನ್ನು ತಿಳಿಸಿ ತಾನು ಬಂದ ಸಂಗತಿಯನ್ನು ಭಾವೂಸಾಹೇಬನಿಗೆ ಹೇಳಿಕಳಿಸಿದನು; ಹಾಗೂ ತಾನು ಅವನ ಹಿಂದಿಂದೆ ನಡೆದನು; ಆಗ ಭಾವೂಸಾಹೇಬನು ನಬಾಬನು ಬಂದ ಸುದ್ದಿಯನ್ನು ತಿಳಿದು, ಯಶವಂತರಾಯನಿಗೆ ವೀಳ್ಯವನ್ನು ಕೊಟ್ಟು ಕಳು

ಹಿಸಿ, ಆ ನಬಾಬನನ್ನು ಒಳಗೆ ಬರಮಾಡಿಕೊಂಡನು.

ಯಶವಂತರಾಯನು ಹೊರಗೆ ಬಂದು ಹುಜುರಾತಿಯವನು ಮುಂದಿಟ್ಟ ಜೋಡುಗಳನ್ನು ಮೆಟ್ಟಿಕೊಂಡು ಚೌಕಿನ ಬಾಗಿಲ ಬಳಿಗೆ ಬಂದು ನೋಡುತ್ತಾನೆ, ತನ್ನ ಪ್ರತಿಷ್ಠಿತ ಜಮೀನದಾರರು ಕುದುರೆಗಳನ್ನು ಹಿಡಕೊಂಡು ನಿಂತಿರುತ್ತಾರೆ. ಅದನ್ನು ಕಂಡಕೂಡಲೆ ಆ ಮಾನೀಸ್ವಭಾವದ ಯಶವಂತರಾಯನ ಪಿತ್ತವು ತಲೆಗೇರಿತು; ಅವನು ಸಿಟ್ಟಿನಿಂದ ತಪ್ತನಾದನು; ಅವನಿಗೆ ಆ ಸಂಗತಿಯು ಅತ್ಯಂತ ಅಪಮಾನಕರವಾಗಿ ತೋರಿತು; "ನನ್ನ ಜಮೀನದಾರರೆಂದರೆ ಮೋತದ್ದಾರರಾದರಲ್ಲವೇ? ಶ್ರೀಮಂತ ಸರಕಾರದಿಂದ ಮಂಗೋಟಿಯ ಮರ್ಯಾದೆಯನ್ನು ಪಡೆದ ಈ ನಮ್ಮ ಜಮೀನದಾರರಿಗೆ ಇಂಥ ನೀಚ ಕೆಲಸವನ್ನು ಯಾರು ಹೇಳಿರಬಹುದು? ಎಂದು ನುಡಿಯುತ್ತ ಅವನು ಆ ಜಗ್ಗೆ ಅಲ್ಲಿದ್ದ ಹುಜುರಾತಿಯವನನ್ನು ವಿಚಾರಿಸಿದನು; ಒಬ್ಬ ಫಕೀರನು ಮತ್ತು ಒಬ್ಬ ಅಹೀರನು ಈ ಕೆಲಸವನ್ನು ಹೇಳಿದರು; ಎಂಬ ಸಂಗತಿಯು ತಿಳಿದ ಕೂಡಲೆ ಅವನ ಸರ್ವಾಂಗವು ತಪ್ತವಾಯಿತು; ಅವನು ಆ ಫಕೀರ ಹಾಗೂ ಅಹೀರರ ಮೇಲೆ ಹಲ್ಲುಕಡಿಯುತ್ತ ಮೊದಲು ತನ್ನ ಜಮೀನದಾರರಿಗೆ ಮನಸಿಗೆ ಬಂದಹಾಗೆ ಬೈದನು; ತಮ್ಮ ಯೋಗ್ಯತೆಯನ್ನು ಮರೆತು ಇಂಥ ಕ್ಷುಲ್ಲಕ ಕೆಲಸವನ್ನು ಕೈಕೊಂಡದ್ದಕ್ಕೆ ಆ ಜಮೀನದಾರರಿಗೂ ಪಶ್ಚಾತ್ತಾಪವಾಯಿತು; ಮಂದಿಯ ಮರ್ಯಾದೆಯನ್ನು ತಿಳಿಯದೆ ಸಿಕ್ಕ ಸಿಕ್ಕವರಿಗೆ ನೀಚ ಕೆಲಸಗಳನ್ನು ಹೇಳಿದ ಆ ಸೊಕ್ಕಿನ ನಬಾಬನ ವಿಷಯವಾಗಿ ಯಶವಂತರಾಯನ ಕ್ರೋಧವು ಅನಿವಾರವಾಯಿತು; ಆಗ ಅವನು ಆ ಉನ್ಮತ್ತ ಫಕೀರನ ಸೊಕ್ಕನ್ನು ಇಳಿಸುವದಕ್ಕಾಗಿ, ತನ್ನ ಜಮೀನದಾರರನ್ನು ಕುರಿತು ನುಡಿದನೇನಂದರೆ—"ಹಿಮ್ಮತಸಿಂಗ, ಆದದ್ದು ಆಗಿಹೋಯಿತು; ಇನ್ನು ಮುಂದೆ ಮಾತ್ರ ಬಹಳ ಎಚ್ಚರಿಕೆಯಿಂದ ನಡೆ; ನೀನು ದೊಡ್ಡ ಜಮೀನದಾರನಿರುತ್ತೀ; ನಿನಗೆ ಆ ಸೊಟ್ಟ ಫಕೀರನಗಿಂತ ಹೆಚ್ಚು ಮಾನ-ಮರ್ಯಾದೆಗಳು ಇರುತ್ತವ; ಇರಲಿ; ನೀವು ಈ ಕುದುರೆಗಳನ್ನು ಇಷ್ಟೊತ್ತಿನವರೆಗೆ ಹಿಡಕೊಂಡು ನಿಂತದ್ದಕ್ಕಾಗಿ ಇವುಗಳನ್ನು ನಿಮಗೆ ಉಚಿತವಾಗಿ ಕೊಟ್ಟುಬಿಟ್ಟಿರುತ್ತೇನೆ; ನೀವು ಮೂವರು ಇವನ್ನು ಹತ್ತಿಕೊಂಡು ನಿಮ್ಮ ಸ್ಥಳಕ್ಕೆ ಹೋಗಿರಿ; ಹಾದಿಯಲ್ಲಿ ಯಾರಾದರೂ ಕೇಳಿದರೆ ಇವನ್ನು ನಮಗೆ ಯಶವಂತರಾಯರು ಕೊಟ್ಟಿರುತ್ತಾರೆಂದು ಹೇಳಿರಿ; ಈ ಪವಾರ ಬಹದ್ದೂರರ ಪರಗಣೆಯಲ್ಲಿ ಮುಖ್ಯ ಜಮೀನದಾರರಾದ ನಿಮಗೆ ಇವು ಚೆನ್ನಾಗಿ ಶೋಭಿಸುತ್ತವೆ."

ಈ ಮೇರೆಗೆ ಯಶವಂತರಾಯನು ನುಡಿದ ಕೂಡಲೆ ಆ ಮೂವರು ಜಮೀನ

ದಾರರು ಚಟ್ಟನೆ ಆ ಕುದುರೆಗಳನ್ನೇರಿದರು; ಯಶವಂತರಾಯನ ದರ್ಪವನ್ನು ಬಲ್ಲವರಾದ ಅಲ್ಲಿಯ ಹುಜರಾತಿಯವರು ಒಂದು ತುಟಿಎರಡು ಮಾಡಲಿಲ್ಲ; ಆಗ ಯಶವಂತರಾಯನು ಮತ್ತೊಮ್ಮೆ ತನ್ನ ಜವಾನದಾರರನ್ನು ಕುರಿತು—"ಇನ್ನು ಬೇಗನೆ ಮನೆಗೆ ಹೋಗಿರಿ; ಆ ಉನ್ಮತ್ತ ಫಕೀರನು ಹೊರಗೆ ಬರುವಷ್ಟರಲ್ಲಿ ನೀವು ನಿಮ್ಮ ಸ್ಥಳವನ್ನು ಮುಟ್ಟಲಿಕ್ಕೆಬೇಕು" ಎಂದು ನುಡಿಯಲು, ಆ ಮೂವರು ಜವಾನದಾರರು ತಮ್ಮ ಕುದುರೆಗಳನ್ನು ಓಡಿಸಹತ್ತಿ ಹಾ ಹಾ ಅನ್ನುವಷ್ಟರಲ್ಲಿ ಆ ಛಾವಣಿಯಿಂದ ಬಹುದೂರ ಹೋದರು. ನಬಾಬನ ಉದ್ಧಟತನಕ್ಕೆ ಈ ಬಗೆಯ ಪ್ರಾಯಶ್ಚಿತ್ತವನ್ನು ಮಾಡಿದ ಬಳಿಕ ಯಶವಂತರಾಯನ ಸಿಟ್ಟು ಶಾಂತವಾಯಿತು. ಬಳಿಕ ಆತನು ತನ್ನ ಕುದುರೆಯನ್ನು ಹತ್ತಿಕೊಂಡು ತನ್ನ ಮನೆಗೆ ಹೊರಟು ಹೋದನು. ಈ ಅವಧಿಯಲ್ಲಿ ಭಾವೂಸಾಹೇಬ ಹಾಗು ನಬಾಬಸಾಹೇಬರನಡುವೆ ಎಷ್ಟೋಮಾತುಕಥೆಗಳಾದವು; ನಬಾಬಸಾಹೇಬನು ಸದ್ಯಕ್ಕೆ ಪೇಶವೆಯವರ ಮುಲುಖದೊಳಗಿನ ಜಾಹಗೀರದಾರನಿದ್ದದರಿಂದ ಅವನು ಪೇಶವೆ ಸರಕಾರಕ್ಕೆ ಸಹಾಯ ಮಾಡಬೇಕೆಂತಲೂ, ಹಿಂದುಸ್ಥಾನದಲ್ಲಿಯ ಎಲ್ಲ ಮುಸಲ್ಮಾನರು ಅಬ್ದಾಲಿಯನ್ನು ತಿರಸ್ಕರಿಸಬೇಕೆಂತಲೂ, ದಿಲ್ಲಿಯ ಬಾದಶಹಿಯನ್ನು ಅಫಗಾನರ ಕೈಯೊಳಗಿಂದ ಮುಕ್ತವಾಗ ಮಾಡಲಿಕ್ಕೆ ಎಲ್ಲ ಮುಸಲ್ಮಾನರು ಮರಾಟರಿಗೆ ಅನುಕೂಲರಾಗಬೇಕೆಂತಲೂ ಇವೇ ಮೊದಲಾದವುಗಳನ್ನು ಕುರಿತು ಭಾವೂಸಾಹೇಬನು ನಬಾಬನಿಗೆ ಹೇಳಿದನು. ಅದರಂತೆ ಆಹೀರ ಜವಾನದಾರರನ್ನು ಕುರಿತು—ಸೈನ್ಯದ ಆಹಾರಾದಿಸಾಮುಗ್ರಿಗಳನ್ನೂ ಸುದ್ದಿಗಾರರಾದ ಚಾರರನ್ನೂ ಒದಗಿಸಿಕೊಟ್ಟುಸೈನ್ಯಕ್ಕೆ ಹಲವು ಬಗೆಯಾಗಿ ನೆರವಾಗಬೇಕೆಂದು ಹೇಳಿದನು; ಮತ್ತು ಸೈನ್ಯವು ಆ ಪ್ರಾಂತವನ್ನು ಬಿಟ್ಟುಹೋಗುವವರೆಗೆ ಆ ಮೂವರಿಗೂ ಸಂಗಡ ಇರಲಿಕ್ಕೆ ಅಪ್ಪಣೆಮಾಡಿದನು. ಈ ರೀತಿಯಾಗಿ ಅನೇಕ ತರದ ಭಾಷಣಗಳಾದ ಮೇಲೆ ಭಾವೂಸಾಹೇಬನು ಆ ಮೂವರಿಗೂ ವೀಳ್ಯವನ್ನು ಕೊಟ್ಟು ಹೋಗಲಪ್ಪಣೆ ಕೊಟ್ಟನು. ನಬಾಬಸಾಹೇಬನಿಗೆ ಭಾವೂಸಾಹೇಬನ ಯಾವ ಮಾತಿನ ಕಡೆಗೂ ಲಕ್ಷವಿದ್ದಿಲ್ಲ; ಅವನು ಇಲ್ಲಿಂದ ಯಾವಾಗ ಹೊರಬಿದ್ದೇನೆಂದು ಟಕ್ಕುಹಿಡಿದು ಕುಳಿತಿದ್ದನು. ನಿರೂಪಸಿಕ್ಕದ್ದೊಂದೇ ತಡ; ಅವನು ತಟ್ಟನೆ ಅಲ್ಲಿಂದ ಹೊರಟು ತನ್ನ ಕುದುರೆಯಿದ್ದಲ್ಲಿಗೆ ಬಂದನು. ಆದರೆ ಅಲ್ಲಿ ಏನಿದೆ? ಮೂವರ ಕುದುರೆಗಳೂ ಇದ್ದಿಲ್ಲ; ಆಗ ಅವನು ಅಲ್ಲಿ ವಿಚಾರಿಸಲು ಯಶವಂತರಾವ ಪವಾರನು ಕುದುರೆಗಳನ್ನು ತನ್ನ ಜವಾನದಾರರಿಗೆ ಕೊಟ್ಟುಬಿಟ್ಟನೆಂದು ಗೊತ್ತಾಯಿತು. ಆಗ ಆ ನಬಾಬನ ಸೊಂಡೆಯೊಣಗಿತು; ಅವರು ಮೂವರು ಒಬ್ಬರನ್ನೊಬ್ಬರು ಮಿಕಿ ಮಿಕಿ ನೋಡುತ್ತ ನಿಂತರು.

ನಬಾಬಸಾಹೇಬನು ಆ ಕುದುರೆಗಳನ್ನು ನಂಬಿ ಬಹು ದೊಡ್ಡ ಮನೋರಾಜ್ಯವನ್ನು ಕಲ್ಪಿಸಿಕೊಂಡಿದ್ದನು; ಈಗ ಆ ಕುದುರೆಗಳೇ ಇಲ್ಲದಂತಾದ್ದರಿಂದ, ಅವನ ಆ ಮನೋರಾಜ್ಯವು ವಿನಾಶಪಂಥವನ್ನು ಹಿಡಿಯುವ ಹೊತ್ತು ಬಂದಿತು; ಆಗಅವನು ಮನಸಿನಲ್ಲಿ ಚಡಪಡಿಸುತ್ತ ತನ್ನ ಸ್ನೇಹಿತರೊಡನೆ ತಾನು ಇಳಕೊಂಡ ಸ್ಥಳಕ್ಕೆ ಕಾಲುನಡಿಗೆಯಿಂದ ಹೊರಟನು; ಆತನಿಗೆ ಯಶವಂತರಾಯನ ಮೇಲೆ ಹೇಳಕೂಡದಷ್ಟು ಸಂತಾಪವಾಗಿದ್ದರೂ, ಅವನು ಆಗ ಬಾಯಿಬಿಚ್ಚಿ ಆತನನ್ನು ಬಯ್ಯುವ ಹಾಗಿದ್ದಿಲ್ಲ; ಆದರೂ ಅವನು ತನ್ನ ಮನಸಿನಲ್ಲಿ ಯಶವಂತರಾಯನನ್ನು ಬಹು ಪರಿಯಾಗಿ ನಿಂದಿಸಿದನು; ಅವನಿಗೆ ಅನೇಕ ದುರ್ಭಾಷಣಗಳನ್ನು ಸಮರ್ಪಿಸಿದನು; ಹೀಗೆ ಅವನು ಮನಸಿನಲ್ಲಿ ಯಶವಂತರಾಯನನ್ನು ಹಳಿಯುತ್ತ ಒಂದು ಮೈಲಿನ ಮೇಲಿರುವ ತನ್ನ ವಸತಿಸ್ಥಳಕ್ಕೆ ಬಂದು ಮುಟ್ಟಿದನು; ಬಳಿಕ ಅವನು ಅಲ್ಲಿದ್ದ ತನ್ನೊಬ್ಬ ಮನುಷ್ಯನನ್ನು ಎಲ್ಲಿಯಾದರೂ ಏನಾದರೂ ವಾಹನಗಳು ಸಿಕ್ಕರೆ ತಕ್ಕೊಂಡು ಬಾ, ಎಂದು ಕಳಿಸಿಕೊಟ್ಟನು.

ನಬಾಬಸಾಹೇಬನ ಈ ವಸತಿಯ ಸ್ಥಳವೆಂದರೆ ಬೇರಛಾ ಶಹರದ ಹೊರಬದಿಯಲ್ಲಿರುವ ಒಂದು ಮುರಕ ಮಸೀದೆಯಾಗಿತ್ತು; ನಬಾಬನಿಗೆ ಬೇರಛಾದಲ್ಲಿ ಯಾರ ಗುರುತೂ ಇಲ್ಲದ್ದರಿಂದ ಅವನು ಆ ಊರ ಹೊರಗಿನ ಹಾಳು ಮಸೀದೆಯಲ್ಲಿ ಇಳಕೊಂಡಿದ್ದನು. ಮರಾಟರ ಪ್ರಚಂಡವಾದ ಸೈನ್ಯವು ಅಲ್ಲಿ ಬೀಡು ಬಿಟ್ಟಿದ್ದರಿಂದ ನಬಾಬಸಾಹೇಬನಿಗೆ ಆ ಊರಲ್ಲಿ ಯಾವ ವಾಹನಗಳೂ ಸಿಗಲಿಲ್ಲ; ಆ ಊರಿಂದ ನಾಲ್ಕು ಮೈಲಿನ ಮೇಲೆ ಒಬ್ಬ ಮುಸಲ್ಮಾನ ಜಮೀನದಾರನು ನಬಾಬಸಾಹೇಬನ ಪರಿಚಯದವನು ಇದ್ದದರಿಂದ ಅಲ್ಲಿಗೆ ನಬಾಬಸಾಹೇಬನ ಮನುಷ್ಯನು ಹೋಗಿ, ರಾತ್ರಿಹನ್ನೊಂದು ಗಂಟೆಯ ಸುಮಾರಕ್ಕೆ ಎರಡು ತಟ್ಟು ಕುದುರೆಗಳನ್ನು ಸಂಪಾದಿಸಿಕೊಂಡು ಬಂದನು.

ನಬಾಬನು ಆ ಮನುಷ್ಯನ ದಾರಿಯನ್ನು ಒಂದೇಸವನೆ ನೋಡುತ್ತಿದ್ದನು; ಆ ಹಾಳುಮಸೀದೆಯಲ್ಲಿ ಕೂತು ಕೂತು ಅವನು ಬೇಸತ್ತನು; ಅವನಿಗೆ ನಿಂತರೆ ಸಮಾಧಾನವಿಲ್ಲ ಕುಳಿತರೆ ಸಮಾಧಾನವಿಲ್ಲ, ಮಲಗಿದರೆ ಸಮಾಧಾನವಿಲ್ಲ; ಏನು ಮಾಡಿದರೂ ಅವನಿಗೆ ಸಮಾಧಾನವೇ ಇಲ್ಲದಾಯಿತು. ಬೆಳಗಾಗುವದರೊಳಗೆ ದರ್ಗಾಕ್ಕೆ ಹೋಗಿ ಹ್ಯಾಗೆ ಮುಟ್ಟೇನೆಂದು ಅವನು ಒಂದೇಸವನೆ ಚಡಪಡಿಸಿ ಚಾಟಿಹೊಡೆಯುತ್ತಿದ್ದನು; ತಾನು ರಚಿಸಿಬಂದ ಯುಕ್ತಿಯಂತೆ ಬೇಟಿಯು ಕೈವಶವಾಗಿದ್ದರೆ ವಿಲಂಬದಿಂದ ಅದು ಎಲ್ಲಿ ತಪ್ಪಿಸಿಕೊಂಡು ಹೋಗುವದೋ ಎಂಬ ಹೃದ್ರೋಗವು ಅವನನ್ನು ನುಗ್ಗುಮಾಡುತ್ತಿತ್ತು; ಅವನು ಹೋಗತಕ್ಕ ದರ್ಗಾ

ಮೇಣೆಯನ್ನು ಸಾಗಿಸಿಕೊಂಡು ಹೋಗುವದನ್ನು ನೋಡಿ ಗಾಬರಿಯಾಗಿ—"ರಂಗೂಬಾಯಿಯ ಮೇಣೆಯು ಎಲ್ಲಿರುವದು" ಎಂದು ಕೇಳಿದಳು. ಅದಕ್ಕೆ ಸ್ವಾರರು—"ಬಾಯಿಸಾಹೇಬ ಕಳ್ಳರು..."ಎಂದು ನುಡಿಯುತ್ತಿರಲು ಆ ಸ್ತ್ರೀಯು ನಡುವೇ ಬಾಯಿಹಾಕಿ ದುಃಖದಿಂದ—"ಅಪ್ಪಗಳಿರಾ, ರಂಗೂಬಾಯಿಯನ್ನು ಕಂಡ ಹೊರತು ನಾನು ಮುಂದಕ್ಕೆ ಹೆಜ್ಜೆಯನ್ನಿಡಗೊಡಲಾರೆನು; ಆ ನನ್ನ ಅಜ್ಜಿಯ ರಂಗೂಬಾಯಿಯನ್ನು ಬಿಡಿಸಿಕೊಂಡು ಬರ್ರಿ; ನಿಮಗೆ ಬಹುದೊಡ್ಡ ಇನಾಮುಗಳನ್ನು ಕೊಡಿಸುತ್ತೇನೆ" ಎಂದು ನುಡಿದು ಕಣ್ಣೀರು ಸುರಿಸಹತ್ತಿದಳು; ಅದನ್ನು ಕೇಳಿ ಆ ಸ್ವಾರರು ಹತಾಶರಾಗಿ ನಿಂತು ಬಿಟ್ಟರು; ಆಗ ಅವರ ಸಂಗಡ ಬಂದಿದ್ದ ಆ ಜಟಾಧಾರಿಯು—"ತಾಯಿಬಾಯಿಸಾಹೇಬ, ಇಂಥ ಹೊತ್ತಿನಲ್ಲಿ ಹೀಗೆ ಹಟಮಾಡುವದು ಜಾಣತನವಲ್ಲ; ಪ್ರಸಂಗವು ಬಿಕ್ಕಟ್ಟಿನದಿರುವದು; ಈ ಸೀಮೆಯಲ್ಲಿ ಕಳ್ಳರು-ಕಾಕರು ಬಹಳ; ಈ ಪ್ರಸಂಗದಲ್ಲಿ ನೀವು ಪಾರಾದದ್ದೇ ಸುದೈವವಾಗಿರುವದು; ಇನ್ನು ಸುಮ್ಮನೆ ಇಲ್ಲಿ ಹೊತ್ತುಗಳೆಯುವದು ಅನರ್ಥಕ್ಕೆ ಕಾರಣವಾದೀತು: ಬಾಯಿಸಾಹೇಬ ನೀವು ರಂಗೂಬಾಯಿಯ ಚಿಂತೆಯನ್ನು ಬಿಟ್ಟು ಬಿಡಿರಿ; ನಾನು ನಿಮ್ಮ ಸ್ವಾರರಲ್ಲಿ ಕೆಲವರನ್ನು ಸಂಗಡ ಕರಕೊಂಡು ಈಗಲೇ ಆ ಕಳ್ಳರನ್ನು ಗೊತ್ತು ಹಚ್ಚುವದಕ್ಕಾಗಿ ಹೊರಡುವೆನು" ಎಂದು ನುಡಿದನು. ಆಕೆಯ ಉತ್ತರದ ಹಾದಿಯನ್ನು ನೋಡದೆ ಆ ಘಾತುಕನಾದ ತ್ರ್ಯಂಬಕಶಾಸ್ತ್ರಿಯು ಅಲ್ಲಿಂದ ತತ್ಕ್ಷಣವೇ ಹೊರಟು ನಡೆದನು. ಇತ್ತ ತಾಯಿಬಾಯಿಯ ಮೇಣೆಯನ್ನು ಹೊತ್ತ ಭೋಯಿಗಳು ಭಾವಣಿಯ ಕಡೆಗೆ ಒತ್ತರದಿಂದ ಕಾಲು ಬಿಟ್ಟರು. ತಾಯಿಬಾಯಿಯು ನಿರುಪಾಯಳಾಗಿ ಹಂಬಲಿಸುತ್ತ ಮೇಣೆಯಲ್ಲಿ ಬಿದ್ದು ಬಿಟ್ಟಳು; ಆ ಮೇಣೆಯನ್ನು ಹಿಂಬಾಲಿಸಿದ್ದ ಸ್ವಾರರು ಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ ಒತ್ತರದಿಂದ ದಾರೀನಡೆದು ಕತ್ತಲಾಗುವಷ್ಟರಲ್ಲಿ ಭಾವಣಿಯನ್ನು ಮುಟ್ಟಿದರು.

ಪ್ರಿಯವಾಚಕರೇ ನೋಡಿದಿರಾ, ಈ ಭಯಂಕರ ಪ್ರಸಂಗವನ್ನು! ಪಾಪ! ದುರ್ದೈವಿಯಾದ ರಂಗೂಬಾಯಿಯ ಜೀವಕ್ಕೆ ಸ್ವಲ್ಪಾದರೂ ಸೌಖ್ಯವಿಲ್ಲ ಕಂಡಿರಾ; ಆ ಪ್ರಾಣಿಯಮೇಲೆ ಒಂದಕ್ಕಿಂತ ಒಂದು ಭಯಂಕರ ಪ್ರಸಂಗಗಳೇ ಬರಹತ್ತಿದವು; ಪಾಪ! ಆಕೆಯಾದರೂ ಏನು ಮಾಡಿಯಾಳು? ಕಾಮಾಂಧರಾದ ನರಾಧಮರು ಆಕೆಯ ಅನುಪಮ ಲಾವಣ್ಯಕ್ಕೆ ಬಾಯ್ದೆರೆದು ಇಂಥ ನೀಚಕೃತ್ಯಗಳನ್ನು ಮಾಡಹತ್ತಿದ ಬಳಿಕ ಆಕೆಯ ಆಯುಷ್ಯವು ಹೀಗೆಯೇ ಕಷ್ಟಮಯವಾಗಿ ಕಳೆದು ಹೋಗುವದು ಸಹಜವು; ಯಾರಿಗೂ ಉಪಯೋಗವಾಗದ ಇಂಥ ಲೋಕೋತ್ತರ ಸೌಂದರ್ಯವನ್ನು ದೇವರು ಆಕೆಯಲ್ಲಿ ಯಾಕೆ ಇಟ್ಟಿದ್ದಾನೋ ತಿಳಿಯದು!!

ತ್ರ್ಯಂಬಕಶಾಸ್ತ್ರಿಯ ನೀಚತನವನ್ನು ನಮ್ಮ ವಾಚಕರು ಹಿಂದೆ ನಾಲ್ಕನೆಯ ಪ್ರಕರಣದಲ್ಲಿಯೇ ಬಲ್ಲರು; ಅವರಂತೆ ತಾಯಿಬಾಯಿಗೂ ಆ ನೀಚನ ಕಪಟ ನಾಟಕವು ಗೊತ್ತಾಗಿದ್ದರೆ ರಂಗೂಬಾಯಿಯಮೇಲೆ ಇಂಥ ವಿಪತ್ತು ಬರುತ್ತಿದ್ದಿಲ್ಲ; ಆ ಭೋಳೇಸ್ವಭಾವದ ತಾಯಿಬಾಯಿಯು ಬೆಳ್ಳಗಾದದ್ದನ್ನೆಲ್ಲ ಹಾಲೆಂದೇ ಭಾವಿಸುತ್ತಿದ್ದಳು. ಮುಂದಿಯ ಪರೀಕ್ಷೆಯಿಲ್ಲದವರ ಬಾಳು ಹೀಗೆಯೇಸರಿ! ಆಕೆಯು ತನ್ನ ಮೇಲೆ ಇಟ್ಟ ಅಂಧಶ್ರದ್ಧೆಯು ಮಹಮ್ಮದಶಹನ ವಿಷಯತೃಪ್ತಿಗೆ ಸಾಧನವಾಯಿತೆಂದು ಆ ಧೂರ್ತಶಾಸ್ತ್ರಿಯು ಹಿರಿ ಹಿರಿ ಹಿಗ್ಗಿದನು. ಆತನು ಒಂದುದಿಸ ಯಾರೂಇಲ್ಲದವೇಳೆಯಲ್ಲಿ ತಾಯಿಬಾಯಿಯನ್ನು ಕುರಿತು—"ಬಾಯಿ, ನಿಮ್ಮ ರಂಗೂಬಾಯಿಗೆ ಬಡಿದುಕೊಂಡಿದ್ದ ಪಿಶಾಚಿಯು ಬಹು ಬಲಿಷ್ಠವಿರುವದು; ಅದು ಬರಿಯ ಮಂತ್ರ-ಯಂತ್ರಗಳಿಂದ ಹೋಗುವದಿಲ್ಲ; ಆದಕ್ಕೆ ನೀವು ಚನ್ನಾಗಿ ಬಂದೋಬಸ್ತಮಾಡಿಸಲಿಕ್ಕೆಬೇಕು; ಇಲ್ಲಿಂದ ಕೆಲವು ಮೈಲುಗಳಮೇಲೆ ವೇತ್ರವತೀನದಿಯೊಳಗೆ ಪಿಶಾಚವಿಮೋಚನವೆಂಬ ಪವಿತ್ರತೀರ್ಥವದೆ; ಅಲ್ಲಿಗೆ ನೀವು ರಂಗೂಬಾಯಿಯನ್ನು ಕರಕೊಂಡು ನಡೆಯಬೇಕು; ಅಂದರೆ ನಾನು ಆ ತೀರ್ಥದಲಿ ಆಕೆಗೆ ವಿಧಿಪೂರ್ವಕ ಸ್ನಾನಮಾಡಿಸಿ ಒಂದು ಗಟ್ಟಿಮುಟ್ಟಿಯಾದ ಯಂತ್ರವನ್ನು ಮಾಡಿ ಕಟ್ಟುವೆನು; ಆಮೇಲೆ ಆ ಪಿಶಾಚಿಯು ಎಲ್ಲಿರುವದೋ ನೋಡೋಣ;" ಎಂದು ನುಡಿದನು. ಶಾಸ್ತ್ರಿಯ ಈ ಮಾತುಗಳು ತಾಯಿಬಾಯಿಗೆ ನಿಜವೆಂದು ತೋರಿದವು; ರಂಗೂಬಾಯಿಯು ಬೇನೆಯು ಹಿಂಗಿದರೆ ಸಾಕೆಂದು ತಿಳಿದು ಆಕೆಯು ಮನಸ್ಸಿನಲ್ಲಿ ಯಾವ ವಿಚಾರವನ್ನೂ ತರದೆ ಒಮ್ಮೆಲೆ ಶಾಸ್ತ್ರಿಯ ಮಾತಿಗೆ ಒಪ್ಪಿಕೊಂಡಳು. ಯುಕ್ತಿಯು ನಾಟಿತೆಂದು ಶಾಸ್ತ್ರಿಯು ಮನಸ್ಸಿನಲ್ಲಿಯೇ ಸಂತೋಷಬಟ್ಟನು.

ಮರುದಿನ ತಾಯಿಬಾಯಿಯು ಒಳ್ಳೇ ಜಾಣತನದಿಂದ ಗಂಡನ ಒಪ್ಪಿಗೆಯನ್ನು ಪಡೆದು ತೀರ್ಥಕ್ಕೆ ಹೊರಡುವ ಸಿದ್ಧತೆಯನ್ನು ನಡೆಯಿಸಿದಳು; ಶಾಸ್ತ್ರಿಯು ಹೇಳಿದ ಸಾಮಾನುಗಳನ್ನೆಲ್ಲ ಆಕೆಯು ಕಟ್ಟಿಕೊಂಡಳು; ಸಮೀಪದಲ್ಲಿಯೇ ಶ್ರೀಮಂತರ ಪ್ರಚಂಡಸೈನ್ಯವು ಬೀಡುಬಿಟ್ಟದ್ದರಿಂದ ಅವರಿಗೆ ಯಾವ ಬಗೆಯ ಅಂಜಿಕೆಯೂ ಮನಸ್ಸಿನಲ್ಲಿ ಬರಲಿಲ್ಲ; ಆಕೆಯು ತನ್ನ ಸಂಗಡ ೫೦ ಜನ ಕುದುರೆಯ ಸ್ವಾರರನ್ನು ಮಾತ್ರ ಕರಕೊಂಡಿದ್ದಳು. ಒಬ್ಬ ಅಡಿಗೆಯವನು, ಒಬ್ಬ ದಾಸಿಯು, ಗಣೋಬನು ಇಷ್ಟುಜನ ಪರಿಚಾರಕರು ಅವರ ಸಂಗಡ ಹೊರಟರು. ತ್ರ್ಯಂಬಕಶಾಸ್ತ್ರಿಯು ಇಷ್ಟೆಲ್ಲ ಆಡಂಬರವನ್ನು ಹೂಡಿಕೊಂಡು ಅವರನ್ನು ಆ ತೀರ್ಥಕ್ಕೆ ಕರದೊಯ್ದು ಅಲ್ಲಿ ರಂಗೂಬಾಯಿಗೆ ಸ್ನಾನಮಾಡಿಸಿ, ಏನೇನೋ

ಯಂತ್ರ-ತಂತ್ರಗಳನ್ನು ಮಾಡಿ ಕಟ್ಟಿದನು. ಇಷ್ಟೆಲ್ಲ ಆಗಿ ಎಲ್ಲ ಜನರ ಊಟ-ಉಪಚಾರಗಳು ಮುಗಿಯಬೇಕಾದರೆ ಸಂಜೆಯ ನಾಲ್ಕುಗಂಟೆಯ ಸಮಯವಾಯಿತು. ಬಳಿಕ ಶಾಸ್ತ್ರಿಯು ಎಲ್ಲರೊಡನೆ ತಿರುಗಿ ಛಾವಣಿಗೆ ಹೊರಟನು. ಆ ಸಂಧಿಯನ್ನೇ ಸಾಧಿಸಿ ತ್ರ್ಯಂಬಕಶಾಸ್ತ್ರಿಯ ಪೂರ್ವಸಂಕೇತದಂತೆ ಆ ಅಡವಿಯಲ್ಲಿ ಅಡಗಿಕೊಂಡಿದ್ದ ಮಹಮ್ಮದಶಹನ ಪುಂಡಜನರು ಅವರಮೇಲೆ ಮುಗಿಬಿದ್ದು ಹಿಂದೆ ಹೇಳಿದಂತೆ ರಂಗೂಬಾಯಿಯನ್ನು ಅಪಹರಿಸಿಕೊಂಡು ಹೋದರು.

ಈ ಮೇರೆಗೆ ರಂಗೂಬಾಯಿಯನ್ನು ಅಪಹರಿಸಿದ ಕಳ್ಳರು ಹೊತ್ತುಮುಣುಗುವಷ್ಟರಲ್ಲಿ ಸಂಕೇತಸ್ಥಾನವನ್ನು ಹೊಂದಬೇಕಾದ್ದರಿಂದ ಅವರು ಹಾದಿಯಲ್ಲಿ ಸ್ವಲ್ಪಾದರೂ ವಿಲಂಬಮಾಡದೆ ಅಡ್ಡತಿಡ್ಡಮಾರ್ಗಗಳನ್ನು ಬಹು ವೇಗದಿಂದ ಕ್ರಮಿಸಹತ್ತಿದರು. ಅವರಿಗೆ ಆ ಪ್ರಾಂತದ ಪರಿಚಯವು ಚನ್ನಾಗಿ ಇದ್ದದರಿಂದ ಅವರು ಅಲ್ಪಾವಕಾಶದಲ್ಲಿ ಗುಡ್ಡಗಳನ್ನೂ, ಕಿರಿಗಂಟೆಯ ಅಡವಿಗಳನ್ನೂ ದಾಟಿ ಒಂದು ಸರಳಮಾರ್ಗವನ್ನು ಹಿಡಿದರು. ಹಾಗು ಸಂಜೆಯಾಗುವದರೊಳಗೆ ತಮ್ಮ ಸಾಂಕೇತಿಕಗ್ರಾಮವನ್ನು ಮುಟ್ಟಿದರು; ಆ ಗ್ರಾಮದ ಹೊರಭಾಗದಲ್ಲಿ ಒಂದು ವಿಸ್ತಾರವಾದ ದರ್ಗೆಯು ಇದ್ದು, ಅದರ ಬಳಿಯಲ್ಲಿ ಒಂದು ಭವ್ಯವಾದ ವಾಡೆಯು ಇತ್ತು. ಆ ವಾಡೆಯಲ್ಲಿ ಪ್ರಯಾಣಸನ್ನದ್ಧರಾಗಿದ್ದ ಎಷ್ಟೋಜನಸ್ವಾರರೂ, ಸಿಪಾಯಿಗಳೂ ನಿಂತುಕೊಂಡಿದ್ದರು. ಕಳ್ಳರು ಅಲ್ಲಿಗೆ ಮುಟ್ಟಿದಕೂಡಲೆ ತಾವು ಬಂಧಿಸಿತಂದಿದ್ದ ಮನುಷ್ಯರನ್ನು ಅಲ್ಲಿದ್ದ ಒಬ್ಬ 'ಮೀಯಾ'ಸಾಹೇಬನ ವಶಕ್ಕೆ ಒಪ್ಪಿಸಿ ಕ್ಷಣಮಾತ್ರವಾದರೂ ಅಲ್ಲಿ ನಿಲ್ಲದೆ, ಸಮೀಪದಲ್ಲಿರುವ ಅಡವಿಯಲ್ಲಿ ಮಾಯವಾದರು.

ಭೋಯಿಗಳು ರಂಗೂಬಾಯಿಯ ಮೇಣೆಯನ್ನು ದರ್ಗಾದ ಹೊರಬದಿಯಲ್ಲಿ ಕೆಳಗಿಳಿಸಿ, ಉಸ್ಸೆಂದು ಕುಳಿತುಕೊಳ್ಳುವಷ್ಟರಲ್ಲಿ ಮೀಯಾಸಾಹೇಬನು ಅವರ ಬಳಿಗೆ ಬಂದು, ಕೆಲವು ಜನ ಸ್ವಾರರ ಸಂಗಡ ಅವರನ್ನು ಊರಲ್ಲಿ ಊಟಕ್ಕೆ ಕಳಿಸಿಕೊಟ್ಟನು; ಬಳಿಕ ಆತನು ಗಣೋಬನ ಕಡೆಗೆ ತಿರುಗಿ—"ನಿಮ್ಮಲ್ಲಿ ಯಾರಾದರೂ ನೀರು-ಗೀರು ಕುಡಿಯುವವರಿದ್ದರೆ ಕುಡಿದು ಬರಲಿ; ಇಲ್ಲಿಯೇ ಸಮೀಪದಲ್ಲಿ ಕೆರೆಯುಂಟು; ಫಲಾಹಾರಮಾಡುವದಿದ್ದರೆ ಮಾಡಿರಿ; ಹಾಲುಬೇಕಾಗಿದ್ದರೆ ಹೇಳಿರಿ, ತರಿಸಿಕೊಡುತ್ತೇನೆ; ಆದರೆ ಓಡಿಹೋಗುವ ಸಾಹಸ ಮಾತ್ರ ಮಾಡಬೇಡಿರಿ; ಹಾಗೆ ಮಾಡಿದಲ್ಲಿ ನಿಮ್ಮ ಫಲಭೋಗವನ್ನು ನೀವು ಉಣ್ಣುವಿರಿ;" ಎಂದು ನುಡಿಯುತ್ತಿರಲು, ಮೀಯಾಸಾಹೇಬನನ್ನು ಒಳಗೆ ಯಾರೋ ಒದರಿದರು; ಆದ್ದರಿಂದ ಆತನು ಗಣೋಬನ ಉತ್ತರದ ಹಾದಿಯನ್ನು ನೋಡದೆ ಒಳಗೆ ಹೊರಟುಹೋದನು;

ವಿಠೋಯಾಸಾಹೇಬನ ಸಕ್ಕರೆಯಂಥ ಈ ಉಪಚಾರದ ಮಾತುಗಳಿಂದ ಗಣೋಬನಿಗೆ ಸಮಾಧಾನವೆನಿಸದೆ, ಅವನಲ್ಲಿ ವಿಲಕ್ಷಣವಾದ ಸಂತಾಪವು ತುಂಬಿಕೊಂಡಿತು; ಆದರೂ ಆವನು ತನ್ನ ಸಂತಾಪವನ್ನು ಮಂದಿಗೆ ತೋರಗೊಡದೆ, ನಡೆದ ಎಲ್ಲ ಸಂಗತಿಗಳ ಮೇಲಿಂದ ಪ್ರಸ್ತುತ ಪ್ರಸಂಗದ ಸ್ವರೂಪವನ್ನು ತರ್ಕಿಸಿ ಮನಸ್ಸಿನಲ್ಲಿ ಚಡಪಡಿಸಹತ್ತಿದನು. ಈ ಸಮಯದಲ್ಲಿ ರಂಗೂಬಾಯಿಯ ಮೇಣೆಯ ಹತ್ತಿರ ದಾಸಿಯು, ಅಡಿಗೆಯವನು, ಗಣೋಬಾ, ಬಂಡಿಯವನು ಇವರಿಷ್ಟೇ ಜನರಿದ್ದರು; ಬಂಡಿಯವನು ಎತ್ತುಗಳಿಗೆ ಮೇವುಹಾಕುವ ಕೆಲಸದಲ್ಲಿ ತೊಡಗಿದ್ದನು; ದಾಸಿಯೂ ಅಡಿಗೆಯವನೂ ಗಾಬರಿಯಾಗಿ ಮೇಣೆಯ ಹತ್ತಿರ ನಿಂತುಕೊಂಡಿದ್ದರು; ಗಣೋಬನು ಮಾತ್ರ ಈ ಪ್ರಸಂಗದಿಂದ ಹ್ಯಾಗೆ ಪಾರಾದೇವೆಂದು ಮಿಡುಕುತ್ತಿದ್ದನು; ಆತನು ಮೇಣೆಯ ಬಳಿಗೆ ಹೋಗಿ ಮೆಲ್ಲನೆ ಪಡಕುಗಳನ್ನು ತೆಗೆದು ದುಃಖದಿಂದ—"ಅವ್ವಾಸವರೇ" ಎಂದು ಒದರಿದನು; ಆಗ ರಂಗೂಬಾಯಿಯ ಮೈಮೇಲೆ ಎಚ್ಚರವಿದ್ದಿಲ್ಲ; ಕಳ್ಳರು ಸೆರೆಹಿಡಿದ ವೇಳೆಯಿಂದ ಆಕೆಯು ಇಲ್ಲಿಯವರೆಗೆ ಒಂದುತರದ ಜಾಗ್ರತ ಮೂರ್ಛಾವಸ್ಥೆಯನ್ನೇ ಅನುಭವಿಸುತ್ತಿದ್ದಳು; ಆಕೆಯು ಶೂನ್ಯದೃಷ್ಟಿಯಿಂದ ಬಹಿಃಪ್ರದೇಶವನ್ನು ನೋಡುತ್ತಿದ್ದಳು; ಆಕೆಯನ್ನು ದುಃಖವು ಪೂರಾ ಆವರಿಸಿತ್ತು; ಆದರೆ ಆಕೆಯ ಕಣ್ಣುಗಳಲ್ಲಿ ಅಶ್ರುಗಳು ಮಾತ್ರ ಉದುರುತ್ತಿದ್ದಿಲ್ಲ; ತನ್ನ ಮೈಮೇಲಿನ ಅಲಂಕಾರಗಳ ಸಲುವಾಗಿ ಕಳ್ಳರು ತನ್ನನ್ನು ಹಿಡಿದಿರಬಹುದೆಂಬ ಕಲ್ಪನೆಯು ಮೊದಮೊದಲು ಆಕೆಯಲ್ಲಿ ಉತ್ಪನ್ನವಾಗಿತ್ತು; ಆದರೆ ಆಕೆಯ ಮೇಣೆಯನ್ನು ಭೋಯಿಗಳು ಭಯಂಕರವಾದ ಅಡವಿಯಲ್ಲಿ ಒಯ್ಯುತ್ತಿದ್ದರೂ, ಒಬ್ಬ ಕಳ್ಳನಾದರೂ ಆಕೆಯ ಸಮೀಪಕ್ಕೆ ಬರಲಿಲ್ಲ; ಇದರಿಂದ ಆಕೆಯ ಆ ಕಲ್ಪನೆಯು ಬಯಲಾಗಿ ಆಕೆಯ ತಲೆಯಲ್ಲಿ ಒಮ್ಮಿಲೆ ಮಿಂಚಿನಂತೆ ಮತ್ತೊಂದು ಕಲ್ಪನೆಯು ಚಮಕಿಸಿತು; ಕೂಡಲೆ ಆಕೆಯ ಎದೆಯು ಧಸ್ಸೆಂದಿತು; ಆಕೆಯ ಮುಖಮಂಡಲವು ರಾಹುಗ್ರಸ್ತ ಚಂದ್ರನಂತೆ ನಿಸ್ತೇಜವಾಯಿತು; ಯಾವನೋ ಒಬ್ಬ ನರಾಧಮನು ತನ್ನ ಸೌಂದರ್ಯಕ್ಕೆ ಮರುಳಾಗಿ ಈ ಕೆಲಸ ಮಾಡಿಸಿರುವನೆಂಬ ಕಲ್ಪನೆಯು ಆಕೆಗೆ ಸತ್ಯವಾಗಿ ತೋರಹತ್ತಿತು; ಆಕೆಯ ಅವಯವಗಳು ಒಂದೊಂದೇ ಬಲಗುಂದತೊಡಗಿದವು; ಆಕೆಯಲ್ಲಿ ದೇಹಭಾನವು ನಷ್ಟವಾಯಿತು; ಮೈಯೊಳಗಿನ ರಕ್ತವು ಒಮ್ಮಿಲೆ ಆಟ್ಟಿಸಿತೋ ಎನ್ನುವಂತೆ ಆಕೆಯ ಸರ್ವಾಂಗವು ಬೆಳ್ಳಗಾಯಿತು; ಕಣ್ಣುಗಳಲ್ಲಿ ಚಿವುಟಿದರೂ ರಕ್ತವಿಲ್ಲದಾಯಿತು; ಇಂಥ ಸ್ಥಿತಿಯಲ್ಲಿ ಆಕೆಯ ಕಣ್ಣುಗಳೊಳಗಿಂದ ಅಶ್ರುಗಳಾದರೂ ಎಲ್ಲಿಂದ ಬರಬೇಕು? ಕೆಲಕೆಲವು ಪ್ರಸಂಗಗಳು ಆಳುವದರಿಂದ ಉಪಶಮನವಾಗದಷ್ಟು ಭಯಂಕರವಾಗಿ

ರುತ್ತವೆ. ರಂಗೂಬಾಯಿಯ ಮೇಲೆ ಬಂದ ಪ್ರಸ್ತುತ ಪ್ರಸಂಗವು ಅಂತಹ ಆಗಿತ್ತು; ಆಗ ಆಕೆಗೆ ಮುಂದೆ ತನಗೆ ಒದಗಬಹುದಾಗಿದ್ದ ವಿಟಂಬನೆಯು ಭಂ ಕರಸ್ವರೂಪವು ಕಣ್ಣುಮುಂದೆ ಕಟ್ಟಿದಂತಾಯಿತು. ಅವಳು ಭಾವೀವಿಟಂ ಯನ್ನು ಸ್ಮರಿಸಿ ತನ್ನ ಸೌಂದರ್ಯವನ್ನು ಹಳಿದುಕೊಳ್ಳಹತ್ತಿದಳು. ಆಗ ಅ ಮಸ್ತಕದಲ್ಲಿ ಅನೇಕ ಕಲ್ಪನೆಗಳು ಭ್ರಮಿಸಹತ್ತಿ—"ನನ್ನನ್ನು ಸೀತಾಮಾತೆಯ ಒಂದು ಗುಪ್ತವಾದ ಸ್ಥಳದಲ್ಲಿ ಸೆರೆಯಲ್ಲಿಟ್ಟು, ಮೇಲೆ ರಾಕ್ಷಸಿಯರ ಬಲವ ಕಾವಲವನ್ನು ಇರಿಸುವರೋ? ಛೀ; ಚಾಂಡಾಲಿನಿ, ಆ ಮಹಾಪತಿವ್ರತೆಯ ಹೆಸರ ಉಚ್ಚರಿಸಲಿಕ್ಕೆ ಸಹ ನಿನಗೆ ಅಧಿಕಾರವಿಲ್ಲ ಕಂಡೆಯಾ; ಆ ಮಹಾಸಾಧ್ವಿಯ ಸೀತಾಮಾತೆಯ ಹೃದಯದಲ್ಲಿ ಶ್ರೀ ರಾಮನ ಹೊರತು ಅನ್ಯವಿಚಾರವೇ ಇದ್ದಿ ದುಷ್ಟೇ! ಈಗ ನಿನ್ನ ಹೃದಯವನ್ನು ಯಾರು ಆಕ್ರಮಿಸಿರುವರೆಂಬದನ್ನು ಪ ತಿಯಾ?" ಎಂಬ ವಿಚಾರಗಳು ಉತ್ಪನ್ನವಾಗಲು, ಅವಳು ನಾಚಿಕೆಯಿಂದ ಯನ್ನು ತಗ್ಗಿಸಿ, ಎರಡೂ ಕೈಗಳಿಂದ ಮೋರೆಯನ್ನು ಗಟ್ಟಿಯಾಗಿ ಮುಚ್ಚಿಕೆ ಡಳು; ಆಗ ಅವಳಲ್ಲಿ ಪಶ್ಚಾತ್ತಾಪವು ಉತ್ಪನ್ನವಾಗಿ ಅವಳು ಅತ್ಯಂತ ಪ್ರಾಂ ಮನಸ್ಸಿನಿಂದ ಪರಮಾತ್ಮನಿಗೆ ಶರಣುಹೋದಳು; ಆಗ ಅವಳು ಮನಸ್ಸಿನಲ್ಲಿಂ ಪರಮಾತ್ಮನನ್ನು ಕುರಿತು ದೈನ್ಯದಿಂದ—"ದೇವಾ, ನಾನು ಪಾಪಿಯು! ಚಾಂ ಲಿನಿಯು!! ನಾನು ಅನಂತ ಅಪರಾಧಗಳನ್ನು ಮಾಡಿರುವೆನು. ಆದರೆ, ಕರು ಳುವೇ, ಆ ಅಪರಾಧಗಳಿಗೆ ಇಷ್ಟೇ ಶಿಕ್ಷೆ ಸಾಕು; ಇದಕ್ಕೂ ಹೆಚ್ಚು ನನ್ನ ವಿ ಬನೆಯನ್ನು ಮಾಡಬೇಡ ಕಂಡೆಯಾ; ದೇವಾ, ಇನ್ನು ನಿನ್ನ ಚರಣಗಳ ಹೊರ ಅನ್ಯ ವಿಚಾರಗಳನ್ನು ಮನಸ್ಸಿನಲ್ಲಿ ತರಲಾರೆನು; ದುರ್ದೈವದಿಂದ ನಾನು ಬಾ ದಲ್ಲಿಯೇ ವಿಧವೆಯಾದದ್ದೇನೋ ನಿಜ; ಆದರೆ ನನ್ನ ಆಚರಣೆಯಿಂದ ನಾನು ಭಯಂಕರ ವಿಪತ್ತಿಗೆ ಗುರಿಯಾದೆನು. ದೇವಾ, ಆರ್ಯ ವಿಧವೆಯರಿಗೆ ಒ ವಂತೆ ಧರ್ಮಶಾಸ್ತ್ರ ಸಮ್ಮತವಾದ ವೈರಾಗ್ಯವೃತ್ತಿಯಿಂದ ನಾನು ನಡೆದುಕೊ ದ್ದರೆ ಕಾಮಿಜನರ ಕಣ್ಣಲ್ಲಿ ನಾನೆಲ್ಲಿ ಉಲುಕುತ್ತಿದ್ದೆನು? ದೇವಾ, ನಮ್ಮ ವಿಧವೆಯರಿಗೆ ನಿನ್ನ ಸೇವೆಯೇ ತಾರಕವಲ್ಲವೇ? ನಾವು ಕೇವಲ ಜೀವಧಾರಣಕ್ಕಾ ಒಪ್ಪತ್ತೇ ಉಂಡು, ಸೌಖ್ಯದ ಉಡಿಗೆ-ತೊಡಿಗೆಗಳನ್ನು ಬಿಸುಟಿ, ಯಾವಾಗ ನಿನ್ನ ಸೇವೆಯಲ್ಲಿ ಮಗ್ನರಾಗಿ, ಇನ್ನು ಮುಂದಾದರೂ ನಮ್ಮ ದೇಶಭಗಿನಿಯ ಇಂಥ ವಿಪತ್ತನ್ನು ಸರ್ವಥಾ ಒದಗಿಸಬೇಡವೆಂದು ನಿನ್ನನ್ನು ಹಗಲಿರಳೂ ಪ್ರಾ ಸುವದೇ ನಮ್ಮ ಪವಿತ್ರ ಕರ್ತವ್ಯವಲ್ಲವೇ? ಕರುಣಾಳುವೇ, ಹೀಗೆ ತ ಸಾಧನರೂಪವಾದ ತಪಸ್ಸನ್ನು ನಾವು ಆಚರಿಸಿದರೆ, ಆ ಪುಣ್ಯಸಂಚಯದಿಂದ ನ

ಭಗಿನಿಯರ ಕಲ್ಯಾಣವಾದರೂ ಆದೀತಲ್ಲವೆ? ಹೀಗೆ ಮಾಡದೆ ನಾನು ವ್ಯರ್ಥ ವಾಗಿ ವಿಷಯಲಂಪಟದಿಂದ ಕಾಲಹರಣಮಾಡಿದೆನು; ನನ್ನ ತಾಯಿತಂದೆಗಳ ಅಜ್ಞೆಯೇ ನನ್ನ ಈ ಸ್ವೇಚ್ಛಾಚಾರಕ್ಕೆ ಕಾರಣವಾಯಿತು. ದೇವಾ, ನಾನು ಚಿಕ್ಕಂದಿನಲ್ಲಿ ಶ್ರೀಮಂತಿಕೆಯಿಂದ ಬೆಳೆದವಳು; ನನ್ನಲ್ಲಿ ವಿಷಯವಿರಕ್ತತೆಯು ಸ್ವಲ್ಪವೂ ಹುಟ್ಟಲಿಲ್ಲ; ವಯೋಮಾನದಂತೆ ಅಂಕುರಿಸಿದ ಯೌವನಾವಸ್ಥೆಯ ಆರಂಭದಲ್ಲಿ ನನಗಾದ ಭಾಸವು ಸರ್ವಜ್ಞನಾದ ನಿನಗೊಬ್ಬನಿಗೇ ಗೊತ್ತು! ಆಗ ನನ್ನ ಮನಸ್ಸು ಬಗೆಬಗೆಯ ವಿಚಾರಕ್ಕೆ ಒಳಗಾಯಿತು. ಆ ಸ್ಥಿತಿಯಲ್ಲಿಯೇ ನಾನು ಚಂದ್ರನಿಲ್ಲದ ಆಕಾಶದಂತಿರುವ ನನ್ನ ಅತ್ತೆಯ ಮನೆಗೆ ಬಂದೆನು. ನನ್ನ ಅತ್ತೆಯು ವಿರಕ್ತಸ್ವಭಾವದವಳೂ, ನ್ಯಾಯನಿಷ್ಠುರಳೂ ಆದ್ದರಿಂದ, ಆಕೆಯ ದರ್ಪದಿಂದ ನಾನು ಅಲ್ಪಸ್ವಲ್ಪ ವೈರಾಗ್ಯವನ್ನು ತಾಳಹತ್ತಿದ್ದೆನು. ಆದರೆ ವಿಧಿಯು ನನ್ನ ಬೆನ್ನುಹತ್ತಿದ್ದರಿಂದ, ಅದು ನನ್ನನ್ನು ಅಲ್ಲಿ ಇರಗೊಡದೆ, ನನ್ನ ಅತ್ತೆಯ ತಂಗಿಯಾದ ತಾಯಿಬಾಯಿಯ ಬಳಿಗೆ ನನ್ನನ್ನು ಕರೆದೊಯ್ದಿತು. ತಾಯಿಬಾ ಯಿಯು ಕೋಮಲಾಂತಃಕರಣದವಳು; ನಾನು ಒಂದು ಪಕ್ಷ ಕಡಿಮೆಯಾದವಳೆಂದು ಆಕೆಯು ನನಗೆ ದಿನಾಲು ಬಗೆಬಗೆಯ ಪಕ್ವಾನ್ನಗಳನ್ನು ಮಾಡಿ ಉಣಿಸಹತ್ತಿದಳು; ಬೆಲೆಯುಳ್ಳ ವಸ್ತ್ರಾಭರಣಗಳಿಂದ ನನ್ನನ್ನು ಶೃಂಗರಿಸಹತ್ತಿದಳು; ಆದರೆ ಆ ಸುಖೋ ಪಭೋಗಗಳಿಂದ ನನ್ನ ಅಂತರಾತ್ಮವು ಎಷ್ಟು ವ್ಯಥಿತವಾಗುತ್ತಿತ್ತೆಂಬದು ಪಾಪ! ಆ ತಾಯಿಬಾಯಿಗೆ ಹ್ಯಾಗೆ ಗೊತ್ತಾಗಬೇಕು? ದೇವಾ, ಸರಳಮನಸ್ಸಿನ ನನ್ನ ಆ ತಾಯಿಬಾಯಿಗೆ ಜನ್ಮಜನ್ಮಾಂತರದಲ್ಲೂ ಇಂಥ ಪ್ರಸಂಗ ತರಬೇಡವಪ್ಪಾ!! ತಾರುಣ್ಯವು ದುರ್ಜಯವಾದ ಶತ್ರುವು ಎಂಬದು ಆಗ ನನಗೆ ತಿಳಿಯಲಿಲ್ಲ; ಮೂಢ ಳಂತೆ ವಿಲಾಸಗಳನ್ನು ತಳೆದೆನು; ಅದರಿಂದ ನನ್ನ ಮನಸ್ಸು ಕೊಬ್ಬಿ ನನ್ನನ್ನು ಮೀರಿನಿಂತಿತು. ನನ್ನ ಧೈರ್ಯವು ನಾಶವಾಯಿತು. ವಿಚಾರವು ಶೂನ್ಯವಾಯಿತು. ನನ್ನ ಸ್ಥಿತಿಯು ಈ ಮನೆಗೆ ಬಂದಿರಲು. ಒಂದುದಿನ ಶ್ರೀಮಂತ ವಿಶ್ವಾಸರಾಯರು ತಾಯಿಬಾಯಿಯ ಮನೆಗೆ ಬಂದರು. ಅಯ್ಯೋ! ಆಗಿನ ಸ್ಥಿತಿಯನ್ನು ಏನು ಹೇ ಳಲಿ! ಅವರ ಸುಂದರರೂಪವನ್ನು ಕಂಡಾಗಿನಿಂದ ನನಗೆ ಒಂದುಬಗೆಯ ಹುಚ್ಚು ಹಿಡಿದಂತಾಯಿತು. ನನ್ನ ಮನಸ್ಸು ಅವರ ಚರಣಗಳಲ್ಲಿ ಲೀನವಾಯಿತು. ಬರಬ ರುತ್ತ ಅವರ ಮನಮೋಹನಮೂರ್ತಿಯು ನನ್ನ ಹೃದಯವನ್ನು ವ್ಯಾಪಿಸಿ ಅಲ್ಲಿ ಅದು ಸ್ಥಿರವಾಗಿಯೇ ನೆಲಿಸಿತು; ಹಾಯ್! ಹಾಯ್! ದೇವಾ, ನಾನು ಮನಸ್ಸಿ ನಿಂದ ಭ್ರಷ್ಟಳಾದೆನು; ನನ್ನಿಂದ ಸಹಸ್ರಾಪರಾಧವಾಯಿತು. ದೇವಾ, ಕ್ಷಮಿಸು- ಕ್ಷಮಿಸು. ಹುಟ್ಟಾ ಪತಿಸೌಖ್ಯವನ್ನು ಕಾಣದ ಹುಟ್ಟುಗುರುಡಿಯಂತಿರುವ ನನ್ನಲ್ಲಿ

ಆ ಪುಣ್ಯಮೂರ್ತಿಯ ವಿಷಯಕ್ಕೆ ಯಾಕೆ ಪಾಪಬುದ್ಧಿಯುದ್ಭವಿಸಿತೋ ನಾನರಿಯೆ. ಕರುಣಾಳುವೇ ಹ್ಯಾಗೇಆಗಲಿ; ನಾನು ಒಮ್ಮೆ ಮನಸಿನಿಂದ ಕಡಕೊಂಡು ಬಿದ್ದೆನು; ನನ್ನಂತೆ ಸೌಖ್ಯೋಪಭೋಗಮಗ್ನರಾದ ವಿಧವೆಯರಬಾಳು ಹೀಗೆಯೇ ಸರಿ! ಆದ್ದರಿಂದ ಕರುಣಾಳುದೇವನೇ, ನನಗೂ ನನ್ನಂತೆ ಹತಭಾಗಿನಿಯರಾದ ನಮ್ಮ ಆರ್ಯಭಗಿನಿಯರಿಗೂ ಈತರದ ದುರ್ಬುದ್ಧಿಯನ್ನು ಕೊಡಬೇಡಕಂಡೆಯಾ! ಗಡ್ಡೆ-ಗೆಣಸುಗಳನ್ನು ತಿಂದು ತಪಸ್ಸನ್ನು ಮಾಡುವ ಋಷಿಗಳನ್ನೂ ಬಿಡದ ನೀಚ ಮನ್ಮಥನಿಗೆ ನಮ್ಮಂಥ ಹೆಂಗಳೆಯರಪಾಡೇನು? ಈ ಸುಗಂಧಮಯವಾದ ಕೇಶಕಲಾಪಗಳೂ, ಈ ಸುಂದರಪ್ರಾವರಣಗಳೂ, ಈ ಸೊಗಸುಬೀರುವ ಅಲಂಕಾರಗಳೂ ಉಳ್ಳ ಹಾಗು ಇವುಗಳಿಂದ ಮನೋಹರವಾಗಿ ತೋರುವ ಈ ಪುಷ್ಟವಾದ ತನುಲತೆಯನ್ನು ಆತನು ಕುಣಿದಾಡಿಸದೆ ಬಿಡುವನೇ? ದೇವಾ, ನಾನು ತಪ್ಪಿದೆನು; ಇನ್ನು ನಾನು ನಿಶ್ಚಯವಾಗಿ ಹೇಳುತ್ತೇನೆ, ಈ ಸುಖಲೋಲುಪತೆಯು ನನಗೆ ಸಾಕು! ಇವುಗಳನ್ನು ನಾನು ಪೂರ್ಣವಾಗಿ ತಿರಸ್ಕರಿಸುತ್ತೇನೆ. ದೇವಾ, ಬೇಡ, ನನ್ನ ವಿಟಂಬನೆಯನ್ನು ಮಾಡಬೇಡ; ಎಲ್ಲ ಧನಗಳಲ್ಲಿ ಮಾನಧನವು ದೊಡ್ಡದು; ಅದನ್ನು ಸೂರೆಮಾಡಬೇಡ; ನಿನಗೆ ಸೆರಗೊಡ್ಡಿಬೇಡಿಕೊಳ್ಳುತ್ತೇನೆ. ನಾನು ಪಾಪಿಷ್ಠೆಯೆಂದು ನೀನು ನನ್ನನ್ನು ತಿರಸ್ಕರಿಸಬಹುದು. ಆದರೆ ದೇವಾ, ನಾನು ಇದುವರೆಗೆ ದೇಹದಿಂದ ಭ್ರಷ್ಟಳಾಗಿರುವದಿಲ್ಲ; ಹಾಯ್, ಹಾಯ್! ಅದನ್ನು ನಾನು ಉಚ್ಚರಿಸಲಾರೆ! ರಾಮಾ, ರಾಮಾ !!

ಈ ಮೇರೆಗೆ ಮನೋಮಯ ಪ್ರಾರ್ಥನೆಯಲ್ಲಿ ರಂಗೂಬಾಯಿಯು ತೊಡಗಿರುವಾಗ ಆಕೆಯ ಕಿವಿಗಳಿಗೆ ಗಣೋಬನು ಒದರಿದ "ಅವ್ವನವರೇ" ಎಂಬ ಶಬ್ದವು ಬಿದ್ದಿತು. ಅದನ್ನು ಕೇಳಿ ಆಕೆಯು ಮೆಟ್ಟಿಬಿದ್ದು ಒಮ್ಮೆಲೆ ಎಚ್ಚತ್ತು—"ಯಾರು? ಗಣೋಬಾ, ನೀನು ನಮ್ಮ ಸಂಗಡ ಇರುವಿಯೇನು? ಬಹಳ ಒಳಿತಾಯಿತು. ದೇವರು ನನ್ನ ಮೊರೆಯನ್ನು ಕೇಳಿದನು. ಈಗ ನನ್ನಲ್ಲಿ ಹೊಸಜೀವ ಬಂದಂತಾಯಿತು; ಆದರೆ ಅಪ್ಪಾ ಗಣೋಬಾ, ನಾವು ಈಗ ಎಲ್ಲಿ ಇರುವೆವು? ನಮ್ಮ ಮೇಲೆ ಈಗ ಬಂದ ಪ್ರಸಂಗವಾದರೂ ಎಂತಹದು? ಇದರಿಂದ ನಾವು ಪಾರಾಗಬಹುದೇ?" ಎಂಬ ಪ್ರಶ್ನೆಗಳನ್ನು ಬಡಬಡ ಮಾಡಿದಳು; ಅವುಗಳನ್ನು ಸಮಾಧಾನದಿಂದ ಕೇಳಿ, ಗಣೋಬನು—"ಬಾಯಿಸಾ, ಪ್ರಸಂಗವು ಭಯಂಕರವಿರುವದು; ನಿಮ್ಮ ಮರ್ಯಾದೆಯ ಮೇಲೇ ಗದೆ ಬರುವ ಲಕ್ಷಣವಿರುತ್ತದೆ; ಇರಲಿ, ನೀವು ಮಾತ್ರ ಗಾಬರಿಯಾಗಬೇಡಿರಿ; ದಾದಾಸಾಹೇಬರ (ರಂಗೂಬಾಯಿಯ ತಂದೆ) ಪುಣ್ಯವು ನಿಮ್ಮನ್ನು ಪಾರುಮಾಡೀತು? ಧೈರ್ಯವಿರಲಿ; ನೀವು ಶ್ರೀರಾಮನಿಗೆ

ಶರಣುಹೋಗಿರಿ; ಆತನು ನಿಮ್ಮ ಕೂದಲು ಕೂಡ ಕೊಂಕಗೊಡಲಿಕ್ಕಿಲ್ಲ; ಇರಲಿ, ಅವ್ವನವರೇ, ನಿಮಗೆ ಹಸಿವೆಯಾಗಿರುವದಷ್ಟೆ? ನೀರು-ಬೀರು ತರಿಸಿ ಕೊಡಲಾ? ಬಹಳಹೊತ್ತಾಗಿರುವದು" ಎಂದು ನುಡಿಯಲು, ಆಕೆಯು—"ನನಗೆ ಹಸಿವೆಯಾಗಿಲ್ಲ; ಸ್ವಲ್ಪ ನೀರುಮಾತ್ರ ತರಿಸಿಕೊಡು; ನನ್ನ ಗಂಟಲು ಒಣಗಿರುವದು; ಸ್ವಲ್ಪ ಬಾಯಿಮುಕ್ಕಳಿಸಿಕೊಳ್ಳುತ್ತೇನೆ;" ಎಂದಳು. ಕೂಡಲೆ ಗಣೋಬನು ಅಡಿಗೆಯವನಿಗೆ ಕೆರೆಯೊಳಗಿಂದ ನೀರು ತರ ಹೇಳಿದನು. ಆತನು ಒಬ್ಬ ಮುಸಲ್ಮಾನ ಸಿಪಾಯಿಯ ಪಹರೆಯಲ್ಲಿ ಕೆರೆಗೆಹೋಗಿ ನೀರು ತಂದನು; ಬಳಿಕ ಗಣೋಬನು ರಂಗೂಬಾಯಿಯ ಕಡೆಗೆ ಹೋಗಿ—ಬಾಯಿ, ನಿಮ್ಮನ್ನು ದೇವರು ಈ ಸಂಕಟದೊಳಗಿಂದ ನಿಶ್ಚಯವಾಗಿ ಪಾರುಮಾಡುವನು, ಇದು ಸತ್ಯವು; ಆದರೆ ಮಾನಹಾನಿಯ ಪ್ರಸಂಗವಿರುವದರಿಂದ ಕಡೆಯ ಉಪಾಯವೆಂದು ಇದೊಂದು ಗುಪ್ತಿಯು (ಕೋಲಿನೊಳಗಿರುವ ಕಠಾರಿ) ನಿಮ್ಮ ಬಳಿಯಲ್ಲಿರಲಿ; ನಿಮ್ಮ ಮುಂದೆ ರಾವಣನಂತೆ ನಿಲ್ಲುವ ಆ ಚಾಂಡಾಲನಿಗೆ ನಿಮ್ಮ ಶವದ ಹೊರತು ಬೇರೆ ಏನೂ ಸಿಕ್ಕಿರಬಾರದು; ಎಂದು ನುಡಿದು ಆತನು ಆ ಗುಪ್ತಿಯನ್ನು ರಂಗೂಬಾಯಿಯ ಕೈಯಲ್ಲಿ ಕೊಟ್ಟನು. ಒಂದು ಮೊಳೆಯನ್ನು ಹತ್ತಿಕ್ಕುವದರಿಂದ ಆ ಕೋಲಿನೊಳಗಿಂದ ಸುಮಾರು ಒಂದು ಗುದ್ದುಮೊಳದಷ್ಟು ಕಠಾರಿಯು ಹೊರಗೆ ಬರುತ್ತಿತ್ತು. ಅದನ್ನು ನೋಡಿ ರಂಗೂಬಾಯಿಯು ಸ್ವಲ್ಪ ಸಮಾಧಾನ ತಾಳಿ, ಒಂದೆರಡುಸಾರೆ ಆ ಮೊಳೆಯನ್ನು ಹತ್ತಿಕ್ಕಿ ಆ ಕಠಾರಿಯನ್ನು ಹಿರಿಯುವ ಬಗೆಯನ್ನು ತಿಳಕೊಂಡಳು; ಹಾಗು ಅದನ್ನು ಅತ್ಯಂತಜತನದಿಂದ ತನ್ನ ಹತ್ತರ ಇಟ್ಟುಕೊಂಡಳು; ಆಗ ಆಕೆಗೆ ತಲೆಯ ಮೇಲಿನ ಒಂದು ಭಾರವು ಇಳಿದಂತಾಯಿತು. ಆವಳು ಒಂದು ನಿಟ್ಟುಸುರುಬಿಟ್ಟು—"ಗಣೋಬಾ, ದಾದಾಸಾಹೇಬರು ಬಹುದೂರದೃಷ್ಟಿಯಿಂದ ನನ್ನನ್ನು ನಿನ್ನ ವಶಕ್ಕೆ ಒಪ್ಪಿಸಿದಂತೆ ಕಾಣುತ್ತದೆ; ನಿನ್ನ ಉಪಕಾರವನ್ನು ನಾನು ಜನ್ಮಜನ್ಮಾಂತರದಲ್ಲಿಯೂ ಮರೆಯಲಿಕ್ಕಿಲ್ಲ ಕಂಡೆಯಾ? ನಾನು ಮೊದಲಿನಿಂದ ನಿನ್ನ ಮಾತುಕೇಳಿದ್ದರೆ ನನ್ನ ಪಾಡು ಹೀಗೆ ಆಗುತ್ತಿದ್ದಿಲ್ಲ; ಇರಲಿ, ಇನ್ನು ಮೇಲೆ ನಿನ್ನ ಮಾತನ್ನು ಅಕ್ಷರಶಃ ಪಾಲಿಸುವೆನು. ಇನ್ನೂ ನನ್ನ ಮೇಲೆ ದೇವರು ಇರುವನು; ಅಂತೇ ನನ್ನ-ನಿನ್ನ ವಿಯೋಗವಾಗಿಲ್ಲ; ಗಣೋಬಾ, ಇನ್ನು ನೀನು ಹೋಗಪ್ಪಾ; ಏನಾದರೂ ತಿಂದು ಬಾ, ನನ್ನ ಕಾಲೊಳಗೆ ನಿನ್ನ ಜೀವಕ್ಕೇನೂ ಸುಖವಿಲ್ಲ" ಎಂದು ನುಡಿಯುತ್ತಿರಲು, ಒಳಗೆ ಮಸೀದೆಯಲ್ಲಿ ಏನೋ ಗದ್ದಲವಾದಂತೆ ಕೇಳಿಸಿತು. ಆಗ ಗಣೋಬನೂ ರಂಗೂಬಾಯಿಯೂ ಲಕ್ಷಕೊಟ್ಟು ಕೇಳಲು ಹೆಂಗಸರು ಅಳುವ ದನಿಯು ಕೇಳಬರಹತ್ತಿತು. ಗಣೋ

ಬನು ಸ್ವಲ್ಪ ಚಕಿತನಾಗಿ ಬಾಗಿಲ ಒಳಭಾಗಕ್ಕೆ ಹಣಿಕಿನೋಡಲು ಅಲ್ಲಿದ್ದ ಎಲ್ಲ ಜನರ ಮೋರೆಗಳು ಬಾಡಿದಂತೆ ತೋರಿದವು. ಒಳಗೆ ಇಬ್ಬರು ಮೂವರು ಹೆಂಗಸರು ಬಿಕ್ಕಿ ಬಿಕ್ಕಿ ಅಳುತ್ತಿದ್ದರು; ಯಾರಲ್ಲಿಯೂ ಉಲ್ಲಾಸವಿರಲಿಲ್ಲ; ಆದರೆ ಆದ ಸಂಗತಿಯನ್ನು ಅವನಿಗೆ ಹೇಳುವವರಾರು? ಇದೇನಿರಬಹುದೆಂದು ಗಣೋಬನು ಯೋಚಿಸುತ್ತಿರಲು, ವಿಠೋಬಾಸಾಹೇಬನು ಹೊರಗೆಬಂದು ಬಾಗಿಲಲ್ಲಿಯೇ ನಿಂತಿರುವ ಗಣೋಬನನ್ನು ಕುರಿತು—"ನಾವು ಬೇಗನೆ ಇಲ್ಲಿಂದ ಹೊರಡಬೇಕಾಗಿದೆ, ನೀವು ನಿಮ್ಮ ಬಂಡಿಯಲ್ಲಿ ಕೂತುಕೊಳ್ಳಿರಿ. ಮೇಣೆಯನ್ನು ಒಯ್ಯುವ ಕಾರಣವಿಲ್ಲ ಎಲ್ಲರೂ ಬಂಡಿಯಲ್ಲಿಯೇ ಹೋಗತಕ್ಕದ್ದು. ವಿಲಂಬಮಾಡಿದರೆ ನಿಮಗೆ ಯೋಗ್ಯಶಾಸನವಾದೀತು" ಎಂದು ನುಡಿದು ಒಳಗೆ ಹೋದನು. ಇದನ್ನೆಲ್ಲ ನೋಡಿ ಗಣೋಬನಿಗೆ ಹುಚ್ಚುಹಿಡಿದಹಾಗಾಯಿತು. ಅವನಿಗೆ ಆಬಗ್ಗೆ ಏನೂ ತಿಳಿಯಲಿಲ್ಲ; ಮುಂದೆ ಸ್ವಲ್ಪಹೊತ್ತಿನಲ್ಲಿ ಅಲ್ಲಿಂದ ೨-೩ ಬಂಡಿಗಳೂ, ನೂರಾರುಜನ ಕುದುರೆಯಸ್ವಾರರೂ ಹೊರಟರು. ಗಣೋಬನು ನಿರುಪಾಯನಾಗಿ ಮತ್ತೆ ಏನು ಭಯಂಕರಪ್ರಸಂಗವಿರುವದೋ ಎಂದು ಯೋಚಿಸುತ್ತ ಅವರೊಡನೆ ರಂಗೂಬಾಯಿಯ ಗಾಡಿಯನ್ನು ಸಾಗಿಸಿಕೊಂಡು ನಡೆದನು.

---

ಏಳನೆಯ ಪ್ರಕರಣ.

## ಪೌರುಷ ಪ್ರದರ್ಶನ.

—:೦ಃ(೦)ಃ೦:—

ತಾಯೂಬಾಯಿಯು ಸುರಕ್ಷಿತವಾಗಿ ಛಾವಣಿಗೆ ಬಂದ ಬಳಿಕ ನಡೆದ ಎಲ್ಲ ಸಂಗತಿಯನ್ನು ಗಂಡನಮುಂದೆ ಹೇಳಿದಳು. ಅದನ್ನು ಕೇಳಿ ಬಳವಂತರಾಯನಿಗೆ ಒಂದುಬಗೆಯಿಂದ ಸಮಾಧಾನವೂ, ಮತ್ತೊಂದುಬಗೆಯಿಂದ ಅಸಮಾಧಾನವೂ ಆದವು; ತನ್ನ ಹೆಂಡತಿಯು ಕಳ್ಳರಪಾಲು ಆಗಿದ್ದರೆ ಎಷ್ಟು ಅನರ್ಥವೂ, ದುರ್ಲೌಕಿಕವೂ ಆಗುತ್ತಿತ್ತೆಂಬ ಕಲ್ಪನೆಯು ಅವನ ಮನಸ್ಸಿನಲ್ಲಿ ಬಂದು ಸುದೈವದಿಂದ ಹಾಗೆ ಆಗದ್ದಕ್ಕೆ ಆತನು ಪರಮಾತ್ಮನನ್ನು ಕೊಂಡಾಡಿದನು. ಶ್ರೀಮಂತ ಸರಕಾರದ ಇಂಥ ದೊಡ್ಡ ದಂಡು ಜಾಗ್ರತವಾಗಿರಲು ಕಳ್ಳರು ರಂಗೂಬಾಯಿಯಂಥ ಉಚ್ಚಕುಲದ ಹೆಂಣುಮಗಳನ್ನು ಅಪಹರಿಸಿಕೊಂಡು ಹೋದದ್ದು ಅತ್ಯಂತ ಲಾಂಛನಾಸ್ಪದವಾಗಿ ತೋರಿದ್ದರಿಂದ ಆ ಬಗ್ಗೆ ಆತನಿಗೆ ವಿಷಾದವಾಗಿ ಅವನು

ಕೂಡಲೆ ಭಾವೂಸಾಹೇಬನಿಗೆ ಸವಿಸ್ತಾರವಾದ ಒಂದು ಪತ್ರವನ್ನು ಬರೆದನು. ಆ ಪತ್ರದಿಂದ ಭಾವೂಸಾಹೇಬನ ತಲೆತಿರುಗಿ ಅವನು ಸಿಟ್ಟಿನಿಂದ ಸಂತಪ್ತನಾದನು. ಮಹಮ್ಮದಶಹನೇ ಈ ಕೆಲಸವನ್ನು ಮಾಡಿಸಿರಬೇಕೆಂಬ ವಿಚಾರವು ಅವನ ಮನಸ್ಸಿನಲ್ಲಿ ಹೊಳೆಯಿತು. ಕೂಡಲೆ ಆತನು ಆ ದುಷ್ಟನಬಾಬನನ್ನು ಹಿಡತರುವದಕ್ಕಾಗಿ ಕೆಲವು ಜನ ಸ್ವಾರರನ್ನು ಓಡಿಸಿದನು. ಒಮ್ಮೆಯಾವದಾದರೊಂದು ಮಾತಿನಸಲುವಾಗಿ ಸಂಶಯವು ಬಾಧಿಸಿತೆಂದರೆ ಅದನ್ನು ಪೂರ್ಣವಾಗಿ ಪರೀಕ್ಷಿಸಿದ ಹೊರತು ಅದನ್ನು ಮರೆತುಬಿಡುವ ಸ್ವಭಾವವು ಭಾವೂಸಾಹೇಬನಲ್ಲಿದ್ದಿಲ್ಲ. ಅವನು ಆ ಬಗ್ಗೆ ಆಕಾಶ-ಪಾತಾಳಗಳನ್ನು ಒಂದುಮಾಡುತ್ತಿದ್ದನು. ನಬಾಬನಮೇಲೆ ಈ ಅಪರಾಧವು ಸಿದ್ಧವಾದರೆ ಅವನ ಗ್ರಾಮವನ್ನು ನೆಲಸಮಮಾಡಲಿಕ್ಕೆ ಭಾವೂ ಸಾಹೇಬನು ಭೇಲಶಾದ ಕಮಾವೀಸದಾರನಿಗೆ ಅಪ್ಪಣೆಕೊಟ್ಟನು; ಹಾಗು ರಂಗೂಬಾಯಿಯ ಶೋಧಕ್ಕಾಗಿ ನಾಲ್ಕುಕಡೆಗೂ ಸೈನಿಕರನ್ನು ಕಳಿಸಿದನು.

ಹೀಗೆ ಭಾವೂಸಾಹೇಬನಿಂದ ಆಜ್ಞಾಪ್ತರಾದ ಸ್ವಾರರು ಹಿಂದಿನ ಐದನೆಯ ಪ್ರಕರಣದ ಕೊನೆಯಲ್ಲಿ ಹೇಳಿದಂತೆ ನಬಾಬಸಾಹೇಬನು ದರ್ಗಾಕ್ಕೆ ಓಡಿಹೋಗುತ್ತಿರುವ ಸಮಯದಲ್ಲಿ ಅವನನ್ನು ಮುತ್ತಿ ಸೆರೆಹಿಡಿದುತಂದು ಭಾವೂಸಾಹೇಬನಿಗೆ ವರದಿಯನ್ನು ಮುಟ್ಟಿಸಿದರು. ಆದರೆ ಆಗ ರಾತ್ರಿಯು ಬಹಳವಾದ್ದರಿಂದ ಭಾವೂಸಾಹೇಬನು ನಬಾಬನನ್ನೂ, ರೂಪಜಿಯನ್ನೂ ಸೆರೆಯಲ್ಲಿಡಲು ಆಜ್ಞಾಪಿಸಿ ಮಲಗಲಿಕ್ಕೆ ಹೊರಟುಹೋದನು. ಮರುದಿನ ಸಿರೋಜ ಮುಕಾಮಿನಲ್ಲಿ ಭಾವೂಸಾಹೇಬನು ನಬಾಬನನ್ನೂ, ರೂಪಜಿಯನ್ನೂ ಕರತರಿಸಿ ಚೌಕಸಿಮಾಡಿದನು. ಆದರೆ ನಬಾಬನು ಯಾವದನ್ನೂ ನಾನರಿಯೆನೆಂದು ಕಿವಿಯಮೇಲೆ ಕೈಯಿಟ್ಟುಕೊಂಡನು. ಅವನ ಆ ಮಾತುಗಳು ಭಾವೂಸಾಹೇಬನಿಗೆ ನಿಜವೆಂದು ತೋರಲಿಲ್ಲ; ಅವನು ನಬಾಬನಮೇಲೆ ಸಂತಪ್ತನಾಗಿ ರಂಗೂಬಾಯಿಯ ಶೋಧವಾಗುವವರೆಗೆ ಇವರನ್ನು ಸೆರೆಯಲ್ಲಿಯೇ ಇಡಬೇಕೆಂದು ಸೇವಕರಿಗೆ ಅಪ್ಪಣೆಮಾಡಿದನು. ಈ ಭಯಂಕರವಾದ ಅಪ್ಪಣೆಯನ್ನು ಕೇಳಿ ನಬಾಬನು ಮನಸ್ಸಿನಲ್ಲಿ ಭಾವೂಸಾಹೇಬನಮೇಲೆ ಹಲ್ಲುಕಡಿಯಹತ್ತಿದನು. ಆದರೆ ಮಾಡುತ್ತಾನೇನು? ಬಿತ್ತಿದಫಲವನ್ನುಉಣ್ಣುತ್ತ ಸೆರೆಮನೆಯಲ್ಲಿ ಬೀಳಬೇಕಾಯಿತು.

ಈ ವೇಳೆಗೆ ಭಾವೂಸಾಹೇಬನು ನಬಾಬನನ್ನು ಪ್ರತಿಬಂಧಿಸಿ ಸಿರೋಜ ಮುಕ್ಕಾಮಿನಿಂದ ಉತ್ತರಕ್ಕೆ ಭರದಿಂದ ಪ್ರಯಾಣಬೆಳಿಸಿದನು. ಅವನು ಪಠಾಣರ ಪಾರುಪತ್ಯಕ್ಕಾಗಿ ವೀಳ್ಯವನ್ನು ಸ್ವೀಕರಿಸಿದ್ದರಿಂದ ಯಾವಾಗ ಪಠಾಣರಿಗೆ ಕೈತೋರಿಸೇನೆಂಬ ಉತ್ಕಂಠೆಯು ಅವನಲ್ಲಿ ಹೆಚ್ಚಾಗತೊಡಗಿತ್ತು; ಜ್ಯೇಷ್ಠ ಶು॥ ೧ ಗೆ

ಸಿರೋಂಜವನ್ನು ಬಿಟ್ಟು ಆವನು ಜ್ಯೇಷ್ಠ ಕೊನೆಯೊಳಗಾಗಿ ಗ್ವಾಲೇರಿಗೆ ಹೋಗಿ ಮುಟ್ಟಿದನು. ಗ್ವಾಲೇರಿಯು ಜಗಪ್ರಸಿದ್ಧ ಕಿಲ್ಲೆಯನ್ನು ನೋಡಿ ಅವನಿಗೆ ಆನಂದವಾಯಿತು. ಆ ಕಾಲಕ್ಕೆ ಆ ಕಿಲ್ಲೆಯು ಸಿಂಧೆ ಸರದಾರನ ವಶದಲ್ಲಿತ್ತು; ಉತ್ತರ ಹಿಂದುಸ್ಥಾನದಲ್ಲಿ *ಸಿಂಧೆ-ಹೋಳಕರರೇ ಮರಾಟರ ಪ್ರಮುಖರ ಸದಾರರಿದ್ದು, ಅವರ ವಶದಲ್ಲಿ ಅಪಾರವಾದ ಸೈನ್ಯವೂ ಇತ್ತು; ಇಷ್ಟೇಅಲ್ಲ; ಅವರು ಆ ಪ್ರಾಂತದ ಆಯಕಟ್ಟಿನ ಸ್ಥಳಗಳನ್ನು ಪೂರ್ಣವಾಗಿ ಬಲ್ಲವರಿದ್ದರು. ಆದ್ದರಿಂದ ಅವರ ವಿಚಾರದಂತೆ ಭಾವೂಸಾಹೇಬನು ಕೆಲಸವನ್ನು ನಡಿಸಿದ್ದರೆ ಮುಂದಿನ ಭವಿಷ್ಯವು ಬೇರೆಯಾಗುತ್ತಿತ್ತು; ಗ್ವಾಲೇರಿಯು ಕೋಟೆಯು ಭದ್ರವಾದದ್ದಿದ್ದು ಅಲ್ಲಿ ಆಹಾರ ಸಾಮಗ್ರಿಯಾದರೂ ವಿಶೇಷವಾಗಿ ಇದ್ದದರಿಂದ ಅಲ್ಲಿ ಹೆಂಗಸರನ್ನೂ ಹುಡುಗರನ್ನೂ ಇಟ್ಟು, ಅರಿಸಿದ ದಂಡಿನೊಡನೆ ಮುಂದೆ ಸಾಗಬೇಕೆಂದು ಹೋಳಕರನು ಭಾವೂಸಾಹೇಬನಿಗೆ ಬಹುಪರಿಯಾಗಿ ಹೇಳಿಕೊಂಡನು. ಆದರೆ ದೈವಗತಿಯು ವಿಚಿತ್ರವಿದ್ದದರಿಂದ ಆವನು ಹೋಳಕರನ ಮಾತುಗಳನ್ನು ಕಿವಿಯಮೇಲೆ ಹಾಕಿಕೊಳ್ಳಲಿಲ್ಲ.

ಭಾವೂಸಾಹೇಬನು ಶೂರನಿದ್ದನು; ಮುತ್ಸದ್ದಿಯೂ ಇದ್ದನು; ಆದರೆ ಸ್ವಲ್ಪ ಚಂಡಿತನವು ಮಾತ್ರ ಆತನಲ್ಲಿ ಸೇರಿಕೊಂಡಿತ್ತು. ತನ್ನ ಮನಸ್ಸಿಗೆ ಯೋಗ್ಯವೆಂದು ತೋರಿದ್ದನ್ನು ಮಾಡದೆ ಆತನು ಎಂದೂ ಬಿಡುತ್ತಿದ್ದಿಲ್ಲ. ರಾಜಪುರುಷರಿಗೂ ಸಾರ್ವಜನಿಕ ಕಾರ್ಯಗಳನ್ನು ಮಾಡಬಯಸುವ ಪುರುಷರಿಗೂ ಇಂಥ ಅಧಿಕಪ್ರಸಂಗಿಯ ಆತ್ಮಪ್ರತ್ಯಯವು ಕೆಲಸದ್ದಲ್ಲವೆಂದು ಹೇಳಬಹುದು. ಇದರಿಂದ ಒಮ್ಮೊಮ್ಮೆ ಆತ್ಮವಿಶ್ವಾಸದ ದುರುಪಯೋಗವನ್ನು ಮಾಡಿಕೊಂಡಂತಾಗುತ್ತದೆ. ಈ ಬಗೆಯ ಸ್ವಭಾವವು ಭಾವೂಸಾಹೇಬನಲ್ಲಿ ಮನೆಮಾಡಿಕೊಂಡದ್ದರಿಂದ ಆತನು ತನ್ನ ಆಯುಷ್ಯದಲ್ಲಿ ಯಾರಿಗೂ ಸೊಪ್ಪುಹಾಕಲಿಲ್ಲ; ಆದರೆ ಆದರಿಂದ ಕಾರ್ಯವು ಮಾತ್ರ ಸಾಧಿಸಲಿಲ್ಲ; ಈ ಬಗೆಯ ಚಂಡಿತನ ಅರ್ಥಾತ್ ದುರಭಿಮಾನವೊಂದನ್ನು ಬಿಟ್ಟು ಭಾವೂಸಾಹೇಬನಲ್ಲಿ ಶ್ಲಾಘನೀಯವಾದ ಅನೇಕ ಗುಣಗಳಿದ್ದವು. ಶತ್ರುವು ಎಷ್ಟೇ ಬಲಿಷ್ಠನಿದ್ದರೂ ಅವನೆದುರಿಗೆ ನಿರ್ಭಯದಿಂದ ನಿಲ್ಲುವ ಅವನ ಅಸಾಧಾರಣ ಧೈರ್ಯವೂ, ಸೈನಿಕರನ್ನು ಹೊಟ್ಟೆಯ ಮಕ್ಕಳಂತೆ ನೋಡುವ ಆತನ ದಯಾಳುಗುಣವೂ, ಸಾಮ್ರಾಜ್ಯದ ಸರ್ವಸೂತ್ರಗಳನ್ನು ಕೈಯಲ್ಲಿ ತಕ್ಕೊಂಡು ತನ್ನ ತಂತ್ರದಿಂದಲೇ ಅವುಗಳನ್ನು ನಡಿಸುವ ದರ್ಪವೂ, ನಿರ್ಲೋಭ-ನಿಯಮಿತತನಾದಿ ಅವರ್ಣನೀಯ ಗುಣಗಳು ಅವನ ಗೌರವವನ್ನು ಹೆಚ್ಚಿಸುತ್ತಿದ್ದವು; ಆತನು ಪರರಮಾನಖಂಡನೆಯನ್ನು ನಿರರ್ಥಕವಾಗಿ ಎಂದೂ ಮಾಡುತ್ತಿ

ದ್ದಿಲ್ಲ; ಸ್ವಮರ್ಯಾದೆಯನ್ನು ಕಾಯ್ದುಕೊಳ್ಳಲಿಚ್ಛಿಸುವವನು ಅನ್ಯರ ಅವಮಾನವನ್ನು ಮಾಡದಿರುವದು ಸ್ವಾಭಾವಿಕವೇ ಆಗಿರುವದು!

ಭಾವೂಸಾಹೇಬನ ಪ್ರಯಾಣದ ಗತಿಯು ಹಳ್ಳದ ಓಟವನ್ನು ಅನುಸರಿಸಿದ್ದರಿಂದ ಆತನು ಗ್ವಾಲ್ಹೇರಿಯಲ್ಲಿ ಬಹಳ ದಿವಸ ನಿಲ್ಲದೆ ಧೋಲಪುರದ ಮಾರ್ಗವಾಗಿ ಹೊರಟು ಚಂಬಳಾನದಿಯನ್ನು ದಾಟಿ ಮುಚಕುಂದವೆಂಬ ತೀರ್ಥದ ನೆರೆಯಲ್ಲಿ ತಳವನ್ನು ಊರಿದನು. ಆ ಪ್ರಾಂತದಲ್ಲಿ ಬೇಸಿಗೆಯಲ್ಲಿ ಅತಿ ಉಷ್ಣವೂ, ಮಳೆಗಾಲದಲ್ಲಿ ಅತಿ ಮಳೆಯೂ, ಚಳಿಗಾಲದಲ್ಲಿ ಅತಿಶಯ ಚಳಿಯೂ ಬೀಳುತ್ತದೆ. ಭಾವೂಸಾಹೇಬನು ಅಲ್ಲಿಗೆ ಹೋದಾಗ ಬೇಸಿಗೆಯು ಅಂತ್ಯಭಾಗವಿದ್ದದರಿಂದ ಹವೆಯಲ್ಲಿ ಪ್ರಖರೋಷ್ಣತೆಯು ನೆಲೆಗೊಂಡಿತ್ತು. ಮುಸಲ್ಮಾನರಂತೆ ಮರಾಟರು ಇನ್ನೂ ಐಷ ಆರಾಮಕ್ಕೆ ಮೆಚ್ಚದೆ ಇದ್ದದರಿಂದಲೂ ಅವರಲ್ಲಿ ಪೌರುಷಪ್ರಿಯತೆಯು ಜಾಗ್ರತವಿದ್ದದರಿಂದಲೂ ಅವರು ಆ ಪ್ರಾಂತದ ಅಸಹ್ಯವಾದ ಉಷ್ಣತೆಯನ್ನು ಸಹಿಸಿಕೊಂಡು, ದಿನಾಲು ೨೦ ಮೈಲುಗಳವರೆಗೆ ಸಹಜವಾಗಿ ಪ್ರಯಾಣಮಾಡುತ್ತಿದ್ದರು. ದಕ್ಷಿಣದಿಂದ ಹೊರಟಂದಿನಿಂದ ಮರಾಟಸೈನಿಕರಿಗೆ ಹಸಿವೆ-ನೀರಡಿಕೆ-ಬಿಸಿಲು-ಗಾಳಿಗಳನ್ನು ಸಹಿಸಿ ಸಹಿಸಿ ಮೈಯುಂಡಂತಾಗಿತ್ತು; ಮೇಲೆಹೇಳಿದ ಮುಚಕುಂದತೀರ್ಥದಲ್ಲಿ ತೀರ್ಥವಿಧಿಯನ್ನು ತೀರಿಸಿಕೊಂಡಬಳಿಕ ಭಾವೂಸಾಹೇಬನು ಮಾರ್ಗಾಯಾಸವನ್ನು ಲೆಕ್ಕಿಸದೆ ಆಗ್ರಾದ ಮಾರ್ಗವನ್ನು ಹಿಡಿದನು. ಹಾದಿಯಲ್ಲಿ ಸಿಂಧೆ, ಹೋಳಕರರ ಸೈನ್ಯಗಳು ಬಂದು ಕೂಡಿದವು. ಈ ಪ್ರಕಾರ ಪೇಶವೆಯವರ ಹಾಗು ಮರಾಟಸರದಾರರ ಏಕೀಭವಿಸಿದ ಸೈನ್ಯವು ಸಮುದ್ರದಂತೆ ಗಂಭೀರವಾಗಿ ತೋರುತ್ತ ಆಗ್ರಾದ ನೆರೆಯಲ್ಲಿ ಬೀಡುಬಿಟ್ಟಿತು. ದತ್ತಾಜಿಸಿಂಧೆಯು ತೀರಿಕೊಂಡನಂತರ ಜನಕೋಜಿಗೆ ದೊರೆಯತಕ್ಕ ಸಂದಾರೀವಸ್ತ್ರವು ಇನ್ನೂ ಆತನಿಗೆ ದೊರಕದೆ ಇದ್ದದರಿಂದ ಭಾವೂಸಾಹೇಬನು ದೊಡ್ಡ ದರ್ಬಾರವನ್ನು ನೆರೆಯಿಸಿ, ಜನಕೋಜಿಗೆ ಬಹು ಸನ್ಮಾನಪೂರ್ವಕವಾಗಿ ಸಂದಾರೀವಸ್ತ್ರವನ್ನು ಕೊಟ್ಟನು; ಹಾಗು ಪೇಶ್ವಾಯಿಯ ಅನುಮತಿಯಿಂದ ಆತನಿಗೆ ಆನೆ, ಕುದುರೆಗಳನ್ನು ಕೊಟ್ಟನು; ಶ್ರೀಮಂತ ನಾನಾಸಾಹೇಬಪೇಶ್ವೆಯ ಸ್ಥಳದಲ್ಲಿ ವಿಶ್ವಾಸರಾಯನು ಇದ್ದದರಿಂದ ಆತನಿಗೆ ಜನಕೋಜಿಯು ಕಾಣಿಕೆಯನ್ನು ಒಪ್ಪಿಸಿ ಮುಜುರೆಮಾಡಿದನು. ಆ ಕಾಲದಲ್ಲಿ ವಿಶ್ವಾಸರಾಯನ ಹಾಗು ಜನಕೋಜಿ ಇವರಿಬ್ಬರ ಸುಂದರಮೂರ್ತಿಗಳನ್ನು ನೋಡಿ ಸಭಿಕರಿಗೆ ಬಹು ಆನಂದವಾಯಿತು. ಅವರಿಬ್ಬರೂ ಸಮಾನವಯಸ್ಸಿನವರಾಗಿದ್ದರು. ಅವರಿಬ್ಬರಲ್ಲಿಯೂ ಲವ-ಕುಶರಂತೆ ಸಮ-ಸಮಾನ ಪರಾಕ್ರಮವು ಒಪ್ಪುತ್ತಿತ್ತು; ರೂಪದಿಂದಲೂ, ಸದಾಚರಣದಿಂದಲೂ, ವಿನಯಾದಿ ಗುಣ

ವಿಶೇಷದಿಂದಲೂ ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಿದ್ದರು; ಇಂಥ ಅಪೂರ್ವವ್ಯಕ್ತಿಗಳು ಒಂದೇಕಡೆಯಲ್ಲಿ ಸೇವ್ಯಸೇವಕಭಾವದಿಂದ ನಿಂತುಕೊಂಡದ್ದನ್ನು ನೋಡಿ ಯಾರಿಗೆ ಆನಂದವಾಗಲಿಕ್ಕಿಲ್ಲ? ಜನಕೋಜಿಯು ಬೊಗ್ಗಿ ಮುಜುರೆಯನ್ನು ಮಾಡುವಾಗ್ಗೆ ವಿಶ್ವಾಸರಾಯನು ಅಭ್ಯುತ್ಥಾನದಿಂದ ಆತನನ್ನು ಸನ್ಮಾನಿಸಿ ಆತನಿಗೆ ತನ್ನ ಕೈಮುಟ್ಟಿ ವಸ್ತ್ರಗಳನ್ನು ಕೊಟ್ಟನು. ಈ ನರವೀರರು ಮುಂದೆ ಒಬ್ಬರನ್ನೊಬ್ಬರು ಬಹಳವಾಗಿ ಪ್ರೀತಿಸಹತ್ತಿದರು. ಪರಮೇಶ್ವರನು ಅವರಿಬ್ಬರ ಮರಣವನ್ನು ಮುಂದಿನ ಯುದ್ಧದಲ್ಲಿ ಯೋಜಿಸದಿದ್ದರೆ ಹಿಂದು ಮಾತೆಯು ಅಟ್ಟಹಾಸಕ್ಕೆ ಎಣೆಯಿರುತ್ತಿದ್ದಿಲ್ಲ.

ಈ ಸಮಯದಲ್ಲಿ ಒಟ್ಟುಗೂಡಿದ ಮರಾಟಸೈನ್ಯವನ್ನು ನೋಡಿ ಭಾವೂ ಸಾಹೇಬನಿಗೆ ಹಿಡಿಸಲಾರದಷ್ಟು ಆನಂದವಾಯಿತು. ತನ್ನ ಪ್ರತಿಜ್ಞೆಯು ಕೈಗೂಡಿತೆಂದು ಆತನು ಭಾವಿಸಿದನು. ಶ್ರೀಮಂತರ ದಂಡು ೫೦ ಸಾವಿರ ಇದ್ದು, ಸಿಂಧೆ ಹೋಳಕರರ ಸೈನ್ಯವು ೨೫ ಸಾವಿರಕ್ಕೆ ಮೀರಿತ್ತು; ಹೀಗೆ ಈ ಮುಕ್ಕಾಲುಲಕ್ಷ ಸೈನ್ಯವಲ್ಲದೆ ಅಷ್ಟೇ ಬಾಜಾರಬುಣಗೂ ಇದ್ದದರಿಂದ ಸೈನ್ಯದ ಒಟ್ಟುಸಂಖ್ಯೆಯು ಒಂದೂವರೆಲಕ್ಷವನ್ನು ಮೀರಿತೆಂದು ಹೇಳಬಹುದು; ಇಂಥ ಪ್ರಚಂಡದಂಡಿನೊಂದಿಗೆ ಅಬ್ದಾಲಿಯಮೇಲೆ ಬಿದ್ದು, ಇಬ್ರಾಹಿಮಖಾನನ ತೋಫುಗಳ ಹೊಡತಗಳಿಂದ ಅವನನ್ನು ನುಚ್ಚುನುಚ್ಚಾಗಿ ಹಾರಿಸುವೆನೆಂದು ಭಾವೂಸಾಹೇಬನು ಮನಸ್ಸಿನಲ್ಲಿ ಮಂಡಿಗೆತಿನ್ನುತ್ತಿದ್ದನು; ಉತ್ತರಹಿಂದುಸ್ತಾನದಲ್ಲಿ ನಮ್ಮಲ್ಲಿಯಂತೆ ಜ್ಯೇಷ್ಠಮಾಸದಲ್ಲಿ ಮಳೆಯು ಪ್ರಾರಂಭವಾಗದೆ ಬಹುಶಃ ಶ್ರಾವಣಮಾಸದಲ್ಲಿ ಪ್ರಾರಂಭವಾಗುತ್ತಿರುವದರಿಂದ ಮಳೆಗಾಲಬರುವಷ್ಟರಲ್ಲಿ ಹಾಗು ಬಂಗಾಲದ ನಬಾಬನಾದ ಸುಜಾಉದ್ದೌಲನು ಅಬ್ದಾಲಿಯನ್ನು ಕೂಡಿಕೊಳ್ಳುವಷ್ಟರಲ್ಲಿ ತಾನು ಅಬ್ದಾಲಿಯ ಸಮಾಚಾರವನ್ನು ತಕ್ಕೊಳ್ಳಬೇಕೆಂಬ ಯೋಚನೆಯಿಂದ ಭಾವೂಸಾಹೇಬನು ಯಮುನಾನದಿಯನ್ನು ದಾಟಲಿಕ್ಕೆ ಹವಣಿಸಹತ್ತಿದನು. ಆದರೆ ಬುಂದೇಲಿಯ ಗೋವಿಂದಪಂತನು ಹೊತ್ತಿಗೆ ಸರಿಯಾಗಿ ನಾವುಗಳನ್ನು ಒದಗಿಸಿಕೊಡದ್ದರಿಂದ ಭಾವೂಸಾಹೇಬನು ಆ ಹವ್ಯಾಸವನ್ನು ಬಿಟ್ಟು ಪ್ರಸಂಗಬಂದಾಗ ಆಗ್ರಾದಲ್ಲಿ ಹೆಂಗಸರನ್ನೂ ಹುಡುಗರನ್ನೂ ಇಡುವದಕ್ಕಾಗಿ ತಕ್ಕ ಬಂದೋಬಸ್ತನ್ನು ಮಾಡಿ ದಿಲ್ಲಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಮಥುರೆಯ ಕಡೆಗೆ ಸಾಗಿದನು.

ಇತ್ತ ಅಬ್ದಾಲಿಯು ಮರಾಟರು ತನ್ನ ಮೇಲೆ ಸಾಗಿಬರುವದನ್ನು ನೋಡಿ ಖಿಶಿಗೊಂಡನು. ಅವನು ತನ್ನ ದಂಡನ್ನು ಒಟ್ಟುಗೂಡಿಸಿ, ಹಿಂದುಸ್ತಾನದೊಳಗಿನ ಬೇರೆ ಬೇರೆ ಮುಸಲ್ಮಾನ ಸರದಾರ-ಸುಭೇದಾರರನ್ನು ತನ್ನ ಸಹಾಯಕ್ಕಾಗಿ ಕರೆ

ಯಹತ್ತಿದನು. ಬಂಗಾಲದ ನಬಾಬನಾದ ಸುಜಾಉದ್ದೌಲನೆಂಬವನು ಅಬ್ದಾಲಿಯ ಪಕ್ಷವನ್ನು ಹಿಡಿದು ತನ್ನ ದಂಡಿನೊಡನೆ ಅವನನ್ನು ಕೂಡಿಕೊಂಡನು. ಇದರಿಂದ ಎಲ್ಲ ಮುಸಲ್ಮಾನರಿಗೂ ಆನಂದವಾಯಿತು. ಹೀಗೆ ಅಬ್ದಾಲಿಯು ತನ್ನ ಬಲವನ್ನು ಹೆಚ್ಚಿಸುತ್ತ ಮರಾಟರನ್ನು ಎದುರಿಸಲಿಕ್ಕೆ ಸಮರ್ಥನಾಗಹತ್ತಿದನು.

ಈ ಮೇರೆಗೆ ಅಬ್ದಾಲಿಯು ಕಾಳಗಕ್ಕೆ ಸನ್ನದ್ಧನಾಗುವಯತ್ನದಲ್ಲಿರಲು, ಭಾವೂಸಾಹೇಬನು ಮಥುರೆಯನ್ನು ಮುಟ್ಟಿ ಅಲ್ಲಿ ಸಮಾಧಾನದಿಂದ ಎಲ್ಲ ದರ್ಶನೀಯ ಸ್ಥಳಗಳನ್ನು ನೋಡಿದನು. ನಾನಾಫಡಣವೀಸನು ತನ್ನ ಆತ್ಮ ಚರಿತ್ರದಲ್ಲಿ ಮಥುರೆಯೊಳಗಿನ ಹಾಗು ವೃಂದಾವನದೊಳಗಿನ ತಾವುಆಗ ನೋಡಿದ ದರ್ಶನೀಯ ಸ್ಥಳಗಳ ವರ್ಣನೆಯನ್ನು ಸ್ಪಷ್ಟವಾಗಿ ಉಲ್ಲೇಖಿಸಿರುವನು. ಆತನ ಆ ಉಲ್ಲೇಖದ ಸಾರಾಂಶವೇನಂದರೆ—“ಮಥುರಾ-ವೃಂದಾವನಗಳು ಶ್ರೀಕೃಷ್ಣಪರಮಾತ್ಮನ ಬಾಲಕ್ರೀಡೆಯ ಪವಿತ್ರಸ್ಥಳಗಳಾಗಿರುವವು; ಅಲ್ಲಿ ಬಾವಾ-ಭೈರಾಗಿಗಳು ಕೇವಲ ವೈರಾಗ್ಯದಿಂದ ಸಾವಿರಾರು ವರ್ಷಗಳಿಂದಲೂ ವಾಸಿಸುತ್ತಬಂದಿರುವರು; ಅವರು ಯಾವಾಗಲೂ ಶ್ರೀ ಕೃಷ್ಣನ ಧ್ಯಾನದಿಂದ ಭಕ್ತಿರಸಾಸ್ವಾದವನ್ನು ಸವಿಯುತ್ತ ನಿಜಾನಂದದಲ್ಲಿ ಮಗ್ನರಾಗಿರುತ್ತಾರೆ. ಅಲ್ಲಿ ಅನೇಕ ಜನ ಸಾಧುಸತ್ಪುರುಷರ ಹಾಗು ದೇವಾಲಯಗಳ ದರ್ಶನವಾಗುತ್ತದೆ. ಅಟಲಬಿಹಾರಿ, ಕುಂಜಬಿಹಾರಿ, ರಾಧಾಕಿಶೋರ, ಗೋವಿಂದಜಿ ಮೊದಲಾದ ಗುಡಿಗಳಲ್ಲಿಯ ಭಗವನ್ಮೂರ್ತಿಗಳು ದರ್ಶನೀಯವಾಗಿರುತ್ತವೆ. ಭಗವಂತನು ರಾಧೆಯನ್ನು ಶೃಂಗರಿಸಿದ ಸ್ಥಳಕ್ಕೆ ಶೃಂಗಾರವಟವಂತಲೂ, ಮುರಲಿಯನ್ನು ಬಾರಿಸಿದ ಸ್ಥಳಕ್ಕೆ ವಂಶೀವಟವೆಂತಲೂ ಅನ್ನುತ್ತಾರೆ; ಇವಲ್ಲದೆ ಸೇವಾವನ-ಕುಂಜವನ ಮೊದಲಾದ ವನಗಳು ಬಹು ಮನೋಹರವಾಗಿರುತ್ತವೆ. ಈ ಸ್ಥಳಗಳನ್ನು ನೋಡುವಾಗ ಈಗ ಅವುಗಳಲ್ಲಿ ಪ್ರತ್ಯಕ್ಷ ಕೃಷ್ಣಪರಮಾತ್ಮನು ಕ್ರೀಡಿಸುತ್ತಿರುವನೋ ಎಂಬಂತೆ ನಮಗೆ ಭಾಸವಾಯಿತು. ಯಮುನೆಯ ತೀರದಲ್ಲಿ ಭಗವಂತನು ಅನೇಕ ಲೀಲೆಗಳನ್ನು ಮಾಡಿರುವನೆಂದು ತಿಳಿದು ನಮ್ಮಲ್ಲಿಯ ಅನೇಕರು ಅಲ್ಲಿಯ ಉಸುಕಿನ ಕಣಗಳನ್ನು ಶಿರಸ್ಸಿನಲಿ ಧರಿಸಿದರು.”

ಈ ಪ್ರಕಾರ ಭಾವಿಕ ಜನರು ತೀರ್ಥಯಾತ್ರೆಗಳ ಹಾಗು ದೇವರ ದರ್ಶನವನ್ನು ತೆಗೆದುಕೊಳ್ಳುತ್ತಿರಲು, ಭಾವೂಸಾಹೇಬನು ತನ್ನ ಧ್ಯೇಯವನ್ನು ಮರೆತಿರಲಿಲ್ಲ; ಅಬ್ದಾಲಿಯು ಮುಸಲ್ಮಾನ ಸರದಾರರನ್ನು ತನ್ನ ಕಡೆಗೆ ಜಗ್ಗಿಕೊಳ್ಳುತ್ತಿದ್ದರೆ ಭಾವೂಸಾಹೇಬನು ಹಿಂದೂಸರದಾರರನ್ನು ಪ್ರೋತ್ಸಾಹಿಸಿ ಅವರನ್ನು ತನ್ನ ಪಕ್ಷಕ್ಕೆ ಒಲಿಸಿಕೊಳ್ಳುತ್ತಿದ್ದನು. ಬುಂದೇಲಖಂಡದ ‘ಹಿಂದುಪತ’ ಮೊದಲಾದ ಅರಸರು

ತಮ್ಮ ತಮ್ಮ ದಂಡಿನೊಡನೆ ಮರಾಟರನ್ನು ಕೂಡಿಕೊಳ್ಳುವಂತೆ ಪ್ರಯತ್ನವಾ ಡೆಂದು ಭಾವೂಸಾಹೇಬನು ಗೋವಿಂದಪಂತನಿಗೆ ಹಲವುಸಾರೆ ಪತ್ರಬರೆದನು. ಆದರೆ ಗೋವಿಂದಪಂತನು ಅತ್ಯಂತ ಕಪಟಿಯಾಗಿದ್ದು, ಮರಾಟರ ಉತ್ಕರ್ಷವನ್ನು ನಿಷೇಧಿಸುತ್ತಿದ್ದನು. ಇಂಥವನಿಂದ ಉಪಕಾರವಾಗುವದರ ಬದಲು ಅಪಕಾರವಾ ಗದಿದ್ದರೆ ಸಾಕಾಗಿತ್ತು; ಹೀಗೆ ಗೋವಿಂದಪಂತನ ಔದಾಸೀನ್ಯದಿಂದ ಬುಂದೇಲ ಖಂಡದ ದೂರದೂರಿನ ರಾಜರು ಮರಾಟರ ಸಹಾಯಕ್ಕೆ ಒದಗಲಿಲ್ಲ. ಆದರೆ ಮಥುರೆಯ ಸಮೀಪದಲ್ಲಿರುವ ಭರತಪುರದ ಜಾಟಜಾತಿಯ ಸುರಜಮಲ್ಲಸರದಾರನು ಮರಾಟರಿಗೆ ಸಹಾಯಮಾಡಲಿಕ್ಕೆ ಸಂತೋಷದಿಂದ ಒಪ್ಪಿಕೊಂಡನು. ಸಿಂಧೆ-ಹೋಳಕರರ ಅಭಿಪ್ರಾಯದಂತೆ ಭಾವೂಸಾಹೇಬನು ಒಂದುಮೈಲಿನ ವರೆಗೆ ಹೋಗಿ ಸುರಜಮಲ್ಲನನ್ನು ಎದುರ್ಗೊಂಡು ಆವನನ್ನು ಗೌರವಿಸಿದನು; ಮತ್ತು ಆತನಿಗೆ ಆನೆ-ಕುದುರೆಗಳನ್ನು ಉಚಿತವಾಗಿ ಕೊಟ್ಟು ಅವನ ಪ್ರೇಮವನ್ನು ಸಂಪಾದಿಸಿ ದನು. ಸುರಜಮಲ್ಲನು ಖಂಬೀರನಿದ್ದು ಭಾವೂಸಾಹೇಬನ ಪ್ರಚಂಡವಾದ ದಂಡಿ ಗೆ ಆಹಾರಸಾಮಗ್ರಿಯನ್ನು ಒದಗಿಸಿಕೊಡುವದಕ್ಕೆ ಒಪ್ಪಿಕೊಂಡನು. ಇತ್ತ ಸುಜಾ ಉದ್ದೌಲನು ಅಬ್ದಾಲಿಯ ದಂಡಿಗೆ ಆಹಾರವನ್ನು ಪೂರೈಸಿಕೊಡುವದಕ್ಕೆ ಒಪ್ಪಿಕೊಂ ಡಿದ್ದನು. ಹೀಗೆ ಸಮ ಸಮಾನಬಲವುಳ್ಳ ಪ್ರತಿಸ್ಪರ್ಧಿಗಳಾದ ಭಾವೂಸಾಹೇಬ-ಅಬ್ದಾಲಿ ಇವರಿಬ್ಬರು ಯಮುನಾನದಿಯ ದಕ್ಷಿಣೋತ್ತರ ಭಾಗಗಳಲ್ಲಿ ಕಾದಾಡ ಲಿಚ್ಛಿಸುವ ಮದೋನ್ಮತ್ತ ಆನೆಗಳಂತೆ ತಮ್ಮ ತಮ್ಮ ಪಕ್ಷವನ್ನು ಬಲಿಸಿಕೊಳ್ಳು ತ್ತಿದ್ದರು.

ಶ್ರಾವಣ ಶು|| ೬ ದಿವಸ ಅಂದರೆ ಸನ್ ೧೭೬೦ನೇ ಜುಲೈ ೧೦ನೇ ತಾರೀಖಿನ ದಿವಸ ಸುಜಾಉದ್ದೌಲನು ತನ್ನ ಸಾಮರ್ಥ್ಯವನ್ನು ಅಬ್ದಾಲಿಯ ತಕ್ಕಡಿಯಲ್ಲಿ ಚಲ್ಲಿದನು. ಆದರೆ ಆರೇದಿನಗಳ ಅವಧಿಯಲ್ಲಿ ಭಾವೂಸಾಹೇಬನು ಅವನನ್ನು ಪಶ್ಚಾತ್ತಾಪಕ್ಕೆ ಗುರಿಮಾಡಿದನು. ಮಥುರೆಯಿಂದ ದಿಲ್ಲಿಯ ಮಾರ್ಗವು ಸರಳ ವಿದ್ದು, ದಿಲ್ಲಿಯಲ್ಲಿ ಪಠಾಣರ ದಂಡು ತೀರಸ್ವಲ್ಪ ಇರುವದರಿಂದ ಅದನ್ನು ಮೊದಲು ಕೈವಶಮಾಡಿಕೊಂಡರೆ ಮರಾಟರ ಹುರುಪು ಹೆಚ್ಚಾಗಿ ಪಠಾಣರ ಒಂದು ಕುದಿಯು ಕುಗ್ಗಬಹುದೆಂದುಭಾವೂಸಾಹೇಬನುತರ್ಕಿಸಿದನು.ಆದರಂತೆ ಆತನು ಯುಕ್ತಿಯಿಂದ ಕಾರ್ಯವನ್ನು ಸಾಧಿಸಿ ಮರಾಟರ ಪೌರುಷವನ್ನು ಅಬ್ದಾಲಿಗೆ ತೋರಿಸುವದಕ್ಕಾಗಿ, ತಾವು ದಿಲ್ಲಿಯನ್ನು ಮುತ್ತಿದ್ದು ಅಬ್ದಾಲಿಗೆ ತಿಳಿಯಬಾರದೆಂದು ಯೋಚಿಸಿ, ಮಥುರೆ ಯಲ್ಲಿ ತಾನು ನಿಂತು ಸಿಂಧೆ, ಹೋಳಕರ, ಬಳವಂತರಾವ ಮೆಹಂದಳೆ ಮೊದಲಾದ ಶೂರ ಸರದಾರರನ್ನು ಕಳಿಸಿಕೊಟ್ಟನು; ಆವರು ಒಂದೇ ಉಸಲಿಗೆ ದಿಲ್ಲಿಯನ್ನು

ಕೈವಶಮಾಡಿಕೊಂಡರು; ಕಿಲ್ಲೆಯು ಮಾತ್ರ ಪಠಾಣರ ವಶದಲ್ಲಿ ಉಳಿಯಿತು. ಈ ಸುದ್ದಿಯನ್ನು ಕೇಳಿ ಭಾವೂಸಾಹೇಬನು ದಿಲ್ಲಿಗೆ ಬಂದನು. ಆ ಬಾದಶಾಹೀ ಶಹರದ ಅವಲೋಕನದಿಂದ ವಿಶೇಷವಾಗಿ ಸ್ವಪರಾಕ್ರಮದಿಂದ ಭರತಖಂಡದ ಕೇಂದ್ರ ಸ್ಥಾನವನ್ನು ಕೈವಶಮಾಡಿಕೊಂಡದ್ದರಿಂದ ಅವನಿಗಾದ ಆನಂದವನ್ನು ಬಣ್ಣಿಸುವ ಸಾಮರ್ಥ್ಯವು ನಮ್ಮ ಲೆಕ್ಕಣಿಕೆಯಲ್ಲಿಲ್ಲ; ಕಿಲ್ಲೆಯೊಳಗಿಂದ ಶತ್ರುಗಳನ್ನು ಹೊಡೆದೋಡಿಸುವದು ಅವನಿಗೆ ಕಠಿಣವೆನಿಸಲಿಲ್ಲ; ಕಿಲ್ಲೆಯಲ್ಲಿ ನಜೀಬಖಾನನ ಕಡೆಯ ಕೆಲವು ರೋಹಿಲಜಾತಿಯ ಜನರೂ, ಅಬ್ದಾಲಿಯ ಕಡೆಯ ಕೆಲವು ಪಠಾಣಜನರೂ ಇದ್ದರು. ಅಬ್ದಾಲಿಯ ಮುಖ್ಯವಜೀರನ ತಮ್ಮನಾದ 'ಯಾಕೂಬ ಅಲ್ಲಿಖಾ' ಎಂಬವನು ಅಲ್ಲಿ ಮುಖ್ಯ ಸೇನಾಪತಿಯಾಗಿದ್ದನು. ಅವನು ಯುರೋಪಿಯನ್ ಪದ್ಧತಿಯ ತೋಫಿನ ಕರಾಮತಿಯನ್ನು ಕೇಳಿ ಸಹ ಅರಿತಿರಲಿಲ್ಲ; ಭಾವೂಸಾಹೇಬನು ದಿಲ್ಲಿಯೊಳಗಿನ ಸಾದುಲ್ಲಾಖಾನನ ಬುರುಜಿನ ಮೇಲೆ ತೋಫು ಹಚ್ಚಿ ಕಿಲ್ಲೆಯ ಮೇಲೆ ತೋಫಿನ ಗುಂಡುಗಳನ್ನು ಹಾರಿಸಹತ್ತಿದನು. ಆ ಗುಂಡುಗಳ ರಭಸಕ್ಕೆ ಕಿಲ್ಲೆಯ 'ಅಷ್ಟಪೈಲು,' 'ಆಸಾದ,' 'ರಾಜವಾಡೆ' ಮೊದಲಾದ ಕೊತ್ತಳಗಳು ನೆಲಕ್ಕುರುಳಹತ್ತಿದವು; ಕಿಲ್ಲೆಯೊಳಗಿನ ಜನರ ಹೃದಯಗಳೂ ತಲ್ಲಣಿಸಹತ್ತಿದವು;

ಈ ಮೇರೆಗೆ ಭಾವೂಸಾಹೇಬನ ಅಡ್ಡಪೇಚಿನಿಂದ ದಿಲ್ಲಿಯು ಕೈಬಿಡುವ ಪ್ರಸಂಗಬಂದದ್ದನ್ನು ನೋಡಿ ಅಬ್ದಾಲಿಯು ಗಾಬರಿಯಾದನು. ಅವನು ಉತ್ತರದಿಂದ ದಿಲ್ಲಿಯ ಬಳಿಗೆ ಬರುವಷ್ಟರಲ್ಲಿ ಯಮುನಾನದಿಯು ತುಂಬಿಹೋಗುತ್ತಿತ್ತು; ಅದರಿಂದ ಅಬ್ದಾಲಿಯು ನಿರುಪಾಯನಾಗಿ ತನ್ನ ಅಜಾಗರೂಕತನಕ್ಕೆ ಮರುಗುತ್ತ ದೂರದಲ್ಲಿಯೇ ನಿಂತುಕೊಳ್ಳಬೇಕಾಯಿತು. ಇತ್ತ ಕಿಲ್ಲೆಯೊಳಗಿನ ಜನರು ಅನ್ನ ನೀರುಗಳು ತೀರಿದ್ದರಿಂದಲೂ, ತೋಫಿನ ಹೊಡತಕ್ಕೆ ದಿನಾಲು ಅನೇಕ ಜನರು ಪ್ರಾಣಕ್ಕೆ ಎರವಾಗುತ್ತಿದ್ದದರಿಂದಲೂ ಪೂರ್ಣಹತಾಶರಾಗಿ ಕಿಲ್ಲೆಯನ್ನು ಮರಾಟರಿಗೆ ಒಪ್ಪಿಸಿಬಿಡುವ ಸಂಧಾನವನ್ನು ನಡಿಸಿದರು. ಪರಸ್ಪರರ ಶರ್ತುಗಳು ಗೊತ್ತಾದನಂತರ ಕಿಲ್ಲೆಯೊಳಗಿನ ಜನರು ಶಸ್ತ್ರಗಳನ್ನು ಕೆಳಗಿಟ್ಟು ಭಾವೂಸಾಹೇಬನಿಗೆ ಕಿಲ್ಲೆಯನ್ನು ಒಪ್ಪಿಸಿದರು. ಒಪ್ಪಂದದ ಸಂಧಾನವು ನಡೆದಿರುವಾಗ ಮರಾಟರ ಕಣ್ಣುತಪ್ಪಿಸಿ ಯಾಕೂಬಅಲ್ಲಿಯು ತನ್ನ ಹೆಂಡರು-ಮಕ್ಕಳು ಸಹಿತವಾಗಿ ನಾವಿನಿಂದ ನದಿಯನ್ನು ದಾಟಿ ಅಬ್ದಾಲಿಯನ್ನು ಕೂಡಿಕೊಂಡನು. ಕಿಲ್ಲೆಯು ಕೈವಶವಾದ ಬಳಿಕ ಭಾವೂಸಾಹೇಬನು ಉಳಿದ ಜನರಿಗೆ ಶಸ್ತ್ರಗಳನ್ನು ಇಟ್ಟು ಅಬ್ದಾಲಿಯ ಕಡೆಗೆ ಹೋಗಲಪ್ಪಣೆಕೊಟ್ಟನು. ಈ ಮೇರೆಗೆ ಶ್ರಾವಣ ವದ್ಯ ೬ ಅಂದರೆ ೨ ನೇ ಆಗಸ್ಟ್ ಸನ್ ೧೭೬೦ ನೇ ಇಸವಿ ದಿವಸ ದಿಲ್ಲಿಯು ಮರಾಟರ ಹಸ್ತಗತವಾಗಿ ಅದರ ಕಿಲ್ಲೆಯ ಮೇಲೆ ಮರಾಟರ ಭಗವೀನಿಶಾನೆಯು ಶೋಭಿಸಹತ್ತಿತು!

ಬಳಿಕ ಭಾವೂಸಾಹೇಬನು ವಿಜಯೋತ್ಸವಗಳನ್ನು ನಡಿಸಿ ತನ್ನ ಸೈನಿಕರನ್ನು ಆನಂದಪಡಿಸಿದನು. ದಿಲ್ಲಿಯ ಸುಲಿಗೆಯಲ್ಲಿ ಸಂತೃಪ್ತರಾದ ಮರಾಟರು ವಿಜಯೋತ್ಸವದಲ್ಲಿ ಅಶ್ರುತಪೂರ್ವವಾದ ಆನಂದವನ್ನು ಅನುಭವಿಸುತ್ತಿರಲು ಇತ್ತ ಅಬ್ದಾಲಿಯ ದಂಡಿನಲ್ಲಿ ಕೇವಲ ಔದಾಸೀನತೆಯು ವ್ಯಾಪಿಸಿಕೊಂಡಿತ್ತು. ಸುಜಾಉದ್ದೌಲನು ಮರಾಟರ ವಿರುದ್ಧವಾಗಿ ಅಬ್ದಾಲಿಯನ್ನು ಯಾಕೆ ಕೂಡಿಕೊಂಡೆನೋ ಎಂದು ಪಶ್ಚಾತ್ತಾಪಪಡಹತ್ತಿದನು; ಭಾವೂಸಾಹೇಬನ ತೋಫಖಾನೆಯ ಅಪೂರ್ವಕರಾಮತಿಯನ್ನು ಕಂಡು ಖುದ್ದ ಅಬ್ದಾಲಿಯು ಸಹ ಬೆದರಿ, ನಾನು ನಜೀಬಖಾನನ ಮಾತು ಕೇಳಿ ವ್ಯರ್ಥವಾಗಿ ಸಂಕಟಕ್ಕೆ ಗುರಿಯಾದೆನೆಂದು ಹಳಹಳಿಸಹತ್ತಿದನು. ಸೇನಾಪತಿಯೇ ಹೀಗೆ ಚಿಂತೆಗೊಳಗಾದ ಬಳಿಕ ಉಳಿದ ಸೈನಿಕರ ಪಾಡೇನು? ಒಬ್ಬೊಬ್ಬರೇ ಪಠಾಣರು ಅಬ್ದಾಲಿಯನ್ನು ಬಿಟ್ಟು ಹೋಗಹತ್ತಿದರು. ಅಬ್ದಾಲಿಯನ್ನು ಆಶ್ರಯಿಸಿದ ರೋಹಿಲರು ಮರಾಟರ ಸ್ನೇಹಸಂಪಾದಿಸುವ ಯತ್ನದಲ್ಲಿ ತೊಡಗಿದರು. ಈ ಬಗೆಯಾಗಿ ಅಬ್ದಾಲಿಯ ದಂಡಿನಲ್ಲಿ ಚಿಂತೆ, ಒಡಕು, ಅಸಂತೋಷ, ಪರಸ್ಪರರಲ್ಲಿ ದ್ವೇಷ ಮೊದಲಾದವುಗಳು ವ್ಯಕ್ತವಾಗಹತ್ತಿದವು; ಸುಜಾಉದ್ದೌಲನಿಗೆ ಭಾವೂಸಾಹೇಬನ ಹೆದರಿಕೆಯು ಮೊದಲಿನಿಂದ ಇದ್ದೇ ಇತ್ತು; ಅವನು ಅಬ್ದಾಲಿಯನ್ನು ಕೂಡಿಕೊಳ್ಳಲಿಕ್ಕಿಲ್ಲೆಂದು ಭಾವೂಸಾಹೇಬನು ತಿಳಿದಿದ್ದನು. ಆದರೆ ಬುಂದೇಲಿಯ ಗೋವಿಂದಪಂತನು ನಜೀಬಖಾನನನ್ನು ಸುಜಾಉದ್ದೌಲನ ಕಡೆಗೆ ಹೋಗಗೊಟ್ಟದ್ದರಿಂದ ಆ ಏರಿಕೆಯರಕ್ತದ ಸುಜಾಉದ್ದೌಲನು ನಜೀಬಖಾನನ ಮಾತಿಗೆ ಮರುಳಾಗಿ ಅಬ್ದಾಲಿಯಬೆನ್ನು ಕಟ್ಟಿದನು. ಆದರೆ ಭಾವೂಸಾಹೇಬನು ಪ್ರಥಮ ಪ್ರಸಂಗದಲ್ಲಿಯೇ ಜಯಶಾಲಿಯಾದ್ದರಿಂದ ಸುಜಾಉದ್ದೌಲನಿಗೆ ಅಬ್ದಾಲಿಯನ್ನು ಕೂಡಿಕೊಂಡದ್ದು ನೊಣತಿಂದಂತೆ ಮಳಮಳಿಸಹತ್ತಿತು. ಅವನಲ್ಲಿ ಅಬ್ದಾಲಿಯ ವಿಷಯಕ್ಕಿದ್ದ ಅಭಿಮಾನವು ನಷ್ಟವಾಗತೊಡಗಿತು.

ಹೀಗೆ ದಂಡಿನೊಳಗಿನ ಪ್ರಮುಖರೆಲ್ಲರು ಜೋಲುಮೋರೆಯನ್ನು ಹಾಕಿದ್ದನ್ನು ನೋಡಿ ಅಬ್ದಾಲಿಯು ವಿಲಕ್ಷಣ ಚಿಂತೆಗೆ ಗುರಿಯಾದನು. ಮರಾಟರ ದಂಡಿನಲ್ಲಿಯ ಅಟ್ಟಹಾಸ-ತನ್ನ ದಂಡಿನಲ್ಲಿಯ ಉಪಹಾಸಗಳನ್ನು ನೋಡಿ ಅವನ ಹೃದಯವು ತಲ್ಲಣಿಸಹತ್ತಿತು; ಶತ್ರುವಿನ ಉತ್ಕರ್ಷವು ಅವನನ್ನು ಬಾಧಿಸತೊಡಗಿತು; ಮಳೆಗಾಲವು ಪ್ರಾರಂಭವಾಗಿ ದಿನವೊಂದಕ್ಕೆ ಹೆಚ್ಚಿಚ್ಚು ಮಳೆಯಾಗಹತ್ತಿದ್ದರಿಂದಲೂ, ಸೈನಿಕರಲ್ಲಿ ಕೆಲವರು ಹೊರಟುಹೋಗಿದ್ದು ಉಳಿದವರು ಹತವೀರ್ಯರಾದ್ದರಿಂದಲೂ ಅಬ್ದಾಲಿಯು ಗತಿಗೆಟ್ಟನು. ಅವನಿಗೆ ಮರಾಟರ ಪೌರುಷ ಪ್ರದರ್ಶನವು ಅಧಿಕವಾಗಿ ತೋರಿ, ಅವನು ಭಾವೂಸಾಹೇಬನೊಡನೆ ಒಡಂಬಡಿಕೆಯ ಅನುಸಂಧಾನವನ್ನು ನಡಿಸಿದನು.

## ಎಂಟನೆಯ ಪ್ರಕರಣ.

—:०:(೦):०:—

# ತ್ರಿದೋಷಸಂಚಯ.

ಈ ಮೇರೆಗೆ ಭಾವೂಸಾಹೇಬನು ದಿಲ್ಲಿಯನ್ನು ಕೈವಶಮಾಡಿಕೊಂಡಬಳಿಕ ಅಲ್ಲಿ ಒಳ್ಳೇ ಒಗರಿನಿಂದ ನಿಂತುಕೊಂಡನು; ಆತನು ನಾಮಾಂಕಿತನಾದ ಮುತ್ಸದ್ದಿಯಾಗಿದ್ದರೂ ದಿಲ್ಲಿಯ ಪ್ರಚಂಡ ವಿಜಯದಿಂದ ಮೈಮರೆತನು; ಅಬ್ದಾಲಿಯೆಂದರೆ ಒಂದು ಕ್ಷುದ್ರಪ್ರಾಣಿಯೆಂದು ಭಾವಿಸತೊಡಗಿದನು. ಬ್ರಾಹ್ಮಣರಿಗೆ ವೈಭವದ ಮದವು ಬಹು ಬೇಗ ಬರುವದೆಂಬದನ್ನು ಆತನು ಅಗ ಸತ್ಯವಾಗಮಾಡಿದನು. ಅಬ್ದಾಲಿಯು ಒಪ್ಪಂದದ ಸಂಧಾನವನ್ನು ನಡಿಸಿ ನಡಿಸಿ ಬೇಸತ್ತರೂ ಆತನು ಹಚ್ಚಿಕೊಳ್ಳದಾದನು, ಬಲಿಷ್ಠನಾದ ಶತ್ರುವು ಮುಂದುಗಾಣದೆ ಶರಣುಬಂದ ಈಪ್ರಸಂಗದ ಸದುಪಯೋಗವನ್ನು ಮಾಡಿಕೊಳ್ಳುವಷ್ಟು ಜಾಣತನವು ಆತನಲ್ಲಿ ಉಳಿಯಲಿಲ್ಲ. ಆತನ ಈ ಮೈಮರಸುತನ ಅಥವಾ ಅಹಂಭಾವವೇ ಮರಾಟರ ವಿನಾಶಕ್ಕೆ ಕಾರಣವಾಯಿತೆಂದು ಹೇಳಬಹುದು; ಯಾಕಂದರೆ ಯಾವಪದಾರ್ಥವನ್ನಾದರೂ ಹರಿಯುವತನಕ ಜಗ್ಗಬಾರದೆಂದು ಸಾಧಾರಣ ನಿಯಮವಿರುವದರಿಂದ ಅಬ್ದಾಲಿಯನ್ನು ಇಷ್ಟು ನಿರಾಶೆಯುಳ್ಳವನಾಗ ಮಾಡಿದ್ದು ಮರಾಟರ ಹಿತದ ದೃಷ್ಟಿಯಿಂದ ಯೋಗ್ಯವೆನಿಸಲಿಲ್ಲ; ಕ್ಷುದ್ರಪ್ರಾಣಿಯಾದ ಬೆಕ್ಕನ್ನು ಮಾರ್ಗನಿರೋಧಮಾಡಿ ಹೊಡೆಯಹತ್ತಿದರೆ, ಸಾಯುವ ಸಂಕಟಕ್ಕೆ ಅದೂ ಸಹ ಮನುಷ್ಯನ ಮೈಮೇಲೆ ಹಾರಿ ಅವನನ್ನು ಕೊಲ್ಲಲಿಕ್ಕೆ ಪ್ರಯತ್ನ ಮಾಡುವದು. ಅಂದಬಳಿಕ ಅಬ್ದಾಲಿಯಂಥ ಸ್ವಾಭಿಮಾನಿಯ ಬಳಿಯಲ್ಲಿ ಪ್ರಚಂಡ ಸೈನ್ಯವಿರಲು, ಭಾವೂಸಾಹೇಬನು ತನ್ನನ್ನು ಮೂಗಿನೊಳಗಿನ ಕೂದಲು ಅಳುಕಿಸಿದಂತೆ ಮಾಡಿದರೆ ಕೇಳುವನೇ? ಅವನು ಜೀವದಾಶೆಯಿಲ್ಲದೆ ಮರಾಟರ ಮೇಲೆ ಬೀಳಲಿಕ್ಕೆ ಹೊಂಚು ಹಾಕಹತ್ತಿದ್ದರಲ್ಲಿ ಆಶ್ಚರ್ಯವೇನು?

ಹೀಗೆ ಅಬ್ದಾಲಿಯು ಖತಿಗೊಂಡು “ಸಾಯುವವರಿಗೆ ಸಮುದ್ರವು ಮೊಣಕಾಲಮಟವೆ”ಂಬಂತೆ ತನ್ನ ದಂಡಿನವರನ್ನು ಪ್ರೋತ್ಸಾಹಿಸಹಲುಪಕ್ರಮಿಸಿದನು. ಅವನ ಪಕ್ಷದವನಾದ ನಜೀಬಖಾನನು ಭಾವೂಸಾಹೇಬನ ಹರಲಿಯನ್ನು ಮಾಡುವದಕ್ಕಾಗಿ ದಿಲ್ಲಿಯೊಳಗಿನ ವಿಜಯೋತ್ಸವವನ್ನು ಮುಂದೆಮಾಡಿ ವಿಶ್ವಾಸರಾಯನನ್ನು ಭಾವೂಸಾಹೇಬನು ದಿಲ್ಲಿಯ ಸಿಂಹಾಸನದಮೇಲೆ ಕೂಡ್ರಿಸಿದನು

ಎಂಬಸುಳ್ಳು ಸುದ್ದಿಯನ್ನು ಹುಟ್ಟಿಸಿದನು. ಈ ಸುದ್ದಿಯು ಹಾ ಹಾ ಅನ್ನು ವಷ್ಟರಲ್ಲಿ ಸುತ್ತಲೂ ಪಸರಿಸಿದ್ದರಿಂದ ಉತ್ತರ ಸೀಮೆಯು ಮುಸಲ್ಮಾನರಿಗಷ್ಟೇ ಅಲ್ಲ, ಹಿಂದುಗಳಿಗೂ ಅಸಮಾಧಾನವಾಯಿತು. ಬಹುಕಾಲ ಬಾಳಿದ ಬಾದಶಾಹಿ ಯಲ್ಲಿ ಪೂಜ್ಯಬುದ್ಧಿಯನ್ನಿಟ್ಟ ರಾಜನಿಷ್ಠ ಹಿಂದುಗಳಿಗೆ ಹೀಗೆ ಅಸಮಾಧಾ ನವಾದದ್ದು ಸ್ವಾಭಾವಿಕವಾಗಿರುವದು. ಮುಸಲ್ಮಾನರಂತೂ ತಮಗೆ ಇನ್ನು ಮುಂದೆ ಹಿಂದುಸ್ಥಾನದಲ್ಲಿ ನಿಲ್ಲಲಿಕ್ಕೆ ಸಹ ಸ್ಥಳ ದೊರೆಯುವದಿಲ್ಲೆಂದು ದೊಡ್ಡ ಚಿಂತೆಗೆ ಒಳಗಾದರು.

ಈ ಬಗೆಯಾಗಿ ನಜೀಬಖಾನನು ತನ್ನ ಮಂತ್ರಪ್ರಯೋಗದಿಂದ ಜನರ ಮನ ಸ್ಸನ್ನು ಕಲುಷಿತವಾಗ ಮಾಡುತ್ತಿರಲು, ಈ ಯಾವ ಪಾಪವನ್ನೂ ಅರಿಯದ ಭಾವೂ ಸಾಹೇಬನು, ದಿಲ್ಲಿಯ ಗತವೈಭವವನ್ನು ನೋಡಿ ಸಖೇದಾಶ್ಚರ್ಯಗಳನ್ನು ಹೊಂದುತ್ತ ಈ ಪುರಾತನ ಸಿಂಹಾಸನದ ಮೇಲೆ ಯಾರನ್ನು ಕೂಡ್ರಿಸಬೇಕು? ಎಂಬ ಯೋಚನೆಯನ್ನು ಮಾಡುತ್ತಿದ್ದನು. ಆತನು ಮೊದಲು ದಿಲ್ಲಿಯನ್ನು ಪೂರ್ಣವಾ ಗಿನೋಡಿ, ಅಕಬರನ ಕಾಲದಿಂದ ಔರಂಗಜೇಬನ ವರೆಗೆ ಅದು ಅನುಭವಿಸಿದ ವೈಭ ವವನ್ನು ಮನಸ್ಸಿನಲ್ಲಿ ತಂದು ಹಳಹಳಿಸಿದನು. ಶಹಾಜಹಾನನ ಮಯೂರ ಸಿಂಹಾಸನವು ಭವ್ಯವಾದ "ಇ-ಆಮ" ವೆಂಬ ದಿವಾಣಖಾನೆಯಲ್ಲಿ ಅನಾಥವಾಗಿ ಮೆರೆಯುತ್ತಲಿತ್ತು; ಅದರ ಕೆದರಿದ ಗರಿಗಳಲ್ಲಿಯ ಪಚ್ಚರತ್ನದ ಹರಳುಗ ಳನ್ನು ಇರಾಣದ ನಾದಿರಶಹನು ಕಿತ್ತು ಕೊಂಡೊಯ್ದದ್ದರಿಂದ ಅದು ಭಣಗು ಟ್ಟುವ ನಾರೀಮಣಿಯ ವಕ್ಷಸ್ಥಲದಂತೆ ತೋರುತ್ತಿತ್ತು; ಆದರೂ ಆ ಸಿಂಹಾಸನ ವನ್ನು ನೋಡಿದಜನರು ಅದರ ಪೂರ್ವವೈಭವವನ್ನು ಕಲ್ಪಿಸಿ ತಲೆದೂಗಬಹುದಾ ಗಿತ್ತು; ಅದು ಐದು ಮೊಳ ಎತ್ತರವಿದ್ದು; ಅದರ, ಸುತ್ತು ಮುತ್ತು ಒಂದುಮೊಳ ಎತ್ತರ ವೃಳ್ಳ ಬಂಗಾರದ ಕಟಾಂಜನವಿತ್ತು; ಈ ಸುವರ್ಣದ ಕಟಾಂಜನದಮುಂದೆ ಸ್ವಲ್ಪ ಪ್ರಶಸ್ತ ಸ್ಥಳವನ್ನು ಬಿಟ್ಟು ಅದರ ಸುತ್ತುವರಿದು ಬೆಳ್ಳಿಯ ಕಟಾಂಜನ ವನ್ನು ಮಾಡಿದ್ದರು, ಬಂಗಾರದ ಕಟಾಂಜನದ ಒಳಭಾಗದಲ್ಲಿ ಬಾದಶಹನ ಮಕ್ಕ ಳಿಗೆ ಮಾತ್ರ ಹೋಗಲಿಕ್ಕೆ ಅಧಿಕಾರವಿರುತ್ತಿತ್ತು; ಬೆಳ್ಳಿಯ ಕಟಾಂಜನದ ಒಳಗೆ ವಜೀರನು ಹೋಗುತ್ತಿದ್ದನು; ಬೆಳ್ಳಿಯ ಕಟಾಂಜನದ ಮುಂದೆ ವಿಶಾಲವಾದ ಮಂಟಪವಿದ್ದು ಅಲ್ಲಿ ದರ್ಬಾರದಕಾಲಕ್ಕೆ ಸರದಾರ - ದರಕದಾರ ಮೊದಲಾದ ದೊಡ್ಡ ದೊಡ್ಡ ಜನರು ಬಾದಶಹನ ಮುಂದೆ ಕೈಕಟ್ಟಿಕೊಂಡು ನಿಂತುಕೊ ಳ್ಳುತ್ತಿದ್ದರು; ಆ ಮಂಟಪದ ಮುಂಭಾಗದಲ್ಲಿ ವಿಸ್ತೀರ್ಣವಾದ ಚೌಕು ಇದ್ದು ಅಲ್ಲಿ ಶೃಂಗರಿಸಿದ ಪಟ್ಟದ ಕುದುರೆ ಮತ್ತು ಆನೆಗಳು ನಿಲ್ಲುತ್ತಿದ್ದವು; ಅವು

ಗಳ ಬಳಿಯಲ್ಲಿ ನೂರಾರುಜನ ಶಿಪಾಯಿಗಳು ಬಿಚ್ಚುಗತ್ತಿಯನ್ನು ಹಿಡಿದು ನಿಂತು ಪಹರೆಯನ್ನು ಮಾಡುತ್ತಿದ್ದರು. ಆಚೌಕನ್ನು ದಾಟಿ ಮತ್ತೊಂದು ಮಂಟಪವಿತ್ತು; ಅಲ್ಲಿ ವಾರಯೋಷಿತೆಯರು ಸುಸ್ವರ ಗಾಯನದಿಂದ ಸಭಿಕರನ್ನು ರಂಜಿಸುತ್ತಿದ್ದರು; ಹೀಗೆ ಬಗೆಬಗೆಯ ಸ್ಥಳಗಳಿಂದ ಪರಿಶೋಭಿಸುವ ಆ ದಿವಾಣಖಾನೆಯು ಸಂಗಮರವರೀ ಕಲ್ಲುಗಳ ಕಟ್ಟಡದಿಂದ ಥಳ ಥಳಿಸುತ್ತಲಿತ್ತು; ಸೂಕ್ಷ್ಮವಾದ ಕೈಗಾರಿಕೆಯ ಜಾಣತನದ ಕೆಲಸಗಳು ಆದಿವಾಣಖಾನೆಯಲ್ಲಿ ಅಲ್ಲಲ್ಲಿ ದೃಷ್ಟಿಗೆ ಬೀಳುತ್ತಲಿದ್ದವು; ಚಿತ್ರ ವಿಚಿತ್ರ ಹೂಗಳು - ಬಳ್ಳಿಗಳು-ವೃಕ್ಷಗಳು ಆ ಕಲ್ಲುಗಳಲ್ಲಿ ಬಹು ಮನೋಹರವಾಗಿ ಕೊರೆಯಲ್ಪಟ್ಟಿದ್ದವು; ಬಾದಶಹನ ನಿವಾಸಸ್ಥಾನವೇ ಆಗಿದ್ದ ಆ ದಿವಾಣಖಾನೆಯ ಸೊಬಗನ್ನು ಬಣ್ಣಿಸುವದೇನು? ರಮಣೀಯವಾದ ಅಂತಃಪುರವೂ ಅದರಲ್ಲಿಯೇ ಇತ್ತು; ಆ ದಿವಾಣಖಾನೆಯು ಯಮುನಾನದಿಗೆ ಹೊಂದಿ ಇದ್ದದರಿಂದ ಬಾದಶಹನ ಸ್ನಾನದ ಗೃಹದಲ್ಲಿ ನದಿಯ ಕಾಲುವೆಯನ್ನು ತಂದಿದ್ದರು. ಎಲ್ಲ ಅನುಕೂಲತೆಯಿಂದ ಆ ದಿವಾಣಖಾನೆಯು ವಿಶ್ವದಬಂದು ಚಿಕ್ಕ ಮಾದರಿಂಯೇ ಆಗಿತ್ತೆಂದುಹೇಳಬಹುದಾಗಿತ್ತು; ಇಂಥಆಬಾದಶಾಹೀ ದಿವಾಣಖಾನೆಯನ್ನು ನೋಡಿ ಭಾವೂಸಾಹೇಬನು ಬೆರಗಾದನು; ಆತನಜನರೂ ಬೆರಗಾದರು.

ಬಳಿಕ ಭಾವೂಸಾಹೇಬನು ಆ ಅನಾಥವಾದ ರಾಜಧಾನಿಯಲ್ಲಿ ದೊಡ್ಡದೊಂದು ದರ್ಬಾರವನ್ನು ನೆರೆಸಿ ಬಹು ದೂರದವರೆಗೆ ಲಕ್ಷಗೊಟ್ಟು ಬಾದಶಾಹೀ ಗೊಂಬೆಯನ್ನು ಸಿಂಹಾಸನದಲ್ಲಿ ಕುಳ್ಳಿರಿಸುವ ವಿಚಾರವನ್ನು ಮಾಡಿದನು. ಸನ್ ೧೭೦೭ರಲ್ಲಿ ಔರಂಗಜೇಬನು ಮೃತಪಟ್ಟಬಳಿಕ ದಿಲ್ಲಿಯ ಸಿಂಹಾಸನವು ಪೌರುಷ ಶೂನ್ಯರಾದವರ ಕೈಯಲ್ಲಿ ಸೇರಿದ್ದರಿಂದ ಈ ಕಾಲಕ್ಕೆ ಅದು ಕೇವಲ ಪರಾಧೀನವಾಗಿತ್ತೆಂದು ಹೇಳಬಹುದು; ಬಲಿಷ್ಠರಾದವರು ಬಾದಶಾಹೀವಂಶದಲ್ಲಿ ತಮ್ಮ ಮನಸ್ಸಿಗೆ ಬಂದವರನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ತಾವು ಸೂತ್ರಧಾರಿಗಳಾಗುತ್ತಿದ್ದರು; ಬಲಿಷ್ಠರ ಉಪಟಳಕ್ಕೆ ತ್ರಸ್ತನಾಗಿ ಸ್ಥಲಾಂತರಮಾಡಿದ ಅಲ್ಲೀಗೋಹರನೆಂಬ ಬಾದಶಾಹೀ ವಂಶಸ್ಥನನ್ನು ಕರತಂದು ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂದು ಭಾವೂಸಾಹೇಬನು ನಿಶ್ಚಯಿಸಿದನು. ಆದರೆ ಅಲ್ಲೀಗೋಹರನು ಸಿಂಹಾಸನವೇರಲಿಕ್ಕೆ ಸಮ್ಮತಿಸದ್ದರಿಂದ ಸ್ವಾಭಿಮಾನಿಯಾದ ಭಾವೂಸಾಹೇಬನು ಅಲ್ಲೀಗೋಹರನೇ ಬಾದಶಹನೆಂದು ಪ್ರಸಿದ್ಧಪಡಿಸಿ, ಅವನ ಹೆಸರಿನ ನಾಣ್ಯಗಳನ್ನು ಅಚ್ಚುಹಾಕಿಸಿದನು. ಮತ್ತು ಅವನ ಹೆಸರಿನಿಂದಲೇ ಕಾರಭಾರವು ನಡೆಯುವಂತೆ ಕಟ್ಟುಮಾಡಿದನು.

ಈಮೇರೆಗೆ ಬಾದಶಹನ ನೇಮಣೂಕಾದ ಬಳಿಕ ಇನ್ನುಮುಂದೆ ಯಾರನ್ನು

ವಜೀರನನ್ನಾಗಿ ಮಾಡಬೇಕೆಂಬ ಪ್ರಶ್ನೆಯುಹುಟ್ಟಿತು. ಮರಾಟರ ಪಕ್ಷದವನಾದ ಗಾಜುದ್ದೀನಖಾನನ್ನು ನೇಮಿಸಬೇಕೆಂದು ಸುರಜಮಲ್ಲಸರದಾರನು ಭಾವೂಸಾಹೇಬನಿಗೆ ವಿನಂತಿಯನ್ನು ಮಾಡಿಕೊಂಡನು. ಸಿಂಧೆ ಹೋಳಕರರಾದರೂ ಅವನೇ ಯೋಗ್ಯನೆಂದು ಒಪ್ಪಿಕೊಂಡರು; ಆದರೆ ಭಾವೂಸಾಹೇಬನ ಮನಸ್ಸಿನಲ್ಲಿ ಬೇರೊಂದು ಹುಚ್ಚುಹೊಕ್ಕದ್ದರಿಂದ ಆವನು ಅವರ ಮಾತುಗಳನ್ನು ಕೇಳಲಿಲ್ಲ; ದಿಲ್ಲಿಯ ವಜೀರ ಕೆಲಸಕ್ಕಾಗಿ ಸುಜಾವುದ್ದೌಲನಿಗೂ ಗಾಜುದ್ದೀನನಿಗೂ ಬಹುದಿವಸಗಳಿಂದ ವಾದವಿತ್ತು; ಈ ಕಾಲಕ್ಕೆ ದಿಲ್ಲಿಯ ದೌಲತ್ತು ಮರಾಟರ ಅಧೀನವಾದ್ದರಿಂದ ಸುಜಾವುದ್ದೌಲನನ್ನು ವಜೀರನನ್ನಾಗ ಮಾಡಿದರೆ, ಆತನು ಮರಾಟರಿಗೆ ಕೃತಜ್ಞನಾಗಿ ಅಬ್ದಾಲಿಯ ಪಕ್ಷವನ್ನು ಬಿಟ್ಟುಬರಬಹುದೆಂದು ಭಾವೂಸಾಹೇಬನು ಆಶಾಗ್ರಸ್ತನಾದನು. ಸುಜಾವುದ್ದೌಲನು ಅತ್ಯಂತ ಕಪಟಿಯಾದ್ದರಿಂದ ಆತನು ಭಾವೂಸಾಹೇಬನನ್ನು ಮೋಸಗೊಳಿಸುವದಕ್ಕಾಗಿ ಅವನಿಗೆ ಒಂದೆರಡುಸಾರೆ ಸವಿಮಾತಿನ ಪತ್ರಗಳನ್ನು ಬರೆದನು. ಕೇವಲ ಕಾರ್ಯಸಾಧನೆಯಲ್ಲಿ ಮಗ್ನನಾದ ಭಾವೂಸಾಹೇಬನು ಈ ಕಾಲಕ್ಕೆ ಸ್ವಲ್ಪ ದಡ್ಡತನಮಾಡಿ ಸುಜಾವುದ್ದೌಲನ ಕಪಟವನ್ನರಿಯದೆ ಅವನನ್ನೇ ವಜೀರನನ್ನಾಗಮಾಡುವ ಚಂಡಿತನ ಹಿಡಿದನು. ಆತನ ಈಚಂಡಿತನದಿಂದ ಸುರಜಮಲ್ಲನಿಗೂ ಸಿಂಧೆ ಹೋಳಕರರಿಗೂ ಮನಸ್ತಾಪವಾಯಿತು; ತನ್ನವರನ್ನು ಅಸಂತುಷ್ಟಗೊಳಿಸಿ ಶತ್ರುಪಕ್ಷದವನೊಬ್ಬನ ಸಹಾಯವನ್ನು ಇಚ್ಛಿಸಿದ ಭಾವೂಸಾಹೇಬನ ಈನಡತೆಯು ಮಳೆಯನೀರುಬಿಟ್ಟು ಮಂಜಿನನೀರಿಗೆ ಕೈಒಡ್ಡಿದಹಾಗಾಯಿತೆಂದು ಹೇಳಬಹುದು; ಒಂದುವೇಳೆ ಸುಜಾವುದ್ದೌಲನು ಮರಾಟರನ್ನು ಕೂಡಿಕೊಂಡಿದ್ದರೆ ಮುಂದಿನ ಪರಿಣಾಮವು ಏನಾಗುತ್ತಿತ್ತೋ ತಿಳಿಯದು; ಆದರೆ ಭಾವೂಸಾಹೇಬನು ಸುಜಾವುದ್ದೌಲನಿಗೆ ವಜೀರವಸ್ತ್ರವನ್ನು ಕೊಟ್ಟು ಸುಮ್ಮನೆ ಕುಲಗೆಟ್ಟಹಾಗಾಯಿತುಮಾತ್ರ. ಆತನು ಮರಾಟರ ಕಡೆಗೆ ಬಾರದ್ದರಿಂದ ನಾರೋಶಂಕರನೆಂಬವನನ್ನು ಸುಜಾವುದ್ದೌಲನ ಮುತಾಲಿಕನೆಂದು ನೇಮಿಸಬೇಕಾಯಿತು. ಹೀಗೆ ಬಾದಶಹನ ಅಸಮ್ಮತಿ, ವಜೀರನ ಅಸಮ್ಮತಿ” ಅವರಿಬ್ಬರ ಸ್ಥಳಗಳಲ್ಲಿಯೂ ಮುತಾಲಿಕರು; ಅಂದಬಳಿಕ ಇಂಥ ಹಾಸ್ಯಾಸ್ಪದ ಕೆಲಸವನ್ನು ಮುತ್ಸದ್ದಿಯಾದ ಭಾವೂಸಾಹೇಬನು ಯಾಕೆಮಾಡಿದನೆಂದು ಊಹಿಸಬೇಕು? ಊಹಿಸುವದಾದರೂ ಏನು? ಇದು ವಿಚಿತ್ರವಾದ ದೈವಲೀಲೆಯಂದೇ ಭಾವಿಸಬಹುದು.

ಈಪ್ರಕಾರ ವಜೀರನನ್ನು ನೇಮಿಸುವದರಲ್ಲಿ ಭಾವೂಸಾಹೇಬನು ದೊಡ್ಡ ತಪ್ಪುಮಾಡಿದನು. ಮನುಷ್ಯನು ಒಮ್ಮೆ ಮಾರ್ಗತಪ್ಪಿ ಅಡವಿಬಿದ್ದನೆಂದರೆ, ಅವನು

ಹಾಗೇ ಹೆಚ್ಚು ಹೆಚ್ಚು ಅಡ್ಡಹಾದಿಯನ್ನೇ ತುಳಿಯುತ್ತ ಹೋಗುವನೆಂಬದು ಅನುಭವ ಸಿದ್ಧವಿರುವದು; ಇದರಂತೆಯೇ ಪ್ರಸ್ತುತದಲ್ಲಿ ಭಾವೂಸಾಹೇಬನ ಸ್ಥಿತಿಯಾಯಿತೆಂದು ಹೇಳಲಾಗುವದು. ಬಳಿಯಲ್ಲಿ ಪ್ರಚಂಡ ಸೈನ್ಯವಿದ್ದದರಿಂದ ಅದರ ಹೊಟ್ಟೆಗಾಗಿ ಕೈಯೊಳಗಿನ ದುಡ್ಡು ತೀರುತ್ತ ಬರಲು ಆತನು ಚಿಂತೆಗೆ ಒಳಗಾದನು. ಉತ್ತರ ಪ್ರಾಂತದಲ್ಲಿ ಬಂದಬಳಿಕ ಸಿಂಧೆ ಹೋಳಕರರು ಭಾವೂಸಾಹೇಬನಿಗೆ ಹೇರಳವಾದ ಹಣವನ್ನು ಕೊಟ್ಟಿದ್ದರು. ಅದೂತೀರಿ, ತಾನು ಪುಣೆಯಿಂದ ತಂದಹಣವೂ ತೀರುತ್ತ ಬಂದದರಿಂದ, ಮುಂದೆ ಏನುಮಾಡಬೇಕೆಂದು ಆತನು ಯೋಚಿಸುತ್ತಿರಲು, ಅವನದೃಷ್ಟಿಯು ದರ್ಬಾರ - ದಿವಾಣಖಾನೆಯ ಛತ್ತಿನ ಕಡೆಗೆ ಹೋಯಿತು. ಆ ವಿಶಾಲವಾದ ದಿವಾಣಖಾನೆಗೆ ಒಂದು ಬೊಟ್ಟು ದಪ್ಪನ್ನ ಬೆಳ್ಳಿಯ ತಗಡಿನ ಛತ್ತು ಇದ್ದದರಿಂದ ಅದನ್ನು ಸುಲಿದರೆ ೨೦-೨೫ ಲಕ್ಷರೂಪಾಯಿ ಬೆಲೆಬಾಳುವ ಬೆಳ್ಳಿಯು ಹೊರಡಬಹುದೆಂದು ಭಾವಿಸಿದನು. ಸುರಜಮಲ್ಲ ಸರದಾರನಿಗೆ ಭಾವೂಸಾಹೇಬನ ಈವಿಚಾರವು ಸರಿಬೀಳಲಿಲ್ಲ; ಆತನು ಭಾವೂಸಾಹೇಬನನ್ನು ಕುರಿತು ನುಡಿದನೇನಂದರೆ—"ಸರಕಾರ, ಬಾದಶಾಹೀ ದರ್ಬಾರಖಾನೆಯ ಅಪ್ರತಿಷ್ಠೆಯನ್ನು ಬಾದಶಹನ ಉಪ್ಪುಉಂಡ ಈ ಸುರಜ ಮಲ್ಲನು ಪ್ರತ್ಯಕ್ಷ ಇರುವಾಗ ಮಾಡುವದು ಭೂಷಣವಲ್ಲ; ನನಗೆ ಇದು ಲಾಂಛನವೆನಿಸುವದು. ಈ ಬಗ್ಗೆ ನಾನು ನಿಮಗೆ ೫ ಲಕ್ಷರೂಪಾಯಿಗಳನ್ನು ಕೊಡುತ್ತೇನೆ. ಛತ್ತನ್ನು ಸುಲಿಯುವ ಗೊಡವೆಗೆ ಹೋಗಬಾರದು"

ಭಾವೂಸಾಹೇಬನ ಮನಸ್ಸಿನಲ್ಲಿ ಆ ಛತ್ತಿನ ಬೆಲೆಯು ಐದುಲಕ್ಷಕ್ಕಿಂತ ಎಷ್ಟೋಪಾಲು ಹೆಚ್ಚಾಗುವದೆಂಬ ಭ್ರಮೆಯು ಹುಟ್ಟಿದ್ದರಿಂದ ಅವನು ಸ್ವಜನರಲ್ಲಿ ಮನಸ್ತಾಪವಾಗುವದೆಂಬದರ ಪರವೆಯನ್ನು ಹಿಡಿಯಲಿಲ್ಲ; ಕೇವಲ ದುಡ್ಡಿನಕಡೆಗೆ ಲಕ್ಷಕೊಟ್ಟು ಸುರಜಮಲ್ಲನ ಬೇಡಿಕೆಯ ವಿರುದ್ಧವಾಗಿ ದಿವಾಣಖಾನೆಯನ್ನು ಸುಲಿಯುವದಕ್ಕೆ ಅಪ್ಪಣೆಯನ್ನು ಕೊಟ್ಟನು. ಆತನು ವಿವೇಕಭ್ರಷ್ಟನಾಗಿ ಅಡ್ಡಹಾದಿಯನ್ನು ತುಳಿಯಹತ್ತಿ, ಈ ಎರಡನೇ ದೊಡ್ಡತಪ್ಪನ್ನು ಮಾಡಿದನು; ಸೇವಕರು ಹಾ ಹಾ ಅನ್ನುವಷ್ಟರಲ್ಲಿ ಬೆಳ್ಳಿಯ ಮಡಾಸವನ್ನು ಕಿತ್ತುತೆಗೆದರು. ದಿವಾಣಖಾನೆಯು, ಸೆರಗನ್ನು ಸೆಳೆದ ಸುಂದರಿಯಂತೆ ಕಾರುಣ್ಯಾಸ್ಪದವಾಗಿ ತೋರತೊಡಗಿತು. ಆಗ ಆ ಬೆಳ್ಳಿಯನ್ನು ಒಟ್ಟುಗೂಡಿಸಿ ಕರಗಿಸಿ ತೂಕಮಾಡಲು ಅದು ಮೂರು ಲಕ್ಷದ್ದಾಯಿತು; ಆದರೆ ಕೆಲಸವು ಗತಿಸಿಹೋದದ್ದರಿಂದ ಭಾವೂಸಾಹೇಬನು ಅದನ್ನು ದುರ್ಲಕ್ಷಿಸಿದನು. ತನ್ನವರನ್ನು ನೋಯಿಸಿದಬಗ್ಗೆ ಆತನಲ್ಲಿ ಕಿಂಚಿತ್ತಾದರೂ ಪಶ್ಚಾತ್ತಾಪಬುದ್ಧಿಯು ಉತ್ಪನ್ನವಾಗಲಿಲ್ಲ; ಮುಂದೆ ವಿನಾಶಕಾಲವು ಸಮೀಪಿಸಿ

ದ್ದರಿಂದ ಆತನ ಮುತ್ಸದ್ದಿಗಿರಿಯೆಲ್ಲ ಅಳಿದುಹೋಗಿ ಇಂಥ ದುರ್ಬುದ್ಧಿಯು ಆವನಲಿ ಉತ್ಪನ್ನವಾಯಿತು. "ಪ್ರತ್ಯುತ್ಪನ್ನವಿಪತ್ತಿಮೂಢಮನಸಾಂಪ್ರಾಯೋಮತಿಃ ಕ್ಷೀಯತೆ" ಎಂಬ ಗೀರ್ವಾಣೋಕ್ತಿಯಂತೆ ಆತನ ಬುದ್ಧಿಯು ಕ್ಷೀಣಿಸುತ್ತಹೋಯಿತೆಂದು ದುಃಖದಿಂದ ಅನ್ನಬೇಕಾಗುತ್ತದೆ.

ಗಾಯದಲ್ಲಿ ಕೋಲು ಚುಚ್ಚಿದಂತೆ ಈ ಬಗೆಯ ಒಂದೊಂದೇ! ತಪ್ಪುಗಳು ಭಾವೂಸಾಹೇಬನಿಂದ ಆಗಹತ್ತಿದವು; ಅವನ ಮನಸ್ಸು ಸ್ವಜನರನ್ನು ಲೆಕ್ಕಿಸದಷ್ಟು ಕಠಿಣವಾಯಿತು; ತಾನು ಮಾಡಿದ್ದೇ ಮಟ್ಟ ಕಟ್ಟಿದ್ದೇ ಪಟ್ಟವೆಂಬ ದುರಭಿಮಾನವು ಅವನ ಹೃದಯವನ್ನು ಸಾವಕಾಶವಾಗಿ ಆಕ್ರಮಿಸತೊಡಗಿತು; ತಾನು ತಪ್ಪಿನಡೆಯುತ್ತೇನೆಂಬ ಭಾವನೆಯು ಏನುಮಾಡಿದರೂ ಅವನಲ್ಲಿ ಹುಟ್ಟದಾಯಿತು. ಜನಕೋಜಿಸಿಂಧೆ ಮೊದಲಾದ ಸ್ವಾಮಿನಿಷ್ಠರು ತಮ್ಮ ನಿಷ್ಠೆಗೆ ಭಂಗಬರಬಾರದೆಂದು ತಮಗಾದ ಅಸಮಾಧಾನವನ್ನು ನುಂಗಿಕೊಂಡು ದೊಡ್ಡಮನಸ್ಸಿನಿಂದ ನಡೆಯಹತ್ತಿದರು; ಸುರಜಮಲ್ಲ ಮೊದಲಾದ ಸರದಾರರು ಮರಾಟರ ಪಕ್ಷವನ್ನು ವಹಿಸಿದ ತಪ್ಪಿಗೆ ಹ್ಯಾಗಾದರೂ ಸುಮ್ಮನಿರಬೇಕೆಂದು ನಿಶ್ಚಯಿಸಿದರು. ಆದರೂ ಸೈನ್ಯದಲ್ಲಿ ಉಲ್ಲಾಸದಕಸುವು ಕುಗ್ಗಿ, ತುಸದಿವಸಗಳ ಹಿಂದೆ ಅಬ್ದಾಲಿಯ ದಂಡಿನಲ್ಲಿ ಒದಗಿದ ಲಕ್ಷಣವೇ ಇಲ್ಲಿ ಕಂಡುಬರುವ ಧೋರಣವು ವ್ಯಕ್ತವಾಗಹತ್ತಿತು.

ಹೀಗಿರಲು ಒಂದುದಿನ ಭಾವೂಸಾಹೇಬನು ತನ್ನ ಸರದಾರರೊಡನೆ ಕುಂಜಪುರವನ್ನು ತಕ್ಕೊಳ್ಳುವ ವಿಷಯವಾಗಿ ಆಲೋಚನೆಯನ್ನು ನಡಿಸಿದನು. ಆಗ ಸುರಜಮಲ್ಲನು ಮರಾಟರಹಿತದಕಡೆಗೆ ಲಕ್ಷಗೊಟ್ಟು ಭಾವೂಸಾಹೇಬನನ್ನು ಕುರಿತು— "ತಾವು ದಿಲ್ಲಿಯನ್ನು ಬಿಟ್ಟು ಕದಲಬಾರದು. ಒಂದುವೇಳೆ ಬಿಟ್ಟರೂ ಬೇಗನೆ ಬಂದು ದಿಲ್ಲಿಯನ್ನು ಹಿಡಕೊಳ್ಳಬೇಕು. ದಿಲ್ಲಿಯು ಅಬ್ದಾಲಿಯ ಕಾಟವನ್ನು ನಾಗಗೊಡದಂಥ ಭದ್ರವಾದ ಸ್ಥಳವಿರುವದು; ಇದು ನಮ್ಮ ಕೈಬಿಟ್ಟರೆ ನಮಗೆ ಸುರಕ್ಷಿತವಾದ ಬೇರೊಂದು ಸ್ಥಳವು ದೊರೆಯಲಿಕ್ಕಿಲ್ಲ; ಶ್ರೀಮಂದರವರು ಈ ಮಾತನ್ನು ವಿಚಾರಿಸಬೇಕು; ನಾನು ಈವರೆಗೆ ಎರಡು ಪ್ರಸಂಗಗಳಲ್ಲಿ ನಿಮಗೆ ಯೋಗ್ಯವಾದದ್ದನ್ನು ಹೇಳಿದೆನು. ನೀವು ಅವುಗಳನ್ನು ಕೇಳಲಿಲ್ಲ; ಹೀಗೆ ನೀವು ನಮ್ಮ ಮಾತುಗಳನ್ನು ತಿರಸ್ಕರಿಸಿದರೆ ಮುಂದೆ ನಿಜವಾಗಿ ಪಶ್ಚಾತ್ತಾಪಕ್ಕೆ ಒಳಗಾಗುವಿರಿ? ಇದು ಯೋಗ್ಯವಲ್ಲ. ಗಾಜುದ್ದೀನನಿಗೆ ವಜೀರವಸ್ತ್ರವನ್ನು ಕೊಡಿರಿ ದಿವಾಣಖಾನೆಗೆ ಪುನಃ ಛತ್ತನ್ನು ಮಾಡಿಸಿರಿ. ಇದರಿಂದ ಜನರ ಮನಸ್ಸು ಸಂತುಷ್ಟವಾಗುವದು. ಎಂಥ ಸತ್ತಾಧಾರಿಯಾದರೂ ಜನರ ಮನಸ್ಸನ್ನು ಮುರಿದರೆ ಉತ್ಕರ್ಷವನ್ನು ಹೊಂದಲಾರನು. ನಾವು ನಿಮ್ಮ ಸೇವೆಯನ್ನು ಮಾಡುತ್ತಿರುವದ

ರಿಂದ ನಿಮ್ಮ ಹಿತಕ್ಕಾಗಿ ಇಷ್ಟು ಝಳ ಝಳ ಮಾತಾಡಬೇಕಾಗುತ್ತದೆ. ನಿಮಗ ಸಲುವಾಗಿ ಜೀವಕ್ಕೆ ಜೀವಾ ಕೊಡಲು ಸಿದ್ಧರಾದ ನಮ್ಮಂಥ ಸೇವಕರ ಅಪ್ತಾಲೋಚನೆಗಳನ್ನು ದುರ್ಲಕ್ಷಿಸುವದು ನಿಮ್ಮಂಥ ಧೋರಣೀಪುರುಷರಿಗೆ ಭೂಷಣವಲ್ಲ; ನಾನು ಯೋಗ್ಯವಾದದ್ದನ್ನು ವಿಜ್ಞಾಪಿಸಿಕೊಂಡಿರುವೆನು; ಇದರಮೇಲೆತಾವು ಇಚ್ಛೆಗೆ ಬಂದಂತೆ ಮಾಡಬಹುದು; ಎಂದುನುಡಿದನು. ಅಧಿಕಾರದ ಉಚ್ಚಸ್ಥಾನವನ್ನೇರಿದ ಹಾಗು ಸಾರ್ವಭೌಮ ಸತ್ತಾಧೀಶರ ವಿರುದ್ಧವಾಗಿ ಮಾತಾಡುವದು, ಇಲ್ಲವೆ ಅವರ ದೋಷಗಳನ್ನು ಎಣಿಸುವದು ಎಷ್ಟು ಭಯಂಕರ ಕೆಲಸಗಳಾಗಿರುತ್ತವೆಂಬದು ಅನನುಭವಿಕರ ಕಲ್ಪನೆಯಲ್ಲಿ ಬರಲಾರವು. ಸುರಜಮಲ್ಲ ಜಾಟನ ಈಸ್ಪಷ್ಟ ಹಾಗು ಸರಳ ಭಾಷಣದಿಂದ ಭಾವೂಸಾಹೇಬನು ಸಂತಪ್ತನಾದನು. ಅವನ ಕಣ್ಣುಗಳು ಕೆಂಡದಂತಾದವು. ಅವನ ಮೈಯು ನಡುಗಹತ್ತಿತು. ಜಾಟನಂಥ ಸಂಣಸರದಾರನು ಈರೀತಿ ತನಗೆ ಮಾತನಾಡಿದ್ದು ಅಪಮಾನಕರವೆಂದು ಅವನ ಸರ್ವಾಂಗವೂ ಉರಿಯುಹತ್ತಿತು. ಅವನಿಗೆ ಇಷ್ಟು ಸಿಟ್ಟುಬಂದದ್ದನ್ನು ಅವನ ಬಾಲ ಸ್ನೇಹಿತರಾದ ಸರದಾರರು ಸಹಕಂಡಿದಿಲ್ಲ. ಆಗ ಆತನು ಆವೇಶದಲ್ಲಿ ತನ್ನ ಸ್ವಾಭಾವಿಕ ಸೌಮ್ಯವಾಣಿಯನ್ನು ಬಿಟ್ಟು ಅತ್ಯಂತ ಕಠೋರತನದಿಂದ ಸುರಜಮಲ್ಲನನ್ನು ಕುರಿತು – "ನಾವು ದಕ್ಷಿಣದಿಂದ ದಂಡೆತ್ತಿ ಬರುವ ಮುಂದೆ ನಿಮ್ಮಂಥವರನ್ನು ನಂಬಿ ಬಂದಿರುವದಿಲ್ಲ; ನಾವುನಮಗೆ ಯೋಗ್ಯಕಂಡದ್ದನ್ನು ಮಾಡಿಯೇತೀರುವೆವು; ಇಷ್ಟವಿದ್ದರೆ ನೀವು ನಮ್ಮಲ್ಲಿ ಇರಬಹುದು; ಇಲ್ಲದಿದ್ದರೆ ಹೊರಟು ಹೋಗಬಹುದು; ಸದ್ಯಕ್ಕೆ ಅಬ್ದಾಲಿಯನ್ನು ಗೊತ್ತಿಗೆ ಹಚ್ಚಿದಬಳಿಕ ಮುಂದೆ ನಿಮ್ಮಂಗರು ಎಷ್ಟಿರುವದೆಂಬದನ್ನು ನೋಡಿ ಕೊಳ್ಳಲಿಕ್ಕೆ ಬಂದೀತು" ಎಂದುನುಡಿದನು. ಭಾವೂಸಾಹೇಬನ ಮುಖದಿಂದ ಹೊರಟ ಈ ಒರಟು ನುಡಿಗಳನ್ನು ಕೇಳಿಎಲ್ಲ ಸರದಾರರೂ ತಣ್ಣಗೆಕುಳಿತರು. ಅವರು ಒಂದು ತುಟಿಎರಡು ಮಾಡದೆ ದರ್ಬಾರ ಬರಖಾಸ್ತವಾಗುವವರೆಗೆ ಕುಳಿತುಕೊಂಡು ಬಳಿಕ ತಮ್ಮ ತಮ್ಮ ಡೇರೆಗೆ ಹೊರಟು ಹೋದರು.

ಸುರಜಮಲ್ಲ ಸರದಾರನಿಗೆ ಇತ್ತ ಬಿದ್ದರೆ ಭಾವಿ, ಅತ್ತ ಬಿದ್ದರೆ ಕೆರೆ ಎಂಬಂತಾಯಿತು; ಅವನು ಆ ದಿನವೆಲ್ಲವನ್ನೂ ಮುಂದೆ ಏನು ಮಾಡಬೇಕೆಂಬ ವಿಚಾರದಲ್ಲಿ ಕಳೆದನು. ಭಾವೂಸಾಹೇಬನ ದುರಹಂಭಾವವು ಪೂರ್ಣವಾಗಿ ಅವನ ನಿದರ್ಶನಕ್ಕೆ ಬಂದಿತು; ಹೀಗೆ ಏಕಾಏಕಿ ಭಾವೂಸಾಹೇಬನ ತಲೆಯು ಯಾಕೆ ತಿರುಗಿತೆಂಬದರ ಶೋಧವನ್ನು ಮಾಡಿ ಆತನು ಬೇಸತ್ತನು; ಉಳಿದ ಸರದಾರರಿಗೂ ಇದರ ಕಾರಣವು ಗೊತ್ತಾಗಲಿಲ್ಲ. ದಕ್ಷಿಣಕಡೆಯ ಸರದಾರರ ಹೊರತು ಉತ್ತರಕಡೆಯ

ಯಾವ ಸರದಾರನಲ್ಲಿಯೂ ಸಮಾಧಾನವು ಉಳಿಯಲಿಲ್ಲ; ಅವರೆಲ್ಲರೂ ಮರಾಟರ ಪುಣ್ಯವು ಕ್ಷೀಣಿಸಿತೆಂದು ಮರುಗಿದರು. ಭಾವೂಸಾಹೇಬನು ಒಂದಲ್ಲ ಎರಡಲ್ಲ ಮೂರುಮಾತುಗಳಲ್ಲಿ ಉತ್ತರಪ್ರಾಂತದ ಸರದಾರರ ಮಾತುಗಳನ್ನು ಅಲ್ಲಗಳೆದು ತಿರುಗಿ ಅವರನ್ನು ದುರುಕ್ತಿಗಳಿಂದ ಅಪಮಾನಗೊಳಿಸಿದ್ದರಿಂದ ಅವರೆಲ್ಲರನ್ನು ಔದಾಸೀನ್ಯವು ಆವರಿಸಿತು. ಸುರಜಮಲ್ಲನ ದಿವಾನನು ಇಲ್ಲಿ ಒಂದು ಕ್ಷಣಸಹ ನಿಲ್ಲದೆ ಹೊರಟುಹೋಗಬೇಕೆಂದು ಅಭಿಪ್ರಾಯಪಟ್ಟನು. ಸಿಂಧೆ ಹೋಳಕರರು ನಡುವೆಯಾಗಿ ಸುರಜಮಲ್ಲನನ್ನು ಕರಕೊಂಡು ಬಂದದ್ದರಿಂದ ಈ ಪ್ರಸಂಗದಿಂದ ಅವರೂ ಜಾಗರೂಕರಾಗಿ "ನೀವು ಇಂದಿನ ರಾತ್ರಿಯಲ್ಲಿಯೇ ಹೊರಟುಹೋಗಬೇಕು; ಮುಂದೆ ನಿಂತರೆ ನಮ್ಮ ಮೇಲೆ ಶಬ್ದವಿಲ್ಲ" ಎಂದು ಸುರಜಮಲ್ಲನಿಗೆ ಹೇಳಿ ಕಳಿಸಿದರು. ಸುರಜಮಲ್ಲನೂ ದೀರ್ಘವಿಚಾರಮಾಡಿ ಇನ್ನು ಇಲ್ಲಿರುವದು ತನ್ನ ಮಾನಕ್ಕೆ ಹಾನಿಯೆಂದು ನಿಶ್ಚಯಿಸಿದನು.

ಮಧ್ಯರಾತ್ರಿಯಸಮಯದಲ್ಲಿ ಸುರಜಮಲ್ಲನು ಸದ್ದಿಲ್ಲದಂತೆ ತನ್ನ ರಾಹುಟಿಗಳನ್ನು ಕಿತ್ತಿಸಿದನು. ಆನೆಯಕೊರಳೊಳಗಿನ ಗಂಟೆಗಳನ್ನು ಸಹ ಬಿಚ್ಚಿಸಿ ಸರ್ವ ಸಾಮಾನುಗಳನ್ನು ಒಂಟೆಗಳಮೇಲೂ, ಗಾಡಿಗಳಮೇಲೂ ಹೇರಿಕೊಂಡು ಯಾರಿಗೂ ತಿಳಿಯದಂತೆ ತನ್ನ ಊರ ದಾರಿಯನ್ನು ಹಿಡಿದನು. ಆತನು ಬೆಳತನಕ ದಾರೀ ನಡೆದು ೨೫ ಮೈಲುಗಳಮೇಲಿರುವ ಅತ್ಯಂತ ಭದ್ರವಾದ 'ಬ್ಯಾಲಮಗಡ'ವೆಂಬ ತನ್ನ ಕೋಟೆಯನ್ನು ಸೇರಿದನು. ಸುರಜಮಲ್ಲನು ಹೊರಟುಹೋದ ೩-೪ ತಾಸುಗಳ ಮೇಲೆ ಸುದ್ದಿಹತ್ತಿದಂತೆ ನಟಿಸಿ, ಸಿಂಧೆ ಹೋಳಕರರು ಅವನನ್ನು ಬೆನ್ನಟ್ಟುವದಕ್ಕಾಗಿ ಕೆಲವು ದಂಡನ್ನು ಕಳಿಸಿದರು. ಆದರೆ ಅದು ನಿಮಿತ್ತ್ಯಮಾತ್ರವೆಂಬದನ್ನು ಬಿಚ್ಚಿ ಬರೆಯುವ ಕಾರಣವಿಲ್ಲ; ಈ ಪ್ರಕಾರ ಮರಾಟರ ದಂಡಿನಲ್ಲಿ ಅಸಂತೋಷವು ಪ್ರಾದುರ್ಭವಿಸಿತು. ಸಂತೋಷವೇ ಮಾನವೀಪ್ರಾಣಿಯ ಬಲವಾದ್ದರಿಂದ ಮರಾಟರ ಸೈನ್ಯದ ಕಸುವು ಅಪ್ರತ್ಯಕ್ಷವಾಗಿ ಕುಗ್ಗುತ್ತ ನಡೆಯಿತೆಂದು ಹೇಳಬಹುದು ಈ ಪ್ರಸಂಗದಿಂದ ಮರಾಟರ ಸೈನ್ಯದಲ್ಲಿಯ ಉತ್ತರ ಹಾಗು ದಕ್ಷಿಣಗಳ ಸರದಾರರಲ್ಲಿ ಮತಭೇದಗಳುಂಟಾಗಲುಪಕ್ರಮಿಸಿದವು. ಸೈನ್ಯದಲ್ಲಿಯ ಒಕ್ಕಟ್ಟುತಪ್ಪಿತು; ವಾತ, ಪಿತ್ಥ, ಕಫತ್ರಯಗಳು ಕೂಡಿದ ಮನುಷ್ಯನ ನಾಡಿಗಳು ಒಂದೊಂದೇ ಸಾಯುವಂತೆ, ಭಾವೂಸಾಹೇಬನ ಈ ಮೇಲಿನ ತ್ರಿದೋಷಸಂಚಯದಿಂದ ಮರಾಟ ಸೈನ್ಯದ ಸ್ಥಿತಿಯು ಹೀಗಾಯಿತು.

## ಒಂಬತ್ತನೆಯ ಪ್ರಕರಣ.

### ವಿಷವೃಕ್ಷ.

ಯಮುನೆಯ ಪಶ್ಚಿಮದಂಡೆಯಲ್ಲಿ ಆಗ್ರಾ, ಮಥುರಾ, ದಿಲ್ಲಿ ಈ ಮೂರು ಶಹರಗಳು ಮರಾಟರ ವಶಕ್ಕೆ ಬಂದಿದ್ದವು; ದಿಲ್ಲಿಯಿಂದ ಉತ್ತರಕ್ಕೆ ೭೭ ಮೈಲುಗಳ ಮೇಲೆ ಕುಂಜಪುರವೆಂಬದೊಂದು ಪ್ರಸಿದ್ಧ ಸ್ಥಳವು ಯಮುನೆಯ ದಂಡೆಯಲ್ಲಿರುತ್ತದೆ. ಅದನ್ನು ಕೈವಶಮಾಡಿಕೊಳ್ಳುವದಕ್ಕಾಗಿ ಹಿಂದಕ್ಕೆ ಒಂದೆರಡು ಸಾರೆ ಸಿಂಧೆ-ಹೋಳಕರರು ಪ್ರಯತ್ನಮಾಡಿ ಭಗ್ನಮನೋರಥರಾಗಿದ್ದರು; ಸದ್ಯಕ್ಕೆ ಕುಂಜಪುರವು ಅಫಗಾನರ ವಶದಲ್ಲಿದ್ದು, ಅಲ್ಲಿ ಅಬದುಲ್ ಸಮದಖಾನ, ಹಾಗು ಕುತುಬಶಹಾ ಎಂಬ ಅಫಗಾನ ಪ್ರಮುಖಪುರುಷರು ಇರುತ್ತಿದ್ದರು. ಅವರಿಂದ ಅಬ್ದಾಲಿಗೆ ಹಲವು ಬಗೆಯಿಂದ ಸಹಾಯವು ದೊರೆಯುತ್ತಿತ್ತು. ಆದ್ದರಿಂದ ಪಠಾಣರ ಪಾರುಪತ್ಯವನ್ನು ಮಾಡಿ ಕುಂಜಪುರವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಭಾವೂಸಾಹೇಬನು ನಿಶ್ಚಯಿಸಿದನು. ಕುಂಜಪುರವು ಮರಾಟರ ವಶಕ್ಕೆ ಬಂದರೆ, ಅಬ್ದಾಲಿಗೆ ಯಮುನೆಯನ್ನು ದಾಟುವದಕ್ಕೆ ಸಾರಂಗಪುರದವರೆಗೆ ಹೋದಹೊರತು ಗತ್ಯಂತರವಿಲ್ಲೆಂದು ಆತನು ಬಗೆದನು. ಒಂದುವೇಳೆ ಯುದ್ಧವು ಉಪಸ್ಥಿತವಾದರೂ ದಿಲ್ಲಿಯಿಂದ ಬಹುದೂರ ಆಗಿ, ನಮ್ಮ ಹಿಂದೆ ದಿಲ್ಲಿಯು ಸುರಕ್ಷಿತವಾಗಿ ಉಳಿಯುವದೆಂದು ತರ್ಕಿಸಿದನು. ಕುಂಜಪುರದ ಸುಲಿಗೆಯಲ್ಲಿ ಹೇರಳವಾಗಿ ಹಣವು ಸಿಕ್ಕು ದುಡ್ಡಿನ ಬರವಾದರೂ ಹಿಂಗಬಹುದಾಗಿತ್ತು; ಯಮುನೆಯಲ್ಲಿ ಇನ್ನೂ ನೀರು ವಿಶೇಷವಿರುವದರಿಂದ, ಕುಂಜಪುರದವರಿಗೆ ಅಬ್ದಾಲಿಯಿಂದ ಸಹಾಯವು ಸಿಗುವದು ದುಸ್ತರವಾಗಿತ್ತು; ಈ ಎಲ್ಲ ಸಂಗತಿಗಳನ್ನು ಮನಸ್ಸಿನಲ್ಲಿ ತೂಗಿನೋಡಿ ಅಶ್ವಿನ ಶು|| ೧ ಯ ದಿವಸದ ಶುಭಮುಹೂರ್ತದಲ್ಲಿ ಭಾವೂಸಾಹೇಬನು ದಿಲ್ಲಿಯಿಂದ ಹೊರಟನು. ಆತನು ಸಂಗಡ ಎಲ್ಲ ದಂಡನ್ನು ತಕ್ಕೊಂಡು ನಾರೋಶಂಕರನ ಬಳಿಯಲ್ಲಿ ಐದುಸಾವಿರದಂಡನ್ನು ಮಾತ್ರ ದಿಲ್ಲಿಯ ರಕ್ಷಣೆಗೆ ಇಟ್ಟನು.

ಈ ಪ್ರಕಾರ ಹೊರಟ ಭಾವೂಸಾಹೇಬನು ತನ್ನ ದಂಡಿನಲ್ಲಿ ಮೂರು ಭಾಗಗಳನ್ನು ಮಾಡಿದನು: ಎಲ್ಲಕ್ಕೂ ಮುಂಭಾಗದಲ್ಲಿ ಸಿಂಧೆ-ಹೋಳಕರ ಮತ್ತು ವಿಠ್ಠಲ ಶಿವದೇವ ಮೊದಲಾದ ಸರದಾರರು ತಮ್ಮತಮ್ಮ ದಂಡಿನೊಡನೆ ಹೊರಟರು; ಮಧ್ಯಭಾಗದಲ್ಲಿ ಭಾವೂಸಾಹೇಬ ಹಾಗೂ ವಿಶ್ವಾಸರಾಯ ಇವರಿಬ್ಬರೂ ಹುಜುರಾತಿಯ ಸೈನ್ಯದೊಡನೆ ನಡೆದರು. ಹಿಂಭಾಗದಲ್ಲಿ ಇಬ್ರಾ

ಹಿಮುಖಾನ ಗಾರದಿ ಎಂಬ ಸರದಾರನು ತನ್ನ ತೋಫಖಾನೆಯೊಡನೆ ಇದ್ದನು. ಬಾಜಾರ ಬುನುಗಿನವರ ಮೇಲೆ ದಮಾಜಿ ಗಾಯಕವಾಡನು ನೇಮಿಸಲ್ಪಟ್ಟನು. ಸೈನ್ಯವು ಆದಷ್ಟು ಬೇಗನೆ ಕುಂಜಪುರವನ್ನು ಮುಟ್ಟಬೇಕಾದ್ದರಿಂದ ಮಾರ್ಗದಲ್ಲಿ ಎಲ್ಲಿಯೂ ದಿನಗಳೆಯಲಿಕ್ಕೆ ಆಸ್ಪದವಿದ್ದಿಲ್ಲ; ೩।೪ ದಿನಗಳಲ್ಲಿ ಸಿಂಧೆ ಹೋಳಕರರು ಕುಂಜಪುರವನ್ನು ಮುಟ್ಟಿದರು: ಹೀಗೆ ಅಕಸ್ಮಾತ್ತಾಗಿ ಮರಾಟರ ದಂಡು ಬಂದು ತಮ್ಮನ್ನು ಮುತ್ತಿದ್ದನ್ನು ನೋಡಿ ಕುಂಜಪುರದೊಳಗಿನ ಅಫಗಾನರು ಗಾಬರಿಯಾದರು. ಅವರು ಗುಪ್ತಚಾರರ ಮುಖಾಂತರವಾಗಿ ಅಬ್ದಾಲಿಗೆ ಈ ಸುದ್ದಿಯನ್ನು ಹಚ್ಚಿದರು. ಕೂಡಲೆ ಅಬ್ದಾಲಿಯು ತನ್ನ ದಂಡನ್ನು ಸಾವರಿಸಿಕೊಂಡು ಕುಂಜಪುರದ ಕಡೆಗೆ ಹೊರಟನು. ಅವನು ಕುಂಜಪುರದ ಪಠಾಣರಿಗೆ ಬರೆದ ಪತ್ರವು ಕರ್ಮಧರ್ಮ-ಸಂಯೋಗದಿಂದ ಮರಾಟರ ಕೈಗೆ ಸಿಕ್ಕಿತು; ಅದರಲ್ಲಿ ಅಬ್ದಾಲಿಯು ಕುಂಜಪುರದವರಿಗೆ ಅಭಯವನ್ನು ಕೊಟ್ಟು ತನ್ನ ದಂಡು ಇನ್ನು ಎರಡೇದಿನಗಳಲ್ಲಿ ನಿಮ್ಮ ಸಹಾಯಕ್ಕೆ ಬರುವದೆಂದು ಉಲ್ಲೇಖಿಸಿದ್ದನು. ಈ ಸಂಗತಿಯು ಭಾವೂಸಾಹೇಬನಿಗೆ ತಿಳಿಯಲು ಅವನು ಅಬ್ದಾಲಿಯು ಬರುವಷ್ಟರಲ್ಲಿ ಕೋಟೆಯನ್ನು ತಕೊಳ್ಳಬೇಕೆಂದು ಸೈನಿಕರಿಗೆ ಅಪ್ಪಣೆಯನ್ನು ಮಾಡಿದನು. ಅಬದುಲ್ ಸಮದಖಾನ ಹಾಗು ಕುತುಬಶಹಾ ಇವರಿಬ್ಬರಿಗೆ ಎಲ್ಲಿಯೂ ತಪ್ಪಿಸಿಕೊಂಡು ಹೋಗಲಿಕ್ಕೆ ಸಹ ಮಾರ್ಗವಿಲ್ಲದಾಯಿತು. ಅವರು ತಮ್ಮ ಗುಪ್ತಹೇರನ ಮುಖಾಂತರವಾಗಿ ತಿಳಿದ ಸುದ್ದಿಯಿಂದ ಒಂದೆರಡು ದಿನಗಳನ್ನು ಹ್ಯಾಗಾದರೂ ಕಳೆಯಬೇಕೆಂದು ಪ್ರಯತ್ನಮಾಡಿದರು. ಆದರೆ ಅದು ಸಿದ್ಧಿಗೆ ಹೋಗಲಿಲ್ಲ:

ಹೀಗೆ ಮರಾಟರ ದಂಡಿನಲ್ಲಿ ಸೇರಿ ಅಫಗಾನ ಗುಪ್ತಹೇರನ ಕೆಲಸವನ್ನು ಮಾಡುವ ಮಹಾನೀಚನು ಯಾರೆಂದು ವಾಚಕರು ವಿಚಾರಮಾಡಬಹುದು; ಆತನೇನು ವಾಚಕರಿಗೆ ಅಪರಿಚಿತನಲ್ಲ; ಭೀಲಶಾದ ತ್ರ್ಯಂಬಕ ಶಾಸ್ತ್ರಿಯು ಭಾವೂಸಾಹೇಬನ ಸಂಗಡ ಇದ್ದನಷ್ಟೇ; ಆ ಪುಣ್ಯವಂತನೇ ಭಾವೂಸಾಹೇಬನಿಗೆ ಮಂಕು ಬೂದಿಯನ್ನು ಹಚ್ಚಿ ಅಫಗಾನರನ್ನು ಉಳಿಸಬೇಕೆಂದು ಸಾಹಸಮಾಡಿದನು. ಆದರೆ ಅದು ಯಾಕೋ ಸಿದ್ಧಿಗೆ ಮುಟ್ಟಲಿಲ್ಲ. ಭಾವೂಸಾಹೇಬನು ತ್ರ್ಯಂಬಕ ಶಾಸ್ತ್ರಿಯ ಕಾರಸ್ಥಾನವನ್ನು ಕಂಡು ಹಿಡಿದಿದ್ದರೂ ಅವನ ಜ್ಯೋತಿಷಜ್ಞಾನಕ್ಕೆ ಮೆಚ್ಚಿ ಪುನಃ ಪುನಃ ಅವನಮೇಲೆ ವಿಶ್ವಾಸವಿಡುತ್ತಿದ್ದನು. ಈ ವಿಶ್ವಾಸವೇ ಮುಂದೆ ಮರಾಟರ ಅವನತಿಗೆ ಕಾರಣವಾಯಿತು. ಇಬ್ರಾಹಿಮುಖಾನ ಗಾರದಿಯು ತ್ರ್ಯಂಬಕ ಶಾಸ್ತ್ರಿಯ ಮುಹೂರ್ತವನ್ನು ಲೆಕ್ಕಿಸದೆ ಕೋಟೆ

ಯುಗೋಡೆಗಳಿಗೆ ತೋಫನ್ನು ಹೊಡೆಯು ಹತ್ತಿದ್ದರಿಂದ ಅತನು ನಿರುಪಾಯನಾದನು. ಕ್ಷಣದಲ್ಲಿ ಕೋಟೆಯು ಗೋಡೆಗಳು ಕಳಚಿಬಿದ್ದವು. ದಮಾಜಿ ಗಾಯಕವಾಡ, ಸಿಂಧೆ ಹೋಳಕರರು 'ಹರ ಹರ ಮಹಾದೇವ' ಎಂದು ಗರ್ಜಿಸುತ್ತ ಕೋಟೆಯನ್ನು ಹೊಕ್ಕರು; ಕಿಲ್ಲೆಯೊಳಗಿನ ಪಠಾಣರು ಹೌಹಾರಿ ಮರಾಟರ ಖಡ್ಗಗಳಿಗೆ ಆಹುತಿಯಾದರು. ಈ ಕಾಲಕ್ಕೆ ಮರಾಟರಾದರೂ ದಯಾ ಮಾಯಾ ಮೊದಲಾದವುಗಳನ್ನು ತೊರೆದು ಕೈಗೆಸಿಕ್ಕವರನ್ನು ತುಂಡರಿಸಿದರು. ಸೈನಿಕರು ಯಥೇಚ್ಛವಾಗಿ ಪಟ್ಟಣವನ್ನು ಸುಲಿದರು, ಮಾತ್ರ ಹೆಂಗಸರ ಅಪಮಾನವನ್ನು ಯಾರೂ ಮಾಡಲಿಲ್ಲ; ಬಳಿಕ ಸೈನಿಕರು ಒಳಕೋಟೆಯನ್ನು ಸೇರಿ ಪಠಾಣಪ್ರಮುಖರನ್ನು ಹಿಡಿದರು. ಅಬದುಲ್ ಸಮದಖಾನ ಹಾಗು ಕುತುಬಶಹಾ ಇವರಿಬ್ಬರು ಸಪರಿವಾರವಾಗಿ ಮರಾಟರ ಕೈಗೆ ಸಿಕ್ಕರು. ಅವರನ್ನು ಸಿಂಧೆ ಹೋಳಕರರು ಭಾವೂಸಾಹೇಬನ ಕಡೆಗೆ ಕಳಿಸಿದರು.

ದತ್ತಾಜಿ ಸಿಂಧೆಯನ್ನು ಕ್ರೂರತನದಿಂದ ಕೊಲ್ಲಿಸಿದ ಕುತುಬಶಹನನ್ನು ನೋಡಿ ಭಾವೂಸಾಹೇಬನು ಸಿಟ್ಟಿನಿಂದ ಹುಚ್ಚನಾದನು: ಜನಕೋಜಿ ಸಿಂಧೆಯು ಕುತುಬನು ತನ್ನ ವೈರಿಯಾಗಿದ್ದರೂ ಪ್ರಸಂಗದಕಡೆಗೆ ಲಕ್ಷಗೊಟ್ಟು ಅವನನ್ನು ಆನೆಯಮೇಲೆ ಕುಳ್ಳಿರಿಸಿ ಕಳಿಸಿದ್ದನು. ಶತ್ರುವು ತನ್ನೆದುರಿಗೆ ಹೀಗೆ ಆನೆಯ ಮೇಲೆ ಕುಳಿತುಬರುವದನ್ನು ಕಂಡು ಭಾವೂಸಾಹೇಬನು ಸಂತಾಪಗೊಂಡು, ಅವನನ್ನು ಆನೆಯಿಂದ ಕೆಳಗೆ ದೂಡಲಿಕ್ಕೆ ಸೇವಕರಿಗೆ ಅಪ್ಪಣೆಕೊಟ್ಟನು. ಭಾವೂಸಾಹೇಬನ ಈ ಅಪ್ಪಣೆಯನ್ನು ಕೇಳಿ, ಆ ಪಠಾಣ ಪ್ರಮುಖರು ತಾವೇ ಆನೆಯಿಂದ ಕೆಳಗೆ ಹಾರಿಕೊಂಡರು. ನಂತರ ಆ ಅಬದುಲ್‌ಸಮದಖಾನ-ಕುತುಬಶಹಾ ಇವರಿಬ್ಬರೂ ಭಾವೂಸಾಹೇಬನ ಅಪ್ಪಣೆಯಿಂದ ಕೊಲ್ಲಲ್ಪಟ್ಟರು. ಮರಾಟರು ಕುಂಜಪುರವನ್ನು ಆಕ್ರಮಿಸಿ ಅಲ್ಲಿ ತಮ್ಮ ನಿಶಾನೆಯನ್ನು ನಿಲ್ಲಿಸುವದಕ್ಕೂ, ಅಬ್ದಾಲಿಯ ಸೈನಿಕರು ಯಮುನೆಯ ತೀರಕ್ಕೆ ಬರುವದಕ್ಕೂ ಗಂಟುಬಿದ್ದಿತು. ಆಗ ಈ ಹೃದಯದ್ರಾವಕ ಸಂಗತಿಯ ಶ್ರವಣದಿಂದ ಅಬ್ದಾಲಿಯೂ, ಆತನ ಸೈನಿಕರೂ ದುಃಖಾಗ್ನಿಯಿಂದ ಬೆಂದುಬೆಂಡಾಗಿ—'ಈ ಕಾಫರರನ್ನು ಏನು ಮಾಡೋಣ!' ಎಂದು ಸಂತಾಪದಿಂದ ನುಡಿಯುತ್ತ ಅಲ್ಲಿಂದ ಹಿಂದಿರುಗಿದರು.

ಈ ಬಗೆಯಾಗಿ ಕುಂಜಪುರದಲ್ಲಿ ವಿಜಯಶ್ರೀಯು ಮಾಲೆಹಾಕಲು ಮರಾಟರ ಆನಂದಕ್ಕೆ ಎಣೆಯಿಲ್ಲದಾಯಿತು. ಪೆಟ್ಟಿನ ಮೇಲೆ ಪೆಟ್ಟಿನಂತೆ ವಿಜಯವೇ ದೊರೆಯುತ್ತ ನಡೆದದ್ದರಿಂದ, ಭಾವೂಸಾಹೇಬನ ಮೋರೆಯು ಹಿಗ್ಗಿ ಇಷ್ಟಗಲವಾಯಿತು. ಆತನು ಇಬ್ರಾಹಿಮಖಾನಗಾರದಿ ಮೊದಲಾದ ತನ್ನ ಸೈನಿಕರನ್ನು ಬಹಳ

ವಾಗಿ ಹೊಗಳಿದನು. ಬಳಿಕ ಸೈನಿಕರು ಕುಂಜಪುರದೊಳಗಿನ ಅಫಗಾಣರ ಖಜಾನೆಯನ್ನು ಸುಲಿದರು. ಅದರಲ್ಲಿ ಏಳುಲಕ್ಷ ರೂಪಾಯಿಗಳು ದೊರೆತವು. ನಜೀಬಖಾನನ ಮೊಮ್ಮಗ ಹಾಗು ಅಳಿಯನನ್ನು ಸೆರೆಹಿಡಿದು ಪರಿಪರಿಯಿಂದ ಗೋಳಾಡಿಸಲು, ಅವರು ಭೂಗತನಿಧಿಯನ್ನು ತೋರಿಸಿದರು. ಅದರಿಂದ ಭಾವೂಸಾಹೇಬನಿಗೆ ಹದಿನೇಳುಲಕ್ಷ ರೂಪಾಯಿಗಳು ಸಿಕ್ಕವು; ಮರಾಟಾಸೈನ್ಯದ ಪ್ರತಿನಿತ್ಯದ ವೆಚ್ಚವು ೬೦ಸಾವಿರ ರೂಪಾಯಿಗಳನ್ನು ಮೀರಿದ್ದರಿಂದ ಅದಷ್ಟು ಹೆಚ್ಚು ದ್ರವ್ಯಸಂಗ್ರಹದ ಕಡೆಗೆ ಭಾವೂಸಾಹೇಬನು ಲಕ್ಷಗೊಡಬೇಕಾಗುತ್ತಿತ್ತು. ಇದರಹೊರತು ಪಟ್ಟಣದೊಳಗಿನ ಸುಲಿಗೆಯಿಂದ ಸೈನಿಕರು ಅಪಾರವಾದ ಸಂಪತ್ತನ್ನು ಸಂಗ್ರಹಿಸಿದರು. ಕುತುಬಶಹನು ದತ್ತಾಜಿಸಿಂಧೆಯಿಂದ ಅಪಹರಿಸಿದ 'ಜನ್ಹೇರಗಜ'ವು ಪುನಃ ಮರಾಟರಿಗೆ ಸಿಕ್ಕಿತು; ಇದರಿಂದ ಹೋದ ಮಾನವು ತುಂಬಿಬಂತೆಂದು ಸಿಂಧೆಸರದಾರನಿಗೆ ಆನಂದವಾಯಿತು.

ಬಳಿಕ ಸೈನಿಕರು ಕುಂಜಪುರವನ್ನೆಲ್ಲ ಶೋಧಿಸಿ ನೋಡುತ್ತಿರಲು, ಒಂದುದಿನ ಒಂದು ಸೆರೆಮನೆಯಲ್ಲಿ ಯುವತೀಕಂಠದೊಳಗಿನ ಕರುಣಾಸ್ವರವು ಕೇಳಬರತೊಡಗಿತು. ಸೈನಿಕರು ತಟಸ್ಥರಾಗಿ ಆ ಸ್ವರವನ್ನು ಲಕ್ಷಪೂರ್ವಕವಾಗಿ ಕೇಳಲು, ಆ ಆರ್ತಸ್ವರದಲ್ಲಿ ಮರಾಠೀಶಬ್ದಗಳು ಕಿವಿಗೆ ಬಿದ್ದವು; ಅದರಿಂದ ಅವರ ಉತ್ಕಂಠೆಯು ಹೆಚ್ಚಾಗಿ ಅವರು ಸೆರೆಮನೆಯನ್ನು ನುಗ್ಗಿ ಬಾಗಿಲು ಮುರಿದು ಒಳಹೊಕ್ಕರು; ನೋಡುತ್ತಾರೆ; ಒಬ್ಬ ಬ್ರಾಹ್ಮಣಸ್ತ್ರೀಯು ಗಡಗಡನೆ ನಡುಗುತ್ತ ನಿಂತುಕೊಂಡಿದ್ದು, ರಾಕ್ಷಸರನ್ನು ಹೋಲುವ ಮೂವರು ಮುಸಲ್ಮಾನರು ಆಕೆಯ ಮೈಮೇಲೆ ಏರಿಹೋಗುತ್ತಿದ್ದರು; ಆಗ ಆ ಮರಾಟಾಸೈನಿಕರು ಆ ಮುಸಲ್ಮಾನರನ್ನು ಹೊಡೆಯಹೋಗಲು, ಅವರು ಅಂಜಿ ಮರಾಟರ ಕೈಕಾಲುಗಳನ್ನು ಕಟ್ಟಿಕೊಳ್ಳಹತ್ತಿದರು. ಅಷ್ಟರಲ್ಲಿ ಮೋಹಂದಳೆಯು ಸೈನಿಕರಿಗೆ ಆ ಸ್ತ್ರೀಯು ಗುರುತುಹತ್ತಿದ್ದರಿಂದ ಅವರು ಆಶ್ಚರ್ಯಮಗ್ನರಾಗಿ ಆಕೆಯನ್ನು ನೋಡುತ್ತ ನಿಂತುಬಿಟ್ಟರು. ಈ ಸಂಧಿಯನ್ನು ಸಾಧಿಸಿ ಆ ದುಷ್ಟಯುವನರು ಎತ್ತೋ ಹೋಗಿಬಿಟ್ಟರು.

ಪ್ರಿಯವಾಚಕರೇ, ಹೀಗೆ ಆ ಯವನ ಸೆರೆಮನೆಯಲ್ಲಿ ಸಿಕ್ಕ ಆ ತರುಣಿಯು ಯಾರಾಗಿರಬಹುದು! ಮೋಹಂದಳೆಯ ಸೈನಿಕರು ಆಕೆಯನ್ನು ಗುರ್ತಿಸಿದ್ದರಿಂದ ಚಾಣಾಕ್ಷರಾದ ನಿಮಗೂ ಆಕೆಯ ಪರಿಚಯವು ತುಸುತುಸು ಹತ್ತಬಹುದಲ್ಲವೇ? ವಾಸ್ತವವಾಗಿ ಆ ಸುಂದರಿಯು ನಿಮ್ಮ ಪೂರ್ಣಪರಿಚಯಸ್ಥಳೇ ಇರುವದರಿಂದ ನೀವೂ ಆ ಸೈನಿಕರಂತೆ ತಟಸ್ಥರಾಗಬಹುದು; ಮಹಮ್ಮದಶಹಾ ನಬಾಬನು ರಂಗೂಬಾಯಿಯನ್ನು ಅಪಹರಿಸಿದ ಸಂಗತಿಯು ನಿಮ್ಮ ಸ್ಮರಣದಲ್ಲಿ ಇರುವದಷ್ಟೇ; ಆ

ದುಷ್ಟ ನಬಾಬನು ಮರಾಟರ ಸೆರೆಯಲ್ಲಿ ಸಿಕ್ಕಬಳಿಕ ದರ್ಗಾದಲ್ಲಿದ್ದ ಮುದಿಮಿಯಾಸಾಹೇಬನು ಆದಿನ ರಾತ್ರಿ ಅಲ್ಲಿಂದ ರಂಗೂಬಾಯಿ ಸಹಿತವಾಗಿ ತಮ್ಮ ಪರಿವಾರವನ್ನು ಹೊರಡಿಸಿಕೊಂಡು ಹೊರಟವನು ಕುಂಜಪುರಕ್ಕೆ ಬಂದನು. ಬಳಿಕ ಆ ಧೂರ್ತನಾದ ಮಿಯಾಸಾಹೇಬನು ನಬಾಬನ ಪಾಲಿನ ಈ ಸ್ತ್ರೀರತ್ನವನ್ನು ಅನ್ಯರು ಅಪಹರಿಸಬಾರದೆಂದು ಆಕೆಯನ್ನು ಗುಪ್ತವಾಗಿ ಸೆರೆಯಲ್ಲಿಟ್ಟಿದ್ದನು. ಕುಂಜಪುರದ ಭವಿತವ್ಯವು ಹೀಗಾದ ಬಳಿಕ ಆಕೆಯು ಅನಾಯಾಸವಾಗಿ ಮುಕ್ತಳಾದಂತಾಗಿತ್ತು; ಆದರೆ ದುರ್ಜನರಾದ ಮೂವರು ಪಠಾಣರು ಆಕೆಯ ಅಂಗಸೌಷ್ಠವಕ್ಕೆ ಮರುಳಾಗಿ, ಈ ಗೊಂದಲದಲ್ಲಿ ತಮ್ಮ ಕಾಮವಾಸನೆಯನ್ನು ತೃಪ್ತಿಪಡಿಸಿಕೊಂಡರೆ ಯಾರು ಕೇಳುವರೆಂದು ಆ ಸೆರೆಮನೆಯನ್ನು ಸೇರಿದ್ದರಿಂದ ಇನ್ನೊಂದು ಕ್ಷಣದಲ್ಲಿ ಆಕೆಯ ಪಾತಿವ್ರತ್ಯವು ಮಣ್ಣುಗೂಡಿಹೋಗುತ್ತಿತ್ತು! ಆದರೆ ಅದೇ ಸಮಯದಲ್ಲಿ ಮರಾಟಾಸೈನಿಕರು ಸೆರೆಮನೆಯನ್ನು ನುಗ್ಗಿದ್ದರಿಂದ ಮುಂದಿನ ಅನರ್ಥವು ತಪ್ಪಿ ರಂಗೂಬಾಯಿಯು ಪರಿಶುದ್ಧಸ್ಥಿತಿಯಿಂದ ಮರಾಟರ ಕೈಗೆ ಸಿಕ್ಕಳು.

ಹೀಗೆ ಕುಂಜಪುರದ ವಿಜಯದಲ್ಲಿ ,ಗಜರತ್ನವು ದೊರೆತದ್ದರಿಂದ ಸಿಂಧೆ ಸರದಾರನ ಪರಿವಾರಕ್ಕೂ, ಸ್ತ್ರೀರತ್ನವು ದೊರೆತದ್ದರಿಂದ ಮೋಹಂದಳೆ ಸರದಾರನ ಪರಿವಾರಕ್ಕೂ ಆನಂದಾತಿಶಯವಾಯಿತೆಂದು ಬರೆಯಲವಶ್ಯವಿಲ್ಲ. ಈ ಸಂಗತಿಯು ಭಾವೂಸಾಹೇಬನ ಕಿವಿಯವರೆಗೆ ಹೋಗಿ ಅವನಿಗೂ ಒಂದು ಬಗೆಯ ಸಮಾಧಾನವಾಯಿತು. ರಂಗೂಬಾಯಿಯನ್ನು ಕಳ್ಳರು ಅಪಹರಿಸಿದಂದಿನಿಂದ ಆ ಅಪಮಾನಕಾರಕರೂಪೀವ್ಯಸನವು ಆತನಲ್ಲಿ ಯಾವಾಗಲೂ ಕಟಿಯುತ್ತಿತ್ತು; ಈಗ ರಂಗೂಬಾಯಿಯು ದೊರೆತದ್ದರಿಂದ ಆತನ ವ್ಯಸನವು ಹೋಗಿ ಮೈಮೇಲಿನದೊಂದು ಭಾರವು ಇಳಿದಂತಾಯಿತು. ಬಳಿಕ ಭಾವೂಸಾಹೇಬನು ಗಣೋಬನಮುಖದಿಂದ ಎಲ್ಲ ಸಂಗತಿಯನ್ನು ಕೇಳಿಕೊಂಡು ಮಹಮ್ಮದಶಹಾನಬಾಬನ ಈ ಅಧಮತನಕ್ಕೆ ಸಂತಾಪಗೊಂಡು ಅವನ ನೂರುವರ್ಷಗಳನ್ನು ಪೂರ್ಣಮಾಡುವದಕ್ಕಾಗಿ ಸೇವಕರಿಗೆ ಅಪ್ಪಣೆಯನ್ನು ಮಾಡಿದನು.

ಈ ಮೇರೆಗೆ ಮರಾಟರು ಕುಂಜಪುರವನ್ನು ತಕ್ಕೊಂಡಾಗ ಆಶ್ವೀನಶುದ್ಧ ೮ ತಿಥಿಯಿತ್ತು; ಮುಂದೆ ಎರಡೇದಿನಗಳಲ್ಲಿ ವಿಜಯದಶಮಿಯ ಹಬ್ಬವಿದ್ದುದರಿಂದ ಮರಾಟಾಸೈನಿಕರಲ್ಲಿ ಸಮಾರಂಭದ ಸಿದ್ಧತೆಯು ಬಹು ಸಡಗರದಿಂದ ನಡೆಯಿತು. ಇಲ್ಲಿಯವರೆಗೆ ಉತ್ಕರ್ಷವೇ ಆಗುತ್ತ ಬಂದದ್ದರಿಂದ ಮರಾಟರಿಗೆ ಅಬ್ದಾಲಿಯ ಅಂಜಿಕೆಯು ನಾಮಶೇಷವಾಯಿತು. ವಿಜಯಾದಶಮಿಯ ದಿವಸ ಸೀಮೋಲ್ಲಂಘನಸಮಾರಂಭಕ್ಕೆ ಪ್ರಾರಂಭವಾಯಿತು. ಸಮಸ್ತಸೈನ್ಯವೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ

ಹೊರಟಿತು. ಚಿತ್ರವಿಚಿತ್ರಬಣ್ಣಗಳ ಪೋಷಾಕನ್ನು ಧರಿಸಿದ ೨೮ ಸಾವಿರಜನ ರಾಹುತರೂ, ಅಸಂಖ್ಯ ಆನೆಗಳೂ ಐವತ್ತು ಸಾವಿರಕ್ಕೆ ಮಿೂರಿದ ಉಳಿದ ದಂಡಾಳುಗಳೂ ಅಂದು ಕುಂಜಪುರದ ವಿಸ್ತಾರವಾದ ಬೈಲಲ್ಲಿ ಪರಿಶೋಭಿಸಿದರು. ಶ್ರೀಮಂತವಿಶ್ವಾಸರಾಯನು ಶೃಂಗರಿಸಿದ ಪಟ್ಟದ ಆನೆಯಮೇಲೆ ಬಂಗಾರದ ಅಂಬಾರಿಯಲ್ಲಿ ಕುಳಿತು ಸೀಮೋಲ್ಲಂಘನದ ಸ್ಥಳಕ್ಕೆ ಹೊರಟನು. ಆತನ ಮುಂಭಾಗದಲ್ಲಿ ಚತುರಂಗಬಲವೂ ಒಡೆದುಕಾಣುವಹಾಗೆ ಒಳ್ಳೇ ಪದ್ಧತಿಯಿಂದ ಸಾಗಿತ್ತು; ಸುಮಾರು ಒಂದು-ಒಂದೂವರೆಮೈಲಿನವರೆಗೆ ಈ ಸೈನ್ಯವು ಪಸರಿಸಿತ್ತು; ವಿಶ್ವಾಸರಾಯನ ಬಳಿಯಲ್ಲಿ ಜನಕೋಜಿಸಿಂಧೆಯು ಕುಳಿತುಕೊಂಡಿದ್ದನು. ಆತನ ಆನೆಯ ಹಿಂದುಗಡೆಯ ಆನೆಯಮೇಲೆ ಬೆಳ್ಳಿಯ ಅಂಬಾರಿಯಲ್ಲಿ ಭಾವುಸಾಹೇಬನೂ ಬಳವಂತರಾಯನೂ ಕುಳಿತುಕೊಂಡಿದ್ದರು. ಅವರ ಹಿಂದಿಂದೆ ಕ್ರಮವಾಗಿ ದಮಾಜಿಗಾಯಕವಾಡ, ಜಾಧವ, ವಿಠ್ಠಲ ಶಿವದೇವ ಮೊದಲಾದ ಸರದಾರರು ತಮ್ಮತಮ್ಮ ಮರ್ಯಾದೆಗೆ ಅನುಸರಿಸಿ ಆನೆಗಳಮೇಲೆ ಕುಳಿತುಸಾಗಿದ್ದರು. ಇಂಥ ಸೀಮೋಲ್ಲಂಘನ ಮಹೋತ್ಸವವು ಮರಾಟರಕಾಲಕಿರ್ದಿಯಲ್ಲಿ ನ ಭೂತೋ ನ ಭವಿಷ್ಯತಿಯೆಂದು ಹೇಳಬಹುದು; ಯಾಕಂದರೆ ಮರಾಟರು ಈಕಾಲಕ್ಕೆ ವೈಭವದ ಅತ್ಯುಚ್ಚ ಶಿಖರಕ್ಕೆಏರಿದ್ದರು; ಅವರ ಯಶೋದುಂದುಭಿಯು ದಶದಿಕ್ಕುಗಳನ್ನು ವ್ಯಾಪಿಸಿಬಿಟ್ಟಿತ್ತು; ಈಪ್ರಕಾರ ವೈಭವದಿಂದ ಬ್ರಾಹ್ಮಣ-ಮರಾಟ-ಮುಸಲ್ಮಾನ ಮೊದಲಾದ ಸರದಾರರಿಂದ ಸಹಿತನಾಗಿ ಭಾವುಸಾಹೇಬನು ಕನಾತುಗಳಿಂದ ವೇಷ್ಟಿತವಾದ ಸ್ಥಳಕ್ಕೆಬಂದು ಶಮಿೂಪೂಜೆಯನ್ನು ಮಾಡಿದನು. ಬಳಿಕ ಸಮಸ್ತರೂ ಶಮಿೂಪತ್ರರೂಪೀ ಬಂಗಾರವನ್ನು ಶ್ರೀಮಂತರಿಗೆ ಸಮರ್ಪಿಸಿ, ಪರಸ್ಪರರು ತಕ್ಕೊಂಡು, ಧನ್ಯತೆಯನ್ನು ಪ್ರಕಟಿಸಿದರು. ಬಳಿಕ ಮಬ್ಬುಗತ್ತಲಾಗಲು ಸಾವಿರಾರು ಚಂದ್ರಜ್ಯೋತಿಗಳು, ಹಿಲಾಲುಗಳು ಹಚ್ಚಲ್ಪಟ್ಟವು. ಸಮಸ್ತರೂ ಪೂರ್ವೋಕ್ತ ವೈಭವದಿಂದ ತಿರುಗಿ ಛಾವಣಿಗೆಬಂದರು. ಈದಿವಸವು ಮರಾಟರ ಇತಿಹಾಸದಲ್ಲಿ ಬಹುಮಹತ್ವದೆಂದು ಎಣಿಸಲಾಗುವದು. ಇಂದಿನಿಂದಲೇ ಅವರು ಆ ವೈಭವಶಿಖರದಿಂದ ಕೆಳಗಿಳಿಯತೊಡಗಿದರೆಂದು ನಿರ್ವಿವಾದವಾಗಿ ಹೇಳಬಹುದು.

ಈ ಶಿಖರಚ್ಯುತಿಯ ಆಸ್ತಿವಾರವು ಅಂದೇ ರಾತ್ರಿಯಲ್ಲಿ ಸಂಭವಿಸಿತೆಂದು ಬಳಿಯಲಿಕ್ಕೆ ಅತ್ಯಂತ ವಿಷಾದವೆನಿಸುವದು. ಭಾವುಸಾಹೇಬನ ಡೇರೆಯಲ್ಲಿ ಮುಖ್ಯ ಮುಖ್ಯ ಕೆಲವು ಜನ ಸರದಾರರು ಮಾತಾಡುತ್ತ ಕುಳಿತಾಗ ಮಾತಿಗೆ ಮಾತು ಹೊರಟು ಮುಂದಿನ ಆಲೋಚನೆಗೆ ಆರಂಭವಾಯಿತು. ಆಗ ಭಾವುಸಾಹೇಬನು

ಸಹಜವಾಗಿ—"ಯಮುನಾನದಿಯು ತುಂಬಿ ಹರಿಯುತ್ತಿರುವದರಿಂದ ಅಬ್ದಾಲಿಯು ಇತ್ತ ಬರಲಾರನು. ಒಂದುವೇಳೆ ಅವನು ನದಿಯನ್ನು ದಾಟಿಯೇ ತೀರಬೇಕೆಂದು ಹಟಹಿಡಿದರೆ ಸಾರಂಗಪುರಕ್ಕೆ ಹೋಗಬೇಕಾಗುವದು. ಅದ್ದರಿಂದ 'ನಾವಾದರೂ ಅತ್ತಕಡೆಗೇ ಹೋಗುವದು ಪ್ರಶಸ್ತವಾಗಿರುವದು. ಮಾರ್ಗದಲ್ಲಿ ಕುರುಕ್ಷೇತ್ರವು ಹತ್ತುವದರಿಂದ ಅನಾಯಾಸವಾಗಿ ಆ ಪವಿತ್ರಕ್ಷೇತ್ರದ ದರ್ಶನಲಾಭವೂ ಒದಗುವದು." ಎಂದು ನುಡಿದನು. ಅವನ ಈ ಆಲೋಚನೆಯು ಬಳವಂತರಾವ ಮೇಹಂದಳೆ ಮೊದಲಾದ ಸರದಾರರಿಗೆ ರುಚಿಸಿತು. ದಕ್ಷಿಣದಲ್ಲಿಯೇ ಹುಟ್ಟಿಬೆಳೆದು ಅಲ್ಲಿಯೇ ಹಲಕೆಲವು ಪರಾಕ್ರಮಗಳನ್ನು ಮಾಡಿ ತೋರಿಸಿದ ಮೇಹಂದಳೆಯಂಥ ಸರದಾರರಿಗೆ ಉತ್ತರಸೀಮೆಯ ಜನರ ಪರಾಕ್ರಮದ ಅನುಭವವಿದ್ದಿಲ್ಲ; ಆದರಲ್ಲಿಯೂ ಅವರಿಗೆ ಪಠಾಣರ ಸಾಮರ್ಥ್ಯವು ಸ್ವಲ್ಪಾದರೂ ಗೊತ್ತಾಗಿದ್ದಿಲ್ಲ. ದಿಲ್ಲಿ ಕುಂಜಪುರಗಳ ತಾತ್ಪೂರ್ತಿಕಅನುಭವದ ಮೇಲಿಂದ ಅವರು ಅಬ್ದಾಲಿಯ ಬಲಾಬಲಗಳನ್ನು ನಿರ್ಣಯಿಸಿ ಆದರಂತೆ ಅವರು ಭಾವೂಸಾಹೇಬನಿಗೆ ಮಂತ್ರಾಲೋಚನೆಗಳನ್ನು ಹೇಳುತ್ತಿದ್ದರು. ಆದರೆ ಪಠಾಣರ ಕೈಯಲ್ಲಿ ಅಟ್ಟಿಂಡು ತಟ್ಟೇಹಾಯ್ದು ಹೋಳಕರ ಮಲ್ಹಾರರಾಯನಂಥ ವೃದ್ಧಸರದಾರನಿಗೆ ದಕ್ಷಣೀಸರದಾರರ ಆಲೋಚನೆಯು ಸರಿಬೀಳುತ್ತಿದ್ದಿಲ್ಲ. ಅವನು ಆಗಾಗ್ಗೆ ತನ್ನ ಅಭಿಪ್ರಾಯವನ್ನು ಹೇಳಿ ಆ ಸರದಾರರನ್ನು ಎಚರಗೊಳಿಸುತ್ತಿದ್ದನು. ಆದರಂತೆ ಈ ದಿವಸವೂ ಭಾವೂಸಾಹೇಬನ ಈ ಆಲೋಚನೆಗೆ ಆದೂರದೃಷ್ಟಿಯ ಆ ಸರದಾರರು ತಲೆಹಾಕುವದನ್ನು ನೋಡಿ ಆ ಮುದುಕನಿಂದ ಸುಮ್ಮನಿರಲಿಕ್ಕಾಗಲಿಲ್ಲ. ಕೂಡಲೆ ಆತನು ಎದ್ದು ನಿಂತು ನುಡಿದನೇನಂದರೆ—"ಸರಕಾರ! ತಮ್ಮ ಪುಣ್ಯವಿಶೇಷದಿಂದ ದಿಲ್ಲಿ-ಕುಂಜಪುರಗಳಲ್ಲಿ ಜಯವು ಸಿಕ್ಕಿರುತ್ತದೆ. ಇದು ಆನಂದದ ಸಂಗತಿಯೇ ಸರಿ. ಆದರೆ ಇನ್ನು ಮುಂದೆ ಮಾತ್ರ ತಾವು ದಿಲ್ಲಿಯನ್ನು ಬಿಟ್ಟು ದೂರ ಹೋಗಬಾರದು. ಆದ್ದರಿಂದ ಇಲ್ಲಿಂದ ಸಾರಂಗಪುರದ ಕಡೆಗೆ ಹೋಗದೆ ತಿರುಗಿ ದಿಲ್ಲಿಗೆ ಹೋಗುವದೇ ಹಿತಕರವಿರುತ್ತದೆ. ಯಾಕಂದರೆ ಶತ್ರುವು ಬಲಿಷ್ಠನಿದ್ದದರಿಂದ ನಮ್ಮ ಮುಲುಖುಗಳನ್ನು ನಾವು ಕಾಯ್ದುಕೊಂಡು ಅವನಕೂಡ ಹೋರಾಡಲಿಕ್ಕೆಬೇಕು. ಮೇಲಾಗಿ ದೂರದೂರ ಹೋಗುವದರಿಂದ ಸೈನ್ಯಕ್ಕೆ ಧಾನ್ಯಾದಿಗಳು ಒದಗದೆ ಅನೇಕ ಬಗೆಯಿಂದ ತೊಂದರೆಯಾಗಬಹುದು."

ಈಪ್ರಕಾರ ವೃದ್ಧ ಹೋಳಕರನು ಮಾತಾಡಿ ಭಾವೂಸಾಹೇಬನ ಉತ್ತರದ ಹಾದಿಯನ್ನು ನೋಡುತ್ತ ಕುಳಿತುಕೊಳ್ಳಲು, ಬಳವಂತರಾಯನು ಅಧಿಕಪ್ರಸಂಗ ಮಾಡಿ ಮುಂದುವರೆದು ಮಾತಾಡಲುಪಕ್ರಮಿಸಿದನು. ಆಗ ಆತನಿಗೆ ಸ್ವರ್ಗವು

ಘೋರೀ ಬೆರಳು ಉಳಿದಂತಾದ್ದರಿಂದ ಆವನ ಸೊಕ್ಕಿಗೆ ಎಣೆಯಿಲ್ಲದಾಗಿತ್ತು; ಅವನು ತನ್ನ ಮಾತನ್ನು ಭಾವೂಸಾಹೇಬನು ಕೇಳುವನೆಂಬ ಹೆಮ್ಮೆಯಿಂದ ಪ್ರಸಂಗ ವಿಶೇಷದಲ್ಲಿ ಉತ್ತರಪ್ರಾಂತದ ಸರದಾರರ ಅವಮಾನವನ್ನು ಮೇಲಿಂದಮೇಲೆ ಮಾಡುತ್ತಿದ್ದನು. ಆದರೂ ಅವರು ಅವನ ಮಾತನ್ನು ಹಚ್ಚಿಕೊಳ್ಳದೆ ಭಾವೂಸಾಹೇಬನ ಮೇಲೆ ದೃಷ್ಟಿಯನ್ನಿಟ್ಟು ದೊಡ್ಡ ಮನಸ್ಸಿನಿಂದ ನಡೆಯುತ್ತಿದ್ದರು. ಆದರೆ ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಖುದ್ದ ಭಾವೂಸಾಹೇಬನೇ ಸುರಜಮಲ್ಲ ಸರದಾರನ ಅಪಮಾನವನ್ನು ತುಂಬಿದ ಸಭೆಯಲ್ಲಿ ಮಾಡಿ, ಹಲವು ಪ್ರಸಂಗಗಳಲ್ಲಿ ಸಿಂಧೆ-ಹೋಳಕರರ ಆಲೋಚನೆಗಳನ್ನು ಕೇಳದ್ದರಿಂದ, ಈಗ ಉತ್ತರಸೀಮೆಯ ಸರದಾರರಲ್ಲಿ ಒಂದುಬಗೆಯ ಅಸಮಾಧಾನವು ನೆಲೆಗೊಂಡಂತಾಗಿತ್ತು; ಜನಕೋಜಿಸಿಂಧೆಯು ಮಾತ್ರ ತನ್ನ ಅಚಲವಾದ ಸ್ವಾಮಿನಿಷ್ಠೆಯನ್ನು ಆಮರಣ ಕಾಯ್ದುಕೊಂಡನು. ಅವನಂತೆ ಹೋಳಕರನ ಸ್ಥಿತಿಯು ಇಲ್ಲದ್ದರಿಂದ ಪ್ರಸಂಗಾವಧಾನವನ್ನರಿಯದ ಬಳವಂತರಾಯನು ಸೊಕ್ಕಿನಿಂದ ಅಂಧನಾಗಿ ಮಲ್ಹಾರರಾಯನನ್ನು ಹಾಸ್ಯಮಾಡುತ್ತ—"ಕಾಕಾಸಾಹೇಬ, ಪಠಾಣರ ಅಂಜಿಕೆಯು ನಿಮ್ಮ ಹೃತ್ಪಟಲದಲ್ಲಿ ಇನ್ನೂ ಸ್ಥಿರವಾಗಿ ನಿಂತಂತೆ ತೋರುತ್ತದಲ್ಲ! ಅವರ ಭಯದಿಂದ ನೀವು ಇಷ್ಟು ಯಾಕೆ ನಡುಗುತ್ತಿರುವಿರಿ? ನೀವು ಸುಮ್ಮನೆ ಅವರನ್ನು ಏರಿಸಿ ಕುಳ್ಳಿರಿಸಿರುತ್ತೀರಿ; ಅಬ್ದಾಲಿಯಲ್ಲಿ ಏನು ಪೌರುಷವಿರುತ್ತದೆ?! ನಾನು ಶ್ರೀಮಂತರಿಗೆ ವಿನಂತಿ ಮಾಡಿಕೊಂಡಂತೆ ನಮ್ಮ ಪ್ರತಿಯೊಂದು ಕೆಲಸಗಳು ಜಯಶೀಲವಾಗುತ್ತ ಬಂದಿರುತ್ತವೆ. ಆಗ್ರಾ-ಮಥುರಾ ದಿಲ್ಲಿ, ಕುಂಜಪುರ ಮೊದಲಾದವುಗಳನ್ನು ತಕ್ಕೊಳ್ಳುವಾಗ ಪಠಾಣರ ಬಗರನ್ನು ನಾವು ಕಂಡುಹಿಡಿದಿರುತ್ತೇವೆ ಈ ನಾಲ್ಕು ಊರಗಳಲ್ಲಿ ನಮ್ಮ ಸರಿಜೋಡಿನಿಂದ, ಯುದ್ಧ ಮಾಡಿದ ಪಠಾಣನು ಆದಾವನು? ಎಲ್ಲರೂ ರಣಹೇಡಿತನವನ್ನೇ ತೋರಿಸಿರುತ್ತಾರೆ. ಇಂಥ ಅಂಜುಬುರಕರಿಗಿಂತ ಅಂಜುಬುರಕರಾಗಿ ನೀವು ಶ್ರೀಮಂತರಿಗೆ ದಿಲ್ಲಿಗೆಹೋಗಿರೆಂದು ಹೇಳುವಿರಾ? ಶಾಬಾಸ್, ನಿಮ್ಮ ಬೆಳಕು ಇದೇಏನು?" ಎಂದು ಮನಸ್ಸಿಗೆ ಹತ್ತುವಂತೆ ಮಾತಾಡಿದನು.

ಬಳವಂತರಾಯನ ಈ ಮರ್ಮೋದ್ಘಾಟನದ ಮಾತುಗಳನ್ನು ಕೇಳಿ ಜಾತ್ಯಾ ನಿರ್ಭಿಡೆಯ ಸ್ವಭಾವದವನಾಗಿದ್ದ ಮಲ್ಹಾರರಾಯನ ಪಿತ್ಥವು ತಲೆಗೇರಿತು. ಈಗ ತಾನು ಎಲ್ಲಿರುವೆನೆಂಬ ದೇಹಭಾನವು ಸಹ ಅವನಿಗೆ ತಪ್ಪಿತು. ಅವನು ಆ ಸಂತಾಪದ ಭರದಲ್ಲಿ—"ನೀವು ಬ್ರಾಹ್ಮಣರು, ಬರಿಯಮಾತಿನ ಬಂಟರು; ಪ್ರತ್ಯಕ್ಷ ಪಂಚಾನನ ಗಂಟುಬಿದ್ದಾಗ ನಿಮ್ಮ ಈ ಬಣಡೌಲು ಹ್ಯಾಗಿರುತ್ತದೆಂಬದು ತಿಳಿಯುವದು.

ನೀವೇನು ಸ್ವರ್ಗದಿಂದ ಇಳಿದುಬಂದಿಲ್ಲ. ಅಬ್ದಾಲಿಯಿಂದ ನಿಮಗೆ ಚೆನ್ನಾಗಿ ಬಿಸಿ ಹತ್ತುವವರೆಗೆ ನಿಮ್ಮ ಆಬ್ಬರವು ಕುಗ್ಗಲಾರದು. ಉತ್ತರಕಡೆಯ ಸರದಾರರೆಂದರೆ ನಿಮಗೆ ನೊರಜಿನಂತೆ ತೋರುತ್ತಿರುವರು.! ಇರಲಿ" ಎಂದು ನುಡಿದು ತಟ್ಟನೆ ಸಭೆಯಿಂದೆದ್ದು ಹೊರಟುಹೋದನು. ಈ ಪ್ರಕಾರ ಬಳವಂತರಾಯನು ಉರಿಯುವದರಲ್ಲಿ ಹುಲ್ಲು ಹಾಕಿದಂತೆ ಮಾಡಿ ಅಂತಸ್ಕಲಹವನ್ನು ಹೆಚ್ಚಿಸಲಿಕ್ಕೆ ಕಾರಣನಾದನು. ಭಾವೂಸಾಹೇಬನು, ಆಪ್ತನೆಂದು ಬಳವಂತರಾಯನ ಮಾತುಗಳನ್ನು ಕೇಳುತ್ತ ನಡೆದದ್ದರಿಂದ ಹೀಗೆ ಅಸಮಾಧಾನಕಾರಕ ಪ್ರಸಂಗಗಳು ಮೇಲಿಂದ ಮೇಲೆ ಬರತೊಡಗಿದವು. ಸೂರಜಮಲ್ಲನು ಓಡಿಹೋದನು. ಹೋಳಕರನು ಸಂತಪ್ತನಾದನು. ಇವೆಲ್ಲ ಪ್ರಸಂಗಗಳನ್ನು ನೋಡಿ ಭಾವೂಸಾಹೇಬನ ತಲೆ ತಿರುಗಿತು. ಅವನು ಹೋಳಕರನಲ್ಲಿ ಫಿತೂರಿಯ ದೋಷಾರೋಪಣೆಯನ್ನು ಕಲ್ಪಿಸಿದನು. ಇದರಿಂದ ಉಭಯತರಲ್ಲಿ ಮನಸ್ತಾಪವು ಅಧಿಕವಾಗಿ ಬೆಳೆದು ಮರಾಟರ ಸೈನ್ಯದಲ್ಲಿ ವಿಷವೃಕ್ಷವು ಅಂಕುರಿಸಿತು.

---

೧೦ನೆಯ ಪ್ರಕರಣ.

## ಸಂಗ್ರಾಮದ ಮಂಗಲಾಚರಣ.

ಈ ಮೇರೆಗೆ ಅಂಕುರಿಸಿದ ವಿಷವೃಕ್ಷವು ಭರದಿಂದ ಬೇರುಬಿಡುತ್ತ ನಡೆದಿರಲು, ಮುತ್ಸದ್ದಿಯೊಗಿದ್ದರೂ ಆತ್ಮ ಪೌರುಷದ ಹರಿಗೆ ಬಿದ್ದ ಭಾವೂಸಾಹೇಬನು ಹಟದಿಂದ ಸಾರಂಗಪುರದ ಕಡೆಗೆ ತೆರಳಿದನು. ಈ ಸುದ್ದಿಯು ಗುಪ್ತಚಾರರ ಮುಖಾಂತರವಾಗಿ ಅಬ್ದಾಲಿಗೆ ಗೊತ್ತಾಯಿತು. ಪರಾಜಯವೆಂಬ ಮಹಾದುಃಖದಿಂದ ಬಳಲುತ್ತಿದ್ದ ಆ ಪಠಾಣನಿಗೆ ಭಾವೂಸಾಹೇಬನು ಉತ್ತರದಿಕ್ಕನ್ನು ಹಿಡಿದದ್ದೊಂದು ತಮಗೆ ಅನುಕೂಲವೆಂದು ತೋರಿತು. ಅವನು ತನ್ನ ಸೈನ್ಯದಲ್ಲಿಯ ಅನುಭವಿಕರಾದ ಮುತ್ಸದ್ದಿಗಳೊಡನೆ ಆಲೋಚಿಸಿ ಮುಂದೆ ಏನುಮಾಡಬೇಕೆಂಬದನ್ನು ನಿಶ್ಚಯಿಸಿದನು. ಕೂಡಲೆ ಆತನು ಎಲ್ಲ ದಂಡನ್ನೂ ತಕ್ಕೊಂಡು 'ಬಾಗಪತ' ಎಂಬ ಗ್ರಾಮದ ಬಳಿಗೆ ಬಂದನು. ಅಲ್ಲಿ ಯಮುನಾನದಿಯ ಪಾತ್ರೆಯು ಬಹಳ ಅಗಲವಾಗಿದ್ದು ನೀರೂ ಬಹು ನಿಧಾನವಾಗಿ ಹರಿಯುತ್ತಿತ್ತು. ಆಗ ಆತನು ನದಿಯಲ್ಲಿ ಎಷ್ಟು ಆಳು ನೀರು ಇರುವದೆಂಬದನ್ನು ನೋಡಿದನು. ಮರಾಟರನ್ನು

ಚಿನ್ನಟ್ಟೆಯೇ ತೀರುವೆನೆಂಬ ಅಬ್ದಾಲಿಯ ಸಂಕಲ್ಪವನ್ನು ಸಿದ್ಧಿಗೆ ಮುಟ್ಟಿಸುವದ ಕ್ಕಾಗಿಯೋ ಎಂಬಂತೆ ನದಿಯಲ್ಲಿ ಒಂದೇಆಳುಪ್ರಮಾಣ ನೀರು ಇತ್ತು; ಪಠಾ ಣನು ಹಿಗ್ಗಿದನು. ಆತನು ಆಕಾಶದ ಕಡೆಗೆ ನೋಡುತ್ತ ಪರಮೇಶ್ವರನನ್ನು ಕೊಂಡಾಡಿದನು. ಬಳಿಕ ಆತನು ಒಂದು ಬೆಳ್ಳಿಯ ತಗಡನ್ನು ತಕ್ಕೊಂಡು ಅದ ರಲ್ಲಿ ಒಂದು ಚೌರಸಾಕೃತಿಯನ್ನು ಕೊರೆದು ಕುರಾಣದೊಳಗಿನ ಕೆಲವು ವಾಕ್ಯಗ ಳನ್ನು ಬರೆದನು. ಆ ಮೇಲೆ ಆತನು ಆ ತಗಡನ್ನು ನದಿಯಲ್ಲಿ ಚಲ್ಲಿಕೊಟ್ಟು, ತನ್ನ ಸೇನಾಪತಿಯನ್ನು ಕುರಿತು—"ಇಪ್ಪತ್ತುನಾಲ್ಕು ತಾಸುಗಳಲ್ಲಿ ನಮ್ಮ ಎಲ್ಲ ದಂಡೂ ನದಿಯನ್ನು ದಾಟಲಿಕ್ಕೆಬೇಕು. ನದಿಯ ಪಾತ್ರಯಲ್ಲಿ ಆನೆಗಳನ್ನು ನಿಲ್ಲಿಸಿ ತೋಫು ಮೊದಲಾದವುಗಳನ್ನು ದಾಟಿಸಬೇಕು" ಎಂದು ಅಪ್ಪಣೆಮಾಡಿ ತನ್ನ ಕುದುರೆಯನ್ನು ಹೊಳೆಯಲ್ಲಿ ನೂಕಿದನು. ಆತನ ಕುದುರೆಯು ಹಾಹಾ ಅನ್ನುವಷ್ಟರಲ್ಲಿ ಆಚೆ ಯ ದಂಡೆಯನ್ನು ಮುಟ್ಟಿತು.

ಒಡೆಯನ ಈ ಬಗೆಯ ಸಾಹಸವನ್ನು ಕಂಡು ಪಠಾಣಸೈನಿಕರಲ್ಲಿ ಆವೇಶವು ಹೆಚ್ಚಿತು. ಅವರು ಸೇನಾಪತಿಯ ಅಪ್ಪಣೆಯನ್ನು ಹೊಂದಿ ನದಿಯಲ್ಲಿ ಧುಮು ಕಿದರು. ಆ ಪ್ರಚಂಡ ಸೈನ್ಯದ ತುಳಿತದಿಂದ ಆ ಮಹಾನದಿಯೂ ರಾಡಿಯಾಯಿತು. ಕೆಲಕೆಲವು ಕಡೆಗಳಲ್ಲಿ ನೀರು ಬಹಳ ಆಳವಾಗಿ ಇದ್ದದರಿಂದ ನೀರಿನ ಸೆಳವಿಗೆ ಸಿಕ್ಕ ಸಾವಿರಾರು ಜನ ಸೈನಿಕರು ತೇಲಿಹೋದರು. ಆದರೂ ಆ ಸೈನಿಕರು ಧೈರ್ಯ ಗುಂದದೆ ನದಿಯನ್ನು ದಾಟಿ ಪಾರಾದರು. ತೋಫು ಮೊದಲಾದ ಭಾರವಾದ ಸಾಮಾನುಗಳನ್ನು ಮುಂದೆ ಮೂರುದಿನಗಳವರೆಗೆ ದಾಟಿಸಿದರು.

ಈ ಪ್ರಕಾರ ಅಬ್ದಾಲಿಯ ಸಮಸ್ತ ಸೈನಿಕರು ಯಮುನೆಯನ್ನು ದಾಟಿ ಬಾಗ ಪತದ ಬಳಿಯಲ್ಲಿ ತಳವೂರಿದರು. ಬಾಗಪತವು ಮರಾಟರ ವಶದಲ್ಲಿದ್ದು ಅಲ್ಲಿ ಅವರ ಕೆಲವು ಸೈನ್ಯವಿತ್ತು. ಅವರು ಪಠಾಣರ ಗರ್ಜನೆಯನ್ನು ಕೇಳಿ ಬಾಗಪತ ವನ್ನು ಬಿಟ್ಟುಕೊಟ್ಟು ಪಲಾಯನವನ್ನು ಹೇಳಿಸಿದರು. ಬಳಿಕ ಅಬ್ದಾಲಿಯು ತನ್ನ ಸೈನ್ಯದ ಗಣತಿಯನ್ನು ಮಾಡಿದನು. ಖುದ್ದ ಅಬ್ದಾಲಿಯ ದಂಡಿನಲ್ಲಿ ೨೪ಸಾ ಸಾವಿರ ಸ್ವಾರರೂ, ೨೦ ಸಾವಿರ ಕಾಲಾಳುಗಳೂ, ಎರಡುಸಾವಿರ ಒಂಟೆಗಳೂ' ಎರಡುನೂರು ತೋಫುಗಳೂ ಇದ್ದವು. ಮತ್ತು ಸುಜಾವುದ್ದೌಲನ ದಂಡಿನಲ್ಲಿ ೩೦ಸಾವಿರ ಕಾಲಾಳುಗಳೂ, ಕೆಲವು ತೋಫುಗಳೂ ಇದ್ದವು. ಇದಲ್ಲದೆ ನಜೀ ಬಖಾನ, ದಾವುದಖಾನ ಮೊದಲಾದ ಸರದಾರರ ದಂಡುಗಳಲ್ಲಿಒಟ್ಟುಗೂಡಿ ೩೦ಸಾ ವಿರ ಕಾಲಾಳುಗಳಿದ್ದರು. ಹೀಗೆ ಒಟ್ಟಿಗೆ ಒಂದು 'ಲ'ಕಾರಕ್ಕೆ ಮೀರಿದ ಅಬ್ದಾ ಲಿಯ ಸೈನ್ಯವು ಅಸಂಖ್ಯವಾದ ಬಾಜಾರಬುನುಗಿನಿಂದೊಡಗೂಡಿ ಮರಾಟರಮೇಲೆ

ಬೀಳುವದಕ್ಕಾಗಿ ಹೊರಟಿತು. ಆ ಮಹಾಸೇನೆಯ ತುಳಿತದಿಂದ ಭೂಮಿಯು ಪುಡಿವಡೆದು ಕೆಂದೂಳಿಯಿಂದ ನಭೋಮಂಡಲವು ಮುಚ್ಚಲ್ಪಟ್ಟಿತು.

ಹೀಗೆ ಅಬ್ದಾಲಿಯ ದಂಡಯಾತ್ರೆಯು ನಡೆದಿರಲು, ಅತ್ತ ಭಾವೂಸಾಹೇಬನು ಜಯಭೇರಿಯನ್ನು ಹೊಡಿಸುತ್ತ ಕುಂಜಪುರದಿಂದ ಕೆಲವು ದಾರಿಯನ್ನು ಕ್ರಮಿಸಿ ಸಾರಂಗಪುರವನ್ನು ಸ್ವಾಧೀನಮಾಡಿಕೊಳ್ಳುವ ಹಂಚಿಕೆಯನ್ನು ಹಾಕುತ್ತಿದ್ದನು. ಅಷ್ಟರಲ್ಲಿ ಆಕಾಶದಲ್ಲಿ ಕೆಂದೂಳವು ಏಳುತ್ತಿರಲು, ಓಡಿ ಓಡಿ ಕುದುರೆಗಳು ತೇಕುತ್ತಿರಲು, ಹೌಹಾರಿದ ಸೈನಿಕರು ಅವನ ಬಳಿಗೆ ಬಂದರು. ಅವರನ್ನು ನೋಡಿ ಭಾವೂಸಾಹೇಬನು ವಿಸ್ಮಯಗೊಳ್ಳುತ್ತಿರಲು, ಆವರು ಇತ್ಥಂಭೂತಸಂಗತಿಯನ್ನು ನಿವೇದಿಸಿದರು. ಆಗ ಆ ವೃತ್ತಾಂತಶ್ರವಣದಿಂದ ಆ ಕಡುಗಲಿಯ ಬಾಹುಗಳು ಸ್ಫುರಣಗೊಂಡವು. ಕಣ್ಣುಗಳು ಕೆಂಪಡರಿದವು. ಮೈಯು ನಡುಗತೊಡಗಿತು. ಆ ಕೂಡಲೆ ಆತನು ದಕ್ಷಿಣಕ್ಕೆ ತಿರುಗಿ ಪಾನಿಪತವನ್ನು ಮುತ್ತಿ ಅದನ್ನು ಕೈವಶ ಮಾಡಿಕೊಂಡನು.

ಇಲ್ಲಿಯವರೆಗೆ ಭಾವೂಸಾಹೇಬನಿಂದ ಹಲವು ತಪ್ಪುಗಳಾಗಿದ್ದವು. ಆ ತಪ್ಪುಗಳು ಆವನಿಗೆ ತಿಳಿದಿದ್ದಿಲ್ಲವೆಂತಲ್ಲ. ಆದರೂ ಆತನಲ್ಲಿ ಸ್ವಾಭಿಮಾನವು ಅತಿರೇಕವಾದ್ದರಿಂದ ಅವನು ಅವನ್ನು ತನ್ನ ಪೌರುಷದ ಲಕ್ಷಣಗಳೆಂದು ಭಾವಿಸಿದ್ದನು. ಅವನ ಈ ತಪ್ಪುಗಳಿಂದ ಪಠಾಣರಿಗೆ ಹೆಚ್ಚು ಅನುಕೂಲಪ್ರಸಂಗಗಳು ಒದಗಿದವು. ತಾನು ದಿಲ್ಲಿಯನ್ನು ಬಿಟ್ಟು ಬಂದದ್ದು ಬಹಳ ದಡ್ಡತನವಾಯಿತೆಂದು ಈಗ ಭಾವೂಸಾಹೇಬನಿಗೆ ಗೊತ್ತಾಯಿತು. ಅಬ್ದಾಲಿಯಿಂದ ನದಿಯನ್ನು ದಾಟುವದಾಗಲಿಕ್ಕಿಲ್ಲೆಂಬ ತನ್ನ ತರ್ಕವು ಸುಳ್ಳಾದ್ದರಿಂದ ಆವನು ಪಶ್ಚಾತ್ತಾಪಪಟ್ಟನು. ಆದರೂ ಅವನ ಧೈರ್ಯವು ಮೇರುವಿಗೆ ಸರಿಯಾಗಿ ಇದ್ದದರಿಂದ ಈ ಕಾಲಕ್ಕೆ ಅವನು ಧೈರ್ಯಗುಂದದೆ ತನ್ನ ಸೈನಿಕರನ್ನು ಹುರಿದುಂಬಿಸಿದನು. ಶತ್ರುವು ತೀರ ಸಮೀಪಕ್ಕೆ ಬಂದದರಿಂದ ಅವನು ಬಗೆಬಗೆಯಿಂದ ಮಾರ್ಗಕ್ರಮಿಸಿ ಮೇಲೆ ಹೇಳಿದಂತೆ ಪಾನಿಪತವನ್ನು ಹಿಡಕೊಂಡನು.

ಪಾನಿಪತವು ದೊರೆತದ್ದರಿಂದ ಭಾವೂಸಾಹೇಬನ ಸೈನ್ಯಸಂರಕ್ಷಣಕ್ಕೆ ಬಹಳ ಅನುಕೂಲವಾಯಿತೆಂದು ಹೇಳಬಹುದು. ಈ ಪಟ್ಟಣವು ಒಂದು ವಿಶಾಲವಾದ ಬೈಲುಪ್ರದೇಶದಲ್ಲಿ ಕಟ್ಟಲ್ಪಟ್ಟಿರುವದು. ಇಲ್ಲಿ ಒಂದು ಮಣ್ಣಿನ ಕೋಟೆಯಿದ್ದು ಒಂದು ಒಂದೂವರೆ ಲಕ್ಷ ಜನರಿಗೆ ಬಹುಕಾಲ ಸಾಲುವಷ್ಟು ನೀರಿನಸಂಚಯವುಳ್ಳ ಒಂದು ದೊಡ್ಡ ಕೆರೆಯೂ ಇರುವದು. ಈ ಶಹರವನ್ನು ಪೃಥ್ವೀರಾಜನು ಕಟ್ಟಿಸಿರುವನು. ಇದರ ಬಳಿಯಲ್ಲಿ ಇಂದಿನವರೆಗೆ ಹಲವು ಸಂಗ್ರಾಮಗಳಾ

ಗಿರುವವು. ಇಡಿ ಭರತಖಂಡದಲ್ಲಿ ಕಿಂಬಹುನಾ ಭೂಮಂಡಲದಲ್ಲಿ ಇದರಂಥ ಕಾಳಗದ ಕಣವು ದೊರೆಯುವದು ಅಪರೂಪ. ಈ ವಿಶಾಲವಾದ ಪ್ರದೇಶದಲ್ಲಿ ತಗ್ಗುದಿನ್ನೆಗಳು ಒಂದಾದರೂ ಇರುವದಿಲ್ಲ. ನೆಲವು ಕೇವಲ ಸಮಪಾತಳಿಯು ದಾಗಿರುವದು. ಇಂಥ ಪ್ರಶಸ್ತವಾದ ಈ ಬೈಲಲ್ಲಿಯೇ ಹಿಂದಕ್ಕೆ ಕೌರವ-ಪಾಂಡವರಿಗೆ ಘನಘೋರಸಂಗ್ರಾಮವಾಯಿತು. ರಜಪೂತರಿಗೂ, ಘೋರಿಮಹಮ್ಮದನಿಗೂ ಸಂಗ್ರಾಮವಾಯಿತು. ಇರಲಿ; ಇಂಥ ಪುರಾತನವಾದ ಸ್ಥಳದಲ್ಲಿ ಭಾವೂಸಾಹೇಬನ ಛಾವಣಿಯು ತಳವೂರಿತು. ದಂಡಿನ ಸುತ್ತುವರೆದು ದೊಡ್ಡ ದೊಡ್ಡ ಕಂದಕಗಳನ್ನು ಆತನು ಅಗಿಸಿ, ಸೈನ್ಯವು ಸುರಕ್ಷಿತವಾಗಿರುವಂತೆ ಏರ್ಪಡಿಸಲ್ಪಟ್ಟಿತು. ಬಳಿಕ ಆತನು ವ್ಯೂಹರಚನೆಯನ್ನು ಬಹು ಯುಕ್ತಿಯಿಂದ ಮಾಡಿ ಶತ್ರುವಿನ ಸುಳಿವನ್ನು ಗೊತ್ತುಹಚ್ಚುವದಕ್ಕಾಗಿ ಖುದ್ದ ಪೇಶವೆಯ ಮತ್ತು ಸಿಂಧೆ ಸರದಾರನ ಕೆಲವು ಜನ ಸ್ವಾರರನ್ನು ಕಳಿಸಿಕೊಟ್ಟನು.

ಮಧ್ಯಾಹ್ನ ಸಮಯವು. ರಣಗುಟ್ಟುವ ಬಿಸಿಲು ಸುರಿಯುತ್ತಲಿದೆ; ಹಕ್ಕಿಪಕ್ಷಿಗಳು ಬಿಸಿಲತಾಪಕ್ಕೆ ಬೇಸತ್ತು ನೆಳಲನ್ನು ಆಶ್ರಯಿಸುತ್ತಲಿವೆ; ಇಂಥ ಸಮಯದಲ್ಲಿ ಭಾವೂಸಾಹೇಬನಿಂದ ಕಳುಹಲ್ಪಟ್ಟ ಸ್ವಾರರು ವೃಕ್ಷಗಳ ಕೆಳಗೆ ವಿಶ್ರಾಂತಿಯನ್ನು ಹೊಂದುತ್ತಿದ್ದರು. ಅವರ ಕುದುರೆಗಳು ಖುರಗುಟ್ಟುತ್ತ ಬಳಿಯಲ್ಲಿರುವ ಅಡವಿಯಲ್ಲಿ ಮೇಯುತ್ತಿದ್ದವು; ಅಷ್ಟರಲ್ಲಿ ಬಹುದೂರ ಆಕಾಶದಲ್ಲಿ ಕೆಂದೂಳವು ಕಾಣತೊಡಗಿತು. ಆಗ ಒಬ್ಬ ದೂತನುವೃಕ್ಷವನ್ನೇರಿ—“ಪಠಾಣರು ಸುಮಾರು ಎರಡು ಮೈಲುಗಳ ಅಂತರದಲ್ಲಿ ಬರುತ್ತಿರುವರೆ”ಂದು ಕೂಗಿದನು. ಅದನ್ನು ಕೇಳಿ ಆ ಸ್ವಾರರ ಹಲ್ಲಣವು ಹಾರಿತು. ಅವರಲ್ಲಿ ಪೇಶವೆಯ ಸ್ವಾರರಿಗೆ ಪಠಾಣರ ದೌಡಿನ ಅನುಭವವಿಲ್ಲದ್ದರಿಂದ ಅವರು ನಿಶ್ಚಿಂತೆಯಿಂದ ಮಲಗಿಕೊಂಡಿದ್ದರು. ಅವರು ಈ ಭಯಂಕರವಾದ ಸುದ್ದಿಯನ್ನು ಕೇಳಿ, ಒತ್ತರದಿಂದ ತಮ್ಮ ಕುದುರೆಗಳ ಬಳಿಗೆ ಓಡಿಹೋದರು. ಸಿಂಧ್ಯನ ಸ್ವಾರರು ಪಠಾಣರ ಹಿಡತವನ್ನು ಬಲ್ಲವರಾದ್ದರಿಂದ ಅವರು ಮೈಮರೆತಿದ್ದಿಲ್ಲ; ಆದ್ದರಿಂದ ಅವರು ಅಲ್ಪಾವಕಾಶದಲ್ಲಿ ಅಶ್ವಾರೂಢರಾಗಿ ಅಲ್ಲಿಂದ ಕಾಲ್ತೆಗೆದರು. ಇನ್ನು ಪೇಶವೆಸ್ವಾರರು ಕುದುರೆಗಳನ್ನು ಹತ್ತುತಕ್ಕವರು; ಅಷ್ಟರಲ್ಲಿ ಪಠಾಣರು ಅವರನ್ನು ಮುತ್ತಿದರು. ಬಳಿಕ ಕೇಳುವದೇನು? ಹಸಿದ ತೋಳವು ಕುರಿಯ ಹಿಂಡನ್ನು ಹೊಕ್ಕಂತಾಯಿತು. ಪರಸ್ಪರರ ಕೃತ್ಯಗಳಿಂದ ಪರಸ್ಪರರಲ್ಲಿ ದುಸ್ಸಹದಾದ ದ್ವೇಷಾನಲವು ತುಂಬಿಕೊಂಡಿತ್ತು; ಆದ್ದರಿಂದ ಪಠಾಣರು ದಯಾ-ದಾಕ್ಷಿಣ್ಯಗಳನ್ನು ತೊರೆದು, ರೊಚ್ಚಿನಿಂದ ಮರಾಟರನ್ನು ಬೆನ್ನಟ್ಟಿ ಕೈಗೆ ಸಿಕ್ಕವರನ್ನು ತುಂಡರಿಸಿ ಚಲ್ಲಿದರು. ಒಂದು ಅರಕ್ಷಣದಲ್ಲಿ ಮರಾ

ಟರ ಸಾವಿರಾರು ದಿಂಡಗಳು ಮುಂಡದಿಂದ ಬೇರೆಯಾದವು; ಪಠಾಣರ ಖಡ್ಗಗಳು ಮರಾಟರ ರಕ್ತವನ್ನು ಹೀರಲು ಹಾತೊರೆದವು; ಅವರು ಆ ಆವೇಶದಲ್ಲಿ ಮರಾಟರನ್ನು ಅವರ ಛಾವಣಿಯವರೆಗೆ ಬೆನ್ನಟ್ಟಿದರು.

ಅದೇ ಕಾಲದಲ್ಲಿ ಭಾವೂಸಾಹೇಬನಿಗೂ ಅಬ್ದಾಲಿಗೂ ಪ್ರತ್ಯಕ್ಷ ಕಾಳಗವು ಪ್ರಾರಂಭಿಸಿದ್ದರೆ ಪರಿಣಾಮವು ಹ್ಯಾಗಾಗುತ್ತಿತ್ತೋ ತಿಳಿಯದು; ಆದರೆ ಪಠಾಣರು ಮರಾಟರ ವ್ಯೂಹರಚನೆಯನ್ನು ನೋಡಿ ಬೆದರಿ ಅಲ್ಲಿಂದ ಹಿಂದಿರುಗಿದರು. ಅಬ್ದಾಲಿಯು ಆ ಪ್ರಚಂಡ ಸೈನ್ಯವನ್ನು ಬೆನ್ನಟ್ಟಲಿಕ್ಕೆ ಭಾವೂಸಾಹೇಬನಿಗೂ ಧೈರ್ಯವಾಗಲಿಲ್ಲ. ಆಗ ಅಬ್ದಾಲಿಯು ಯುಕ್ತಿಯಿಂದ ಜಾರಿಕೊಂಡು, ಮರಾಟರ ಛಾವಣಿಯಿಂದ ಎರಡು ಮೈಲು ದೂರ ಹೋಗಿ, ಅಲ್ಲಿ ತನ್ನ ತಳವನ್ನು ಊರಿದನು. ಮತ್ತು ಕೂರ್ಮವು ತನ್ನ ಅವಯವಗಳನ್ನು ಹೊಟ್ಟೆಯೊಳಗೆ ತಕ್ಕೊಳ್ಳುವಂತೆ, ತನ್ನ ಸೈನ್ಯವನ್ನೆಲ್ಲ ವ್ಯವಸ್ಥೆಯಿಂದ ತನ್ನ ಅಳವಿನಲ್ಲಿ ತಂದುಕೊಂಡು, ಸುತ್ತಲೂ ಕಂದಕವನ್ನು ಅಗಿಸಿದನು. ದೊಡ್ಡ ದೊಡ್ಡ ವೃಕ್ಷಗಳನ್ನು ಕಡಿಸಿ ತಂದು, ತನ್ನ ಛಾವಣಿಯ ಸುತ್ತಲೂ ಒಟ್ಟಿಸಿದನು. ಬಳಿಕ ಆತನು ಛಾವಣಿಯ ನಾಲ್ಕು ಮೂಲೆಗಳಲ್ಲಿ ದೊಡ್ಡ ದೊಡ್ಡ ಮಣ್ಣಿನ ದಿನ್ನೆಗಳನ್ನೇರಿಸಿ, ಅವುಗಳ ಮೇಲೆ ತೋಫುಗಳನ್ನಿಟ್ಟನು.

ಈ ಮೇರೆಗೆ ಪಾಣಿಪತ್ತದ ರಣಭೂಮಿಯಲ್ಲಿ ಮರಾಟರ ಹಾಗು ಪಠಾಣರ ತುಳಿದಾಟಕ್ಕೆ ಪ್ರಾರಂಭವಾಯಿತು. ಅಬ್ದಾಲಿಯಿಂದ ಉತ್ತರಭಾಗಕ್ಕೆ ಮರಾಟರ ಛಾವಣಿಯು ಇದ್ದುದರಿಂದ, ದಕ್ಷಿಣದಿಂದ ಆಹಾರಸಾಮುಗ್ರಿಯು ಮರಾಟರಿಗೆ ಮುಟ್ಟುವದು ಅಸಾಧ್ಯವಾಯಿತು. ಆದರೂ ಖಂಬೀರರಾದ ಮರಾಟರು ಉತ್ತರದ ಕಡೆಯ ಜನರ ಸಹಾಯದಿಂದ ಪಠಾಣರ ದವಡೆಯಲ್ಲಿ ಸಿಕ್ಕ ಆಹಾರಸಾಮಗ್ರಿಗಳನ್ನಾದರೂ ಬಿಡಿಸಿಕೊಂಡು ಹೋಗುತ್ತಿದ್ದರು. ಭಾವೂಸಾಹೇಬನ ಮುಂಜಾಗ್ರತೆಯಿಂದ ಮರಾಟರಲ್ಲಿ ಆಹಾರಸಾಮುಗ್ರಿಯಾದರೂ ತಕ್ಕನುಟ್ಟಾಗಿತ್ತು. ಅವರು ಅಬ್ದಾಲಿಯನ್ನು ಲೆಕ್ಕಿಸದೆ, ಒಳ್ಳೇ ಒಗರಿನಿಂದ ತಮ್ಮ ಛಾವಣಿಯಲ್ಲಿ ನಿಂತುಕೊಂಡು, ಪಠಾಣರ ಮೇಲೆ ಬೀಳುವ ಸಮಯವನ್ನು ನಿರೀಕ್ಷಿಸುತ್ತಿದ್ದರು. ಆ ಕಾಲದಲ್ಲಿ ಮರಾಟರ ಧೈರ್ಯವು ಎಷ್ಟಿತ್ತೆಂಬದು ಭಾವೂಸಾಹೇಬನ ದಂಡಿನಲ್ಲಿದ್ದ 'ಕೃಷ್ಣ ಜೋಶಿ ಸಂಗಮೇಶ್ವರಕರ' ಎಂಬವರು ಬರೆದ ಪತ್ರದಿಂದ ಸಹಜವಾಗಿ ತಿಳಿಯುವಂತಿದೆ. ಆ ಪತ್ರವು ಐತಿಹಾಸಿಕ ದೃಷ್ಟಿಯಿಂದ ಬಹಳ ಮಹತ್ವದ್ದಾಗಿರುವದರಿಂದ ಅದರ ಭಾಷಾಂತರವನ್ನು ಇಲ್ಲಿ ಉಲ್ಲೇಖಿಸುವೆವು.

“ಚಿರಂಜೀವ ರಾಜಶ್ರೀ ದಿವಾಕರ ಜೋಸಿ ಇವರಿಗೆ—

ಪ್ರತಿ ಕೃಷ್ಣಜೋಸಿಯು ಆಶೀರ್ವಾದ ತರುವಾಯು, ಆಶ್ವೀನ ಬ॥ ೧೩ ಬುಧ ವಾರದವರೆಗೆ ಫಣಿಪಥ (ಪಾನಿಪತ) ಮುಕ್ಕಾಮಿನಲ್ಲಿ ಕ್ಷೇಮ. ವಿಶೇಷಸಂಗತಿ ಯೇನಂದರೆ--ಶ್ರೀಮಂತ ಭಾವೂಸಾಹೇಬರು ಮಹಾಅಷ್ಟಮಿಯ ದಿವಸ ಸಮಖಾನ ಮತ್ತು ಕುತುಬಶಹಾ ಇವರಿಬ್ಬರನ್ನು ಕೊಲ್ಲಿಸಿ, ಅವರ ಹತ್ತುಸಾವಿರ ಸೈನ್ಯ ವನ್ನೂ ಕುಂಜಪುರವನ್ನೂ ಸುಲಿದರು. ಕೋಟೆಯನ್ನು ಧ್ವಂಸಮಾಡಿದರು. ಶ್ರೀಮಂತರಿಗೆ ಭೂಗತವಾದ ಏಳುಲಕ್ಷ ರೂಪಾಯಿಗಳು ದೊರೆತವು. ಇಲ್ಲಿಂದ ಪ್ರಯಾಣಬೆಳೆಸಿ ಕುರುಕ್ಷೇತ್ರದ ಕಡೆಗೆ ಸಾಗಿದ್ದೆವು; ಆದರೆ ಇಷ್ಟರಲ್ಲಿ ಅಬ್ದಾಲಿಯು ಬಾಗಪತದ ಬಳಿಯಲ್ಲಿ ಯಮುನೆಯನ್ನು ದಾಟಿ ಸೋನಪಥಕ್ಕೆ ಬಂದನು. ಈ ಸುದ್ದಿಯು ಶ್ರೀಮಂತರಿಗೆ ತಿಳಿದಕೂಡಲೆ, ಅಲ್ಲಿಂದ ತಿರುಗಿ ಪಠಾಣರಿಗೆ ಸಮ್ಮುಖವಾಗಿ ಹೊರಟು, ವಸತಿಯ ಮೇಲೆ ವಸತಿಯನ್ನು ಮಾಡುತ್ತ ಫಣಿಪಥಕ್ಕೆ ಬಂದಿರುತ್ತೇವೆ. ಪಠಾಣರು ಇಲ್ಲಿಂದ ಎರಡು ಮೈಲುಗಳ ಅಂತರದಲ್ಲಿ ಬೀಡನ್ನು ಬಿಟ್ಟಿರುತ್ತಾರೆ. ಪ್ರತಿನಿತ್ಯ ಸ್ವಲ್ಪ ಸ್ವಲ್ಪ ಯುದ್ಧವು ನಡೆದಿರುತ್ತದೆ. ಶ್ರೀಮಂತರ ತೋಫಖಾನೆಗಳು ಎಲ್ಲೆಡೆಗಳಲ್ಲಿ ಪಸರಿಸಿರುತ್ತವೆ. ಪಠಾಣರಿಗೆ ಪೂರ್ಣ ಅಂಜಿಕೆಯುಂಟಾಗಿರುತ್ತದೆ. ಮುಂದಕ್ಕೆ ಬರಲು ಅವರಿಗೆ ಧೈರ್ಯವಾಗಲೊಲ್ಲದು; ನಮ್ಮ ಸೈನಿಕರು ಪಠಾಣರ ಛಾವಣಿಯ ವರೆಗೆ ಹೋಗಿ, ನಿತ್ಯ ನೂರಾರು ಜನ ಪಠಾಣರನ್ನು ಕೊಂದು, ಒಂಟೆಗಳನ್ನೂ, ಕುದುರೆಗಳನ್ನೂ ತರುತ್ತಾರೆ. ನಿನ್ನೆಯ ದಿವಸ ಕೆಲವು ಜನ ಪೆಂಡಾರಿಗಳು ಅಬ್ದಾಲಿಯ ಸೈನ್ಯದಿಂದ ಎರಡು ಆನೆಗಳನ್ನು ಕಸಕೊಂಡು ಬಂದಿರುವರು. ಪಠಾಣರ ದಂಡಿನಲ್ಲಿ ಆಹಾರಸಾಮಗ್ರಿಗಳ ಕೊರತೆಯಾಗಿದ್ದು, ಹಿಟ್ಟು “೩ ಕಡಲಿ “೪ ತುಪ್ಪ “॥ ಈ ಪ್ರಕಾರ ಪದಾರ್ಥಗಳು ಬಹಳ ತುಟ್ಟಿ ಮಾರಲ್ಪಡುತ್ತವೆ. ಆದರೆ ನಮ್ಮಲ್ಲಿ ಆಹಾರದ ಪೂರೈಕೆಯು ಬಹಳವಿದ್ದು, ಗೋದಿ “।೬ ಕಡಲಿ“ ।೨ ತುಪ್ಪ “೨॥ ಈ ಪ್ರಕಾರ ಪದಾರ್ಥಗಳು ಬಹಳ ಅಗ್ಗವಾಗಿ ದೊರೆಯುತ್ತವೆ. ಇನ್ನು ಮೂರು ನಾಲ್ಕು ದಿವಸಗಳಲ್ಲಿ ಯವನರು ನಮ್ಮ ಮೇಲೆ ಏರಿಬರಬಹುದು; ಬಂದರೆ ನಮ್ಮ ತೋಫುಗಳ ಹೊಡತಕ್ಕೆ ಹುರಿದು ಹೋಗುವರು; ಒಂದುವೇಳೆ ಅವರು ನಮ್ಮ ಮೇಲೆ ಏರಿಬರದಿದ್ದರೆ ನಮ್ಮ ಜನರೇ ಅವರನ್ನು ಮುತ್ತುವರು. ನಮ್ಮ ಸೈನ್ಯದಲ್ಲಿ ಶುಭಚಿಹ್ನಗಳಾಗುತ್ತವೆ. ಶ್ರೀಮಂತರಿಗಾದರೂ ಉತ್ತಮ ಸ್ವಪ್ನಗಳು ಬೀಳುತ್ತವೆ. ಸೈನ್ಯದಲ್ಲಿ ಉಲ್ಲಾಸವಿರುತ್ತದೆ. ಅಬ್ದಾಲಿಯು ಶಹಾನಶಹಾನೆಂದು ಹೊಗಳಿಸಿಕೊಳ್ಳುತ್ತಾನೆ. ಮತ್ತು ಅನೇಕ ಯುದ್ಧಗಳನ್ನು ಮಾಡಿರುತ್ತಾನೆ. ಆದರೂ ಇಲ್ಲಿಗೆ ಬಂದು ಎಂಟು

ದಿನಗಳಾದರೂ 'ಅವನಿಂದ ನಮ್ಮ ಮೇಲೆ ಬೀಳುವ ಧೈರ್ಯವಾಗಲೊಲ್ಲದು ಆದ್ದರಿಂದ ಮರಾಟರ ಅಬ್ಬರವನ್ನು ನೋಡಿ ಅಬ್ದಾಲಿಯು ಅಂಜಿರಬಹುದೆಂದು ಅನುಮಾನವಾಗುತ್ತದೆ. ಸ್ವದೇಶಕ್ಕೆ ಹೋಗಲಿಕ್ಕೂ ಆತನಿಗೆ ಮಾರ್ಗವಿಲ್ಲದಾಗಿದೆ. ಕೆಲವು ದಿನಗಳವರೆಗೆ ಸುಮ್ಮನೆ ಇರಬೇಕೆಂದರೆ ತಿನ್ನಲಿಕ್ಕೆ ಅಶನಾಭಾವವಿದೆ. ಹೀಗಾಗಿ ಅಬ್ದಾಲಿಯು ಬಹಳ ತೊಂದರೆಯಲ್ಲಿ ಬಿದ್ದಿರುವನು. ಮುಂದೆ ವರ್ತಿಸಿದಂತೆ ಸಂಗತಿಗಳನ್ನು ತಿಳಿಸುತ್ತ ಹೋಗುತ್ತೇನೆ. ಇತಿ ಆಶೀರ್ವಾದಃ

ಈ ಮೇಲಿನ ಪತ್ರವನ್ನು ಓದಿ ವಾಚಕರಲ್ಲಿ "ಹಾಗಾದರೆ ಮರಾಟರು ಅಬ್ದಾಲಿಯ ಮೇಲೆ ಯಾಕೆ ಸಾಗಿಹೋಗಲಿಲ್ಲ?" ಎಂಬ ಶಂಕೆಯು ಉತ್ಪನ್ನವಾಗಬಹುದು. ಆದರೆ 'ತಾನೊಂದು ಬಗೆದರೆ ದೈವವೊಂದು ಮಾಡಿತೆ'ಂಬಂತೆ ಆ ಕಾಲದಲ್ಲಿ ಭಾವೂಸಾಹೇಬನ ಸ್ಥಿತಿಯಾಯಿತು. ಆತನು ಪಠಾಣರನ್ನು ಅಶನವರ್ಜ್ಯ ಮಾಡಿ ಹಣ್ಣಿಗೆ ತರಬೇಕೆಂದು ಯುದ್ಧದ ಉಸಾಬರಿಯನ್ನು ಬಿಟ್ಟುಬಿಟ್ಟನು. ಯಮುನೆಯನ್ನು ದಾಟಿ ಅನ್ನಸಾಮಗ್ರಿಗಳನ್ನು ತರುವದು ಅಬ್ದಾಲಿಯಿಂದ ಆಗಲಿಕ್ಕಿಲ್ಲವೆಂದೂ, ಆತನು ಸ್ವಲ್ಪ ದಿವಸಗಳಲ್ಲಿ ಹಣ್ಣಿಗೆ ಬರುವನೆಂದೂ ಭಾವೂಸಾಹೇಬನು ತಿಳಿದಿದ್ದನು. ಆದರೆ ದೈವಾನುಕೂಲವು ಅಬ್ದಾಲಿಗೇ ಇತ್ತೆಂದು ಅನ್ನಬೇಕಾಗುತ್ತದೆ. ಯಾಕಂದರೆ ಯಮುನಾನದಿಯು ಪೂರ್ಣವಾಗಿ ಇಳಿದು ಮಾರ್ಗವು ಸರಳವಾಯಿತು. ಆದರಿಂದ ಅಬ್ದಾಲಿಗೆ ಅನ್ನಸಾಮಗ್ರಿಯ ಬಡತನವು ಹಿಂಗಿತು. ಆಗ ಆತನು ಉತ್ಸಾಹಗೊಂಡು ಮರಾಟರ ಕಡೆಗೆ ಹೋಗುತ್ತಿದ್ದ ಅನ್ನಸಾಮಗ್ರಿಗಳನ್ನು ಹಾದಿಯಲ್ಲಿ ಬಡೆದು ಅಪಹರಿಸತೊಡಗಿದನು. ಮರಾಟರಿಗೆ ದಿಲ್ಲಿಯ ದಾರಿಯು ಪೂರಾ ಎರವಾಯಿತು. ಇದರ ಹೊರತು ಎರಡನೇ ಮಾರ್ಗಗಳು ಸುಲಭವಿಲ್ಲದ್ದರಿಂದ ಮರಾಟರಿಗೆ ಆಹಾರಸಾಮಗ್ರಿಯು ಬರುವದು ಕಟ್ಟಾಯಿತು. ಬಳಿಯಲ್ಲಿದ್ದ ಸಾಮಗ್ರಿಯೂ ತೀರುತ್ತ ಬಂದಿತು. ಆದ್ದರಿಂದ ತುಸ ದಿವಸಗಳ ಹಿಂದೆ ಅಬ್ದಾಲಿಗೆ ಒದಗಿದ ಸ್ಥಿತಿಯೇ ಮರಾಟರಿಗೆ ಒದಗಿತು. ಕುದುರೆಗಳಿಗೆ ಹುಲ್ಲು ಸಿಗುವದು ಸಹ ಕಷ್ಟವಾಯಿತು. ಭಾವೂಸಾಹೇಬನು ಲಮಾಣಿಗಳನ್ನು ಹಿಡತರಿಸಿ, ಅವರ ಸಹಾಯಕ್ಕೆ ಸೈನ್ಯವನ್ನು ಕೊಟ್ಟು, ಹುಲ್ಲು ತರಿಸುವ ಪ್ರಯತ್ನಮಾಡಿದನು. ಅದೂ ನೆಲೆಮುಟ್ಟದೆ ಹೋಯಿತು. ಸಿಪಾಯಿಗಳಿಗೆ ಹೊಟ್ಟೆತುಂಬ ಅನ್ನವಿಲ್ಲ; ಕುದುರೆಗಳಿಗೆ ಹೊಟ್ಟೆತುಂಬ ಹುಲ್ಲು ಇಲ್ಲ; ಹೀಗಾಗಿ ಭಾವೂಸಾಹೇಬನು ಬಹಳ ಚಿಂತೆಗೊಳಗಾದನು. ಇದೇಕಾಲಕ್ಕೆ ದುಡ್ಡಿನ ಅಡಚಣೆಯು ಬಿದ್ದದರಿಂದ, ಬೆಳ್ಳಿಬಂಗಾರದ ಪಾತ್ರೆಗಳನ್ನೂ, ಅಲಂಕಾರಗಳನ್ನೂ ಮುರಿಸಿ, ರೂಪಾಯಿಗಳನ್ನೂ, ಮೋಹರುಗಳನ್ನೂ ಮಾಡಿಸಿದನು. ಈ ಸ್ಥಿತಿ

ಯಲ್ಲಿ ಕಾರ್ತಿಕ ಶುದ್ಧ ಪೌರ್ಣಿಮೆಯವರೆಗೆ ಕಾಲವು ಕಳೆದು ಹೋಯಿತು. ಜ್ವರದ ಪಿಡುಗಿನಿಂದ ಸೈನಿಕರು ನಿರ್ವೀರ್ಯ್ಯರಾಗತೊಡಗಿದರು. ಇದನ್ನೆಲ್ಲ ನೋಡಿ ಭಾವೂಸಾಹೇಬನು ಬಹಳ ಹೊತ್ತು ಆಲೋಚಿಸಿ, ತನ್ನ ಸರದಾರರನ್ನು ಕರೆಯಿಸಿ ಕೊಂಡನು. ಮೇಹಂದಳೆ, ಸಿಂಧೆ, ಹೋಳಕರ, ಗಾರದಿ, ಭಾಪಕರ ಮೊದಲಾದ ಶೂರಸರದಾರರು ಬಂದು ಮುಜರೆಮಾಡಿ ಕುಳಿತುಕೊಂಡರು. ಬಳಿಕ ಭಾವೂ ಸಾಹೇಬನು ಅವರೊಡನೆ ಆಪ್ತಾಲೋಚನೆಗಳನ್ನು ನಡಿಸಿರಲು, ಒಂದು ಮಾತಿ ನಿಂದ ಮೇಹಂದಳೆಯು ಅಧಿಕಪ್ರಸಂಗಕ್ಕೆ ಕಳೆಯೇರಿತು. ಅವನು ಆ ಸಭೆಯಲ್ಲಿ,—"ಸಿಂಧೆಹೋಳಕರರು ಸರಕಾರದ ಚಾಕರಿಯನ್ನು ಮನಮುಟ್ಟಿ ಮಾಡದ್ದರಿಂದ ಪ್ರಸ್ತುದಲ್ಲಿ ಶ್ರೀಮಂತರ ಪರೀಕ್ಷೆಯ ಪ್ರಸಂಗವು ಒದಗಿರುವದು" ಎಂದು ತಟ್ಟನೆ ನುಡಿದು ಬಿಟ್ಟನು. ಆತನ ಈ ವಾಗ್ಬಾಣಗಳು ಸ್ವಾಮಿನಿಷ್ಠನಾದ ಜನಕೋಜಿಯ ಹೃದಯದಲ್ಲಿ ಬಹಳವಾಗಿ ನಟ್ಟವು. ಆ ಸ್ವಾಭಿಮಾನಿಯಿಂದ ಈ ನೋವನ್ನು ತಾಳುವದಾಗಲಿಲ್ಲ. ಅವನು ಕೂಡಲೆ ಕಣ್ಣುಕೆಂಪಗೆ ಮಾಡಿ, ಮೇಹಂದಳೆಯನ್ನು ಕುರಿತು—"ಬಳವಂತರಾವ, ನಿಮಗೆ ಮಾತಾಡುವಾಗ ಮೈಮೇಲೆ ಎಚ್ಚರವಿರುವದಿಲ್ಲೆಂಬಂತೆ ತೋರುತ್ತದೆ. ನೀವು ನಮ್ಮ ಮಾನಭಂಗ ಮಾಡುವ ವ್ರತವನ್ನೇ ಹಿಡಿದಿರುವಿರೋ ಏನು? ನಾವು ದೌಲತ್ತಿನ ಚಾಕರಿಯನ್ನು ಮಾಡುವದಿಲ್ಲವೇ? ಶಾಬಾಸ್, ಚಲೋ ವಸ್ತಾದಿಗಳಿರುವಿರಿ!! ನಾವು ನಿಮ್ಮಂತೆ ಬಾಯ್ಬಡಕತನವನ್ನು ತೋರಿಸುವದಿಲ್ಲಮಾತ್ರ; ಕಾರ್ಯಮಾಡಿ ತೋರಿಸುವದೇ ನಮ್ಮ ಶೀಲವಾಗಿರುವದು. ನಾಳಿಗೆ ವಿಜಯವನ್ನು ಸಂಪಾದಿಸಿಯೇ ಶ್ರೀಮಂತರಿಗೆ ಮೋರೆಯನ್ನು ತೋರಿಸುವೆನು" ಎಂದು ಪ್ರತಿಜ್ಞೆಮಾಡಿ, ಭಾವೂಸಾಹೇಬನಿಗೆ ಮುಜರೆಯನ್ನು ಮಾಡುತ್ತ ಹೊರಹೊರಟನು. ಆಗ ಭಾವೂಸಾಹೇಬನು ಅವನನ್ನು ತಡೆದು—"ಜನಕೋಜಿ, ಹೀಗೆ ಸಾಹಸಕ್ಕೆ ಬೀಳಬೇಡ; ನೀನು ಎಷ್ಟು ಸ್ವಾಮಿನಿಷ್ಠನಿರುವಿಯೆಂಬದು ನಮಗೆ ಚನ್ನಾಗಿ ಗೊತ್ತಿರುತ್ತದೆ" ಎಂದು ನುಡಿದು ಬಳವಂತರಾಯನಿಗೆ ಚನ್ನಾಗಿ ಸಿಟ್ಟು ಮಾಡಿದನು. ಆದರೂ ಜನಕೋಜಿಯು—"ಶ್ರೀಮಂತರಿಗೆ ಒಮ್ಮೆ ಮುಜುರೆಮಾಡಿ ಹೊರಟಬಳಿಕ ಅದರಂತೆ ಕಾರ್ಯಸಾಧಿಸದೆ ಬಿಡಲಿಕ್ಕಿಲ್ಲ" ಎಂದು ನುಡಿದು, ಬಹಳಹೊತ್ತು ಅಲ್ಲಿ ನಿಲ್ಲದೆ ತನ್ನ ಡೇರೆಯ ಒಳಿಗೆ ಹೋದನು.

ಭಾವೂಸಾಹೇಬನು ಜನಕೋಜಿಯನ್ನು ಹೊಟ್ಟೆಯಮಗನಂತೆ ಪ್ರೀತಿಸುತ್ತಿದ್ದನು ಆದ್ದರಿಂದ ಆತನು ಜನಕೋಜಿಗೆ ಪುನಃ ಮಲ್ಹಾರರಾಯನಸಂಗಡ ಹೇಳಿ ಕಳಿಸಿದನು. ಆದರೆ ಜನಕೋಜಿಯು ತನ್ನ ನಿಶ್ಚಯವನ್ನು ಬಿಡದ್ದರಿಂದ ಭಾವೂ

ಸಾಹೇಬನು ಬಳವಂತರಾಯನಿಗೆ ಹುಜುರಾತಿಯ ಸೈನ್ಯವನ್ನು ತಕ್ಕೊಂಡು ಜನಕೋಜಿಯ ಸಹಾಯಕ್ಕೆ ಹೋಗಬೇಕೆಂದು ಅಪ್ಪಣೆಮಾಡಿದನು. ಮರುದಿನ ಜನಕೋಜಿಯು ತನ್ನ ಹತ್ತುಸಾವಿರ ಸ್ವಾರರನ್ನೂ, ೫೦ ಸಾವಿರ ತೋಫುಗಳನ್ನೂ, ಎರಡುನೂರು ಊಷ್ಟ್ರಾರೂಢರನ್ನೂ ಕೂಡಿಕೊಂಡು ಕಾಳಗಕ್ಕೆ ಸಿದ್ಧನಾದನು. ಅವನ ಸಂಗಡ ಹೋಳಕರನ ಅರ್ಧಸೈನ್ಯವೂ ಹೊರಟಿತು. ಫಿತೂರಿ, ಮರೆಮೋಸಗಳು ಹಿಂದೂಜನರಿಗೆ ಕೈತೊಳೆದುಕೊಂಡು ಬೆನ್ನುಹತ್ತಿರುವವಾದ್ದರಿಂದ ಯಾವ ಮಾಯೆಯಿಂದಲೋ ಜನಕೋಜಿಯ ನಿಶ್ಚಯವು ಬೆಳಗು ಹರಿಯುವದರೊಳಗೆ ಅಬ್ದಾಲಿಗೆ ಗೊತ್ತಾಗಿತ್ತು. ಅವನೂ ಜನಕೋಜಿಯ ಸೈನ್ಯಕ್ಕೆ ಸರಿಯಾಗಿ ಸೈನ್ಯವನ್ನು ಸಿದ್ಧಪಡಿಸಿ ಕಾಳಗಕ್ಕೆ ಕಳಿಸಿಕೊಟ್ಟನು. ಜನಕೋಜಿಯು ಮರಾಟರ ಜಯಸ್ತಂಭದ ಬಳಿಗೆ ಬಂದು ತೋಫುಗಳಿಂದ ಮದ್ದುಗುಂಡುಗಳ ಮಳಗರೆದನು. ಉಭಯಸೈನ್ಯಗಳೂ ಸಮಸಮಾನವಾಗಿದ್ದದರಿಂದ ಒಂಬತ್ತುತಾಸಿನವರೆಗೆ ಕಾದಾಡಿದರೂ ಯಾವ ಪಕ್ಷವೂ ಹಿಂಜರಿಯಲಿಲ್ಲ. ಆಗ ಜನಕೋಜಿಯು ವೀರಶ್ರೀಯಿಂದ ಯುಕ್ತನಾಗಿ ತನ್ನ ಕೈಯಲ್ಲಿ ಖಡ್ಗವನ್ನು ತಕ್ಕೊಂಡು ಶತ್ರುಸೈನ್ಯವನ್ನು ನುಗ್ಗಿದನು. ಕೂಡಲೆ ಮರಾಟರೆಲ್ಲರೂ 'ಹರಹರ ಮಹಾದೇವ' ಎಂದು ಗರ್ಜಿಸುತ್ತ ಪಠಾಣರ ದಂಡನ್ನು ಹೊಕ್ಕರು. ಕ್ಷಣದಲ್ಲಿ ಕಾಳಗದಕಣವು ಹೆಣಗಳಿಂದ ತುಂಬಿ ಹೋಯಿತು. ಮರಾಟರ ರಭಸಕ್ಕೆ ಪಠಾಣರು ಅಂಜಿದರು. ಸುಮಾರು ಅರ್ಧಮರ್ಧ ಸೈನ್ಯವು ನೆಲಕ್ಕುರುಳಿದ ಬಳಿಕ ಪಠಾಣರ ಧೈರ್ಯವು ಕುಂದಿತು. ಅವರು ಶಸ್ತ್ರಾಸ್ತ್ರಗಳನ್ನು ಚಲ್ಲಿಕೊಟ್ಟು, ಕಾಳಗದ ಕಣದಿಂದ ಓಡಿಹೋದರು. ಜನಕೋಜಿಯು ವಿಜಯಶಾಲಿಯಾದನು. ಮರಾಟರು ಜಯಭೇರಿಯನ್ನು ಹೊಡೆಯುತ್ತ ಛಾವಣಿಯ ಕಡೆಗೆ ತಿರುಗಿದರು. ಈ ಮೇರೆಗೆ ಜನಕೋಜಿಯು ನುಡಿದಂತೆ ನಡೆದು, ಸಂಗ್ರಾಮದ ಮಂಗಲಾಚರಣವನ್ನು ಮಾಡಿ, ಅಂದು ಭಾವೂಸಾಹೇಬನನ್ನು ಆನಂದಪಡಿಸಿದನು!

## ೧೧ನೆಯ ಪ್ರಕರಣ.

## ಹಾ! ಏನಿದೇನೋ!!

ಕಾರ್ತಿಕ ಕೃಷ್ಣ ಅಮಾವಾಸ್ಯೆಯು ದಿವಸವು; ಹಗಲು ೩ ಗಂಟೆಯ ಸಮಯವಾಗಿದೆ; ಮರಾಟರ ಛಾವಣಿಯಲ್ಲಿ ವಿಲಕ್ಷಣ ಆನಂದವು ತುಂಬಿಕೊಂಡಿದೆ; ಚತುರ್ಗಾಲಾಕಾರದ ಕಂದಕದಿಂದ ವೇಷ್ಟಿತವಾಗಿರುವ ಭವ್ಯಪ್ರದೇಶದ ಮಧ್ಯದಲ್ಲಿ ಮಾವಿನಗಿಡಗಳಿಂದ ಸಂದಣಿತವಾದ ತೋಪಿನೊಳಗೆ ಶ್ರೀಮಂತ ಭಾವೂ ಸಾಹೇಬನು ಸರದಾರರೊಡನೆ ಸಂಭ್ರಮದಿಂದ ಮಾತನಾಡುತ್ತ ಕುಳಿತಿದ್ದಾನೆ. ಹುಜುರಾತಿಯ ಸೈನ್ಯದವರು ಆ ತೋಪಿನ ಸುತ್ತಲೂ ಅಷ್ಟಗಾವಲಾಗಿದ್ದಾರೆ; ಶ್ರೀಮಂತರ ಬಲಪಾರ್ಶ್ವದಲ್ಲಿರುವ ನೇರಲ ಬನದಲ್ಲಿ ಸಿಂಧೆ-ಹೋಳಕರರ ದಂಡುಗಳು ವಿಶ್ರಾಂತಿಗೊಳ್ಳುತ್ತಲಿವೆ; ಎಡಭಾಗದಲ್ಲಿ ಅಂದರೆ ಪೂರ್ವದಿಕ್ಕಿನಲ್ಲಿ ಪಾಣಿಪತ್ತ ಗ್ರಾಮವನ್ನು ಬಳಸುತ್ತಿಕೊಂಡು ಇಬ್ರಾಹಿಮಖಾನನ ಸೈನ್ಯವು ಪಸರಿಸಿರುತ್ತದೆ; ಚತುರ್ದಿಶೆಗಳ ಹೆಬ್ಬಾಗಿಲುಗಳನ್ನು ದಕ್ಷಿಣಾನುಕ್ರಮವಾಗಿ ದಮಾಜಿ ಗಾಯಕವಾಡ, ಯಶವಂತರಾವ ಪವಾರ, ವಿಠ್ಠಲ ಶಿವದೇವ, ನಾರಾಯಣ ಜಾಪೂಜಿ ಮೊದಲಾದ ಶೂರಸರದಾರರು ಸಂರಕ್ಷಿಸುತ್ತಲಿದ್ದಾರೆ. ಶ್ರೀಮಂತ ವಿಶ್ವಾಸರಾಯನು ಎಲ್ಲರ ಕೆಲಸಗಳನ್ನು ದಕ್ಷತೆಯಿಂದ ನೋಡುತ್ತಲಿದ್ದಾನೆ. ಇಂಥ ಸಮಯದಲ್ಲಿ ಪಠಾಣರದೊಂದು ತಂಡವು ಇಬ್ರಾಹಿಮಖಾನನ ಹಾಗು ಜನಕೋಜಿಯ ತೋಫುಗಳ ಏಟುಗಳನ್ನು ತಪ್ಪಿಸಿಕೊಳ್ಳುತ್ತ, ಹುಜುರಾತಿಯ ಸೈನ್ಯಕ್ಕೆ ಎದುರಾಗಿ ಬರತೊಡಗಿತ್ತು. ಅದು ನೋಡನೋಡುವಷ್ಟರಲ್ಲಿ ರಣಾಂಗಣವನ್ನೆಲ್ಲ ವ್ಯಾಪಿಸಿ ಸಿಂಹಗರ್ಜನೆಯನ್ನು ಮಾಡತೊಡಗಿತು. ವಿಶಾಲವಾದ ಸೇನಾಸಾಗರದಲ್ಲಿ ಏಳುವ ತೆರೆಗಳೋ ಎಂಬಂತೆ ಆ ಸೈನ್ಯದಲ್ಲಿಯ ಬಿಚ್ಚುಗತ್ತಿಗಳ ತೀಕ್ಷ್ಣ ಮೊನೆಗಳು ಥಳಥಳಿಸತೊಡಗಿದವು. ಅದರ ರಭಸವನ್ನು ರಣಮಂಡಲವು ಸಹಿಸದಂತಾಯಿತು.

ಈ ಮೇರೆಗೆ ಅಫಗಾನರ ಆಕಸ್ಮಿಕ ಆಗಮನವನ್ನು ತಿಳಿದು, ಭಾವೂಸಾಹೇಬನಲ್ಲಿಯೂ, ಆತನ ಸರದಾರರಲ್ಲಿಯೂ ಸಾನಂದಾಶ್ಚರ್ಯಗಳುಂಟಾದವು. ಜನಕೋಜಿಯು ಸಂಗ್ರಾಮದ ಮಂಗಲಾಚರಣ ಮಾಡಿದಂದಿನಿಂದ ಅಂದರೆ ಕಾರ್ತಿಕ ಶುದ್ಧ ಪೂರ್ಣಿಮೆಯಿಂದ ಮರಾಟರಲ್ಲಿ ಸಾಮರ್ಥ್ಯ-ಜಾಗ್ರತೆಗಳು ಹೆಚ್ಚುತ್ತ ನಡೆದಿದ್ದವು; ದಿಲ್ಲಿಯಿಂದ ದ್ರವ್ಯವೂ, ಬುಂದೇಲಿಯು ಗೋವಿಂದಪಂತನಿಂದ ಅನ್ನಸಾ

ಮಗ್ರಿಯೂ ಬಂದದ್ದರಿಂದ, ಮರಾಟರಲ್ಲಿ ನೂತನ ಉಲ್ಲಾಸವು ನೆಲೆಗೊಂಡಿತ್ತು. ಇದೇ ಹುರುಪಿನಲ್ಲಿ ಭಾವೂಸಾಹೇಬನು ಸ್ಥಳಾಂತರಮಾಡಿ ದಿಲ್ಲಿಯನ್ನು ಬೆನ್ನಹಿಂದೆ ಮಾಡಿಕೊಂಡಾಗಲಿ, ಇಲ್ಲವೆ ಅಬ್ದಾಲಿಯ ಮೇಲೆ ಧುಮುಕಿದಾಗಲಿ ತನ್ನ ಪಕ್ಷಕ್ಕೆ ಗೆಲವು ಉಂಟಾಗುವಂತೆ ಆಚರಿಸಬೇಕಾಗಿತ್ತು. ಆದರೆ ಇಂಥ ಬಂಗಾರದಂಥ ಸಮಯವನ್ನು ಆತನು ಯಾಕೆ ಕಳಕೊಂಡನೆಂಬದನ್ನು ನಿಶ್ಚಯವಾಗಿ ಹೇಳಲಾಗುವದಿಲ್ಲ. ಆದರೂ ಆತನ ಸ್ವಭಾವ ವೈಚಿತ್ರ್ಯದಿಂದ ಒಂದು ವಿಧವಾದ ಕಲ್ಪನೆಗೆ ಅವಕಾಶವು ಸಿಕ್ಕುತ್ತದೆ. ಜನಕೋಜಿಯ ಕಾಳಗದಲ್ಲಿ ಬಳವಂತರಾಯನು ದೂರ ನಿಂತು, ಸಿಂಧ್ಯನ ಬಲವನ್ನು ಪರೀಕ್ಷಿಸಿದ್ದರಿಂದ ಎಲ್ಲ ಸರದಾರರು ಆತನನ್ನು ದೂಷಿಸಿದರು. ಇಷ್ಟೇ ಅಲ್ಲ; "ಈ ಪ್ರಸಂಗದಲ್ಲಿ ಬಳವಂತರಾಯನು ಸಹಾಯಮಾಡಿದ್ದರೆ ಪಠಾಣರು ನಿಲ್ಲಲಿಕ್ಕೆ ಗತಿಕಾಣದೆ ಓಡುತ್ತಿದ್ದರೆಂದೂ, ಇಂಥ ಅಲಭ್ಯ ಲಾಭವನ್ನು ಬಳವಂತರಾಯನೇ ಕಳೆದನೆಂದೂ" ಜನರು ಸರ್ವತೋಮುಖವಾಗಿ ಮೇಲಿಂದ ಮೇಲೆ ಅನ್ನಲಾರಂಭಿಸಿದರು. ಇದರಿಂದ ಬಳವಂತರಾಯನ ಅಭಿಮಾನವಹಿಸಿದ ಭಾವೂಸಾಹೇಬನಿಗೆ ಅಸಮಾಧಾನವಾಗದೆ ಹೋಗಲಿಲ್ಲ. ತಾನು ಜನಕೋಜಿಯ ಸಹಾಯಕ್ಕೆ ಬಳವಂತರಾಯನನ್ನು ಕಳುಹಿಸಿ ದೊಡ್ಡ ತಪ್ಪು ಮಾಡಿದ್ದಲ್ಲದೆ, ಜನಕೋಜಿಯ ವಿಜಯವನ್ನೇ ಮುಂದೆಮಾಡಿ ಅಬ್ದಾಲಿಯನ್ನು ಹಣ್ಣಿಗೆ ತಂದರೆ, ತನ್ನ ಹಾಗು ಬಳವಂತರಾಯನ ಹೆಸರು ಕಡಿಮೆಯಾಗಬಹುದೆಂದು ಆಗ ಆತನು ನೆನಿಸಿದಂತೆ ತೋರುತ್ತದೆ. ಏನೇ ಆಗಲಿ. ಭಾವೂಸಾಹೇಬನು ಜನಕೋಜಿಯ ವಿಜಯದಿಂದ ತನ್ನ ಸೈನಿಕರಲ್ಲಿ ಹುಟ್ಟಿದ ಹುರುಪನ್ನು ಉಪಯೋಗಿಸಿಕೊಳ್ಳಲಿಲ್ಲ. ಹೀಗೆ ಭಾವೂಸಾಹೇಬನು ತಟಸ್ಥನಾಗಿದ್ದರೂ ಆತನಲ್ಲಿಯೂ, ಆತನ ಸರದಾರರಲ್ಲಿಯೂ ಪಠಾಣರನ್ನು ಯಾವಾಗ ಮಣ್ಣುಮಾಲು ಮಾಡೇನೆಂಬ ಯುದ್ಧೋತ್ಸಾಹವು ಪ್ರತಿದಿನದಲ್ಲಿ ಉಕ್ಕೇರುತ್ತಲಿತ್ತು; ಹೀಗಿರಲು ಮೇಲೆ ಹೇಳಿದಂತೆ ಪಠಾಣರು ತಾವಾಗಿಯೇ ಕಾಲುಕೆದರಿ ಮೈಮೇಲೆ ಬಂದದ್ದರಿಂದ ಆ ವೀರಶಿರೋಮಣಿಗಳ ರಣೋತ್ಸಾಹವು ಹೆಚ್ಚಿ, ಅವರು ಆನಂದಪಟ್ಟದ್ದು ಸ್ವಾಭಾವಿಕವಾಗಿರುವದು! ಇರಲಿ.

ಈ ಕಾಲಕ್ಕೆ ಬಳವಂತರಾಯನು ಭಾವೂಸಾಹೇಬನ ಬಳಿಯಲ್ಲಿಯೇ ಇದ್ದುದರಿಂದ, ಅವನಲ್ಲಿ ಪ್ರಸ್ತುತದ ಪ್ರಸಂಗದಿಂದ ಹಲವು ಬಗೆಯ ಕಲ್ಪನಾತರಂಗಗಳು ತಾಕಲಾಡಲಾರಂಭಿಸಿದವು. "ತಾನು ಜನಕೋಜಿಗೆ ಸಹಾಯಮಾಡದ್ದರಿಂದ ಜನರು ತನ್ನ ವಿಷಯವಾಗಿ ಪ್ರಕಟಿಸುವ ಅನಾದರವು ಸಮೂಲ ಅಳಿಸಿ ಹೋಗಿ, ತಾನು ನಿಜವಾದ ರಣಧೀರನೂ, ಮರಾಟರ ಪೂರ್ಣ ಹಿತಚಿಂತಕನೂ ಎಂದು ಅನ್ನಿಸಿಕೊ

ಳ್ಳಬೇಕಾದರೆ, ಈ ದಿನ ಪಠಾಣರೊಡನೆ ತಾನೇ ಕಾದಬೇಕೆಂಬ ವಿಚಾರಗಳು” ಆವನಲಿ ಸಹಜವಾಗಿ ಬಂದವು; ಹಿಂದಿನ ಪ್ರಸಂಗದಲ್ಲಿ ತನ್ನಿಂದ ದೌಲತ್ತಿಗೆ ಬಹಳ ಹಾನಿಯಾಯಿತೆಂದು ಪಶ್ಚಾತ್ತಾಪವೂ ಆವನಲ್ಲಿ ಉಂಟಾಗಿತ್ತು; ಆದ್ದರಿಂದ ಆತನು ಅನ್ಯವಿಚಾರಗಳಿಗೆ ಆಸ್ಪದಕೊಡದೆ ಭಾವೂಸಾಹೇಬನನ್ನು ಕುರಿತು—“ಸರಕಾರ, ಈ ದಿನ ಪಠಾಣರ ಸಮಾಚಾರವನ್ನು ನೋಡಿಕೊಳ್ಳಲಿಕ್ಕೆ ನನಗೇ ಅಪ್ಪಣೆ ದೊರೆಯಬೇಕು. ಯಾಕಂದರೆ ಜನಕೋಜೀ ಸರದಾರರು ಕಳೆದ ಕಾಳಗದಲ್ಲಿ ತಮ್ಮ ಪೌರುಷವನ್ನು ತೋರಿಸಿ ತಮ್ಮ ಒಂದು ಸರತಿಯನ್ನು ಮುಟ್ಟಿಸಿರುವರು. ಈ ಸಾರೆ ನನ್ನಿಂದ ಸೇವೆಯನ್ನು ತಕ್ಕೊಳ್ಳಬೇಕು. ಹ್ಯಾಗೂ ನಮ್ಮ ಹುಜುರಾತಿಯ ಸೈನ್ಯವು ಸಿದ್ಧವಿರುತ್ತದೆ” ಎಂದು ಬೇಡಿಕೊಂಡನು. ಆತನ ವಿಶೇಷಾಗ್ರಹದಿಂದ ಭಾವೂಸಾಹೇಬನು ಆತನಿಗೆ ಯುದ್ಧಕ್ಕೆ ಹೋಗಲಪ್ಪಣೆಕೊಟ್ಟನು.

ಶ್ರೀಮಂತರಿಂದ ಯುದ್ಧಕ್ಕೆ ಹೋಗಲು ವೀಳ್ಯೆಯು ದೊರೆತದ್ದಕ್ಕಾಗಿ ಸ್ವಾಭಿಮಾನಿಯಾದ ಆ ವೀರಪುರುಷನ ವೀರಶ್ರೀಯು ಹೆಚ್ಚಿತು. ಆತನು ನಿಜವಾಗಿಯೇ ಖಂಬೀರಪುರುಷನಾಗಿದ್ದನು. ಆತನಲ್ಲಿ ಸ್ವಾಮಿನಿಷ್ಠೆಯೊದರೂ ಅಕೃತ್ರಿಮವಾಗಿತ್ತು; ಆತನು ಮರಾಟಸಾಮ್ರಾಜ್ಯದ ಉನ್ನತಿಯನ್ನು ಮನಮುಟ್ಟಿ ಬಯಸುತ್ತಿದ್ದನು. ಆದರೆ ಆತನಲ್ಲಿ ಮಾತ್ಸರ್ಯವೆಂಬ ದೊಡ್ಡ ದೋಷವಿತ್ತು; ಪರೋತ್ಕರ್ಷವು ಆತನಿಗೆ ಸೇರುತ್ತಿದ್ದಿಲ್ಲ; ಈ ಭಯಂಕರವಾದ ದುರ್ಗುಣದಮೂಲಕ ಆವನಿಂದ ಸಾಮ್ರಾಜ್ಯಕ್ಕೆ ಕೆಲಕೆಲವು ಪ್ರಸಂಗಗಳಲ್ಲಿ ಹಾನಿತಟ್ಟುತ್ತಿತ್ತು; ಸಾಧಾರಣವಾಗಿ ನಮ್ಮ ಜನರು ದುರ್ಗುಣದಿಂದಲೇ ಕೆಡುತ್ತ ಬಂದರೆಂದು ಹೇಳಬಹುದು; ಈ ಮತ್ಸರಪಿಶಾಚಿಯಿಂದ ನಮ್ಮಲ್ಲಿಯ ಸಾಮ್ರಾಜ್ಯಗಳು ಮಣ್ಣುಗೂಡಿದವು; ಬುದ್ಧಿ-ಸಾಮರ್ಥ್ಯಗಳು ನಷ್ಟವಾದವು; ಕೀರ್ತಿ, ಮಾನಮರ್ಯಾದೆಗಳು ದೇಶಾಂತರಕ್ಕೆ ಹೊರಟುಹೋದವು. ಪ್ರೇಮವು ನಾಮಶೇಷವಾಯಿತು; ಕಡೆಗೆ ದುಃಖೋದಧಿಯಲ್ಲಿ ಗುಟಕರಿಸುವ ಸಮಯವು ಬಂದಿತು!! ಹಾಯ್! ಹಾಯ್!! ಇದಕ್ಕೂ ಅತ್ಯವಸ್ಥೆಯನ್ನು ಇನ್ನೇನು ಅನುಭವಿಸಬೇಕು? ಈ ಪಿಶಾಚಿಯು ಯಾವ ಮಹಾಮಂತ್ರದ ಕಾರಣದಿಂದ ನಮ್ಮನ್ನು ತೊರೆಯುವದೋ ತಿಳಿಯದು!

ಸ್ವಲ್ಪ ದೋಷಗ್ರಸ್ತನಾಗಿದ್ದರೂ ರಣಧೀರನೂ, ಸ್ವಾಮಿನಿಷ್ಠನೂ, ಎನಿಸುವ ಮೆಹಂದಳೆ ಕುಲಭೂಷಣನು ಶ್ರೀಮಂತರನ್ನು ನಮಸ್ಕರಿಸಿ, ಲಗುಬಗೆಯಿಂದ ತನ್ನ ರಾಹುಟಿಯ ಬಳಿಗೆ ಬಂದನು. ಈದಿನ ಗಂಡನು ಬೇಗನೆ ರಾಹುಟಿಗೆ ತಿರುಗಿದ್ದನ್ನು ಕಂಡು ಆತನ ಪ್ರಿಯಸತಿಯು ಮುಗುಳುನಗೆಯಿಂದ ಹೊರಗೆಬಂದಳು. ಪತ್ನಿಯು ಪ್ರಸನ್ನಮಯವಾದ ಮುಖೇಂದುವನ್ನು ನೋಡಿ, ಬಳವಂತರಾಯನಲ್ಲಿ ಆನಂದವು

ನೈಸರ್ಗಿಕವಾಗಿ ಅಂಕುರಿಸಿತು. ಆಗ ಆತನು ನಗುತ್ತ—"ಪ್ರಿಯೇ, ಈದಿನ ನನಗೆ ಯುದ್ಧಕ್ಕೆ ಅಪ್ಪಣೆಯು ಸಿಕ್ಕಿರುವದು; ದೈವ ವಶಾತ್ ರಣದಲ್ಲಿ ಮರಣವು ಬಂದರೆ ಇದೇ ನನ್ನ-ನಿನ್ನ ಕಡೆಯ ಭೆಟ್ಟಿಯು!" ಎಂದು ಒಮ್ಮೆಲೆ ನುಡಿದುಬಿಟ್ಟನು. ಆತ ನಿಂದ ಭವಿಷ್ಯದ್ವಾಣಿಯು ಅಚಿಂತ್ಯವಾಗಿ ಹೊರಟುಹೋಯಿತು. ತಾಯಿಬಾ ಯಿಯ ಸ್ಥಳದಲ್ಲಿ ಇನ್ನೊಬ್ಬ ವಿಷಯಲಂಪಟಳಾದ ಸ್ತ್ರೀಯಿದ್ದರೆ, ಆಕೆಯು ಈ ಕಾಲದಲ್ಲಿ ಅಕಾಂಡತಾಂಡವನ್ನು ಮಾಡಿ ಗಂಡನ ಕೊರಳಿಗೆ ಉರಲುಬಿದ್ದು, ಅವ ನನ್ನು ಕೈಕಾಲುಗೆಡಿಸಿಬಿಡುತ್ತಿದ್ದಳು; ಆದರೆ ಆ ವೀರಪತ್ನಿಯು ರವಷ್ಟಾದರೂ ಅಂಜದೆ, ಅಸಮಾಧಾನಹೊಂದದೆ, ಗಂಡನನ್ನು ಕುರಿತು—ಮಹಾರಾಜ, ತಾವು ಧನ್ಯ ಪುರುಷರಿರುತ್ತೀರಿ; ತಮ್ಮಂಥ ವೀರಶಿರೋಮಣಿಗಳು ರಣದಲ್ಲಿ ಗೆದ್ದರೂ ಒಂದು ಬಗೆಯಿಂದ ಭೂಷಣ, ಬಿದ್ದರೂ ಒಂದುಬಗೆಯಿಂದ ಭೂಷಣ; ಮನುಷ್ಯನ ನೂರು ವರ್ಷಗಳ ಆಯುಷ್ಯದಲ್ಲಿ ಎಂದಾದರೂ ಒಮ್ಮೆ ಮರಣವು ನಿಶ್ಚಿತವಾದದ್ದಷ್ಟೇ; ಆದ್ದರಿಂದ ಸ್ವಾಮಿಕಾರ್ಯದಲ್ಲಿ ದೇಹವು ಬೀಳುವದಕ್ಕಿಂತ ಹೆಚ್ಚಿನ ಪುಣ್ಯವು ಇನ್ನಾವುದಿರುವದು? ಮಹಾರಾಜ, ತಾವು ದೈವಯೋಗದಿಂದ ವೀರಸ್ವರ್ಗವನ್ನು ಪಡೆ ದರೆ ನನ್ನನ್ನು ತಮ್ಮ ಸನ್ನಿಧಿಗೆ ಬರಮಾಡಿಕೊಳ್ಳುವ ಕೃಪೆಮಾಡಬೇಕು. ಸತಿಗೆ ಪತಿಯೇ ದೈವಸ್ವರೂಪನಾದ್ದರಿಂದ ನಿಮ್ಮ ದಿವ್ಯಚರಣಗಳ ಸಂದರ್ಶನವು ನನಗೆ ತಪ್ಪಬಾರದಷ್ಟೇ: ಈ ಲೋಕದಲ್ಲಿ ತಾವು ನನ್ನನ್ನು ಧನ್ಯಳನ್ನಾಗಮಾಡಿದಂತೆ, ಪರಲೋಕದಲ್ಲಿಯೂ ಮಾಡುವಿರೆಂದು ನಿಶ್ಚಯವಾಗಿ ನಂಬಿದ್ದೇನೆ, ಎಂದು ನುಡಿ ಯಲು, ಆಕೆಯ ಒಲವನ್ನು ತಿಳಿದ ಬಳವಂತರಾಯನು—ಪ್ರಿಯೇ, ನೀನನ್ನುವದು ನಿಜವು; ಆದರೆ ಅಪ್ಪಾಜಿಯು ಇನ್ನೂ ಚಿಕ್ಕವನಿರುವನಲ್ಲ? ಅವನ ಗತಿಯೇನು? ಎಂದು ಪ್ರಶ್ನೆಮಾಡಿದನು. ಆದರೆ ಪತಿಯ ಸಲುವಾಗಿ ಜಗತ್ತನ್ನೇ ತೃಣೀಕರಿಸುವ ಆ ವೀರವನಿತೆಯು ಮಗನ ಮೋಹಕ್ಕೆ ಬಲಿಬೀಳುವಳೇ? ಅವಳು ಕೂಡಲೆ ಗಂಡ ನನ್ನು ಕುರಿತು—ಇನ್ನು ಅಪ್ಪಾಜಿಯ ಚಿಂತೆಯನ್ನು ಮಾಡಲಿಕ್ಕೆ ನಾವೆಷ್ಟರ ವರು? ಆತನಿಗೆ ಜನ್ಮಕೊಟ್ಟ ಪರಮಾತ್ಮನು ಅರಿಯನೇನು? ಇಂಥ ಋಣಮೋಹಗ ಳಿಂದ ನಮ್ಮ ಧರ್ಮಗಳನ್ನು ತ್ಯಜಿಸಬಹುದೇ? ಎಂದು ನುಡಿದಳು.

ಹೆಂಡತಿಯ ಈ ನಿಶ್ಚಯದ ಮಾತುಗಳಿಂದ ಬಳವಂತರಾಯನಿಗೆ ಬಹಳ ಸಮಾಧಾನವಾಯಿತು. ಆತನು ಆಕೆಯ ಗುಣಗಳನ್ನು ಮನದಲ್ಲಿ ಹೊಗಳುತ್ತ ಪ್ರಕಟವಾಗಿ—ಪ್ರಿಯೇ, ರಣಾಂಗಣದಲ್ಲಿಯ ಮರಣಕ್ಕಿಂತ ಸಹಗಮನವು ದುಸ್ಸಹ ವಾಗಿರುವದು. ಆರ್ಯಸ್ತ್ರೀಯರ ಶೀಲಕ್ಕನುಸಾರವಾಗಿ ನೀನು ನಿನ್ನ ನಿಶ್ಚಯವನ್ನು ಪಾರುಗಾಣಿಸುವಿಯೆಂಬದರಲ್ಲಿ ಸಂಶಯವಿಲ್ಲ; ನಿನ್ನಂಥ ಸದ್ಗುಣಪರಿಪೂರ್ಣ

ಳಾದ ಹೆಂಡತಿಯು ದೊರೆತದ್ದು ನನ್ನ ಪರಮಭಾಗ್ಯವೇ ಸರಿ! ಪ್ರಿಯೇ, ಈದಿನ ನಿನ್ನನ್ನು ನೋಡಿ ನನಗೆ ಹಿಡಿಸಲಾರದಷ್ಟು ಆನಂದವಾಗಿದೆ. ಇದರಿಂದ ನಾನು ಮೋಹಗ್ರಸ್ತನಾಗಿ ಮೈಮರೆತಿರುವೆನೆಂದು ತಿಳಿಯಬೇಡ; ನಿನ್ನ ನಿಸ್ಸೀಮವಾದ ಪತಿಭಕ್ತಿಯಿಂದ ನನಗೆ ಬಹಳ ಸಮಾಧಾನವೆನಿಸುತ್ತದೆ. ಇತ್ತ ಬಾ, ನನ್ನ ತೊಡೆಯಮೇಲೆ ಕುಳಿತುಕೊಳ್ಳು. ನಿನ್ನಂಥ ಸತೀಮಣಿಯು ಮಹತ್ಪುಣ್ಯವಿಲ್ಲದೆ ಲಭಿಸಲಾರಳು, ಎಂದು ನುಡಿದು ತಾನು ಬಳಿಯಲ್ಲಿರುವ ಪಲ್ಲಂಗದಮೇಲೆ ಕುಳಿತು, ಹೆಂಡತಿಯ ಕೈಹಿಡಿದು ಆಕೆಯನ್ನು ವಾಮಾಂಕದಲ್ಲಿ ಕುಳ್ಳಿರಿಸಿಕೊಂಡನು. ಆಗ ಆ ಸತಿಗೆ ತನ್ನ ಸಮಾನರಾದ ಭಾಗ್ಯವತಿಯರು ಇನ್ನಾರಿರುವರೆಂದೆನಿಸಿತು. ಬಳವಂತರಾಯನು ಪ್ರೇಮಾತಿಶಯದಿಂದ ಪತ್ನಿಯ ಮುಂಗುರುಳನ್ನು ತೀಡಿದನು. ಹಾಗು ಅವಳ ಸುಂದರವಾದ ತುರುಬಿನಲ್ಲಿರುವ ಗುಲಾಬಿಯ ಹೂವನ್ನು ಮುಟ್ಟಿದನು. ಆತನ ವಾಮಹಸ್ತವು ಆಕೆಯ ಬೆನ್ನಮೇಲೆ ನಿಮಿರಿಸುತ್ತಿರಲು, ಆ ಸತಿಯು ತನ್ನ ಸುಂದರವಾದ ಮುಖವನ್ನೆತ್ತಿ ಪ್ರೇಮದಿಂದ ಗಂಡನ ಮುಖಕಮಲವನ್ನು ನೋಡಿದಳು. ಅವಳ ಸರ್ವಾಂಗವು ಆನಂದಪುಳಕಿತವಾಗಿತ್ತು. ಆಗ ಆ ಸುಂದರಿಯ ಪ್ರೇಮಾತಿಶಯಕ್ಕೆ ಸಂತುಷ್ಟನಾದ ಬಳವಂತರಾಯನು ತನ್ನ ಬಲಗೈಬೆರಳುಗಳಿಂದ ಅವಳ ಕೋಮಲಗಲ್ಲಗಳನ್ನು ಹಿಡಿದು ಚುಂಬಿಸಿದನು. ಬಳಿಕ ಆ ಸತಿಯು ತನ್ನ ಸರ್ವಸ್ವವನ್ನು ಪತಿಗೆ ಸಮರ್ಪಿಸುವಂತೆ ಮಧುರವೂ, ತ್ರಯೋದಶಗುಣಪೂರ್ಣವೂ ಆದ ತಾಂಬೂಲವನ್ನು ಆತನಕೈಯಲ್ಲಿ ಕೊಟ್ಟಳು. ಪ್ರಿಯಳ ಕರಕಮಲದಿಂದ ಪ್ರಾಪ್ತವಾದ ಆ ತಾಂಬೂಲವನ್ನು ಮೆಲ್ಲಮೆಲ್ಲನೆ ಸವಿಯುತ್ತ, ಆ ವೀರವನಿತೆಯ ನಿರೂಪವನ್ನು ತಕ್ಕೊಂಡು ಬಳವಂತರಾಯನು ಹೊರಗೆಬಂದನು. ಅಷ್ಟರಲ್ಲಿ ಸೇವಕರು ಕುದುರೆಗೆ ಜೀನುಹಾಕಿ ಸಿದ್ಧಪಡಿಸಿದ್ದರಿಂದ ಇನ್ನು ಆತನು ಕುದುರೆಯನ್ನು ಹತ್ತತಕ್ಕವನು; ಅಷ್ಟರಲ್ಲಿ ಹೊರಗೆ ಎಲ್ಲಿಯೋ ಆಡುತ್ತಿದ್ದ ಅಪ್ಪಾಜಿಯು ಓಡುತ್ತಬಂದು ತಂದೆಯನ್ನು ನಮಸ್ಕರಿಸಿದನು. ಬಳವಂತರಾಯನು ಮಗನನ್ನು ಆಶೀರ್ವದಿಸಿ ಕುದುರೆಯನ್ನು ಏರಿ ಚಪ್ಪರಿಸಿದನು. ಕೂಡಲೆ ಆ ಚಪಲಪ್ರಾಣಿಯು ಹಾ ಹಾ ಅನ್ನುವಷ್ಟರಲ್ಲಿ ಹುಜುರಾತಿಯ ಸೈನ್ಯವನ್ನು ಹೊಂದಿತು.

ಸುಮಾರು ೨೦।೨೫ ಸಾವಿರ ಹುಜುರಾತಿಯ ಕುದುರೆಯ ಸ್ವಾರರು ಸನ್ನದ್ಧರಾಗಿ ನಿಂತಿದ್ದು, ಕೇವಲ ತಮ್ಮ ಅಧಿಪತಿಯ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಅಷ್ಟರಲ್ಲಿ ಬಳವಂತರಾಯನು ಬರಲು, ಅವರಲ್ಲನೇಕರು ವಾದ್ಯಗಳನ್ನು ಬಾರಿಸತೊಡಗಿದರು. ಆ ವಾದ್ಯಗಳ ಸುನಾದವು ದಶದಿಕ್ಕುಗಳಲ್ಲಿ ತುಂಬಿತು. ಆಗ ಬಳವಂತರಾಯನು ಒಳ್ಳೇ ವ್ಯವಸ್ಥೆಯಿಂದ ಆ ಪ್ರಚಂಡವಾದ ಸೈನ್ಯವನ್ನು ಸಾಗಿಸಿ

ಕೊಂಡು ಮರಾಟರ ಜಯಸ್ತಂಭದ ಬಳಿಗೆ ಬಂದನು. ಇತ್ತ ಅಫಗಾನರೂ ತಮ್ಮ ಬಯಕೆಯಂತೆ ತಮ್ಮೊಡನೆ ಕಾದಲಿಕ್ಕೆ ಮರಾಠರ ಸೈನ್ಯವೇ ಬಂದದ್ದಕ್ಕಾಗಿ ಮನದಲ್ಲಿ ಹಿಗ್ಗುತ್ತ ಮರಾಟರಿಗೆ ಎದುರಾಗಿ ನಿಂತರು. ಆಗಿನ ಕಾಲದಲ್ಲಿ ಆ ಉಭಯ ಸೈನ್ಯಗಳು ವರ್ಣಿಸುವ ಹಾಗೆ ಇದ್ದವು. ಅಫಗಾನರ ದಂಡಿನಲ್ಲಿ ಸುಮಾರು ಮೂವತ್ತುಸಾವಿರ ಕುದುರೆಯ ಸ್ವಾರರು ಇದ್ದು, ಅವರ ಮುಂಭಾಗದಲ್ಲಿ ನೂರಾರು ತೋಫುಗಳಿದ್ದವು; ಅಫಗಾನರಲ್ಲಿ 'ಗಿಲಿಚಾಯಿ' ಎಂಬ ಜ್ಯಾತಿಯಿರುವದು; ಈ ಜನರು ಪ್ರಕೃತಿಯಿಂದ ಬಹು ಗಡುತರವಾಗಿದ್ದು ಎತ್ತರವಾದ ನಿಲುವಿಕೆಯಿಂದ ಬಹಳ ಭಯಂಕರವಾಗಿ ತೋರುವರು. ಇವರ ಸಾಮರ್ಥ್ಯವಾದರೂ ಅಗಾಧವಾಗಿರುವದು. ಇವರು ಕುರಿ-ಆಡುಗಳನ್ನು ಬಗೆದು ಹಸೀಮಾಂಸವನ್ನು ತಿಂದು ದಕ್ಕಿಸಿಕೊಳ್ಳುವರು. ಸರ್ವದಾ ಕ್ರೂರಕರ್ಮಗಳಲ್ಲಿಯೇ ಇವರಿಗೆ ಸುಖವೆನಿಸುವದು. ಇವರನ್ನು ಪ್ರತ್ಯಕ್ಷ ರಾಕ್ಷಸರೆಂದೇ ಕರೆಯಬಹುದು. ಇಂಥ ದೈತ್ಯಸದೃಶರಾದ ಅಫಗಾನರೇ ಈ ದಿವಸ ವಿಶೇಷವಾಗಿ ಬಂದಿದ್ದರು. ಉಳಿದ ಅಲ್ಪ ಸ್ವಲ್ಪ ಜನರು ರೋಹಿಲರೂ ಮೊಗಲರೂ ಆಗಿದ್ದರು. ಇಂಥ ಕ್ರೂರ ಜನರ ಎದುರಿಗೆ ಮರಾಠರ ಸೈನ್ಯವು ಕೇವಲ ವಿನೋದಸ್ವರೂಪವಾಗಿ ತೋರುತ್ತಿತ್ತು. ಮರಾಟರು ಬಾತ್ಯಾಗಿದ್ದರು; ಅವರು ಮುಂಪೆದಿರುಗಿದ ಬಂಟರಾಗಿದ್ದರೂ, ನೋಡಲಿಕ್ಕೆ ಪುಡಿಆಳುಗಳಂತೆ ತೋರುತ್ತಿದ್ದರು. ಆದರೂ ಅವರು ಬಲದಲ್ಲಿ ಅಫಗಾನರನ್ನು ಸರಿಗಟ್ಟುತ್ತಿದ್ದರು. ಈ ದಿನ ಯುದ್ಧಕ್ಕೆ ಮರಾಟರು ತೋಫುಗಳನ್ನು ವಿಶೇಷವಾಗಿ ತಂದಿದ್ದಿಲ್ಲ; ಉಷ್ಟ್ರಾರೂಢರು ಮಾತ್ರ ತೀರ ಸಣ್ಣ ತೋಫುಗಳನ್ನು ತಂದಿದ್ದರು. ಬಳವಂತರಾಯನು ತನ್ನ ದಂಡಿನ ನಟ್ಟನಡುವೆ ನಿಂತುಕೊಂಡು ಎಲ್ಲಕ್ಕೂ ಮುಂಭಾಗದಲ್ಲಿ ಉಷ್ಟ್ರಾರೂಢರನ್ನು ಅಣಿಮಾಡಿದ್ದನು.

ಈ ಮೇರೆಗೆ ಉಭಯ ಸೇನೆಗಳು ಸಜ್ಜಾಗಲು, ಸುಮಾರು ಸಂಜೆಯ ೪।೫ ಗಂಟೆಗಳಿಗೆ ಅಫಗಾನರು ತೋಫುಗಳಿಗೆ ಕೊಳ್ಳಿಯನ್ನು ಕೊಟ್ಟರು: ಪ್ರಚಂಡವಾದ ಸಪ್ಪಳದೊಂದಿಗೆ ಬೆಂಕಿಯ ಮಳೆಯು ಸುರಿಯುತ್ತದೋ ಅನ್ನುವಂತೆ ಭಾಸವಾಯಿತು. ಕಾಳಗದ ಕಣವನ್ನೆಲ್ಲ ಹೊಗೆಯೂ, ಧೂಳಿಯೂ ಮುಚ್ಚಿಹಾಕಿದವು. ಒಬ್ಬರ ಮೋರೆ ಮತ್ತೊಬ್ಬರಿಗೆ ಕಾಣದಂತಾಯಿತು. ತೋಫಿನ ಗುಂಡುಗಳ ಸುರಿಮಳೆಯಿಂದ ಮರಾಟರಲ್ಲಿ ಹಾಹಾಕಾರವೆದ್ದಿತು. ಅವರಲ್ಲಿಯ ಉಷ್ಟ್ರಾರೂಢರು ದಿಕ್ಕುತಪ್ಪಿ ಹೋದರು. ಹೀಗಾಗಿ ಮರಾಟಾವೀರರು ಪಟಪಟನೆ ನೆಲಕ್ಕುರುಳತೊಡಗಲು, ಅವರು ಮೆಲ್ಲಮೆಲ್ಲನೆ ಹಿಂದಕ್ಕೆ ಸರಿಯಲಾರಂಭಿಸಿದರು: ಸಮರಾಂಗಣದಲ್ಲಿ ಶತ್ರುಪಕ್ಷವು ಹಿಂದೆಗೆಯ ಹತ್ತಿದಬಳಿಕ ಕೇಳುವದೇನ್ನು? ಪಠಾ

ಣರ ಆವೇಶವು ಇಮ್ಮಡಿಸಿತು. ಅವರು ತಮ್ಮ ಕುದುರೆಗಳನ್ನು ಮುಂದಕ್ಕೆ ನೂಕಿ ಮರಾಟರ ದಂಡಿನಲ್ಲಿ ಹೊಕ್ಕರು. ಅಷ್ಟರಲ್ಲಿ ತೋಪುಗಳ ವೃಷ್ಟಿಯು ನಿಂತದ್ದರಿಂದ ಸರ್ವತ್ರದಲ್ಲಿ ಸ್ವಚ್ಛವಾದ ಬೆಳಕು ಬೀಳಲು, ತಮ್ಮ ಮೇಲೆ ಸಾಗಿಬಂದ ಅಫಗಾನದೈತ್ಯರನ್ನು ಕಂಡು ಹುಜುರಾತಿಯವರು ಸ್ವಲ್ಪ ಅಂಜಿದರು. ಆದರೂ ಅವರು ಧೈರ್ಯತಾಳಿ ಖಡ್ಗಗಳನ್ನೆತ್ತಿ ತಮ್ಮ ಮೇಲೆ ಸಾಗಿಬರುವವರ ಸಮಾಚಾರವನ್ನು ತಕೊಳ್ಳಲುಪಕ್ರಮಿಸಿದರು. ಆದರೆ ಸಂಖ್ಯೆಯಲ್ಲಿಯೂ, ಬಲದಲ್ಲಿಯೂ ಅಧಿಕವಾಗಿರುವ ಪಠಾಣರು ಅವರಿಗೆ ಅಸಗೊಳ್ಳಲಿಲ್ಲ. ಆಗ ಹುಜುರಾತಿಯವರು ಅವಸಾನಗೆಟ್ಟು ಛಾವಣಿಯ ಕಡೆಗೆ ಓಡತೊಡಗಿದರು. ದಂಡಿನ ಮಧ್ಯಭಾಗದಲ್ಲಿರುವ ಬಳವಂತರಾಯನು ತನ್ನ ಸೈನಿಕರ ಈ ಅವಿವೇಕತನವನ್ನು ನೋಡಿ ಸಂತಪ್ತನಾದನು. ಅವನು ತನ್ನ ಪ್ರತಿಜ್ಞೆಯನ್ನೂ, ಮರಾಟರ ಶೀಲವನ್ನೂ ಸ್ಮರಿಸಿ, ತನ್ನ ಜನರನ್ನು ಕುರಿತು—"ಮೂರ್ಖರಿರಾ, ರಣಹೇಡಿಗಳಂತೆ ಓಡಿಹೋಗುವಿರಾ? ಇದಕ್ಕಾಗಿಯೇ ಪುಣೆಯಿಂದ ಇಲ್ಲಿಗೆ ಬಂದಿರುವಿರೇನು? ಶಾಬಾಸ್! ಓಡಿಹೋಗಿರಿ!! ನಿಮ್ಮ ಹೆಂಡಿರ ಸೀರೆಗಳನ್ನಾದರೂ ಉಟ್ಟುಕೊಳ್ಳಿರಿ! ಷಂಢರಿರಾ, ನಿಮಗೆ ನಾಚಿಕೆ ಬರುವದಿಲ್ಲವೇ? ನಿಮ್ಮ ಕೃಷ್ಣಮುಖವನ್ನು ಶ್ರೀಮಂತರಿಗೆ ಏನೆಂದು ತೋರಿಸುವಿರಿ? ಶತ್ರುಗಳಿಗೆ ಬೆನ್ನತೋರಿಸುವದು ಮರಾಟರ ಶೀಲವೇ? ನಿಮ್ಮ ಹೆಂಡಿರ, ಅಕ್ಕತಂಗಿಯರ ಮಾನವನ್ನು ಪಠಾಣರು ಸೂರೆಗೊಳ್ಳುವದನ್ನು ಕಣ್ಣುಮುಚ್ಚಿ ನೋಡಬೇಕೆನ್ನುವಿರಾ? ವಿಚಾರಮಾಡಿರಿ. ಮನುಷ್ಯನಿಗೆ ಎಂದಾದರೂ ಮರಣವು ಸಿದ್ಧವಿರುವದರಿಂದ ಸತ್ಕುಲಪ್ರಸೂತರಾದವರು ನನ್ನ ಮಾರ್ಗವನ್ನು ಅವಲಂಬಿಸಿರಿ; ಹಾಗಲ್ಲದವರು ಮೋರೆಗೆ ಕಪ್ಪುಹಚ್ಚಿಕೊಂಡು ಬೇಕಾದಲ್ಲಿಗೆ ಓಡಿಹೋಗಿರಿ" ಎಂದು ನುಡಿದು ಕಣ್ಣು ಕೆಕ್ಕರಿಸಿ, ಅವಡುಗಳನ್ನು ಕಚ್ಚುತ್ತ ಪಠಾಣರ ಸೈನ್ಯದಲ್ಲಿ ನುಗ್ಗಿದನು. ಆತನ "ಹರಹರ ಮಹಾದೇವ" ಎಂಬ ಗರ್ಜನೆಯನ್ನು ಕೇಳಿ ನಾಚಿಕೊಂಡ ಹುಜುರಾತಿಯವರು ಒಮ್ಮೆಲೆ ಹಿಂದಿರುಗಿ ಬಳವಂತರಾಯನ ಅನುಕರಣವನ್ನು ಮಾಡಿದರು. ಕೂಡಲೆ ಕತ್ತಿಗಳು, ಭಾಲೆಗಳು ತಾಕಲಾಡಹತ್ತಿ ಕ್ಷಣದಲ್ಲಿ ಕಣವು ಹೆಣಗಳರಾಶಿಯಿಂದ ತುಂಬಿಹೋಯಿತು. ರಕ್ತವು ಸರವುಗಟ್ಟಿ ಹರಿಯತೊಡಗಿತು. ಉಭಯಪಕ್ಷಗಳಲ್ಲಿಯೂ ಅಸಂಖ್ಯಜನರು ಮಡಿದರು. ಇದು ಏನು ದೇವದಾನವರ ಯುದ್ಧವೋ? ಅಥವಾ ಸಂಸಪ್ತಕ ಅರ್ಜುನರ ಸಂಗ್ರಾಮವೋ ಎಂಬಂತೆ ಭಾಸವಾಯಿತು. ಬಳವಂತರಾಯನು ಪ್ರತ್ಯಕ್ಷ ಚಂಡಭೀಮನಂತೆ ರಣಪಾಂಡಿತ್ಯವನ್ನು ತೋರಿಸುತ್ತ ಅಫಗಾನರ ರುಂಡಗಳನ್ನು ಕಡಿಕಡಿದುಚಲ್ಲುತ್ತ ತನ್ನ ಸೈನಿಕರನ್ನು ಹುರಿದುಂಬಿಸುತ್ತಿದ್ದನು. ಆಗ ಆತನು ಅಫ

ಗಾಸನ್ನು ಸಂಹರಿಸಬಂದ ಕಾಲನಂತೆ ಕಂಡನು. ಆದರೆ ಮರಾಟರ ದೈವಬಲವು ಪ್ರತಿಕೂಲವಿದ್ದದರಿಂದ ಆ ವೀರನ ಆಯುಸ್ಸೂತ್ರವು ಬಹಳಹೊತ್ತು ತಡೆಯಲಿಲ್ಲ. ಉಭಯಪಕ್ಷದವರಲ್ಲಿಯೂ ಉಷ್ಟ್ರಾರೂಢರು ಗುಂಡುಗಳನ್ನು ಹಾರಿಸುತ್ತಿದ್ದದರಿಂದ ಎಲ್ಲಿಂದಲೋ ಒಂದುಗುಂಡು ಬಂದು ಬಳವಂತರಾಯನ ವಕ್ಷಸ್ಥಳವನ್ನು ಸೇರಿತು. ಅದರಿಂದ ಆ ನರವೀರನು ಹಾಯ್, ಹಾಯ್ ಎನ್ನುತ್ತ ನೆಲಕ್ಕುರುಳಿದನು. ಆ ಕೂಡಲೆ ಪಠಾಣರಲ್ಲನೇಕರು ಅವನನ್ನು ಮುತ್ತಿ ರುಂಡವನ್ನು ಕೊಯ್ದುಕೊಳ್ಳುವ ಸಾಹಸವನ್ನು ನಡಿಸಿದರು. ಆದರೆ ಖಂಡೇರಾವ ನಿಂಬಾಳಕರನೆಂಬ ಮರಾಟವೀರನು ಬಳವಂತರಾಯನ ಶವದಮೇಲೆ ಬಿದ್ದು ೨೦-೩೦ಜನ ಪಠಾಣರ ಖಡ್ಗಗಳ ಪೆಟ್ಟುಗಳನ್ನು ಸಹಿಸಿಕೊಂಡು ಶವದ ರುಂಡವನ್ನು ಮುಸಲ್ಮಾನರಿಗೆ ಸಿಗಗೊಡಲಿಲ್ಲ. ಅಷ್ಟರಲ್ಲಿ ಅನೇಕ ಮರಾಟರು ಅಲ್ಲಿಗೆ ಬಂದು ಮುಸಲ್ಮಾನರನ್ನು ಹಣಿದು ಶವವನ್ನು ಬಿಡಿಸಿಕೊಂಡರು.

ಬಳವಂತರಾಯನು ಮರಣಹೊಂದಿದರೂ ಆತನ ಸೈನಿಕರು ಆವೇಶಗುಂದಲಿಲ್ಲ. ಅವರು ಮೊದಲಿಗಿಂತ ಹೆಚ್ಚು ರೊಚ್ಚಿನಿಂದ ಕಾದಾಡಲಾರಂಭಿಸಿದರು. ಈ ಸುದ್ದಿಯು ಹಾಹಾಎನ್ನುವಷ್ಟರಲ್ಲಿ ಸುತ್ತಲೂ ಪಸರಿಸಿತು. ಸಿಂಧೆ-ಹೋಳಕರರು ಸಸೈನ್ಯವಾಗಿ ದೂರನಿಂತುಕೊಂಡು ತಮ್ಮ ಪಕ್ಷಕ್ಕೆ ಸೋಲುಬಂದರೆ ಸಹಾಯಮಾಡಬೇಕೆಂದು ನಿರೀಕ್ಷಿಸುತ್ತಿದ್ದರು. ಬಳವಂತರಾಯನು ಮಡಿದ ಸುದ್ದಿಯನ್ನು ಕೇಳಿ ಜನಕೋಜಿಯು ಮರುಗಿ—ಹಾಯ್! ಒಂದು ರತ್ನವು ಹೋಯಿತು, ಎಂಬ ಉದ್ಗಾರತೆಗೆದು, ಮರಾಟರಸೇನಾಪತಿಯು ಸತ್ತನೆಂದು ಸಾಗಿಬರುತ್ತಿರುವ ಪಠಾಣರಮೇಲೆ ಬಿದ್ದನು. ಆತನ ಹಾಗು ಹೋಳಕರನ ಹೊಸದಂಡುಗಳು ಯುದ್ಧಕ್ಕೆ ಬಂದದ್ದರಿಂದ ಮುಸಲ್ಮಾನರು ಬೆದರಿದರು. ಅವರು ಸಿಂಧೇನ ಸೈನಿಕರ ಹೊಡತಕ್ಕೆ ತ್ರಸ್ತರಾಗಿ ಆ ಕಗ್ಗತ್ತಲೆಯಲ್ಲಿ ದಾರಿಸಿಕ್ಕತ್ತ ಓಡಿಹೋದರು. ಮರಾಟರು ವಿಜಯಶಾಲಿಗಳಾದರು. ಬಳಿಕ ಜನಕೋಜಿಯು ಹಿಲಾಲುಗಳನ್ನು ಹಚ್ಚಿಸಿ ಬಳವಂತರಾಯನ ಶವವನ್ನು ಪಲ್ಲಕ್ಕಿಯಲ್ಲಿ ಮಲಗಿಸಿಕೊಂಡು ಜಯಭೇರಿಯನ್ನು ಹೊಡಿಸುತ್ತ ಛಾವಣಿಗೆ ಬಂದನು.

ಈ ದಿನ ಮರಾಟರಿಗೆ ಜಯವಾಗಿದ್ದರೂ ಸೇನಾಪತಿಯ ಮರಣದಿಂದ ಅವರಲ್ಲಿ ವಿಷಾದವು ಉಂಟಾಗಿತ್ತು; ಈ ಸಂಗತಿಯನ್ನು ಕೇಳಿ ಭಾವೂಸಾಹೇಬನು ಬಳವಂತರಾಯನ ಶವದ ಎದುರಿಗೆ ಪಾದಚಾರಿಯಾಗಿ ಬಂದನು. ಆತನು ಪಲ್ಲಕ್ಕಿಯಲ್ಲಿರುವ ಆ ವೀರಪುಂಗವನ ಕಲೇವರವನ್ನು ನೋಡಿ—"ಬಳವಂತರಾವ, ನಮ್ಮನ್ನು ಅಗಲಿಹೋದೆಯಾ? ಈಶೇಚ್ಛೆಗೆ ಯತ್ನವಿಲ್ಲ" ಎಂದು ನುಡಿದು ಕಣ್ಣುತುಂಬ

ಸೀರುತಂದನು. ಬಳಿಕ ಆತನು ತನ್ನ ಹಾಗು ಸೈನಿಕರ ಉತ್ಸಾಹವು ಭಂಗವಾಗಬಾರದೆಂದು ದುಃಖವನ್ನು ಮರೆತುಬಿಟ್ಟು, ಆ ಶವವನ್ನು ಬಳವಂತರಾಯನ ರಾಹುಟಿಯವರೆಗೆ ಸಾಗಿಸಿಕೊಂಡು ಬಂದನು. ಆಗ ಆತನು ತನ್ನ ಮೈಮೇಲಿನ ಶಲ್ಲೆಯನ್ನು ತೆಗೆದು ನೆಲದಮೇಲೆ ಹಾಸಿ ಪಲ್ಲಕ್ಕಿಯಿಂದ ಶವವನ್ನು ಇಳಿಸಿ ಅದರಮೇಲೆ ಮಲಗಿಸಹೇಳಿದನು. ದೀರ್ಘನಿದ್ರಾಸಕ್ತನಾದ ಬಳವಂತರಾಯನ ಕಲೇವರವು ಊರ್ಧ್ವವನ್ನು ಲಕ್ಷಿಸುವಂತೆ ಆ ಶಲ್ಲೆಯಮೇಲೆ ಮಲಗಿಕೊಂಡಿತು. ಭಾವೂಸಾಹೇಬನು ಎಷ್ಟು ನುಂಗಿದರೂ ದುಃಖವು ನಿಲ್ಲದ್ದರಿಂದ 'ಹಾ! ನರವೀರನೇ' ಎಂದು ನಿಟ್ಟುಸಿರುಬಿಟ್ಟು ಅದರ ಬಳಿಯಲ್ಲಿಯೇ ಕುಳಿತುಕೊಂಡನು.

## ೧೨ನೆಯ ಪ್ರಕರಣ.

# ಸತೀಧರ್ಮ.

ಕುಟುಂಬದೊಳಗಿನ ಮುಖ್ಯಮನುಷ್ಯನು ಭರಭರಾಟಿಯ ಸಂಸಾರದಲ್ಲಿ ಆಕಸ್ಮಾತ್ತಾಗಿ ಮೃತ್ಯುಮುಖದಲ್ಲಿ ಬಿದ್ದನೆಂದರೆ, ಆ ಕುಟುಂಬದವರ ಶೋಕವು ಎಷ್ಟು ದುಸ್ಸಹವಾಗುವದೆಂಬದರ ಅನುಭವವು ವಾಚಕರಲ್ಲಿ ಅನೇಕರಿಗೆ ಇರಬಹುದು! ಬಳವಂತರಾಯನ ಪ್ರೇತವು ರಾಹುಟಿಯ ಬಳಿಗೆ ಬಂದಕೂಡಲೆ ಆತನ ಆಪ್ತರು ಹಾಯ್, ಹಾಯ್ ಎಂದು ಆಕ್ರೋಶಮಾಡುತ್ತ ವರ್ಣಿಸಲಸದಳವಾದ ಕೋಲಾಹಲವನ್ನೆಬ್ಬಿಸಿದರು. ಹೆಂಗಸರ ಶೋಕಕ್ಕಂತೂ ಪಾರವೇ ಉಳಿಯಲಿಲ್ಲ. ಆದರೆ ಈ ಪ್ರಸಂಗದಲ್ಲಿ ತಾಯಿಬಾಯಿಯು ಮಾತ್ರ ಇರಲಿಲ್ಲ; ಗಂಡನು ತನಗೆ ಭೆಟ್ಟಿಯಾಗಿ ಹೋದವೇಳೆಯಿಂದ ಆಕೆಯ ವೃತ್ತಿಯಲ್ಲಿ ಬಹಳ ಅಭ್ಯಂತರವಾಗಿತ್ತು. ಆಕೆಗೆ ಭಾವೀ ಆಪತ್ತಿನವಿಷಯವಾಗಿ ಪೂರ್ಣ ಸಂಶಯವುಂಟಾಗಿತ್ತು. ಆದ್ದರಿಂದ ಆಕೆಯು ಜಗದಂಬೆಯ ಸನ್ನಿಧಿಗೆ ಹೋಗಿ ಧ್ಯಾನಸ್ಥಳಾಗಿದ್ದಳು. ಹೊತ್ತುಮುಣುಗಿ ಎಲ್ಲಕಡೆಗೂ ಅಂಧಃಕಾರವು ವ್ಯಾಪಿಸಿತು. ಆ ಅಂಧಃಕಾರದ ಭಯಂಕರಸ್ವರೂಪವೇ ಮೂರ್ತಿಮಂತವಾದಂತೆ, ಬಳವಂತರಾಯನ ಕಲೇವರದ ದರ್ಶನದಿಂದ ಸ್ವಜನರ ಕೋಲಾಹಲಧ್ವನಿಯು ಧ್ಯಾನಸ್ಥಳಾದ ಆ ಸಾಧ್ವಿಯ ಹೃದಯವನ್ನು ತುಂಬಿತು. ಆ ಧ್ವನಿಯನ್ನು ಕೇಳಿ ಆ ಸತಿಯು ಕೈಯೊಳಗಿನ ಜಪಮಾಲೆಯನ್ನು ಕೆಳಗಿಟ್ಟು "ಜಗದಂಬೇ, ನಿನ್ನ ಇಚ್ಛೆಯು! ನನ್ನನ್ನು ಮಾತ್ರ

ಉಡಿಯಲ್ಲಿ ಹಾಕಿಕೋ" ಎಂದು ನುಡಿದು, ದೇವಿಗೆ ಅರಶಿನ-ಕುಂಕುಮಗಳನ್ನು ಏರಿಸಿ, ತಾನೂ ಹಣೆತುಂಬ ಭವ್ಯವಾಗಿ ಕುಂಕುಮವನ್ನು ಹಚ್ಚಿಕೊಂಡು ಶಾಂತಚಿತ್ತದಿಂದ ಹೊರಗೆ ಬಂದಳು. ಬಳಿಕ ಆಕೆಯು ಗಂಡನ ಶವದಹತ್ತಿರ ಕುಳಿತು ಶಿರವನ್ನು ತನ್ನ ತೊಡೆಯಮೇಲಿಟ್ಟುಕೊಂಡು ಕಣ್ಣುತುಂಬಿ ನೀರುತಂದು ನುಡಿದ ಳೇನಂದರೆ—"ಮಹಾರಾಜ, ನನ್ನೊಡನೆ ಮಾತನಾಡಿಹೋಗಿ ಇನ್ನೂ ಎರಡುಪ್ರಹರಕಾಲವು ಕೂಡಾ ಆಗಿಲ್ಲವಲ್ಲ? ಇಷ್ಟರಲ್ಲಿಯೇ ನೀವು ನಮ್ಮನ್ನು ತೊಲಗಿ ಹೋಗಬಹುದೇ? ನಾನು ನಿಮ್ಮ ಅರ್ಧಾಂಗಿನಿಯಲ್ಲವೇ? ರಾವ, ನನ್ನ ಸಂಗಡ ಒಂದು ಮಾತನ್ನಾದರೂ ಆಡದಿರುವದೇಕೆ? ಲಗ್ನವಾದಂದಿನಿಂದ ನನ್ನನ್ನು ಪ್ರೀತಿಸುತ್ತಬಂದ ನೀವು, ಈಗ ಹೀಗೆ ಕಠಿಣಚಿತ್ತರಾಗಬಹುದೇ? ನನ್ನಿಂದ ಸಹಸ್ರ ಅಪರಾಧಗಳು ಆಗಿರಬಹುದು. ಅವನ್ನೆಲ್ಲ ನಿಮ್ಮ ಹೊರತು ಇನ್ನಾರು ಕ್ಷಮಿಸುವರು? ಮಹಾರಾಜ, ನಾನೂ ನಿಮ್ಮೊಡನೆ ಸ್ವರ್ಗಕ್ಕೆ ಬರುವೆನು; ಚರಣಸನ್ನಿಧಿಯಲ್ಲಿ ಸ್ಥಳ ದೊರೆಯಬೇಕು."

ಈ ರೀತಿಯಾಗಿ ಶೋಕವನ್ನು ಮಾಡುವಾಗ ಆ ಸಾಧ್ವಿಯ ಮೋರೆಯಮೇಲೆ ಪಾತಿವ್ರತ್ಯದ ವಿಲಕ್ಷಣವಾದ ತೇಜಸ್ಸು ಮಿನುಗುತ್ತಿತ್ತು; ಆಕೆಯಲ್ಲಿ ಸಮಾಧಾನವು ಅಂಕುರಿಸಿತ್ತು; ಪತಿಯ ಚರಣಗಳನ್ನೇ ಆಕೆಯು ಲಕ್ಷಿಸುತ್ತಿದ್ದಳು. ಈ ಜಡದೇಹವನ್ನು ತ್ಯಾಗಮಾಡಿ ಪತಿಯಲ್ಲಿ ಯಾವಾಗ ಐಕ್ಯನಾದೇನೆಂಬ ಉತ್ಕಂಠೆಯು ಹೆಚ್ಚಿದ್ದರಿಂದ ಪ್ರಾಪಂಚಿಕ ಯಾವ ವಿಷಯಗಳೂ ಆಕೆಯನ್ನು ಮೋಹಗೊಳಿಸಲಿಲ್ಲ. ಶವದ ಕಿವಿಯಲ್ಲಿರುವ ದೊಡ್ಡ ಮುತ್ತುಗಳ ಕಡೆಗೆ ಆಕೆಯ ಮನಸ್ಸು ಹರಿಯಲಿಲ್ಲ; ಆಕೆಗೆ ಬೆರಳುಗಳಲ್ಲಿರುವ ಉಂಗುರಗಳನ್ನು ಉಚ್ಚಿಕೊಳ್ಳುವ ಇಚ್ಛೆಯಾಗಲಿಲ್ಲ; ಹಣದ ಪೆಟ್ಟಿಗೆಯ ಬೀಗದಕೈಗಳನ್ನು ಸ್ವಾಧೀನಪಡಿಸಿಕೊಳ್ಳಲು ಆಕೆಯು ಆತುರಪಡಲಿಲ್ಲ; ಗಂಡನೊಡನೆಯೇ ಆಕೆಯ ಪಂಚಪ್ರಾಣಗಳು ಹೊರಟುಹೋಗಿರುವಂತೆ ಅವಳ ಸ್ಥಿತಿಯಾಯಿತು. ಅಷ್ಟರಲ್ಲಿ ಅಪ್ಪಾಜಿಯು ಹೊರಗಿನಿಂದ ಬಂದು ತಂದೆಯ ಶವದಮೇಲೆ ಬಿದ್ದು ಹೊರಳಾಡ ಹತ್ತಿದನು. ಆ ಹುಡುಗನ ದುಃಖವನ್ನು ಕಂಡು ನೆರೆದ ಎಲ್ಲ ಜನರ ಕಣ್ಣುಗಳಲ್ಲಿಯೂ ಅಶ್ರುಗಳಾಡಿದವು. ಬಳಿಕ ಅಪ್ಪಾಜಿಯು ತಾಯಿಯ ಸಹಗಮನದ ನಿಶ್ಚಯವನ್ನು ತಿಳಿದು ಆಕೆಯ ಕೊರಳಿಗೆ ಜೋತುಬಿದ್ದು—ಅವ್ವಾ, ಅವ್ವಾ, ನೀನೂ ನನ್ನನ್ನು ಬಿಟ್ಟು ಹೋಗುವಿಯಾ? ನನ್ನ ವಿಷಯವಾಗಿರುವ ನಿನ್ನ ಪ್ರೇಮವೆಲ್ಲ ಒಮ್ಮೆಲೆ ನಷ್ಟವಾಯಿತೇ? ಅವ್ವಾ, ನೀನು ಸಾಯಬೇಡ; ಅಪ್ಪನೂ ಹೋದನು, ನೀನೂ ಹೋದರೆ ನಾನು ಯಾರ ಮೋರೆಯನ್ನು ನೋಡಲಿ" ಎಂದು ನುಡಿದು

ಧೈರ್ಯದಿಂದ ತಾಯಿಯನ್ನು ನೋಡಿದನು: ಆಗ ಆ ಸಾಧ್ವಿಯು ಮಗನ ಆಲಿಂಗನವನ್ನು ಬಿಡಿಸಿಕೊಂಡು—“ಅಪ್ಪಾ ಮಗನೇ, ಈಗ ನೀನು ನನ್ನನ್ನು ವೃಥಾ ಮೋಹಪಾಶದಲ್ಲಿ ಕೆಡಹಬೇಡ; ನಿನ್ನನ್ನು ದೇವರೇ ಸಂರಕ್ಷಿಸುವನು. ಆತನನ್ನೇ ನೀನು ನಂಬು; ನೀನು ನಿನ್ನ ಪ್ರಾರಬ್ಧದ ಭೋಕ್ತಾರನಿರುತ್ತೀ; ನಾನು ಅವರೊಡನೆ ಸ್ವರ್ಗಕ್ಕೆ ಹೋಗುವ ನಿಶ್ಚಯವನ್ನು ಮಾಡಿದ್ದೇನೆ. ಇನ್ನು ನಮ್ಮ ಆಶೆಯನ್ನು ಬಿಡು” ಎಂದಳು. ಆದರೂ ಆ ಬಾಲಕನು ಪುನಃಪುನಃ ತಾಯಿಯನ್ನು ತೆಕ್ಕೆಬಿದ್ದು ಅಂಗಲಾಚಿ ಬೇಡಿಕೊಳ್ಳಹತ್ತಿದನು. ಆ ಶೋಕಾಕುಲಪ್ರಸಂಗವನ್ನು ನೋಡಿ ಭಾವೂಸಾಹೇಬನು ಸ್ವಲ್ಪ ದೂರಸರಿದು ನಿಂತುಕೊಂಡಿದ್ದರೂ ಮುಂದಕ್ಕೆಬಂದು—“ತಾಯಿಸಾಹೇಬ, ಅಪ್ಪಾಜಿಯನ್ನು ಮುಂದಕ್ಕೆ ಕರೆದುಕೊಳ್ಳಿರಿ; ಆತನು ಇನ್ನೂ ಚಿಕ್ಕವನಿರುವನು; ಅವನನ್ನು ಯಾರು ಸಂರಕ್ಷಿಸುವರು? ನೀವು ಆ ಕಂದಮ್ಮನ ಸಂಗೋಪನವನ್ನು ಮಾಡಿದರೆ ನಾನು ಆತನನ್ನು ‘ಸವಾಯಿಬಳವಂತ’ನನ್ನಾಗಮಾಡುವೆನು” ಎಂದು ನುಡಿದನು. ಆಗ ತಾಯಿಬಾಯಿಯು ವಿನಯದಿಂದ—“ಜನ್ಮದಾತೃವಾದ ಪರಮಾತ್ಮನು ಅಪ್ಪಾಜಿಯನ್ನು ಸಂರಕ್ಷಿಸುವನು. ಆತನು ದೌಲತ್ತಿನ ಚಾಕರಿಯನ್ನು ಮಾಡಿದರೆ ನೀವು ಆತನನ್ನು ಮುಂದಕ್ಕೆ ತಂದೇತರುವಿರಿ. ಆದ್ದರಿಂದ ನಾವು ಆತನ ಚಿಂತೆಯನ್ನು ಮಾಡುವ ಕಾರಣವಿಲ್ಲ. ಆದರೆ ತಮಗೆ ನನ್ನ ಪ್ರಾರ್ಥನೆಯಿಷ್ಟೇ; ತಾವು ನನ್ನ ಸಹಗಮನಕ್ಕೆ ಅನುಕೂಲತೆಯನ್ನು ಒದಗಿಸಿಕೊಡುವದಾಗಬೇಕು;” ಎಂದು ಮಾತಾಡಿದಳು. ಆಕೆಯ ಕಡೆಯ ಶಬ್ದಗಳನ್ನು ಕೇಳಿ ಭಾವೂಸಾಹೇಬನು ಸಹಗಮನದ ಸಿದ್ಧತೆಯ ವಿಷಯವಾಗಿ ಸೇವಕರನ್ನು ಆಜ್ಞಾಪಿಸಿದನು.

ರಂಗೂಬಾಯಿಯು ಇಷ್ಟು ಹೊತ್ತಿನವರೆಗೆ ರಾಹುಟಿಯ ಒಳಭಾಗವಲ್ಲಿಯೇ ನಿಂತುಕೊಂಡಿದ್ದಳು. ಅತ್ತತ್ತು ಆಕೆಯ ಕಣ್ಣುಗಳು ಉಬ್ಬಿದ್ದವು. ತಾಯಿಬಾಯಿಯು ನಿಶ್ಚಯವಾಗಿ ಸತೀಹೋಗುವಳೆಂಬದನ್ನು ಕೇಳಿ ಆಕೆಯ ಧೈರ್ಯವು ನಷ್ಟವಾಯಿತು. ಆಕೆಯ ಪಾಲಿಗೆ ಇಂದೇ ಪರದೇಶಿತನವು ಬಂದಂತಾಯಿತು: ಅವಳ ಹೃದಯದಲ್ಲಿ ಕಲ್ಪನೆಗೆ ನಿಲುಕದಷ್ಟು ದುಃಖದ ಮಹಾಪೂರವು ಬಂದಿತು. ಯಾವನೊಬ್ಬ ಪ್ರವಾಸಿಯು ಜಲಸಂಚಾರಮಾಡುವಾಗ ಗಾಳಿಯಹೊಡತಕ್ಕೆ ಸಿಕ್ಕ ನೌಕೆಯು ಬಂಡೆಗಲ್ಲಿಗೆ ಅಪ್ಪಳಿಸಿದರೆ ಆಗುವ ಅವನ ಸ್ಥಿತಿಯಂತೆ ಆಕೆಯ ಗತಿಯಾಯಿತು. ಆಕೆಯವಿಷಯವಾಗಿ ಕನಿಕರಪಡತಕ್ಕವರೆಂದರೆ ಜಗತ್ತಿನಲ್ಲಿ ತಾಯಿಬಾಯಿಯ ಹೊರತು ಇನ್ನಾರೂ ಇರಲಿಲ್ಲ. ಈಗ ಆಕೆಯೂ ಅಂತರಿಸತಕ್ಕವಳಾದ್ದರಿಂದ ಜಗತ್ತೇ ಆಕೆಗೆ ಶೂನ್ಯಪ್ರಾಯವಾಯಿತು. ಆಗ ಆಕೆಯು ನಾಚಿಕೆಯನ್ನು

ತೊರೆದು, ರಾಹುಟಿಯಿಹೊರಗೆಬಂದು ತಾಯಿಬಾಯಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು—"ಅತ್ತೆಯವರೇ, ನನ್ನ ಕಡೆಗೆ ನೋಡಬೇಕು. ಅನಾಥಳಾದ ನನ್ನ ಸಲುವಾಗಿಯಾದರೂ ಬದುಕಿ ಉಳಿಯಬೇಕು. ದೇವರು ಸಹ ನನ್ನ ಸಲುವಾಗಿ ಕಠಿಣಚಿತ್ತನಾಗಿರುವನು. ನಿಮ್ಮ ಒಂದು ಜನ್ಮದಹೊರತು ನನ್ನ ವಿಷಯವಾಗಿ ಇನ್ನಾರು ಮರಗುವರು? ದಿಕ್ಕಿಲ್ಲದವಳೆಂದು ಇಷ್ಟುದಿನ ಈ ಪರಿ ಪ್ರೇಮಮಾಡಿ ಇಂದು ಹೀಗೆ ನನ್ನನ್ನು ನಡುನೀರಿನಲ್ಲಿ ಕೈಬಿಟ್ಟುಹೋಗುವರೇ? ಹಾಯ್‌ಹಾಯ್, ಪ್ರಾರಬ್ಧವೇ ಇನ್ನಾರಿಗೆ ಮೊರೆಯಿಡಲಿ? ನನ್ನ ಕಷ್ಟವನ್ನು ಯಾರಮುಂದೆ ತೋಡಿ ಕೊಳ್ಳಲಿ?" ಎಂದು ನುಡಿಯುತ್ತ ಗಟ್ಟಿಯಾಗಿ ಅಳಲಾರಂಭಿಸಿದಳು. ಶಿವ ಶಿವ! ಆ ಅಬಲೆಯ ಪ್ರಲಾಪವು ಪಾಷಾಣವನ್ನು ಸಹ ಕರಗಿಸಿತು! ಆಗ ಆ ತಾಯಿಬಾಯಿಯು ಆಕೆಯನ್ನು ಅಪ್ಪಿಕೊಂಡು "ರಂಗೂ, ಇನ್ನೇನುಮಾಡಲವ್ವಾ! ಮುಂದೆ ನಿನ್ನ ಗತಿಯೇನೆಂಬ ಸಂಗತಿಯು ನೆನಪಾದರೆ ನನಗೆ ಹ್ಯಾಗೆ ಹ್ಯಾಗೋ ಆಗುತ್ತದೆ. ಆದರೆ ರಂಗೂ, ನಿನ್ನ ಅವಸ್ಥೆಯನ್ನು ನೋಡಿದರೆ ವಿಧವೆಯರು ಜಗತ್ತಿನಲ್ಲಿ ಎಂದೂ ಇರಬಾರದೆಂದು ಅನಿಸುತ್ತದೆ. ರಂಗೂ, ಆಗ್ಗೆ ನೀನೂ ಸತ್ತುಹೋಗಿದ್ದರೆ, ಇಷ್ಟೆಲ್ಲ ಭವಣಿಯನ್ನು ನೀನೆಲ್ಲಿ ಉಣ್ಣುತ್ತಿದ್ದಿ? ನೋಡು, ನೀನು ಉಂಡರೆ ಕಷ್ಟ; ಉಪವಾಸವಿದ್ದರೆ ಕಷ್ಟ; ವಸ್ತ್ರಒಡವೆಗಳನ್ನಿಟ್ಟರೆ ಕಷ್ಟ; ಬಿಟ್ಟರೆ ಕಷ್ಟ; ಸಾಕು ನಮ್ಮವ್ವಾ! ಏಳೇಳುಜನ್ಮದಲ್ಲೂ ವಿಧವೆಯಾಗಿ ಜೀವಿಸಬಾರದುಕಂಡೆಯಾ! ನಿನ್ನ ಹಣೇಬರಹದಲ್ಲಿ ಏನಿರುವದೋ ಅದನ್ನು ನೀನು ಅನುಭವಿಸಿಯೇತೀರಬೇಕು. ರಂಗೂ, ಸತೀಧರ್ಮವು ಬಹಳ ಕಠಿಣವಿರುವದು; ಅದನ್ನು ಕೊನೆಯವರೆಗೆ ಪಾಲಿಸಿದವಳೇ ನಿಜವಾದ ಸತಿಯು! ಇರಲಿ. ಇನ್ನು ನೀನು ನನಗೆ ಅಡ್ಡಬರಬೇಡ; ಶಾಂತಚಿತ್ತದಿಂದ ಪತಿಯನ್ನು ಹೊಂದಲು ಒಪ್ಪಿಗೆಯನ್ನುಕೊಡು" ಎಂದು ನುಡಿದು, ಭಾವೂಸಾಹೇಬನ ಕಡೆಗೆ ಹೊರಳಿ—ಒಂದೇಒಂದು ಭಿಕ್ಷೆಯನ್ನು ನೀಡಬೇಕು. ನನಗೆ ಯಾವ ಚಿಂತೆಯೂ ಇಲ್ಲ; ಈ ಅನಾಥೆಯಾಗಿರುವ ಹುಡುಗೆಯವಿಷಯವಾಗಿ ಮಾತ್ರ ನನಗೆ ಸಮಾಧಾನವಿಲ್ಲ; ಇವಳನ್ನು ಇವಳ ಅತ್ತೆಯಮನೆಗೆ ಮುಟ್ಟಿಸುವ ವಚನಕೊಡಬೇಕು. ಇಷ್ಟೇ ನನ್ನ ಬೇಡಿಕೆಯು; ಎಂದು ಕೈಮುಗಿಯಲು, ಭಾವೂಸಾಹೇಬನು ರಂಗೂಬಾಯಿಯನ್ನು ನೋಡಿ ಆಕೆಗೆ ಅಭಯಕೊಟ್ಟನು. ಆದ್ದರಿಂದ ತಾಯಿಬಾಯಿಯು ಸ್ವಸ್ಥಚಿತ್ತಳಾಗಿ ಮುಂದಿನ ಕೆಲಸಕ್ಕೆ ತೊಡಗಿದಳು.

ನಮ್ಮ ಭರತಭೂಮಿಯಲ್ಲಿ ಸತಿಗೆ ಬಹಳ ಮಹತ್ವವುಂಟು. ಗಂಡನೊಡನೆ ಸಹಗಮನವನ್ನು ಮಾಡುವ ಹೆಂಗಸರು ದೇವತೆಗಳಂತೆ ಪೂಜಾರ್ಹರಿರುವರು. ಸತೀ

ಹೋಗುವ ಕಾಲದಲ್ಲಿ ಆ ಸ್ತ್ರೀಯು ನುಡಿದ ವಾಕ್ಯವು ಎಂದೂ ಸುಳ್ಳಾಗುವದಿಲ್ಲ. ಇಂಥ ಹೆಂಗಸರ ಯೋಗ್ಯತೆಯನ್ನು ವೇದವು ಕೂಡಾ ವರ್ಣಿಸುತ್ತದೆ. ಪೂರ್ವಕಾಲದಲ್ಲಿ ಆರ್ಯಸ್ತ್ರೀಯರು ತಮ್ಮ ಪಾತಿವ್ರತ್ಯದ ಪ್ರಭಾವದಿಂದ ವೈಧವ್ಯವನ್ನು ಹೊಂದುತ್ತಿರಲಿಲ್ಲ. ಒಂದುವೇಳೆ ದೈವವಶಾತ್ ಪ್ರಾಪ್ತವಾದರೂ ತಮ್ಮ ಪುಣ್ಯವಿಶೇಷದಿಂದ ಪತಿಯ ಪ್ರಾಣವನ್ನು ಪುನಃ ಪಡೆಯುತ್ತಿದ್ದರು. ಇಲ್ಲವೆ ಪತಿಯಸಂಗಡ ತಮ್ಮ ಜಡದೇಹವನ್ನು ತ್ಯಾಗಮಾಡಿ ಔರ್ಧ್ವದೇಹಿಕ ಪತಿಯ ಸಾನ್ನಿಧ್ಯವನ್ನು ಸೇರುತ್ತಿದ್ದರು. ಆದರೆ ಬರಬರುತ್ತ ಯುಗಮಾನದಿಂದ ಸ್ತ್ರೀಯರಲ್ಲಿ ಪತಿಪ್ರೇಮವು ಕಡಿಕಡಿಮೆಯಾಗತೊಡಗಿತು. ಶರೀರವ್ಯಾಮೋಹವು ಹೆಚ್ಚಿತು. ಗಂಡನಸಲುವಾಗಿ ಪ್ರಾಣಕೊಡುವದೆಂದರೆ, ಜಡವೆನಿಸತೊಡಗಿತು. ಇಂಥ ಪರಿಸ್ಥಿತಿಯಲ್ಲಿಯೂ ನಿಜವಾದ ಸತಿಯರು ತಮ್ಮ ಧರ್ಮವನ್ನು ನಿಶ್ಚಯದಿಂದ ನಡಿಸುತ್ತಿದ್ದರು. ಆದ್ದರಿಂದ ಉಳಿದ ಸ್ತ್ರೀಯರು ಲೋಕಲಜ್ಜೆಯಿಂದಾದರೂ ಸತೀಧರ್ಮವನ್ನು ಪಾಲಿಸಬೇಕಾಗುತ್ತಿತ್ತು. ಪವಿತ್ರಪ್ರೇಮಶೂನ್ಯವಾದ ಇಂಥ ಲೋಕಾಡಂಬರದ ಸತೀಧರ್ಮದಿಂದ ಜಗತ್ತಿಗೆ ಕ್ಷೇಮವಾಗಬಹುದೇ? ಸ್ತ್ರೀಯರ ಗೋಳಾಟವು ಹೆಚ್ಚಿತು. ಆಗ ಧರ್ಮಜ್ಞಾನಿಗಳು ಕಾಲಮಾನದಂತೆ ಶಾಸ್ತ್ರಸಮ್ಮತವಾದ ವಿಧವಾಧರ್ಮವನ್ನು ಬಳಿಕೆಯಲ್ಲಿ ತಂದರು. ಅದೂಕೂಡಾ ಈಚೀಚೆಗೆ ಶೈಥಿಲ್ಯವನ್ನು ಹೊಂದುತ್ತ ನಡೆದಿರುವದರಿಂದ, ಮುಂದೆ ಆರ್ಯಸ್ತ್ರೀಯರ ಸ್ಥಿತಿಯು ಯಾವ ಮನೆಗೆ ಬರುತ್ತದೆಂಬದನ್ನು ನಿರ್ಧರಿಸಲಾಗುವದಿಲ್ಲ! ಇರಲಿ.

ನಮ್ಮ ಹೃದಯ ದೌರ್ಬಲ್ಯವನ್ನಾಗಲಿ, ಪ್ರಾಬಲ್ಯವನ್ನಾಗಲಿ ನೋಡಿಯೇ ದೈವಸ್ವರೂಪವಾದ ಸರಕಾರವು ಕಾರಭಾರವನ್ನು ಸಾಗಿಸುತ್ತದೆಂದು ನಿರ್ವಿವಾದವಾಗಿ ಹೇಳಬಹುದು. ಈಚೀಚೆಗೆ ನಮ್ಮ ಪ್ರಜಾನುರಾಗಿಯಾದ ಸರಕಾರವು ಸಹಗಮನವನ್ನು ಕಾಯಿದೆಯಿಂದ ನಿಷೇಧಿಸಿತು. ಇದಕ್ಕೆ ನಮ್ಮ ಪರಿಸ್ಥಿತಿಯೇ ಕಾರಣವಾಗಿರುತ್ತದಲ್ಲದೆ, ಸರಕಾರವಲ್ಲ. ನಮ್ಮ ಪೂರ್ವಜರು ಪವಿತ್ರವೂ, ದೃಢವೂ ಆದ ಪ್ರೇಮದಿಂದ ಕೌಟುಂಬಿಕ ಸೌಖ್ಯವನ್ನು ಪಡೆದಿದ್ದರು. ಆವಾಗಿನಷ್ಟು ದೃಢತರವಾದ ಪವಿತ್ರಪ್ರೇಮವು ಈಗಿನ ಕಾಲದಲ್ಲಿ ಗಂಡಸರಲ್ಲಿಯೂ ಉಳಿದಿಲ್ಲ; ಹೆಂಗಸರಲ್ಲಿಯೂ ಉಳಿದಿಲ್ಲ. ಹೆಂಡತಿಯು ಸತ್ತರೆ ಸಂತತಿಗಾಗಿ ಗಂಡಸರು ದ್ವಿತೀಯ ವಿವಾಹಮಾಡಿಕೊಳ್ಳುವಂತೆ, ಗಂಡಸತ್ತಹೆಂಗಸರೂ ಪುನರ್ವಿವಾಹವನ್ನು ಮಾಡಿಕೊಳ್ಳಲಾರಂಭಿಸಿದರು. ಪತಿಯೇ ಪರದೈವತವೆಂಬ ಪವಿತ್ರಭಾವನೆಯು ಅಳಿದುಹೋಗಿರುವದು. ಒಬ್ಬ ಗಂಡನು ಸತ್ತರೆ ಮತ್ತೊಬ್ಬ ಅಧಿಕಪ್ರಸಂಗಿಯನ್ನು ಗಂಟುಹಾಕಿಕೊಂಡು, ಹ್ಯಾಗಾದರೂ ಕಾಲಕ್ಷೇಪಮಾಡಿದರಾಯಿ

ತೆಂಬ ಕ್ಷುದ್ರವಿಚಾರದ ಸ್ತ್ರೀಯರು ಸಮಾಜದಲ್ಲಿ ಹೆಚ್ಚತೊಡಗಿದರು. ನಿಜವಾದ ವಿರಕ್ತಿಯಿಲ್ಲದ ಹಾಗು ಪತಿಪ್ರೇಮವಿಲ್ಲದ ದುರ್ವ್ಯವಹಾರದ ಎಷ್ಟೋ ವಿಧವೆಯರು ಭ್ರೂಣಹತ್ಯೆಯ ದೋಷಕ್ಕೆ ಗುರಿಯಾಗಿ ಶಿಕ್ಷೆಗಳನ್ನು ಸಹ ಕಾಣತೊಡಗಿದರು. ಇದನ್ನೆಲ್ಲವನ್ನು ಲಕ್ಷದಲ್ಲಿ ತಂದು ಭೂತದಯಾಪರರಾದ ನಮ್ಮ ಸುಧಾರಕಬಂಧುಗಳು ಸತೀಧರ್ಮವನ್ನು ನಾಮಶೇಷವಾಗಮಾಡಲೆತ್ನಿಸಿ, ಸ್ತ್ರೀಯರಿಗೆ ಪುನರ್ವಿವಾಹಕ್ಕೆ ಅಧಿಕಾರವಿರುವದೆಂದು ಕೂಗತೊಡಗಿರುವರು. ಹಾಯ್, ಹಾಯ್, ಏನು ಕಾಲವಿದು! ಪಶುಪಕ್ಷಿಗಳಂತೆ ಈಗಿನ ಪತಿ-ಪತ್ನಿಯರ ಸಂಬಂಧವು ಕೇವಲ ಸಂಭೋಗದ ಮಟ್ಟಿಗೆ ಮಾತ್ರ ಉಳಿಯುವ ಹೊತ್ತು ಬಂದಿತಲ್ಲವೇ? ಇದೇ ಸ್ಥಿತಿಯು ಬೆಳೆಯುತ್ತ ಹೋದರೆ ವಿವಾಹದ ಗೊಂದಲವೇ ತಪ್ಪಿ ಭೋಗೇಚ್ಛೆಯಾದಾಗ ಬೇಕಾದ ಸ್ತ್ರೀಯು ಬೇಕಾದ ಪುರುಷನನ್ನು ಆಶ್ರಯಿಸುವ ಹೊತ್ತು ಬರಬಹುದೆಂಬ ಶಂಕೆಯುತ್ಪನ್ನವಾಗದಿರದು!! ಓ, ಪ್ರಿಯಭಗಿನಿಯರಿರಾ, ಮುಂದೆ ಎಂಥ ಪಶುವೃತ್ತಿಯ ಕಾಲವು ಬರಬಹುದೆಂಬದನ್ನು ನೋಡಿದಿರಾ? ಇಂದ್ರಿಯದಮನವೇ ತಪಸ್ಸಿನ ಹೆಗ್ಗುರತಾದ್ದರಿಂದ ಅದನ್ನೇ ನಾವು ಪಾಲಿಸದಿದ್ದರೆ ನಮ್ಮಲ್ಲಿ ಉಳಿಯಿತಾದರೂ ಏನು? ತಾಯಿಬಾಯಿಯಂಥ ಸತೀಶಿರೋಮಣಿಗಳ ಆಚರಣೆಯ ರಹಸ್ಯವನ್ನು ಪೂರ್ಣವಾಗಿ ವಿಚಾರಿಸಿರಿ? ವಿಷಯಸುಖವೇ ಪ್ರಾಧಾನ್ಯವೆಂದು ತಿಳಿಯುವ ಮರುಳರ ನೆರಳಿಗೆ ಸಹ ಹೋಗಬೇಡಿರಿ. ಅಂದರೆ ನಿಮ್ಮ ಸತ್ವಕ್ಕೂ, ಕೀರ್ತಿಗೂ ಎಂದೂ ಭಂಗಬರಲಿಕ್ಕಿಲ್ಲ.

ಮಹಾನುಭಾವಳಾದ ತಾಯಿಬಾಯಿಯು ಪತಿನಿಷ್ಠೆಯಿಂದ ಜೀವಕೊಡಲಿಕ್ಕೆ ಸಿದ್ಧಳಾದದ್ದನ್ನು ನೋಡಿ ಆ ಛಾವಣಿಯೊಳಗಿನ ಎಲ್ಲ ಹೆಂಗಸರೂ ಬೆರಗಾದರು. ವಿಷಯಲಂಪಟಿಗಳಿಗೆ ಇಷ್ಟೊಂದು ಧೈರ್ಯವು ಎಲ್ಲಿಂದ ಬರಬೇಕು? ಚಿತೆಯು ಸಿದ್ಧವಾದ ವರ್ತಮಾನವು ಬಂದದ್ದರಿಂದ ಭಾವೂಸಾಹೇಬನು ಪ್ರೇತವನ್ನೆತ್ತಲು ಸೂಚಿಸಿದನು. ಕೂಡಲೆ ಸ್ನಾನಮಾಡಿ ಶುಚಿರ್ಭೂತರಾದ ನಾಲ್ಕುಜನ ಬ್ರಾಹ್ಮಣರು ಪ್ರೇತವನ್ನು ಹೊತ್ತರು. ಪ್ರಚಂಡವಾದ ಜನಸ್ತೋಮವು ಸ್ಮಶಾನಯಾತ್ರೆಗೆ ಹೊರಟಿತು. ತಾಯಿಬಾಯಿಯು ಹಣೆಯಲ್ಲಿ ಪಟ್ಟೆಕುಂಕುಮವನ್ನು ಧರಿಸಿ, ಇನ್ನೊಂದು ಕ್ಷಣದಲ್ಲಿ ಪತಿದೇವನನ್ನು ಹೊಂದುವೆನೆಂಬ ಆನಂದದಿಂದ ಮೆಲ್ಲಮೆಲ್ಲನೆ ಪ್ರೇತದ ಹಿಂದಿನಿಂದ ಸಾಗಿದಳು. ಆಗ ಆಕೆಯ ಮುಖದಲ್ಲಿ ಮಂದಸ್ಮಿತವು ಮಿನುಗುತ್ತಿತ್ತು. ಅದನ್ನು ಕಂಡು ವಿಷಯಲಂಪಟಿಗಳಾದ ಎಷ್ಟೋ ಸ್ತ್ರೀಯರು ನಾಚಿ ಆ ಪತಿಯಮೇಲೆ ತಮ್ಮ ಜನ್ಮವನ್ನು ನಿವಾಳಿಸಿದರು. "ಇದ್ದರೆ ಸ್ತ್ರೀಯರಲ್ಲಿ ಇಂಥ ಪತಿನಿಷ್ಠೆಯೇ ಇರಬೇಕೆ"ಂದು ಅವರಿಗೆ ಅನಿಸಿತು. ಆಗ

ಸಾವಿರಾರುಜನ ಹೆಂಗಸರೂ, ಗಂಡಸರೂ ಆ ಸಾಧ್ವಿಯನ್ನು ವಂದಿಸುತ್ತಿದ್ದರು. ಈ ಬಗೆಯಾಗಿ ಸ್ಮಶಾನಯಾತ್ರೆಯು ಸಾಗಿರಲು, ಶುದ್ಧವಾದ ಭೂಮಿಯಲ್ಲಿ ರಚಿಸಿದ ಚಿತೆಯು ಬಂದಿತು. ಬ್ರಾಹ್ಮಣರು ಶವವನ್ನು ಇಳಿಸಿದರು. ಸುತ್ತಲೂ ಸಮಸ್ತ ಪರಿವಾರವು ನಿಂತುಕೊಂಡಿತು. ದೊಡ್ಡ ದೊಡ್ಡ ಕನಾತುಗಳನ್ನು ಕಟ್ಟಿ ಸ್ತ್ರೀಯರಿಗಾಗಿ ಬೇರೆ ಸ್ಥಳವನ್ನು ಗೊತ್ತುಮಾಡಿದ್ದರು. ಈ ಅಪೂರ್ವ ಮಹೋತ್ಸವಕ್ಕೆ ಪೇಶ್ವೆಯವರ ಹೆಂಗಸರೂ ಬಂದಿದ್ದರು.

ಆಗ ಕುಲಪುರೋಹಿತನು ತಾಯೀಬಾಯಿಗೆ ಸಂಕಲ್ಪವನ್ನು ಹೇಳಿದನು. "ಅರುಂಧತೀ-ವಸಿಷ್ಠರಂತೆ ಅಕ್ಷಯ್ಯ ಪತಿ-ಪತ್ನೀಪ್ರೇಮವು ಪ್ರಾಪ್ತವಾಗುವದಕ್ಕಾಗಿಯೂ, ಪತಿಯೊಡನೆ ಮೂರೂವರೆಕೋಟಿವರ್ಷಸ್ವರ್ಗವಾಸಮಾಡುವದಕ್ಕಾಗಿಯೂ, ಶ್ರೀಲಕ್ಷ್ಮೀನಾರಾಯಣನ ಪ್ರೀತಿಯಿಂದ ಮೋಕ್ಷವು ಪ್ರಾಪ್ತವಾಗುವದಕ್ಕಾಗಿಯೂ ನಾನು ಸಹಗಮನವನ್ನು ಮಾಡುತ್ತೇನೆ" ಎಂದು ಆಕೆಯು ನೀರುಬಿಟ್ಟಳು. ಬಳಿಕ ಆಕೆಯು ಹೂವು-ತೆಂಗಿನಕಾಯಿಗಳನ್ನು ಇಟ್ಟು ಮರದ ಬಾಗಿಣಗಳನ್ನು ಸುವಾಸಿನಿಯರಿಗೆ ಕೊಟ್ಟಳು. ಸುವಾಸಿನಿಯರು ಆ ಸಾಧ್ವಿಗೆ ಮತ್ತೆ ಪಟ್ಟಕುಂಕುಮವನ್ನು ಹಚ್ಚಿ ಉಡಿಯನ್ನು ತುಂಬಿದರು. ಅನಂತರ ಅಪ್ಪಾಜಿಯಿಂದ ಪುತ್ರಧರ್ಮದಂತೆ ಶವವು ಚಿತೆಯ ಮೇಲೆ ಇರಿಸಲ್ಪಟ್ಟಿತು. ಬಳಿಕ ತಾಯೀಬಾಯಿಯು ೧೧ ಆಜ್ಯಾಹುತಿಗಳನ್ನು ಕೊಟ್ಟು ಅಗ್ನಿನಾರಾಯಣನನ್ನು ಪ್ರಾರ್ಥಿಸಿದಳು. ನಂತರ ಸಮಾಧಾನಪೂರ್ವಕವಾಗಿ ಹಿರಿಯರನ್ನು ನಮಸ್ಕರಿಸಿ, ಚಿಕ್ಕವರನ್ನು ಆಶೀರ್ವದಿಸಿ ಚಿತೆಯನ್ನು ಆರೋಹಣಮಾಡಿದಳು; ಮತ್ತು ಪ್ರೇಮದಿಂದ ಪತಿಯ ಮಸ್ತಕವನ್ನು ತನ್ನ ತೊಡೆಯ ಮೇಲಿಟ್ಟುಕೊಂಡಳು. ಈ ಕಾಲಕ್ಕೆ ಪ್ರೇಕ್ಷಕರ ಕಣ್ಣೊಳಗಿಂದ ಅಶ್ರುಗಳು ಧಾರೆಗಟ್ಟಿ ಸುರಿದವು. ಹಲವರು ಆ ಚಿತೆಗೆ ಪ್ರದಕ್ಷಿಣೆಗಳನ್ನು ಹಾಕಿದರು. ಬ್ರಾಹ್ಮಣರು "ಇಮಾ ನಾರೀರವಿಧವಾ" ಎಂಬ ವೇದಮಂತ್ರವನ್ನು ಪಠಿಸಿದರು. ಚಿತೆಗೆ ಅಗ್ನಿಯನ್ನು ಹಚ್ಚುವ ವೇಳೆಯು ಬಂದಿತು. ಆಗ ಬ್ರಾಹ್ಮಣರ ಆಜ್ಞೆಯಂತೆ ಭಾವೂಸಾಹೇಬನು ತಾಯೀಬಾಯಿಯನ್ನು ಕುರಿತು ನುಡಿದನೇನಂದರೆ—"ತಾಯಿಸಾಹೇಬ, ಶಾಸ್ತ್ರಾಜ್ಞೆಯಂತೆ ಈಗ ನಿಮ್ಮನ್ನು ವಿಚಾರಿಸುತ್ತೇನೆ. ನಿಮಗೆ ಈಗಾದರೂ ಪುತ್ರಮೋಹವುಂಟಾಗಿದ್ದರೆ ಹೇಳಬೇಕು. ನಿಮ್ಮನ್ನು ವೇದಾಜ್ಞೆಯಂತೆ ಚಿತೆಯಿಂದ ಕೆಳಗಿಳಿಸಿಕೊಳ್ಳಲಿಕ್ಕೆ ಬರುತ್ತದೆ." ಅದನ್ನು ಕೇಳಿ ತಾಯೀಬಾಯಿಯು—ಸರಕಾರ! ಇನ್ನು ಸುಮ್ಮನೆ ವಿಲಂಬಮಾಡಬಾರದು. ನನ್ನ ಪತಿರಾಯನು ಸ್ವರ್ಗದಲ್ಲಿ ನನ್ನ ಮಾರ್ಗಪ್ರತೀಕ್ಷೆಯನ್ನು ಮಾಡುತ್ತಿರಬಹುದು. ನನಗೆ ಪತಿಯ ದರ್ಶನದ ಹೊರತು ಯಾವ ಇಚ್ಛೆಯೂ ಇಲ್ಲ;" ಎಂದು ನುಡಿದಳು.

ಅದನ್ನು ಕೇಳಿ ಭಾವೂಸಾಹೇಬನ ಮೈಕೂದಲುಗಳು ನೆಟ್ಟಗಾದವು. ಆರ್ಯಸ್ತ್ರೀಯರ ಪತಿಪ್ರೇಮವು ಎಷ್ಟು ಧನ್ಯವಾದದ್ದೆಂದು ಆತನು ತನ್ನೊಳಗೆ ಅಂದುಕೊಂಡನು. ಬಳಿಕ ಚಿತೆಗೆ ಬೆಂಕಿಯನ್ನು ಕೊಡುವದಕ್ಕಾಗಿ ಅಪ್ಪಾಜಿಗೆ ಹೇಳಿದನು. ಆದರೆ ಶೋಕಮಗ್ನನಾದ ಅಪ್ಪಾಜಿಯಿಂದ ಆ ಕೆಲಸವನ್ನು ಮಾಡಲಿಕ್ಕಾಗಲಿಲ್ಲ. ಆಗ ಪುರೋಹಿತನು ಆತನ ಕೈಹಿಡಿದು ಚಿತೆಗೆ ಬೆಂಕಿಯನ್ನು ಹಚ್ಚಿಸಿದನು. ಕರ್ಪೂರ, ಸುಗಂಧದ್ರವ್ಯ, ಮೊದಲಾದವುಗಳಿಂದ ಅಗ್ನಿಯು ಪ್ರಜ್ವಲಿಸಿ ಹಾ ಹಾ ಅನ್ನುವಷ್ಟರಲ್ಲಿ ಚಿತೆಯನ್ನು ವ್ಯಾಪಿಸಿತು. “ಜಯಜಗದಂಬಾ ಮಾತಾಕೀಜಯ”ಎಂದು ಸಾವಿರಾರು ಜನರು ಕೂಗಿದರು. ಚಂದನಕಾಷ್ಠಗಳಿಂದ ನಿರ್ಮಿತವಾದ ಆ ಚಿತೆಯು “ಭುಗಿಭುಗಿಲೆ”ಂದು ಉರಿಯುತ್ತಿರುವಾಗ ಆ ಸತಿಯು ಸ್ವಲ್ಪಾದರೂ ‘ಹಾಯ್’, ಎಂಬ ಉದ್ಗಾರವನ್ನು ತೆಗೆಯಲಿಲ್ಲ; ಕ್ಷಣದಲ್ಲಿ ಆಕೆಯ ಸುಂದರವಾದ ತನುಲತೆಯು ಪತಿಯ ಶವದ ಸಂಗಡ ಭಸ್ಮೀಭೂತವಾಗಿ ಹೋಯಿತು! ಜನರೆಲ್ಲರೂ ಆ ಸ್ತ್ರೀಯ ಸತೀಧರ್ಮವನ್ನು ಹೊಗಳಿದರು. ಇಂಥಪತಿನಿಷ್ಠೆಯಿಲ್ಲದವರ ಜನ್ಮಕ್ಕೆ ಧಿಕ್ಕಾರವಿರಲೆಂದು ಎಷ್ಟೋ ಜನಸ್ತ್ರೀಯರು ಅಂದುಕೊಂಡರು. ಧನ್ಯಳು! ತಾಯಿಬಾಯಿಯು ನಿಜವಾಗಿಯೂ ಧನ್ಯಳು!! ಪಾಣಿಗ್ರಹಣದಿಂದ ಪತಿಯ ಅರ್ಧಾಂಗಿನಿಯೆನಿಸುವ ಇಂಥ ಉಜ್ವಲಕೀರ್ತಿಯ ಸಾಧ್ವಿಯರೇ ಧನ್ಯರು!!! ಕಾಲಮಾನದಿಂದ ತಮ್ಮ ಜಡದೇಹವನ್ನು ಪತಿಯ ಚಿತೆಯಲ್ಲಿ ಈಡಾಡಲಿಕ್ಕೆ ಸಾಧ್ಯವಿಲ್ಲದಿದ್ದರೂ ವೈರಾಗ್ಯವೆಂಬ ಕಾಳ್ಗಿಚ್ಚಿನಲ್ಲಿ ಸೇರಿ ಸತೀಧರ್ಮವನ್ನು ಕಾಯ್ದುಕೊಳ್ಳುವ ನಮ್ಮ ಈಗಿನ ಸತ್ವಸ್ಥರಾದ ಆರ್ಯಭಗಿನಿಯರಿಗೆ ನಮ್ಮ ಅನಂತವಂದನೆಗಳಿರಲಿ; ಪತಿಯು ಇರುವಾಗಲೂ ಆತನು ಪರಲೋಕಕ್ಕೆ ತೆರಳಿದಾಗಲೂ ಆತನಲ್ಲಿ ಅಖಂಡಪ್ರೇಮವನ್ನು ವಹಿಸುವದೇ ಸತಿಯರಿಗೆ ಭೂಷಣವು; ಇದೇ ಶಾಸ್ತ್ರಸಮ್ಮತವಾದ ಸತೀಧರ್ಮವು!

---

### ೧೩ನೆಯ ಪ್ರಕರಣ

## ಹೊನ್ನು-ಹೆಣ್ಣುಗಳ ಹುಚ್ಚು.

ಒಂದು ದಿನ ಮಧ್ಯರಾತ್ರಿಯ ಸಮಯವು; ಪ್ರಪಂಚವೆಲ್ಲವೂ ಪ್ರಶಾಂತವೂ, ನಿದ್ರಾಪರವಶವೂ ಆಗಿದೆ. ಮರಾಟರ ಅವಾಢವ್ಯವಾದ ಛಾವಣಿಯಲ್ಲಿ ಗಂಭೀರವಾದ ಶಾಂತತೆಯು ನೆಲೆಗೊಂಡಿದ್ದು, ಶ್ರೀಮಂತರ ಮುಕ್ಕಾಮಿನ ಒಳಭಾಗದಲ್ಲಿ ಒಂದು ಕಡ್ಡಿಯು ಬಿದ್ದರೂ ಕೂಡಾ ಕೇಳಬರುತ್ತಲಿದೆ; ಪೌಷ್ಯ ಶು|| ಅಷ್ಟಮಿಯ ಚಂದ್ರಮನು ಪಶ್ಚಿ

ಮಾಬ್ಧಿಯನ್ನು ಪ್ರವೇಶಿಸುವ ಹವಣಿಕೆಯಲ್ಲಿದ್ದಾನೆ; ಆತನ ಆರಕ್ತ, ಕಿಂಚಿನ್ಮಂದವಾದ ಕಿರಣಗಳು ಡೇರೆಗಳ ಶುಭ್ರವಸ್ತ್ರದಮೇಲೂ ಸುವರ್ಣಮಯವಾದ ಕಳಸದ ಮೇಲೂ ಬಿದ್ದವೆ; ಮಕರಸಂಕ್ರಮಣಕಾಲವಿದ್ದುದರಿಂದ ಚಳಿಯು ನಾನಾಎಂದು ಮುಂದುವರೆಯುತ್ತಲಿದೆ; ಗಿಡಗಳ ಮೇಲಿನ ಪಕ್ಷಿಗಳು ಕಲರವರಹಿತರಾಗಿ ಹೋಗಿವೆ. ಅಂದಬಳಿಕ ಮನುಷ್ಯಸಂಚಾರದಮಾತಾವುದು? ಇಂಥ ಸಮಯದಲ್ಲಿ ಒಬ್ಬ ಬಾಲೆಯು ಅಲ್ಲ, ಅಲ್ಲ, ಮನೋಹರಾಕಾರದ ನೂತನ ತರುಣಿಯು ಪಾನಿಪತ್ರದ ನೆರೆಯಲ್ಲಿರುವ ಕೆರೆಯ ಮೆಟ್ಟಿಲಿನ ಮೇಲೆ ಕುಳಿತುಕೊಂಡಿದ್ದಳು. ಅವಳ ಪಾದಗಳು ನೀರಲ್ಲಿ ಮುಳುಗಿದ್ದುವು; ತಲೆಯ ಮೇಲಿನ ಕೂದಲುಗಳು ಎರಡು ಸೆಳುಗಳಾಗಿ ಎರಡೂ ಹೆಗಲುಗಳ ಮೇಲಿಂದ ಕೆಳಗಿಳಿದು ಉನ್ನತ ಕುಚಗಳ ಮೇಲೆ ಬಿದ್ದು ಕಟಿಯನ್ನು ಮುಟ್ಟಿದ್ದುವು. ಅವಳು ತಿಳಿವಾದ ಸೀರೆಯನ್ನು ಉಟ್ಟಿದ್ದರೂ ರೇಷ್ಮೆಯ ಒಂದು ಕಪ್ಪುಸವನ್ನು ತೊಟ್ಟಿದ್ದಳು. ಅವಳ ಮೈಮೇಲೆ ಅಲಂಕಾರಗಳೇನೂ ಇರದೆ ಕಿವಿಗಳಲ್ಲಿ ಮುತ್ತಿನ ಓಲೆಗಳು ಮಾತ್ರ ಲಕಲಕಿಸುತ್ತಿದ್ದವು; ಅವಳು ಎರಡೂ ಮೊಣಕೈಗಳನ್ನು ತೊಡೆಯಮೇಲೆ ಊರಿ ಕರಸಂಪುಟದಲ್ಲಿ ಮುಖವನ್ನಿರಿಸಿ ಕುಳಿತಿದ್ದು ನೋಡುವವರಿಗೆ ಶೂನ್ಯಮನಸ್ಕಳಂತೆ ತೋರುತ್ತಿದ್ದಳು. ಆದರೆ ಅವಳ ಅಂತರಂಗದಲ್ಲಿ ಹುಟ್ಟುತ್ತಿರುವ ಕಲ್ಪನ ತರಂಗಗಳ ಅಂತವನ್ನು ಅನಂಗನುಕೂಡಾ ತಿಳಿಯಲಸಮರ್ಥನು. ಅವಳು ಪಶ್ಚಿಮಾಭಿಮುಖವಾಗಿ ಕುಳಿತಿದ್ದರಿಂದ ಅವಳ ಮೊಗದಾವರೆಯ ಮೇಲೆ ಚಂದನ ಸೂರ್ಯಕಿರಣಗಳು ಬಿದ್ದು ಆಕೆಯ ಔದಾಸೀನ್ಯವನ್ನು ಹೆಚ್ಚಿಸಿದ್ದವು. ಅವಳ ಮನಸ್ಸು ಸ್ವಪ್ನಾವಸ್ಥೆಯಲ್ಲಿ ಸೇರಿದ್ದರಿಂದ ಹಿಮರ ಜನ ಆಟವು ಆಕೆಯ ಮೇಲೆ ನಡೆಯದಂತಾಗಿತ್ತು; ಹೀಗಿರಲು ಅವಳು ತನ್ನ ಮನಸ್ಸಿನಲ್ಲಿ —"ಜಗದಂಬೇ ಇನ್ನು ಬೇಗ ನಿನ್ನ ಚರಣಗಳಲ್ಲಿ ನನಗೆ ಸ್ಥಳವನ್ನು ಕರುಣಿಸು. ವಿಟಂಬನೆಯನ್ನು ಸಹಿಸಲಾರೆನು; ನಾನು ಸಕೇಶಿಯಂತೆ! ಮುಸಲ್ಮಾನರ ಘೋಷೆಯಲ್ಲಿ ಇದ್ದವಳಂತೆ! ತಾಯೇ, ಇದರಲ್ಲಿ ನನ್ನದೇನು ಅಪರಾಧವೋ ಕಾಣೆನು? ಎಲ್ಲ ಬಗೆಯಿಂದಲೂ ನಾನು ನಿರಾಶ್ರಿತಳಾದೆನು; ನನಗೆ 'ನೀನೆ'ನ್ನುವವರು ಇಲ್ಲ; ಮಾತೆಯೇ, ಸಾಕು, ಸಾಕು, ಇನ್ನು ಜೀವಧಾರಣವು ಸಾಕು! ಮಹಾರಾಜ, ಈ ಜನದಲ್ಲಿ ನಿಮ್ಮ ದಾಸಿಯಾಗುವ ಪುಣ್ಯವು ನನ್ನಲ್ಲಿಲ್ಲ; ನಾನು ಚಾಂಡಾಲಿನಿಯು, ನುಮುನೆ ಮೋಹಿಸಿ ಭ್ರಷ್ಟಳಾದೆನು. ಮಹಾರಾಜ, ದೇವರು ನಿಮಗೆ ಕಲ್ಯಾಣಮಾಡಲಿ! ಮುಂದಿನ ಜನ್ಮದಲ್ಲಾದರೂ ನಿಮ್ಮ ದಿವ್ಯಚರಣಗಳಸೇವೆಯು ನನಗೆ ಲಭಿಸಲಿ! ಜನನೀ ನಿನಗೆ ನಮಸ್ಕಾರವು; ಹೋಗಿಬರುತ್ತೇನೆ. ನನ್ನ ದುರ್ಗುಣಗಳನ್ನೆಲ್ಲ ಮರೆತುಬಿಡು. ತಂದೆಯೇ ನಿನಗೆ ನಮಸ್ಕಾರವು ನಿನ್ನ ಲಕ್ಷ್ಮಿಯ ಮಗಳ ಅಂತವು ಹೀಗಾಗಬೇಕಾದ

ದ್ದಕ್ಕೆ ಉಪಾಯವಿಲ್ಲ. ಆ ದಿವಸವೇ ನನ್ನ ನಿನ್ನ ಋಣಸಂಬಂಧವು ಕಡಿದಂತಾಯಿತು. ಮಹಾರಾಜ, ಇನ್ನೊಮ್ಮೆ ಭೇಟಿಯಾಗುತ್ತೇನೆ. ಈ ಹತಭಾಗಿನಿಯನ್ನು ಮರೆಯಬೇಡಿರಿ. ಹೋಗಿಬರುತ್ತೇನೆ" ಎಂದು ಎಲ್ಲರನ್ನು ಸ್ಮರಿಸಿ, ವಿಶ್ವಾಸರಾಯನ ಮೂರ್ತಿಯನ್ನು ಆ ಪವಿತ್ರ ಅಂತಃಕರಣದಲ್ಲಿ ಧ್ಯಾನಿಸುತ್ತ. ಬಳಿಕ ಆ ಬಾಯಿ ಜಪ್ಪನೆ ಎದ್ದುನಿಂತು ನಡುಮನೆಯ ನೀರಿನಲ್ಲಿ ಹಾರಿದಳು. ಮತ್ತೂ ಎರಡು ಮಕ್ಕಳನ್ನು ಮುಂದಿಕ್ಕಿ ಬಾಗಿಲನ್ನು ಮುಚ್ಚಿದಳು. ಇನ್ನು ಆ ಬಾಯಿ ಮುಳುಗತಕ್ಕವಳು, ಅಷ್ಟರಲ್ಲಿ ಯಾವನೋ ಒಬ್ಬ ಪುರುಷನು ಆಕೆಯನ್ನು ಹಿಡಿದೆಳೆದದ್ದರಿಂದ ಆವಳು ದಂಡೆಗೆ ಬಂದು ಬಿದ್ದಳು.

ವಾಚಕಮಹಾಶಯ! ಹೀಗೆ ಆ ತರುಣಿಯ ಮರಣಕ್ಕೆ ಅಡ್ಡಾದವನು ಯಾವನಾಗಿರಬಹುದು! ಹಾ! ತಿಳಿಯಿತು. ಆ ಪುರುಷನಿಗೂ ಈ ತರುಣಿಗೂ ಇರುವ ಸಂಬಂಧವು ವಿಲಕ್ಷಣವಾಗಿರುವದು, ಇತ್ತ ಸ್ವಲ್ಪ ಅವಧಾನವಿರಲಿ; ಆ ಪುರುಷನ ಹೆಸರು ನಾರಾಯಣ; ಅವನ ಊರು ಪುಣೆ, ಚಿಕ್ಕಂದಿನಲ್ಲಿಯೇ ತಾಯಿತಂದೆಗಳನ್ನು ಕಳಕೊಂಡ ಅವನ ಸಂಗೋಪನವನ್ನು ಅವನ ದೂರಿನ ಆಪ್ತರಾದ ಸೋನಮನೆತನದವರು ಮಾಡಿದರು. ಯಮುನಾಬಾಯಿಯೇ ಆತನ ಲಗ್ನಮುಹೂರ್ತದಿಗಳನ್ನು ಮಾಡಿದಳು. ಪ್ರಬುದ್ಧನಾದ ಬಳಿಕ ನಾರಾಯಣರಾಯನು ಸೋನಯಿವರ ಜಹಗೀರಿನ ಎಲ್ಲ ವ್ಯವಸ್ಥೆಯನ್ನು ನೋಡುತ್ತಿರುತ್ತಿದ್ದನು. ಆತನಿಗೆ ಒಳ್ಳೇತಾರುಣ್ಯವು ಪ್ರಾಪ್ತವಾಯಿತು. ಹೆಂಡತಿಯು ಚಿಕ್ಕವಳಿದ್ದಾಗಲೇ ಪ್ರಪಂಚಮಾಡುವದಕ್ಕಾಗಿ ಬಂದದ್ದರಿಂದ ಮೂರುನಾಲ್ಕು ವರುಷಗಳಲ್ಲಿ ಆಕೆಯು ಒಂದೆರಡು ಮಕ್ಕಳನ್ನು ಹಡೆದಳು. ಆದರೆ ದುರ್ದೈವದಿಂದ ಆಕೆಯು ಬಹುಕಾಲ ಮಾತೃಪದವನ್ನು ಅನುಭವಿಸಲಾರದೆ ಪ್ರಾಯದ ಗಂಡನನ್ನು ಅಗಲಿ ಬಹು ದುಃಖದಲ್ಲಿ ಮುಳುಗಿಸಿ ಬೇಗನೆ ಇಹಲೋಕದ ಯಾತ್ರೆಯನ್ನು ಮುಗಿಸಿದಳು. ಹಾಯ್, ಹಾಯ್, ಸುಮಂಗಲೆಯ ಆಗಲುವಿಕೆಯಿಂದ ನಾರಾಯಣನು ಬಹಳ ದುಃಖಮಗ್ನನಾದನು. ಪ್ರಾಯದಲ್ಲಿ ಪತ್ನಿಯೂ, ವೃದ್ಧಾಪ್ಯದಲ್ಲಿ ಮಗನೂ, ಬಾಲ್ಯದಲ್ಲಿ ತಾಯಿಯೂ ಕೈಬಿಟ್ಟರೆ ಆಗುವ ವ್ಯಥೆಯನ್ನು ಅನುಭವಿಸಿದವರೇ ಬಲ್ಲರು! ನಾರಾಯಣರಾಯನಿಗೆ ಹೆಂಡತಿಯ ವಿಯೋಗವು ಅಸಹ್ಯವಾಯಿತು. ಯಾವ ಕಾರಣದಿಂದಲೋ ಅವನ ದ್ವಿತೀಯ ವಿವಾಹವೂ ಆಗಲಿಲ್ಲ. ಆದ್ದರಿಂದ ಅಬೆವ ಸಿಯಾದ ವಿಷಯೋಪಭೋಗದಿಂದ ಅವನ ಮನಸ್ಸು ಭ್ರಾಂತಿಷ್ಟವಾಯಿತು. ಆದರೆ ಚಿಕ್ಕಂದಿನಲ್ಲಿ ಅವನಿಗೆ ನೈತಿಕ ಶಿಕ್ಷಣವು ದೊರೆತದ್ದರಿಂದ ಅವನಲ್ಲಿ ಧರ್ಮಭೀರುತ್ವವು ಚೆನ್ನಾಗಿ ನೆಲೆಗೊಂಡಿತ್ತು. ಆದ್ದರಿಂದ ಪಾಪಾಚರಣೆಗೆ ಅವನ ಮನಸ್ಸು ಒಪ್ಪದಾಯಿತು. ಪಾಪಮೂಲವಾದ ಪರಸ್ತ್ರೀಸ

ಮಾಗಮವನ್ನು ಪ್ರತ್ಯಕ್ಷವಾಗಿ ಹೊಂದಲು ಅವನಿಗೆ ಧೈರ್ಯವಿಲ್ಲದಾಯಿತು. ಆದ್ದರಿಂದ ಆತನು ಮನಸ್ಸಿನೊಳಗೇ ನುಗ್ಗುಗಹತ್ತಿದನು. ಬರಬರುತ್ತ ಅವನ ವಿಷಯವಾಸನೆಯು ಹೆಚ್ಚಿ ಸ್ತ್ರೀಯರ ವಿಷಯವಾಗಿ ಅವನು ಆಳಿ ಮನಸ್ಸನ್ನು ತಾಳಿದನು. ಸರಿಮನೆಯ ಹೆಂಗಸರನ್ನು ಓಣಿಯಲ್ಲಿ ಬರಹೋಗುವ ಹೆಂಗಸರನ್ನು ಕೆಲಕೆಲವು ಪ್ರಸಂಗಗಳಲಿ ಅವನು ನಿರ್ಲಜ್ಜೆಯಿಂದ ನೋಡುತ್ತ ಕೂಡ್ರುತ್ತಿದ್ದನು! ಆಹಾ! ಮನ್ಮಥನ ಪ್ರತಾಪವೆಷ್ಟು? ಆತನ ಸಾಮರ್ಥ್ಯಕ್ಕೆ ಜಗತ್ತೇ ಒಳಗಾಗಿರುವದಲ್ಲ! ಇದಕ್ಕೆ ಕೆಲಕೆಲವು ಮಹಾತ್ಮರು ಮಾತ್ರ ಅಪವಾದವಾಗಿರುವರು. ಇರಲಿ; ನಾರಾಯಣರಾಯನಂಥ ಸಾಧಾರಣ ಮನುಷ್ಯನು ಎಷ್ಟು ವಿವೇಕ ತಂದುಕೊಂಡರೂ ವ್ಯರ್ಥವಾಯಿತು. ಎದುರಿಗೆ ಯಾವಳೊಬ್ಬ ಹೆಣ್ಣುಮಗಳು ಹಾಯ್ದುಹೋದರೂ ಅವನ ಮನಸ್ಸು ಚಂಚಲವಾಗತೊಡಗಿತು! ಓ ಮನ್ಮಥಾ, ನಿನ್ನ ಮಹಿಮೆಯು ಎಷ್ಟು ಅಗಮ್ಯವಿರುವದು?

ನಾರಾಯಣರಾಯನ ಸ್ಥಿತಿಯು ಈ ಮನೆಗೆ ಬಂದಿರಲು, ಅವನ ವಿರಹಾಗ್ನಿಯು ಅವನನ್ನು ಇನ್ನಿಷ್ಟು ದಹಿಸಲೆಂದೋ ಅಥವಾ ನಿರ್ಲಜ್ಜನಾದ ಮನ್ಮಥನು ತನ್ನ ಕೈಯಲ್ಲಿ ಸಿಕ್ಕವರನ್ನು ಯಾವಗತಿಗೆ ಮುಟ್ಟಿಸುವನೆಂಬದನ್ನು ಜಗತ್ತು ನೋಡಲೆಂದೋ ಎನ್ನುವಂತೆ ಸುಂದರಿಯೂ, ಆದೇ ಯೌವನವೆಂಬ ಸಾಮ್ರಾಜ್ಯದಲ್ಲಿ ಕಾಲಿಟ್ಟವಳೂ ಬಾಲವಿಧವೆಯೂ ಆದ ಸೋನೆಯವರ ಸೊಸೆಯು ಆತ್ತೆಯ ಮನೆಗೆ ಬಂದಳು. ಅವಳ ಹೆಸರು ರಂಗೂಬಾಯಿಯೆಂಬದನ್ನು ನಮ್ಮ ವಾಚಕರು ಮರೆತಿರಲಿಕ್ಕಿಲ್ಲ! ಆಕೆಯ ಅಂಗಸೌಷ್ಟವಗಳಿಂದ ನಾರಾಯಣರಾಯನಲ್ಲಿ ಪಾಪಬುದ್ಧಿಯು ತಡವಿಲ್ಲದೆ ಅಂಕುರಿಸಿತೆಂಬದನ್ನು ಹೇಳಲವಶ್ಯವಿಲ್ಲ; ಅವನು ಅನಾಥನಾಥನಾಗಬೇಕೆಂದು ಯೋಚಿಸಿದನು. ಆದರೆ ಅವನಲ್ಲಿಯ ವಿವೇಕವು ಆಗಾಗ್ಗೆ ಮಿಂಚಿನಂತೆ ಪ್ರಕಟವಾಗಿ ಅವನ ಅಡ್ಡದಾರಿಗೆ ಪ್ರತಿಬಂಧಮಾಡುತ್ತಿತ್ತು; ಆದರೂ ನಿಕಟಸಹವಾಸದಿಂದಲೂ ಒಂದೇ ಮನೆಯಲ್ಲಿದ್ದರಿಂದ ಅಪ್ಪಿತಪ್ಪಿಯಾಗುವ ಸ್ಪರ್ಶದಿಂದಲೂ ಪ್ರಸಂಗವಶಾತ್ ನೀರುಕೊಡುವ, ಬಡಿಸುವ ಕಾರ್ಯಾಂತರಗಳಿಂದ ಆಕೆಯು ತನ್ನ ಸಮೀಪಕ್ಕೆ ಬರುತ್ತಿರುವದರಿಂದಲೂ ಆತನ ಖೋಡಿ ಮನಸ್ಸು ಉನ್ಮತ್ತವಾಗಿ ವಿವೇಕಬಂಧನದಿಂದ ಕೊಸರಿಕೊಂಡಿತು. ಆಗ ಅವನು ಕಿಂಚಿತ್ ನಿರ್ಲಜ್ಜನಾಗಿ ಆ ಸುಂದರಿಯ ಮನವೊಲಿಸುವ ಪ್ರಯತ್ನ ನಡಿಸಿದನು. ಕಾಮುಕನಾದ ನಾರಾಯಣರಾಯನ ಈ ಆಚರಣೆಯು ಧೂರ್ತಳಾದ ರಂಗೂಬಾಯಿಗೆ ಹೊಳೆಯದೆ ಹೋಗಲಿಲ್ಲ; ಆದರೆ ಆ ಪ್ರಮದೆಯು ಇಂಥ ಹೊಲಸು ವಿಚಾರವುಳ್ಳ ನಾರಾಯಣರಾಯನನ್ನು ವಚನಾನಿಷೇಧಿಸಿ ಗಾಂಭೀರ್ಯದಿಂದ ಇರತೊಡಗಿದಳು.

ಒಂದುದಿನ ಇಳಿಹೊತ್ತಿನಸಮಯ; ನೌಕರರೆಲ್ಲರೂ ತಮ್ಮಕೆಲಸಗಳಿಗೆ ಹೊರಟುಹೋಗಿದ್ದರು; ಯಮುನಾಬಾಯಿಯು ಪುರಾಣಶ್ರವಣಕ್ಕಾಗಿ ದೇವಾಲಯಕ್ಕೆ ಹೋಗಿದ್ದಳು; ಅತ್ತೆಯು ಆ ದಿನ ಬಹಳವಾಗಿ ಸಿಟ್ಟುಮಾಡಿದ್ದರಿಂದ ರಂಗೂಬಾಯಿಯು ಅಡಿಗೆಯ ಮನೆಯಲ್ಲಿ ಖಿನ್ನಳಾಗಿ ತನ್ನ ದುರ್ದೈವವನ್ನು ಚಿಂತಿಸುತ್ತ ಕುಳಿತಿದ್ದಳು. ಇಂಥ ಹೊತ್ತಿನಲ್ಲಿ ನಾರಾಯಣರಾಯನು ಮಹಡಿಯ ಮೇಲಿಂದ ಮೆಲ್ಲನೆಕೆಳಗಿಳಿದು ಮನೆಯಲ್ಲಿ ಯಾರೂ ಇಲ್ಲದ್ದನ್ನು ನೋಡಿ ತನ್ನ ಅರಗಿಳಿಯು ಏನುಮಾಡುವದೆಂಬದನ್ನು ಸೂಕ್ಷ್ಮವಾಗಿ ಅವಲೋಕಿಸಿದನು. ಆಗಆತನು ನೆಟ್ಟಗೆಅಡಿಗೆಯ ಮನೆಯನ್ನು ಸೇರಿ, ಕಾಪಟ್ಯಡಹಿತಬುದ್ಧಿಯನ್ನು ಪ್ರಕಟಿಸುತ್ತ ರಂಗೂಬಾಯಿಯ ಬಳಿಗೆ ಹೋಗಿ—"ಅತ್ತಿಗೀ, ನಿಮ್ಮ ಜೀವಕ್ಕೆ ಇಲ್ಲಿ ಸ್ವಲ್ಪಾದರೂ ಸೌಖ್ಯವಿಲ್ಲ ಕಂಡಿರಾ, ಸದಾಸರ್ವಕಾಲ ಬೈಸಿಕೊಳ್ಳುವದರಲ್ಲಿಯೇ ನಿಮ್ಮ ಹೃದಯವು ಬೆಂದುಹೋಗುತ್ತದೆ; ಶಿವ! ಶಿವ! ನಿಮ್ಮ ಈ ದುಸ್ಥಿತಿನೋಡಿ ನನ್ನ ಮನಸ್ಸು ಬಹಳ ತಳಮಳಗೊಳ್ಳುವದು; ಆದರೆ ನಿಮ್ಮ ಇಚ್ಛೆಯಿದ್ದರೆ ಹೇಳಬೇಕು; ನಾನು ನಿಮ್ಮನ್ನು ಸುಖರೂಪವಾಗಿ ನಿಮ್ಮ ತವರುಮನೆಗೆ ಮುಟ್ಟಿಸುತ್ತೇನೆ." ಎಂದು ನುಡಿಯುತ್ತ ತೀರ ಆಕೆಯ ಸಮೀಪಕ್ಕೆ ಹೋದನು. ನಾರಾಯಣರಾಯನ ಕಾಮುಕ ಹೃದಯವನ್ನು ಬಲ್ಲವಳಾದ ರಂಗೂಬಾಯಿಯು, ಯಾರೂ ಇಲ್ಲದವೇಳೆಯಲ್ಲಿ ಆತನು ಹೀಗೆ ಮಾತಾಡಿಸುವದನ್ನು ನೋಡಿ ಗಾಬರಿಯಾಗಿ ಅಲ್ಲಿಂದ ಹೊರಗೆಹೋಗಬೇಕೆಂದು ಸುಮ್ಮನೆ ಎದ್ದು ನಿಂತಳು. ತನ್ನ ಪ್ರಶ್ನೆಗಳಿಗೆ ಆಕೆಯು ಸುಮ್ಮನಿದ್ದದ್ದನ್ನು ನೋಡಿ ಮೌನವು ಅರ್ಧಸಮ್ಮತಿಯೆಂದು ಬಗೆದು ಆತನು ಕಾಮಾಂಧನಾಗಿ ಆಕೆಯ ಕೈಯನ್ನು ಹಿಡಿಯಹೋದನು. ಆಗ ರಂಗೂಬಾಯಿಯು ಸರಕ್ಕನೆ ದೂರಸರಿದು ಸಿಟ್ಟಿನಿಂದ ಸಂತಪ್ತಳಾಗಿ-ಅಧಮಾ, ಮನೆಯಲ್ಲಿ ಯಾರೂ ಇಲ್ಲವೆಂದು ನನ್ನಮೇಲೆ ಬಲಾತ್ಕಾರಮಾಡುತ್ತೀಯಾ? ನನ್ನನ್ನು ಪಾಪಬುದ್ಧಿಯಿಂದ ನೋಡುವ ಈ ನಿನ್ನ ಕೆಟ್ಟಕಣ್ಣುಗಳು ಯಾಕೆ ಕಳಚಿಬೀಳಲೊಲ್ಲವು? ಮೂರ್ಖಾ, ಸುಮ್ಮನೆ ಅಡಗಿಯ ಮನೆಯನ್ನು ಬಿಟ್ಟು ಹೋಗುತ್ತೀಯೋ ಇಲ್ಲವೋ? ಎಂದು ಗದ್ದರಿಸಿದಳು. ಅಷ್ಟರಲ್ಲಿ ಹೊರಗೆ ಯಾರದೋ ಕಾಲಸಪ್ಪಳವಾದ್ದರಿಂದನಾರಾಯಣರಾಯನ ಹುಚ್ಚು ಕೆಳಗಿಳಿದು ಅವನು ತೆಪ್ಪಗಾದನು. ಅವನ ಮೈಯು ಬೆವತಿತು. ಕೆಟ್ಟ ಕೆಲಸಮಾಡುವಾಗ ಅನ್ಯರು ನೋಡಿದರೆ ಆಗುವ ದುರ್ಲಕ್ಷಣಗಳು ಅವನಲ್ಲಿ ಕಂಡುಬಂದವು. ಕೂಡಲೆ ಅವನು ಗಾಬರಿಗೊಂಡು ತಡವರಿಸುತ್ತ ಹಿತ್ತಲ ಬಾಗಿಲಿನಿಂದ ಓಡಿಹೋದನು.

ಹೀಗೆ ಓಡಿಹೋಗುವಾಗ ನಾರಾಯಣರಾಯನು ಬಹಳ ಪಶ್ಚಾತ್ತಾಪಪಟ್ಟನು. ಇಂಥ ನಿಂದ್ಯವಾದ ಕೆಲಸಕ್ಕೆ ಮನಸ್ಸು ಮಾಡಿದ್ದಕ್ಕಾಗಿ ಆತನಿಗೆ ಚೇಳುಕಡಿದಷ್ಟು

ತ್ತಾಪವಾಗತೊಡಗಿತು; ಆತನು ಇನ್ನು ಪುಣೆಯಲ್ಲಿ ಇರಬಾರದೆಂದು ನಿಶ್ಚಯಿಸಿ ಇನ್ನು ಇಂಥಲ್ಲಿಗೇ ಹೋಗಬೇಕೆಂಬ ನಿರ್ಧಾರವಿಲ್ಲದೆ ಸಾಗಿರಲು, ಒಂದು ದೇವಾಲಯದಲ್ಲಿ ಹರಿಕೀರ್ತನವು ನಡೆದದ್ದನ್ನು ಕಂಡು ಕೀರ್ತನ ಶ್ರವಣಕ್ಕೆ ಕುಳಿತನು. ಕರ್ಮಧರ್ಮ ಸಂಯೋಗದಿಂದ ಆ ದಿವಸ ಸೂರದಾಸನ ಆಖ್ಯಾನವು ನಡೆದಿತ್ತು. ಹರಿದಾಸನು ರಸಿಕನಿದ್ದುದರಿಂದ ಆತನು ಜನರನ್ನು ಕುರಿತು—“ಸಭಿಕರೇ, ಯೋಗವು ಕೂಡಿಬಂದರೆ, ಮನುಷ್ಯನಲ್ಲಿ ವೈರಾಗ್ಯವು ಉತ್ಪನ್ನವಾಗಲಿಕ್ಕೆ ಎಷ್ಟು ಮಾತ್ರವೂ ಅವಕಾಶವಾಗುವದಿಲ್ಲ. ಎಂಥ ಪಾಪಬುದ್ಧಿಯು ಸ್ವರೂಪಕೂಡಾ ನಷ್ಟವಾಗುವದು! ಸೂರದಾಸನ ಕಥೆಯೇ ಇದಕ್ಕೆ ಸಾಕ್ಷಿಯು, ಆತನು ಎಷ್ಟು ಶ್ರೇಷ್ಠ ಭಗವದ್ಭಕ್ತನಾದದ್ದು ಹ್ಯಾಗಂದರೆ—ಬಡವನಾದ ಸೂರದಾಸನು ಕಟ್ಟಿಗೆಯ ಹೊರೆಗಳನ್ನು ಮಾರಿ ಹೊಟ್ಟೆಯನ್ನು ತುಂಬಿಕೊಳ್ಳುತ್ತಿರಲು ಅವನು ಒಂದುದಿನ ಒಬ್ಬ ಸಾವುಕಾರನ ಬಹು ಚೆಲುವೆಯಾದ ಹೆಂಡತಿಯನ್ನು ನೋಡಿದನು. ಕೂಡಲೇ ಅತನಿಗೆ ಹುಚ್ಚು ಹಿಡಿದಂತಾಯಿತು. ಆ ಸ್ತ್ರೀಯಲ್ಲಿ ಅವನ ಮನಸ್ಸು ಪೂರಾ ನಟ್ಟಿತು. ಅವನಿಗೆ ಯಾವದಕ್ಕೂ ಬುದ್ಧಿ ತೋಚದೆ ಅವನು ಸಂಜೆಯ ವರೆಗೆ ಅಲ್ಲಿಯೇ ನಿಂತುಬಿಟ್ಟನು. ಆಗ ಅವನಿಗೆ ತಲೆಯ ಮೇಲಿನ ಕಾಷ್ಠಭಾರದ ಪರವೆಯಾಗಲಿಲ್ಲ; ಹೊಟ್ಟೆಯಲ್ಲಿ ಕೂಳಿಲ್ಲೆಂಬ ಸ್ಮರಣವಾಗಲಿಲ್ಲ; ನಿಂತುನಿಂತು ಕಾಲು ಸೋತವೆಂಬ ಭಾನವು ಉಳಿಯಲಿಲ್ಲ. ಹೊತ್ತು ಮುಳುಗಿ ಮಬ್ಬುಗತ್ತಲಾದ ಮೇಲೆ ಮಾತ್ರ ಅವನು ಆ ಹೊರೆಯನ್ನು ಅಲ್ಲಿಯೇ ಚೆಲ್ಲಿಕೊಟ್ಟು ಮನೆಗೆ ಬಂದನು. ಕಾಷ್ಠವಿಕ್ರಯದಿಂದ ಬರುವದುಡ್ಡು ಆ ದಿನ ತಪ್ಪಿದ್ದರಿಂದ ಅವನ ಮನೆಯಲ್ಲಿ ಎಲ್ಲರಿಗೂ ಲಂಘನವಾಯಿತು. ಸೂರದಾಸನಿಗೆ ನಿದ್ರೆ ಬರಲೊಲ್ಲದು; ಯಾವಾಗಲೂ ಆ ಸುಂದರ ರೂಪವು ಅವನ ಕಣ್ಣಿಗೆ ಕಟ್ಟಿದ ಹಾಗಾಯಿತು. ಮರುದಿನ ಬೆಳಗಾಯಿತು. ಮತ್ತೆ ಆ ಸ್ತ್ರೀಭಕ್ತನು ಮತ್ತೊಂದು ಹೊರೆಯನ್ನು ಹೊತ್ತುಕೊಂಡು ಆ ಸಾವುಕಾರನ ಅಂಗಳದಲ್ಲಿ ಹೋಗಿ ನಿಂತುಕೊಂಡನು. ಇದರಂತೆ ಅವನು ಎರಡುತಿಂಗಳವರೆಗೆ ಮಾಡಿದನು. ಮನೆಯಲ್ಲಿ ಹೆಂಡರು ಮಕ್ಕಳಿಗೆ ಕೂಳಿಲ್ಲ; ತಾನೂ ಸೊರಗಿ ಸಾಯಲಾದನು; ಆದರೂ ಅವನಿಗೆ ಆ ಸ್ತ್ರೀಯ ಹುಚ್ಚು ಹೋಗಲಿಲ್ಲ.

ಮುಂದೆ ಒಂದುದಿನ ಸಾವುಕಾರನು ಬಾಗಿಲ ಮುಂದೆ ಬಿದ್ದಿರುವ ಪರ್ವತಪ್ರಾಯವಾದ ಕಟ್ಟಿಗೆಯ ಹೊರೆಗಳನ್ನು ನೋಡಿ ಹೆಂಡತಿಯನ್ನು ಕುರಿತು—“ಸ್ತ್ರೀಯೇ ಇದೇನು? ಇಷ್ಟು ಕಟ್ಟಿಗೆಯ ಹೊರೆಗಳನ್ನು ಯಾಕೆ ಹಾಕಿಸಿಕೊಳ್ಳುತ್ತೀ?”ಎಂದು ಪ್ರಶ್ನೆ ಮಾಡಲು ಆ ಸ್ತ್ರೀಯು ಬೆರಗಾಗಿ—“ನಾನೆಲ್ಲಿ ಹಾಕಿಸಿಕೊಂಡಿರುವೆನು? ನೀವೇ ಹಾಕಿಸುತ್ತಿರಬಹುದೆಂದು ಮಾಡಿದ್ದೆನು ಎನಲು, ಸಾವುಕಾರನಿಗೂ ಆಶ್ಚರ್ಯವಾ

ಯಿತು. ಅವನು ಆ ದಿನ ಕಟ್ಟಿಗೆಯ ಹೊರೆಗಳನ್ನು ಯಾರು ಹಾಕುವರೆಂಬದನ್ನು ಶೋಧಮಾಡಿದನು. ಆಗ ಅವನಿಗೆ ಸೂರದಾಸನ ಈ ವಿಲಕ್ಷಣ ಸ್ಥಿತಿಯು ತಿಳಿಯಿತು. ಆತನು ಜಾಣಾಕ್ಷನೂ ಬಹುಸಜ್ಜನನೂ ಇದ್ದುದರಿಂದ ನಡೆದ ಸಂಗತಿಯ ಮೇಲಿಂದ ವಸ್ತುಸ್ಥಿತಿಯನ್ನು ಕಂಡುಹಿಡಿದು ಹೆಂಡತಿಯ ಬಳಿಗೆ ಹೋಗಿ– ಪ್ರಿಯೇ ನಿನ್ನ ಮೇಲೆ ಒಂದು ಕಠಿಣ ಪ್ರಸಂಗವು ಬಂದಿರುವದು. ಅಂಗಳದಲ್ಲಿ ನಿಂತಿರುವ ಆ ಬಡವನು ನಿನ್ನ ಸಲುವಾಗಿ ವೃಥಾ ಪ್ರಾಣಕಳಕೊಳ್ಳುತ್ತಿರುವನು. ಕಾರಣ ನೀನು ನನ್ನಾಜ್ಞೆಯಂತೆ ಆ ಬಡವನ ಇಚ್ಛೆಯನ್ನು ಪೂರ್ಣಪಡಿಸು. ಇದರಿಂದ ನಿನ್ನ ಪಾತಿವ್ರತ್ಯಕ್ಕೆ ಭಂಗಬರಲಾರದು. ಎಂದು ಹೇಳಿ ಹೊರಗೆ ಹೊರಟು ಹೋದನು.

ಸಾವಕಾರನ ಹೆಂಡತಿಯು ಮಹಾಸಾಧ್ವಿಯು; ಗಂಡನ ಆಜ್ಞೆಯನ್ನು ಮೀರುವದು ಆಕೆಗೆ ಕಠಿಣವಾಯಿತು. ಇತ್ತ ಆಜ್ಞೆಯನ್ನು ಪಾಲಿಸುವದೆಂದರೆ ಪರಪುರುಷನ ಸಂಗಮಾಡುವ ಪ್ರಸಂಗವು; ಹೀಗಾಗಿ ಅವಳು ಬಹುಪರಿಯಿಂದ ನೊಂದುಕೊಂಡು ಕಡೆಗೆ ನಿರ್ವಾಹವಿಲ್ಲದೆ ಪತಿಯಾಜ್ಞೆಯನ್ನು ಮೀರದಿರುವದೇ ಲೇಸೆಂದು ಮನಸ್ಸು ಗಟ್ಟಿಮಾಡಿ ಸೂರದಾಸನನ್ನು ಒಳಗೆ ಕರೆದಳು. ಆಗ ಆತನಿಗೆ ಆದ ಆನಂದವನ್ನು ವರ್ಣಿಸಲಾಸಲ್ಲ; ಅವನಲ್ಲಿ ಅಸ್ಥಿಚರ್ಮಗಳೆರಡೇ ಉಳಿದಿದ್ದರೂ ಅವನು ಈ ಪ್ರಸಂಗದಲ್ಲಿ ಅತ್ಯಂತ ಉತ್ಸಾಹದಿಂದ ಸಾವುಕಾರನ ಮನೆಯನ್ನು ಸೇರಿದನು. ಬಳಿಕ ಆ ಸ್ತ್ರೀಯು ಅವನನ್ನು ಕೈಹಿಡಿದು ಉಪ್ಪರಿಗೆಯ ಮೇಲೆ ಕರೆದೊಯ್ದು ಒಂದು ಅಂದವಾದ ಮಂಚದ ಮೇಲೆ ಕುಳ್ಳಿರಿಸಿದಳು. ಶ್ರೀಮಂತರಮನೆಯೊಳಗಿನ ಬಳಿಕ ಕೇಳುವದೇನು? ಆ ವಿಲಾಸ ಮಂದಿರದ ವೈಭವವು ಅವರ್ಣನೀಯವಾಗಿತ್ತು. ಸೂರದಾಸನು ಆ ಅಪೂರ್ವನೋಟವನ್ನು ನೋಡುತ್ತ ಬೆರಗಾಗಿ ಕುಳಿತಿರಲು, ಆ ಸಾಧ್ವಿಯು ಶುಭ್ರವಸ್ತ್ರವನ್ನುಟ್ಟು ಕೈಯಲ್ಲಿ ಲಕಲಕಿಸುತ್ತಿರುವ ತಾಂಬೂಲದ ಕರಂಡಕವನ್ನು ಹಿಡಿದುಕೊಂಡು ಅವನಮುಂದೆ ನಿಂತಳು. ಜನ್ಮದಾರಭ್ಯ ಇಂಥ ಸ್ತ್ರೀಯನ್ನೂ ಇಂಥ ವಿಲಾಸಮಂದಿರವನ್ನೂ ಕಾಣದ ಆ ಸೂರದಾಸನು ತನ್ನ ಮುಂದೆ ರತಿಕ್ರೀಡೆಗೆ ಸಿದ್ಧಳಾಗಿ ನಿಂತಿರುವ ಸುಂದರಿಯನ್ನು ನೋಡಿಯೂ ಮೌನವಾಗಿ ಕುಳಿತನು. ಆ ಸಾಧ್ವಿಯ ಪಾತಿವ್ರತ್ಯ ಪ್ರಭಾವದಿಂದಲೋ ಎಂಬಂತೆ ಆತನಲ್ಲಿ ವೈರಾಗ್ಯವು ಉತ್ಪನ್ನವಾಯಿತು. ತನ್ನ ಯೋಗ್ಯತೆಯನ್ನೂ ಆ ಸಾಧ್ವಿಯ ಯೋಗ್ಯತೆಯನ್ನೂ ಮನಸ್ಸಿನಲ್ಲಿ ತಂದು ಅವನು ಪಶ್ಚಾತ್ತಾಪಕ್ಕೆ ಗುರಿಯಾದನು. ಆಗ ಆತನು ಆ ಸಾಧ್ವಿಯಿಂದ ಒಂದು ದಬ್ಬಣವನ್ನು ತರಿಸಿಕೊಂಡು ತನ್ನ ಎರಡೂ ಕಣ್ಣುಗಳಲ್ಲಿ ಚುಚ್ಚಿಕೊಂಡು ಆ ಸಾಧ್ವಿಯ ಚರಣಗಳನ್ನು ಗಟ್ಟಿಯಾಗಿ ಹಿಡಿದು ಕ್ಷಮಿಸಬೇಕೆಂದು ಬೇಡಿಕೊಂಡನು. ಇದನ್ನು

ನೋಡಿ ಆ ಸ್ತ್ರೀಯು ಹೌಹಾರಿನಿಂತಿರಲು, ಸಾವುಕಾರನೂ ಅಲ್ಲಿಗೆ ಬಂದನು. ಆಗ ಸೂರದಾಸನು ತನ್ನನ್ನು ಅಡವಿಯಲ್ಲಿ ಬಿಟ್ಟುಬರುವಂತೆ ಬೇಡಿಕೊಂಡನು. ಸಾವುಕಾರನು ಅವನ ಇಚ್ಛೆಯಂತೆ ಮಾಡಿದನು. ಈ ಪ್ರಕಾರ ಸೂರದಾಸನು ಪಾಪಮೂಲವಾದ ವಾಸನೆಯನ್ನು ತಾಳಿದ್ದರೂ ಅದರಿಂದಲೇ ಅವನಲ್ಲಿ ವೈರಾಗ್ಯವು ಅಂಕುರಿಸಿ ಅವನು ನಾಮಾಂಕಿತ ಸಾಧುವಾದನು. ಈಗ ಅವನ ಹೆಸರು ತಕ್ಕೊಂಡರೆ ಸಾಕು ಸರ್ವ ಪಾಪವು ದಗ್ಧವಾಗುವದು"

ಕಥೆಯ ಪರಿಣಾಮವು ನಾರಾಯಣರಾಯನ ಮನಸ್ಸಿನಮೇಲೆ ಚೆನ್ನಾಗಿ ಆಯಿತು. ಪಶ್ಚಾತ್ತಾಪದಿಂದ ಶುದ್ಧವಾಗುತ್ತ ನಡೆದಿದ್ದ ಆತನ ಹೃದಯದಲ್ಲಿ ತಾತ್ಪೂರ್ತಿಕ ವಿರಕ್ತಿಯು ಉದ್ಭವಿಸಿತು. ಅವನು ಸೂರದಾಸನಂತೆ ತಾನೂ ವಿರಕ್ತನಾಗಬಯಸಿ ಕಾಶಿಗೆ ಹೋಗಿ ಸನ್ಯಾಸವನ್ನು ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿ, ಆ ರಾತ್ರಿಯೇ ಅಲ್ಲಿಂದ ಹೊರಟನು.

ಈ ಮೇರೆಗೆ ಪುರಾಣವೈರಾಗ್ಯ-ಪ್ರಸೂತವೈರಾಗ್ಯಗಳಂತಿರುವ ವಿರಕ್ತಿಯನ್ನು ತಳೆದ ನಾರಾಯಣರಾಯನು ಪ್ರಯಾಣಮಾಡುತ್ತ ಸರಿಯಾದ ಮಾರ್ಗವು ಗೊತ್ತಿಲ್ಲದ್ದರಿಂದ ಸಿಂಧೇನರಾಜಧಾನಿಗೆ ಬಂದನು. ಅಲ್ಲಿ ಅವನಿಗೆ ಆಕಸ್ಮಾತ್ತಾಗಿ ಆತನ ಸ್ನೇಹಿತನೊಬ್ಬನು ಭೆಟ್ಟಿಯಾದನು. ಕಾಲಾತಿಕ್ರಮಣದಿಂದಲೂ, ದೇಶಾಂತರದಿಂದಲೂ ಇಷ್ಟೊತ್ತಿಗೆ ನಾರಾಯಣರಾಯನ ಉಪರತಿಯು ಸರಿದುಹೋಗಿತ್ತು. ಅವನು ಸ್ನೇಹಿತನ ಆಗ್ರಹದಿಂದ ಸಿಂಧೇನದಂಡಿನಲ್ಲಿ ಚಾಕರಿಯನ್ನು ಹಿಡಿದು ಸ್ವಲ್ಪ ದಿವಸಗಳಲ್ಲಿಯೇ ತನ್ನ ಪೌರುಷದಿಂದ ಮುಂದೆ ಬಂದು ನೂರುಜನ ಕುದುರೆಯ ಸವಾರರ ಅಧಿಪತಿಯಾದನು. ಹೀಗೆ ಪಾರಮಾರ್ಥವನ್ನು ಬಯಸಿಬಂದ ನಾರಾಯಣರಾಯನು ಹಸಿಬಿಸಿ ವಿರಕ್ತಿಯಿಂದ ಕೊನೆಮುಟ್ಟದೆ ಮತ್ತೆ ಮಾಯಾಜಾಲದಲ್ಲಿ ಬಿದ್ದುಕೊಂಡಿರಲು ನಮ್ಮ ಮರಾಟರ ಅವನತಿಯಕಾಲವು ಸಮೀಪಿಸಿದ್ದರಿಂದ ಅಬ್ದಾಲಿಯ ಕೂಡ ಕದನಹೂಡಿದ ಭಾವೂಸಾಹೇಬನ ಆಗಮನನಿಮಿತ್ತವಾಗಿ ಆತನಿಗೆ ರಂಗೂಬಾಯಿಯ ಪುನರ್ದರ್ಶನವಾಯಿತು. ನಾರಾಯಣರಾಯನು ರಂಗೂಬಾಯಿಯನ್ನು ಬಿಟ್ಟು ಬಂದು ಒಂದು ವರ್ಷವಾಗಿದ್ದರೂ ಆಕೆಯ ದರ್ಶನದಿಂದ ಪೂರ್ವಸಂಸ್ಕಾರವು ಆತನ ತಲೆಯಲ್ಲಿ ತುಂಬಿಕೊಳ್ಳದೆ ಬಿಡಲಿಲ್ಲ. ದೈವಗತಿಯು ವಿಚಿತ್ರವು. ಅವನು ಭ್ರಾಂತನಾಗಿ ಕರ್ತವ್ಯವನ್ನು ಬಿಟ್ಟು ಆ ಸುಂದರಿಯ ಪ್ರಾಪ್ತಿಯ ಮಾರ್ಗವನ್ನು ಶೋಧಿಸಲಾರಂಭಿಸಿದನು. ಆದ್ದರಿಂದ ಆತನು ಸ್ವಲ್ಪ ದಿವಸಗಳಲ್ಲಿಯೇ ತನ್ನ ಅಧಿಕಾರವನ್ನು ಕಳಕೊಂಡನು. ಆದರೂ ಆತನು ಅಸಮಾಧಾನಪಡದೆ ಒಣ ಕಟಕಟಿಯು ತಪ್ಪಿತೆಂದು ಸಂತೋಷಹೊಂದಿ ವೇಷಾಂತರದಿಂದ ಆಕೆಯ ಸನ್ನಿಧಿ

ಯಲ್ಲಿ ಸುತ್ತಾಡತೊಡಗಿದನು. ಅವನು ಒಮ್ಮೊಮ್ಮೆ ಸ್ತ್ರೀವೇಷದಿಂದ ಅವಳ ಬಳಿಗೆ ಬರುವನು; ಮತ್ತೊಮ್ಮೆ ಭಿಕ್ಷುಕವೇಷದಿಂದ ಬರುವನು. ಒಮ್ಮೊಮ್ಮೆ ಏನಾದರೊಂದು ಸುದ್ದಿಯನ್ನು ಹೇಳುವವನಂತೆ ಜಾಸೂದನ ವೇಷಹಾಕಿಕೊಂಡು ಬರುವನು. ಹೀಗೆ ಆತನು ಆಗಾಗ್ಗೆ ಆಕೆಯ ಬಳಿಗೆ ಬಂದು ತನ್ನ ನೇತ್ರಸಾಫಲ್ಯವನ್ನು ಮಾಡಿಕೊಳ್ಳುತ್ತಿದ್ದನು. ಹೀಗೆ ಅತಿರೇಕವಾದ ವಾಸನಾಬಲದಿಂದ ಅವನು ಪಾಪ-ಪುಣ್ಯಗಳ ಪರಿವೆಯನ್ನು ಬಿಟ್ಟುಬಿಟ್ಟಿದ್ದನು. ಪರಸ್ತ್ರೀಹಂಬಲವು ಭಯಂಕರವಾದದ್ದೆಂಬ ಅರಿವು ಅವನ ಕನಸುಮನಸುಗಳಲ್ಲಿ ಸಹ ಬರದಂತಾಯಿತು. ಪಾಪ! ಆ ಬಾಲವಿಧವೆಯ ಗತಿಯಿಂದ ಎಷ್ಟುಮಂದಿ ಮಣ್ಣುಗೂಡಿರುವರೆಂಬದನ್ನು ಅವನೇನುಬಲ್ಲನು? ಈ ಸುಂದರಿಯ ಸಹವಾಸವನ್ನು ಸೂರೆಗೊಳ್ಳುವವನು ತಾನೇ ಎಂದು ಮೂಢಭಾವದಿಂದ ಅವನು ಬಾಯಿಚಪ್ಪರಿಸುತ್ತಿದ್ದನು. ಆದರೆ ಅವನ ಹರಿಕೆಯು ಕೈಗೂಡಿತೋ ಇಲ್ಲವೋ ಎನ್ನುವಂತೆ ಮುಂದೆ ಕೆಲದಿವಸಗಳಲ್ಲಿ ತಾಯಿಯೂ ಬಾಯಿಯೂ, ಬಳವಂತರಾಯನೂ ತೀರಿಕೊಂಡದ್ದರಿಂದ ರಂಗೂಬಾಯಿಯು ಸಹಜವಾಗಿ ಪರವಶಳಾದಳು. ಇನ್ನೇನಾದರೂ ಅನುಕೂಲಕಾಲವು ಬರಬಹುದೋ ಎಂದು ನಾರಾಯಣರಾಯನು ಯೋಚಿಸುತ್ತಿರಲು, ಶ್ರೀಮಂತರ ಮೇರೆಯಲ್ಲಿದ್ದ ರಂಗೂಬಾಯಿಯು ಒಂದುದಿನ ರಾತ್ರಿಯಲ್ಲಿ ಒಮ್ಮಿಂದೊಮ್ಮೆ ಅದೃಶ್ಯಳಾದಳು. ಆಗ ಆತನು ಹುಚ್ಚನಂತೆ ಹರಿದಾಡಿ ಹುಡುಕಿನೋಡಿದನು. ಆದರೆ ಅದರಿಂದ ಪ್ರಯೋಜನವಾಗಲಿಲ್ಲ.

ಬಳಿಕ ಆತನು ಭಗ್ನಹೃದಯನಾಗಿ ಮನಸ್ಸಿನಲ್ಲಿ ಸಮಾಧಾನವಿಲ್ಲದೆ ಸಹಜವಾಗಿ ಕೆರೆಯಬಳಿಗೆ ಬರಲು ಹಿಂದೆ ವರ್ಣಿಸಿದಂತೆ ಒಬ್ಬ ಸ್ತ್ರೀಯು ಆತ್ಮಹತ್ಯ ಮಾಡಿಕೊಳ್ಳುವದು ಅವನ ದೃಷ್ಟಿಗೆ ಬಿತ್ತು; ಆಗ ಅವನು ಧೈರ್ಯದಿಂದ ನೀರಲ್ಲಿಳಿದು ಆಕೆಯನ್ನು ಹಿಡಿದೆಳೆದು ನೋಡಲು, ಅವಳು ತನ್ನ ಪ್ರಾಣಪದಕವಾಗಿದ್ದ ರಂಗೂಬಾಯಿಯೇ ಆಗಿದ್ದಳು! ಆಗ ಆತನ ಆನಂದವು ವರ್ಣನೆಯನ್ನು ಮೀರಿತು. ಅವನು ಆಕಾಶದಕಡೆಗೆ ಮೋರೆಯನ್ನೆತ್ತಿ ದೇವನೇ, ಕಡೆಗೆ ನನ್ನ ಮೊರೆಯನ್ನು ಕೇಳಿದೆಯಾ? ಎಂದು ಕೊಂಡಾಡುತ್ತ ಆಕೆಯು ಸಾವಕಾಶವಾಗಿ ಉಸಿರಾಡಿಸುವದನ್ನು ನೋಡಿ ಪ್ರಿಯೇ, ಎಂದು ಕೂಗಿದನು. ಆದರೆ ಆತನ ಪಾಪಮಯವಾದ ಆನಂದವು ಬಹಳಹೊತ್ತು ಉಳಿಯಬಾರದೆಂದು ದೈವಸಂಕಲ್ಪವಿತ್ತೋ ಹ್ಯಾಗೆಂಬದು ತಿಳಿಯದು! ಆತನ ಉಪಚಾರದಿಂದ ಮೆಲ್ಲಮೆಲ್ಲನೆ ಕಣ್ಣುತೆರೆಯುತ್ತಿರುವ ರಂಗೂಬಾಯಿಯನ್ನು ಒಂದು ಮೊಸಳೆಯು ಹಿಡಿದೆಳೆದು ತನ್ನ ಭಕ್ಷ್ಯಸ್ಥಾನಕ್ಕೆ ತಕ್ಕೊಂಡು ಹೋಯಿತು. ಹಾಯ್! ಕೈಗೆ ಬಂದದ್ದು ಬಾಯಿಗೆ ಬರಲಿಲ್ಲೆಂ

ಬಂತೆ ಸ್ಥಿತಿಯೊದ್ದರಿಂದ ನಾರಾಯಣರಾಯನು ಗೋಳಿಟ್ಟನು. ಆತನಿಗೆ ಜಗತ್ತೇ ಶೂನ್ಯಪ್ರಾಯವಾಯಿತು. ಅವನು ದೇಹದ ಪರವೆಯನ್ನು ಸಹ ಬಿಟ್ಟು 'ರಂಗೂ ರಂಗೂ' ಎನ್ನುತ್ತ ಆಕೆರೆಯ ಸುತ್ತುವರೆದು ತಿರುಗಹತ್ತಿದನು. ಪಾನಿಪತ್ತಸಂಗ್ರಾಮವಾಗಿ ಮರಾಟರು ದಿಕ್ಕೆಟ್ಟು ಓಡಿದರೂ ಅವನು ಅಲ್ಲಿಂದ ಕದಲಲಿಲ್ಲ. ಅವನ ಹೃದಯವೆಲ್ಲ ರಂಗೂಬಾಯಿಮಯವಾಯಿತು. ಹೊನ್ನು-ಹೆಣ್ಣುಗಳ ಹುಚ್ಚು ಹಿಡಿದವರ ಬಾಳು ಹೀಗೆಯೇಸರಿ!

---

೧೮ನೆಯ ಪ್ರಕರಣ.

## ಬೂದಿಮುಚ್ಚಿದ ಕೆಂಡ.

ಪ್ರಿಯವಾಚಕರೇ, ಹೀಗೆ ರಂಗೂಬಾಯಿಯು ನಾರಾಯಣರಾಯನಿಗೆ ಹುಚ್ಚು ಹಿಡಿಸಿಹೋದ ದಿವಸವು. ಅಂದರೆ ಪೌಷ್ಯ ಶುದ್ಧ ರಾತ್ರಿಯು, ಮರಾಟರ ಇತಿಹಾಸದಲ್ಲಿ ಬಹು ಮಹತ್ವದ್ದೆಂದು ಹೇಳಬಹುದು. ಯಾಕಂದರೆ ಮರುದಿನವೇ ಮರಾಟರ ಸಾಮ್ರಾಜ್ಯದ ಬೆಳವಣಿಗೆಯು ಕಳೆಗುಂದಿ ಅವರು ಅವನತಿಯಲ್ಲಿ ಕಾಲಿಟ್ಟರು. ಆದ್ದರಿಂದ ಆ ರಾತ್ರಿಯೇ ಅಭ್ಯುದಯದ ಸೀಮಾಂತರವಾಯಿತೆನ್ನಲಿಕ್ಕೆ ಪ್ರತ್ಯವಾಯವಿಲ್ಲ. ಭಾವೂಸಾಹೇಬನು ಆ ರಾತ್ರಿ ತನ್ನ ನಂಬಿಗೆಯ ಸರದಾರರನ್ನೆಲ್ಲ ಕರೆಯಿಸಿಕೊಂಡು ತನ್ನ ಸ್ಥಿತಿಗತಿಯನ್ನು ಕುರಿತು ಚೆನ್ನಾಗಿ ಆಲೋ... ಹಾಹಾಕಾರವನ್ನು ನೋಡಿ ನೋಡಿ ಬೇಸರವಿಟ್ಟಿತ್ತು: ಆದ್ದರಿಂದ ಆತನು ಪಾನಿಪತ್ತು ಮೈದಾನದಲ್ಲಿ ಹೀಗೆ ಕೊಳೆಯುತ್ತ ಬೀಳಬಾರದೆಂದು ಬಗೆದು ನೆರೆದ ಸರದಾರರನ್ನು ಕುರಿತು ನುಡಿದನೇ ನಂದರೆ—"ಮಿತ್ರರೇ, ಪ್ರಸ್ತುತದಲ್ಲಿ ನಮಗೆ ಎಂಥ ಕಠಿಣಕಾಲವು ಪ್ರಾಪ್ತವಾಗಿರುವದೆಂಬದನ್ನು ನೀವು ಬಲ್ಲಿರಿ; ಇದರಲ್ಲಿ ಈಶಸಂಕಲ್ಪವೇನಿರುತ್ತದೆಂಬದನ್ನು ಹೇಳಲಿಕ್ಕಾಗುವದಿಲ್ಲ. ನಾವು ಶ್ರೀಮಂತರಮುಂದೆ ಆಡಿಬಂದಂತೆ ಮಾಡಿತೋರಿಸಬೇಕೆಂಬದನ್ನು ಪುನಃಪುನಃ ಬಿಚ್ಚಿಹೇಳುವ ಕಾರಣವಿಲ್ಲ. ಇಂದಿನವರೆಗೆ ನಮ್ಮ ಉಪಾಯಗಳೆಲ್ಲ ನಮಗೇ ಅಪಾಯಗಳಾಗಿ ಪರಿಣಮಿಸುತ್ತಬಂದಿವೆ. ಅಂದಬಳಿಕ ಮುಂದಿನ ನಿರ್ಣಯವನ್ನು ಹ್ಯಾಗೆ ಕಟ್ಟಬೇಕು? ನಮ್ಮ ವಿಶ್ವಾಸರಾಯನೂ, ಜನಕೋಜಿಯೂ ಕೂಡಿ ಶ್ರೀಮಂತರಿಗೆ ಬರೆದ ಪತ್ರವನ್ನಾದರೂ ನಾನು ಸ್ವಸನೆಗೆ ಕಳಿಸಿಕೊಡಲಿಲ್ಲ. ಏನುನಿಮಿತ್ತವೋ ಈ ಸಾರೆ ನನ್ನಿಂದ ಇಂಥ ಬಹಳ ಪ್ರಮಾದವಾಗಿದ್ದವು. ನಿಮ್ಮೊಳ

ಗಿನ ಹಲವರಿಗೆ ಹಲವು ಬಗೆಯ ದೂಷಣೆಗಳನ್ನು ಇಟ್ಟೆನು. ಸಿಕ್ಕ ಸಿಕ್ಕಹಾಗೆ ಅಂದೆನು. ಪ್ರಿಯವಮಾತುಗಳನ್ನು ಅಲ್ಲಗಳೆದನು. ಆದರೆ ಪ್ರಿಯಬಂಧುಗಳೇ, ಆ ಎಲ್ಲ ಸಂಗತಿಗಳನ್ನು ನಾವೂ-ನೀವೂ ಕೂಡಿಯೇ ಮರೆತುಬಿಡೋಣ! ಸದ್ಯಕ್ಕೆ ನಾವು ಅಬ್ದಾಲಿಯಮೇಲೆ ಬೀಳದಿದ್ದರೆ ಗತ್ಯಂತರವೇ ಇಲ್ಲ; ಒಂದು ... ಸಾವು ... ... ... ... ... ... ... ದಿಲ್ಲಿಯವರೆಗೆ ಹೋಗಿಬಹುದೆನು. ... ದಿಲ್ಲಿಗೆ ಹೋದರೆ ... ಕರು ಪುನಃ ಹೆರೆಯುಚ್ಚಿದ ಹಾವಿನಂತೆ ... ನಮಗೆ ... ಜನರ ಬೆಂಬಲವೂ ಸಿಗುವದು. ಆ ಮೇಲೆ ಅಬ್ದಾಲಿಯನ್ನು ಮಣ್ಣುಮುಕ್ಕಿಸಲಿಕ್ಕೆ ತಡ ವಾಗಲಿಕ್ಕಿಲ್ಲ. ಇದಕ್ಕೆ ನಿಮ್ಮ ನಿಮ್ಮ ವಿಚಾರಗಳೇನಿರುವವು?"

ಈ ... ಭಾವುಸಾಹೇಬನು ಪ್ರಶ್ನೆಮಾಡಲು ಎಲ್ಲ ಸರದಾರರೂ ದಿಲ್ಲಿಗೆ ... ವಿಚಾರವೇ ಪ್ರಶಸ್ತವೆಂದು ಅಭಿಪ್ರಾಯ ಪಟ್ಟರು. ಬಳಿಕ ಸೈನ್ಯವನ್ನು ಹ್ಯಾಗೆ ... ಬೇಕೆಂಬ ವಿಚಾರವಾಗಿ ನಾಳಿಗೆ ಸೂರ್ಯೋದಯಕ್ಕೆ ಸರಿಯಾಗಿ ಎಲ್ಲ ದಂಡೂ ಹೊರಡ ... ಬೇಕೆಂದು ಗೊತ್ತಾಯಿತು. ಗಾರದಿ, ಗಾಯು ಕವಾಡ, ಹೋಳಕರ ... ದವರು ಮರೆಮೋಸಗಳಾಗದಂತೆ ವಚನಕೊಟ್ಟರು. ನಾಳಿಗೆ ಮರಾಟರ ಛಾವಣಿಯು ಕೀಳುವದೆಂಬ ಯಾವ ಸುದ್ದಿಯನ್ನೂ ಅಬ್ದಾಲಿಗೆ ಹತ್ತಗೊಡದೆ ಒಮ್ಮೆಲೆ ಆತನಮೇಲೆ ಹೋಗಿ ಬೀಳುವದರಿಂದ ನಿಶ್ಚಿಂತರಾಗಿದ ಪಠಾಣರು ಚದರಿ ಓಡುವರೆಂದು ಭಾವುಸಾಹೇಬನೇ ಮೊದಲಾದವರು ತರ್ಕಿಸಿದರು. ಆಗ ರಾತ್ರಿಯು ಬಹಳವಾದ್ದರಿಂದ ಒಂದೆರಡು ತಾಸು ವಿಶ್ರಾಂತಿಯನ್ನಾದರೂ ತಕ್ಕೊಳ್ಳಲೆಂದು ಭಾವುಸಾಹೇಬನು ಸರದಾರರಿಗೆ ಅಪ್ಪಣೆಕೊಟ್ಟು ತಾನೂ ಮಲ ಗಿಕೊಳ್ಳುವದಕ್ಕಾಗಿ ಅಂತರ್ಗೃಹಕ್ಕೆ ತೆರಳಿದನು.

ಈ ಕಾಲಕ್ಕೆ ಭಾವುಸಾಹೇಬನ ವಯಸ್ಸು ಮೂವತ್ತರ ಒಳಹೊರಗೆ ಇದ್ದು ಆತನು ಎರಡನೇ ಲಗ್ನವನ್ನು ಮಾಡಿಕೊಂಡಿದ್ದನು. ಮೂವತ್ತುವರುಷದ ತರು ಣನು ಚಲುವೆಯಾದ ಎರಡನೇ ಹೆಂಡತಿಯನ್ನು ಅತ್ಯಂತವಾಗಿ ಪ್ರೀತಿಸುವದು ಸ್ವಾ ಭಾವಿಕವು; ಆದರಂತೆ ಭಾವುಸಾಹೇಬನ ಸ್ಥಿತಿಯಾದರೂ ಇತ್ತು. ಆತನ ಪ್ರಿಯ ಭಾರ್ಯೆಯಾದ ಪಾರ್ವತೀಬಾಯಿಯು ಲೋಕೋತ್ತರ ಸುಂದರಿಯೂ ಪತಿವ್ರತೆ ಯೂ ಇದ್ದಳು. ಆಕೆಗೆ ಈಗ ೨೦।೨೫ ವರ್ಷಗಳು ನಡೆಯುತ್ತಿರಬಹುದು: ಆ ಶ್ರೀಮಂತ ಹೆಣ್ಣುಮಗಳು ವೀರಪತ್ನಿಯನಿಸಿಕೊಳ್ಳಲಿಕ್ಕೆ ಯೋಗ್ಯಳಿದ್ದಳು. ಆಕೆಯು ... ಯ ... ದತಗಳ ... ಬಲ್ಲವಳಾಗಿದ್ದಳು. ಈ ದಿನ ಆಕೆಗೆ ಏನೋ ... ... ... ನಾಳಿನ ದಿವಸ ಛಾವಣಿಯು ತಳಕೀಳುವದು

ರಿಂದ ಭವಿಷ್ಯವು ಹ್ಯಾಗಾಗುವದೋ ಎಂಬ ಶಂಕೆಯು ಆಕೆಯಲ್ಲಿ ಉತ್ಪನ್ನವಾಗಿತ್ತು; ಆಕೆಗೆ ಗಂಡನ ಸ್ವಭಾವವು ಪೂರ್ಣವಾಗಿ ಅವಗತವಿತ್ತು. ಭಾವೂಸಾಹೇಬನು ಅತ್ಯಂತ ಅಭಿಮಾನಿಯಾದ್ದರಿಂದ ಆತನು ಅಬ್ದಾಲಿಗೆ ಕೈತೋರಿಸದೆ ಎಂದೂ ಮುಂದೆ ಹೋಗನೆಂಬದನ್ನು ಆವಳು ತಿಳಿದಿದ್ದಳು. ಹೀಗೆ ನಾಳಿನದಿವಸ ಕಾಳಗವು ಪ್ರಾರಂಭವಾಗುವದರಿಂದ ರಾಕ್ಷಸರಂಥ ಪಠಾಣರಿಗೆ ಕೂಳಿಲ್ಲದೆ ನಿರ್ವಿಣ್ಣರಾದ ನಮ್ಮ ಮರಾಟರು ಈಡಾಗಲಾರರೆಂಬದನ್ನಾದರೂ ಆ ಜಾಣಾಕ್ಷಳು ತರ್ಕಿಸಿದ್ದಳು. ಆಕೆಗೆ ಬಹುತರವಾಗಿ ಸಂಗ್ರಾಮದ ಪರಿಣಾಮವೆಲ್ಲ ತಿಳಿದಂತಾಗಿತ್ತು; ಆದ್ದರಿಂದ ಆಕೆಯು ವಿಪರೀತಕಾಲವು ಒದಗಿದಲ್ಲಿ ಸತೀಹೋಗುವದನ್ನು ನಿರ್ಧರಿಸಿ ಗಂಡನ ಪಾದಪೂಜೆಯನ್ನು ಮಾಡಬೇಕೆಂದು ಏನೇನೋ ಮನಸ್ಸಿನಲ್ಲಿ ಮಾಡಿಕೊಂಡು ಕುಳಿತಿದ್ದಳು.

ಹೀಗೆ ಪಾರ್ವತೀಬಾಯಿಯು ಕುಳಿತಿರುವಾಗ ಭಾವೂಸಾಹೇಬನು ಬಂದನು. ಆಗ ಆಕೆಯು ಲಗಬಗೆಯಿಂದ ಎದ್ದುನಿಂತಳು. ಹೆಂಡತಿಯ ಜರತಾರಿಯ ಸೀರೆ-ಕುಪ್ಪಸಗಳನ್ನು ನೋಡಿ ಆತನು ಕ್ಷಣಮಾತ್ರ ಯುದ್ಧದ ಗೊಂದಲವನ್ನು ಮರೆತುಬಿಟ್ಟು—"ಪ್ರಿಯೇ, ಇದೇನು? ಯಾವ ಹಬ್ಬವೂ ಇಲ್ಲದೆ ನೀನು ಈ ದಿನ ಇಷ್ಟು ಶೃಂಗಾರವಾಗಲಿಕ್ಕೆ ಕಾರಣವೇನು? ಎಂದು ಕೇಳಲು ಆ ಸ್ತ್ರೀಯು ಸ್ವಲ್ಪ ವಿನ್ನತಿಯಿಂದ—ಮಹಾರಾಜ, ನಾಳಿಗೇ ನಮ್ಮ ಛಾವಣಿಯು ಏಳುವದಷ್ಟೇ; ಭವಿತವ್ಯವು ಏನಾಗುವದೋ ಎಂಬದು ತಿಳಿಯುವದಿಲ್ಲ; ಆಗಿನ ನಿಮ್ಮ ವಿಚಾರವು ಎಷ್ಟರಮಟ್ಟಿಗೆ ಸ್ಥಿರವಾಗಿ ಉಳಿಯುವದೋ ನಾನು ಹೇಳಲಾರೆನು. ಅಬ್ದಾಲಿಯು ಎಷ್ಟು ಮೈಮರೆತು ಕುಳಿತರೂ ಬಲಿಷ್ಠನಿದ್ದುದರಿಂದ ನಿಮ್ಮನ್ನು ಅಟ್ಟಗಟ್ಟದೆ ಬಿಡುವದಿಲ್ಲ. ಬೆನ್ನುತೋರಿಸಿಹೋಗುವದಂತೂ ತಮ್ಮ ಸ್ವಭಾವವಲ್ಲ, ಅಂದಬಳಿಕ ಘನಘೋರವಾದ ಸಂಗ್ರಾಮವಾಗಿಯೇತೀರಬೇಕಾಗುವದು. ಈ ದಿನ ಹಗಲೆಲ್ಲ ನನ್ನ ಬಲಗಣ್ಣು ಹಾರುತ್ತಿರುವದು. ನನಗೆ ಸಮಾಧಾನವಿಲ್ಲ; ಆದ್ದರಿಂದ ತಮ್ಮ ಚರಣಗಳನ್ನು ಪೂಜಿಸಿ ಒಂದುವೇಳೆ ಕಾಲಚಕ್ರವು ತಿರುಗಿದರೆ ಸತೀಹೋಗುವದಕ್ಕಾಗಿ ತಮ್ಮ ಆಜ್ಞೆಯನ್ನು ತಕ್ಕೊಳ್ಳಲಿಚ್ಛಿಸುತ್ತೇನೆ." ಎಂದು ನುಡಿದಳು. ಹೆಂಡತಿಯ ಈ ಅಕ್ಷೇಮಕರವಾದ ಮಾತುಗಳಿಂದ ಭಾವೂಸಾಹೇಬನ ಮನಸ್ಸು ಅಸ್ವಸ್ಥವಾಯಿತು. ಆದರೂ ಆತನು ತನ್ನ ಪತಿಸರ್ವಸ್ವದಂತಿರುವ ಪತ್ನಿಯನ್ನು ಸಮಾಧಾನಮಾಡಲಿಚ್ಛಿಸಿ—"ಹುಚ್ಚೀ, ನಿನಗೆ ಈ ಸಂಗತಿಯು ಹ್ಯಾಗೆ ಗೊತ್ತಾಯಿತು? ನಾಳೆ ನಾವು ಕಾಳಗವನ್ನು ಮಾಡುವದಿಲ್ಲ; ಸೈನ್ಯದ [illegible] ಕಟ್ಟಿ [illegible] ದಿಲ್ಲಿಗೆ ಹೋಗುವ ವಿಚಾರವದೆ. ಎಂದು ಹೇಳಿ [illegible] ಯುದ್ಧವು ಪ್ರಾರಂಭವಾದರೂ

ನೀನು ಭಯಪಡುವ ಕಾರಣವಿಲ್ಲ. ಹೋಳಕರ ಮಲ್ಹಾರಪಂತನು ನಮ್ಮ ಸ್ತ್ರೀಪರಿವಾರವನ್ನೆಲ್ಲ ಸುರಕ್ಷಿತವಾಗಿ ದಿಲ್ಲಿಗೆ ಮುಟ್ಟಿಸುವನು. ಎಂದು ನುಡಿಯುತ್ತಿರಲು ಆ ಸ್ತ್ರೀಯು ನಡುವೇ ಬಾಯಿಹಾಕಿ ನುಡಿದಳೇನಂದರೆ—“ಕಾಳಗವು ಪ್ರಾರಂಭವಾಗುವದರಲ್ಲಿ ಸಂದೇಹವಿಲ್ಲ. ರಣಧೀರರಾದ ತಾವು ಪರಬಲಕ್ಕೆ ಸೊಪ್ಪುಹಾಕದೆ ಹೇಚು-ಪೇಚುನೋಡದೆ ಯುದ್ಧದ ಗೊಂದಲದಲ್ಲಿ ಬೀಳುವದು ನಿಶ್ಚಯ! ನಾನು ಜೀವಕ್ಕೆ ಹೆದರುತ್ತೇನೆಂತಲ್ಲ! ವೀರಪತ್ನಿಯಾದ ನನಗೆ ಪ್ರಾಣದ ಅಂಜಿಕೆಯಿಲ್ಲ; ಆದರೆ ಮರ್ಯಾದೆಗೆ ಅಂಜಬೇಕಾಗಿರುವದರಿಂದ ನೀವು ನಮ್ಮೆಲ್ಲರ ಜೋಹಾರವನ್ನು ಮಾಡಿಯೇ ಹೋಗಬೇಕೆಂದು ನನ್ನ ಪ್ರಾರ್ಥನೆಯಿರುವದು.

ಭಾವೂಸಾಹೇಬ—ಛೀ, ಛೀ, ಈ ಕೆಲಸವು ನಮ್ಮ ಬ್ರಾಹ್ಮಣರಿಂದ ಆಗದು! ಇದಕ್ಕೆ ರಜಪೂತರೇ ವಸ್ತಾದಿಗಳು; ಆದರೆ ಯಾಕೆ ಚಿಂತಿಸುವಿ? ಅಂಥ ಪ್ರಸಂಗದ ಸ್ಮರಣವೇ ಬೇಡ; ಶ್ರೀ ಛತ್ರಪತಿಯ ಪುಣ್ಯವು ನಮ್ಮನ್ನು ಸಂರಕ್ಷಿಸುವದು.

ಪಾರ್ವತೀಬಾಯಿ—ಜಗದಂಬೆಯು ಮನಸಿಗೆ ಬಂದಂತಾಗಲಿ; ಈಗ ನಿಮ್ಮ ಪಾದಪೂಜೆಮಾಡಬೇಕೆಂದು ನನ್ನ ಮನಸ್ಸು ಹರಿಯುತ್ತದೆ. ಇಷ್ಟು ಸೇವೆಯನ್ನು ತಕೊಳ್ಳಬೇಕು.

ಭಾವೂಸಾಹೇಬ—ನಿನ್ನ ಇಷ್ಟವಿದ್ದಂತೆ ಮಾಡು.

ಈ ಪ್ರಕಾರಭಾವೂಸಾಹೇಬನು ನುಡಿಯಲು ಪಾರ್ವತೀಬಾಯಿಯು ಸಂತೋಷಪಟ್ಟು ಪತಿಯ ಚರಣಗಳನ್ನು ಬಿಸಿನೀರಿನಿಂದ ಸ್ವಚ್ಛವಾಗಿ ತೊಳೆದಳು. ಬಳಿಕ ತನ್ನ ಸೆರಗಿನಿಂದ ಒರೆಸಿ ಗಂಧಪುಷ್ಪಗಳನ್ನು ಏರಿಸಿದಳು. ಮತ್ತು ಆತನ ವಿಶಾಲವಾದ ಹಣೆಯಲ್ಲಿ ಕೆಂಪು ಗಂಧವನ್ನು ಥಾಳಾಗಿ ಅಡ್ಡಗೀರಿನಿಂದ ಹಚ್ಚಿ ಮೇಲೆ ಅಕ್ಷತೆಗಳನ್ನಿಟ್ಟಳು. ಬಳಿಕ ಸಂಕ್ರಾಂತಿಯನ್ನು ಬೆಳಗಿ ಪತಿಯ ಚರಣಗಳ ಮೇಲೆ ಮಸ್ತಕವನ್ನಿಟ್ಟಳು. ಆಗ ಭಾವೂಸಾಹೇಬನು ಮುಗುಳು ನಗೆಯಿಂದ—“ಈಕೆಗೆ ಇದೆಲ್ಲಿಯ ಹುಚ್ಚು ಹೊಕ್ಕಿತು?” ಎಂದು ನುಡಿಯುತ್ತ ಪತ್ನಿಯನ್ನು ಹಿಡಿದೆತ್ತಿ ತಬ್ಬಿಕೊಂಡನು. ತನ್ನ ಇಚ್ಛೆಯಂತೆ ಗಂಡನು ಪೂಜೆಯನ್ನು ತಕೊಂಡದ್ದಕ್ಕಾಗಿ ಪಾರ್ವತೀಬಾಯಿಯು ಕಡುಸಂಭ್ರಮದಿಂದ ಪತಿಯ ಪ್ರೇಮಾನಂದದಲ್ಲಿ ಸಮರಸವಾದಳು.

“ಸಂಗ್ರಾಮದಲ್ಲಿ ತಾವು ಬೆನ್ನುತೋರಿಸುವವರಲ್ಲ” ಎಂಬರ್ಥದ ಹೆಂಡತಿಯ ಮಾತುಗಳು ಭಾವೂಸಾಹೇಬನ ಕರ್ಣಪ್ರದೇಶದಲ್ಲಿ ಬೆಳತನಕ ಸುತ್ತುವರೆದವು. ನಿದ್ದೆಹತ್ತಿದಾಗ ಸಹ ಸ್ವಪ್ನದಲ್ಲಿ ಅವೇಮಾತುಗಳು ಕೇಳಬರುತ್ತಿದ್ದವು. ಕಾಳಗದಲ್ಲಿ ಓಡಿ ಇಲ್ಲವೆ ಜಾರಿ ಹೋಗುವ ಪ್ರಯತ್ನವು ತನ್ನ ಚರಿತ್ರಕ್ಕೆ ಕಲಂ

ಕಪಾಶ್ರಯವೆಂಬದರ ಕಡೆಗೆ ಅವನ ಮನಸ್ಸು ಹೋಯಿತು. ಆಗ ಆತನು ದಿಲ್ಲಿಗೆ ಹೋಗುವ ವಿಚಾರವನ್ನು ತಿರುಗಿಸಿ ಉತ್ತಮವಾದ ವ್ಯೂಹರಚನೆಯಿಂದ ಅಬ್ದಾಲಿಯನ್ನು ಜಯಿಸುವ ನಿಶ್ಚಯವನ್ನು ಮಾಡಿದನು. ಒಂದು ವೇಳೆ ಜಯವು ಪ್ರಾಪ್ತವಾಗದಿದ್ದರೂ ಮರಾಟರಸಾಮರ್ಥ್ಯದ ಅನುಭವವಾದರೂ ಅಬ್ದಾಲಿಗೆ ಗೊತ್ತಾಗಬಹುದೆಂಬ ವಿಚಾರಗಳು ಅವನಲ್ಲಿ ಬಂದುಹೋದವು. ಹೀಗೆ ಅವನು ಆ ರಾತ್ರಿಯನ್ನು ಬಗೆಬಗೆಯ ಯೋಚನೆಗಳಲ್ಲಿ ಕಳೆದು ದಿನಕ್ಕಿಂತಲೂ ಬೇಗನೆ ಎದ್ದು ಪ್ರಾತರವಿಧಿಯನ್ನು ಮುಗಿಸಿಕೊಂಡು ಸ್ನಾನಮಾಡಿ ದೇವಮಂದಿರವನ್ನು ಹೊಕ್ಕನು.

ಬಳಿಕ ಸಂಧ್ಯಾದಿ ನಿತ್ಯವಿಧಿಗಳನ್ನು ತೀರಿಸಿ ಪ್ರತಿದಿನದಂತೆ ಶಿವಪಂಚಾಯತನವನ್ನು ಹೂವು, ಬಿಲ್ವ, ಶುಭ್ರಾಕ್ಷತೆಗಳಿಂದ ಪೂಜಿಸಿ ಸಂಗ್ರಾಮದಲ್ಲಿ ಜಯವು ಪ್ರಾಪ್ತವಾಗಬೇಕೆಂದು ಪ್ರಾರ್ಥಿಸಿದನು. ನಂತರ ಆತನು ಸೂರ್ಯನಮಸ್ಕಾರಗಳನ್ನು ಹಾಕಿ ಹೊರಗೆ ಬಂದು ವಿಶ್ವಾಸರಾಯನನ್ನು ಕರೆಯಿಸಿ ತನ್ನ ವಿಚಾರಗಳನ್ನು ಆತನಿಗೆ ತಿಳಿಸಿದನು. ಆಗ ಇನ್ನೂ ಒಂದು ತಾಸು ರಾತ್ರಿ ಇರಬಹುದು. ಆತನು ತನ್ನ ಈ ದಂಡಯಾತ್ರೆಯ ಸುದ್ದಿಯು ಅಬ್ದಾಲಿಗೆ ತಿಳಿಯದಂತೆ ಬಂದೋಬಸ್ತ ಮಾಡಿದ್ದನು. ಆ ದಿನ ರಾತ್ರಿ ಸೂರ್ಯೋದಯವಾಗುವವರೆಗೆ ಕಿಂಬಹುನಾ ಛಾವಣಿಯ ತಳಕೀಳುವವರೆಗೆ ಪರವಾನಿಗೆಯಿಲ್ಲದೆ ಯಾರೂ ಕಂದಕವನ್ನು ದಾಟಕೂಡದೆಂದು ಕಟ್ಟಪ್ಪಣೆಯಾಗಿತ್ತು. ಈ ಕೆಲಸವನ್ನು ಕಾವಲಗಾರರು ಬಹುದಕ್ಷತೆಯಿಂದ ಮಾಡುತ್ತಿದ್ದರು. ಆದರೆ ಶತ್ರುಗಳ ಗುಪ್ತಚಾರರಿಗೆ ಮಾತ್ರ ಇದರಿಂದ ಸಮಾಧಾನವಿಲ್ಲದಂತಾಗಿತ್ತು. ತಮ್ಮ ಒಡೆಯನಿಗೆ ಈ ಮಹತ್ವದ ಸುದ್ದಿಯನ್ನು ಹ್ಯಾಗೆ ಮುಟ್ಟಿಸಬೇಕೆಂದು ಅವರು ದೀರ್ಘವಿಚಾರದಲ್ಲಿ ಮುಳುಗಿ ಹೋಗಿದ್ದರು.

ಪ್ರತಿಸ್ಪರ್ಧಿಗಳು ತಮ್ಮ ವೈರಿಗಳ ಗುಪ್ತಾಲೋಚನೆಗಳನ್ನು ತಿಳಕೊಳ್ಳುವದಕ್ಕಾಗಿ ಹಲವು ಜನಗುಪ್ತಚಾರರನ್ನು ಸಾಕಿರುತ್ತಾರೆ. ಅವರು ಶತ್ರುಗಳ ಹೊಟ್ಟೆಯಲ್ಲಿ ಹೊಕ್ಕು ಬೆನ್ನಲ್ಲಿ ಬಿರಿದು ತಮ್ಮ ಒಡೆಯನ ಕಾರ್ಯವನ್ನು ಸಾಧಿಸುತ್ತಾರೆ. ಈ ಪದ್ಧತಿಯು ಯಾವಕಾಲದಲ್ಲಾದರೂ ಇದ್ದದ್ದೇ; ಆದರೆ ನಮ್ಮ ಹಿಂದುಸ್ಥಾನದಲ್ಲಿ ಸ್ವಜನವಂಚಕರು—ಸ್ವದೇಶದ್ರೋಹಿಗಳು ಹೆಚ್ಚುತ್ತ ನಡೆದದ್ದರಿಂದ ಪರಕೀಯರಾದ ಶತ್ರುಗಳಿಗೆ ಗುಪ್ತಚಾರರನ್ನು ಹೊರಗೆ ಹುಡುಕುವ ಕಾರಣವೇ ಇದ್ದಿಲ್ಲ. ಹೀಗೆ ಬೇಲಿಯೇ ಎದ್ದು ಹೊಲಮೇದಂತೆ ಮನೆಯಲ್ಲಿಯೇ ವಂಚಕರು ಹುಟ್ಟಿದ ಬಳಿಕ ಗುಪ್ತರಹಸ್ಯಗಳು ಹ್ಯಾಗೆ ಗುಪ್ತವಾಗಿ ಉಳಿಯಬೇಕು? ಇಂಥ ಸ್ವಜನವಂಚಕರಿಂದ ಅರ್ಥಾತ್ ಕುಲಕಂಟಕರಿಂದ ನಮ್ಮ ದೇಶವು ಇವೊತ್ತಿನವರೆಗೆ ಹಲವು ಬಗೆಯ ಹಾನಿಗಳನ್ನು ಹೊಂದಿರುತ್ತದೆ. ಯಾವ ಇತಿಹಾಸಗಳನ್ನು ಅವಲೋಕಿ

ಸಿದರೂ ಅವುಗಳಲ್ಲಿ ಸ್ವಜನ ದ್ರೋಹಿಗಳ ಸುಳಿದಾಟವು ಇದ್ದೇ ಇರುವದು. ಆದ್ದರಿಂದ ನಮ್ಮ ಮರಾಟರ ಇತಿಹಾಸವಾದರೂ ಆ ಪುಣ್ಯವಂತರ ಕೃಪಾಕಟಾಕ್ಷದಿಂದ ಪವಿತ್ರವಾಗದೆ ಹ್ಯಾಗೆ ಉಳಿಯುವದು?

ತ್ರ್ಯಂಬಕ ಶಾಸ್ತ್ರಿಯನ್ನು ನಮ್ಮ ವಾಚಕರು ಬಲ್ಲರು; ಆದರಂತೆ ಅವನ ನೀಚವೃತ್ತಿಯಾದರೂ ನೆನಪಿನಲ್ಲಿರಬಹುದು! ಆ ಕುಲಘ್ನನು ಅನುಷ್ಠಾನದ ನೆವದಿಂದ ಭಾವೂಸಾಹೇಬನ ದಂಡಿನಲ್ಲಿದ್ದು ಅವರ ಒಳಸಂಚುಗಳನ್ನು ತಿಳಿದು ಆಗಾಗ್ಗೆ ಅವನ್ನು ಅಬ್ದಾಲಿಗೆ ತಿಳಿಸುತ್ತಿದ್ದನು. ಭಾವೂಸಾಹೇಬನು ಎಷ್ಟು ಧೂರ್ತನಿದ್ದರೂ ಸ್ವಾಭಾವಿಕವಾದ ಹಿಂದೂಜನರ ಧರ್ಮಭೋಳೇತನವು ಅವನನ್ನು ಬಿಟ್ಟು ಹೋಗಲಿಲ್ಲ. ಅವನು, ಶಾಸ್ತ್ರಿಯ ಕಾರಸ್ಥಾನವನ್ನು ತಿಳಿದಿದ್ದು ಆತನನ್ನು ಸ್ವಚ್ಛಂದವಾಗಿ ಬಿಟ್ಟುಕೊಟ್ಟರೆ ತೊಂದರೆಯಾಗಬಹುದೆಂದು ಬುದ್ಧಿಪೂರ್ವಕವಾಗಿ ಬಳಿಯಲ್ಲಿ ಇರಿಸಿಕೊಂಡಿದ್ದನು. ಇದರಿಂದ ಹಾದಿಯ ದೆವ್ವವನ್ನು ಮನೆಯಲ್ಲಿ ಹೊಗಿಸಿಕೊಂಡಂತಾಗಿತ್ತು. ಶಾಸ್ತ್ರಿಯು ಬಹಿರಂಗದಲ್ಲಿ ಸದಾಚಾರವನ್ನು ಒಳ್ಳೇದಕ್ಷತೆಯಿಂದ ಕಾಯ್ದುಕೊಂಡದ್ದರಿಂದಲೂ ಅವನಜ್ಯೋತಿಷಜ್ಞಾನವು ಪ್ರತ್ಯಯಕ್ಕೆ ಬಂದದರಿಂದಲೂ ಭಾವೂಸಾಹೇಬನು ಅವನಲ್ಲಿ ವಿಕಲ್ಪವನ್ನು ಬಿಟ್ಟು ಪೂಜ್ಯಬುದ್ಧಿಯನ್ನಿಟ್ಟಿದ್ದನು. ಜ್ಯೋತಿಷ್ಯವೆಂದರೆ ಇಡಿಯ ಜಗತ್ತೇ ಮಬ್ಬಿಗೆ ಬೀಳುತ್ತಿರುವಾಗ ಹಿಂದುಗಳು ಬೀಳುವದಂತೂ ಸಹಜವೆ; ಈಗಾದರೂ ಹಳ್ಳಿಪಳ್ಳಿಗಳಲ್ಲಿ-ಶಹರಗಳಲ್ಲಿ ಜ್ಯೋತಿಷಿಗಳ ಬಣಪ್ರತಿಷ್ಠೆಯನ್ನು ಕಾಣಬಹುದು. ಇಂಥ ಜ್ಯೋತಿಷಿಗಳ ವಾಕ್‌ಚಾಪಲ್ಯಕ್ಕೆ ಮರುಳಾಗಿ ಎಷ್ಟೋಜನ ಗಂಡಸರೂ ವಿಶೇಷವಾಗಿ ಹೆಂಗಸರೂ ಮೋಸಹೊಂದಿದ ಉದಾಹರಣೆಗಳು ಹಲವು ಸಿಗಬಹುದು. ಭಾವೂಸಾಹೇಬನು ತ್ರ್ಯಂಬಕಶಾಸ್ತ್ರಿಯ ಜ್ಯೋತಿಷಕ್ಕೆ ಮರುಳಾಗದಿದ್ದರೆ ಮರಾಟರ ಇತಿಹಾಸದ ಸ್ವರೂಪವೇ ಬೇರೆಯಾಗುತ್ತಿತ್ತು.

ಭಾವೂಸಾಹೇಬನು ಒಂದು ಪಳ್ಳಿಕೂಡಾ ಹೊರಗೆ ಹೋಗಲಿಕ್ಕಾಗದೆಂದು ಕಟ್ಟುಮಾಡಿದ್ದರಿಂದ ತ್ರ್ಯಂಬಕಶಾಸ್ತ್ರಿಯು ತಳಮಳಿಸುತ್ತಿದ್ದನು. ತಾನು ಇಷ್ಟುದಿವಸಗಳವರೆಗೆ ನಡಿಸಿದ್ದ ಮುಸಲ್ಮಾನರ ಸೇವೆಯು ಇಂದು ನಿಷ್ಫಲವಾಗಿ ಅಬ್ದಾಲಿಯ ಘಾತವಾಗುವದೆಂದು ಆ ನೀಚಶಿರೋಮಣಿಯು ಎಣಿಸಿದನು. ಆತನಿಗೆ ಆ ದಿನ ನಿದ್ದೆ ಸಹಹತ್ತಲಿಲ್ಲ; ಈ ಸುದ್ದಿಯನ್ನು ಬೆಳಗಾಗುವಷ್ಟರಲ್ಲಿ ಅಬ್ದಾಲಿಗೆ ತಿಳಿಸಿಯೇ ತೀರಬೇಕೆಂಬ ನಿಶ್ಚಯದಿಂದ ಅವನು ಯುಕ್ತಿಗಳನ್ನು ಹುಡುಕಹತ್ತಿದನು. ಎಷ್ಟುಬಗೆಯಿಂದಯೋಚಿಸಿದರೂ ಆತನಿಗೆ ಕಾರ್ಯಸಾಧಕವಾದ ಯುಕ್ತಿಯು ಹೊರಡಲೊಲ್ಲದು; ಕಡೆಗೆ ಅವನು ನಿರಾಶೆಯಿಂದ ಆ ವಿಚಾರವನ್ನು

ಬಿಟ್ಟು ಬಿಡಬೇಕೆಂದು ಬಗೆಯುತ್ತಿರಲು ಅವನಿಗೊಂದು ಅಪೂರ್ವಯುಕ್ತಿಯು ತೋಚಿತು. ಆಗ ಅವನು ಆನಂದದಿಂದ ತನ್ನೊಳಗೆ—"ಭಲೆ, ತ್ರ್ಯಂಬಕಶಾಸ್ತ್ರೀ ನೀನು ಬಲು ವಸ್ತಾದಿಯಿರುವಿ. ನಿನ್ನ ಮುಂದೆ ಆದಾವಮುತ್ಸದ್ದಿಯು ಪಾರಾಗುವನು? ಶಾಬಾಸ್, ನಿನ್ನ ಬುದ್ಧಿವಂತಿಕೆಗೆ ಜೋಡಿಲ್ಲ!" ಎಂಬ ಉದ್ಗಾರಗಳನ್ನು ತೆಗೆದನು. ಆಗ ಆತನು ಹಾಸಿಗೆಯಿಂದೆದ್ದು ಸ್ನಾನಮಾಡಿ ಭೈರೋಜಿಯ ಪೂಜೆಯನ್ನು ದಿನಕ್ಕಿಂತಲೂ ಭವ್ಯವಾಗಿ ಮಾಡಿ ಭಾವೂಸಾಹೇಬನ ದಾರಿಯನ್ನು ಕಾಯುತ್ತ ಕುಳಿತನು.

ಭಾವೂಸಾಹೇಬನು ಪ್ರತಿನಿತ್ಯ ತನ್ನ ಆಹ್ನಿಕವಾದ ಬಳಿಕ ಭೈರೋಜಿಯ ದರ್ಶನವನ್ನು ತಕ್ಕೊಳ್ಳುವ ಪದ್ಧತಿಯನ್ನಿಟ್ಟಿದ್ದನು. ಅದರಂತೆ ಆತನು ಈ ದಿನ ತನ್ನ ನಿತ್ಯಕರ್ಮವು ತೀರಿದಬಳಿಕ ಅಂದರೆ ಒಂದುತಾಸು ರಾತ್ರಿ ಇರುವಾಗ ತ್ರ್ಯಂಬಕಶಾಸ್ತ್ರಿಯಬಳಿಗೆ ಹೋದನು. ಅಷ್ಟರಲ್ಲಿ ಶಾಸ್ತ್ರಿಯು ಎಲ್ಲವನ್ನೂ ಸಿದ್ಧಪಡಿಸಿಟ್ಟಿದ್ದನು. ಭಾವೂಸಾಹೇಬನು ಭೈರೋಜಿಯನ್ನು ನಮಸ್ಕರಿಸಿ ಅನಂತರ ಶಾಸ್ತ್ರಿಯನ್ನು ಅಭಿವಂದಿಸಿದನು. ಆಗ ಶಾಸ್ತ್ರಿಯು ಆನಂದಕ್ಕೆ ಎಣೆಯಿಲ್ಲದಾಯಿತು. ಆತನು ಭಾವೂಸಾಹೇಬನಿಗೆ ತೀರ್ಥಪ್ರಸಾದಗಳನ್ನು ಕೊಟ್ಟು ಬಳ್ಳೇವಿನಯದಿಂದ—"ಸರಕಾರ! ಇಷ್ಟು ದಿನ ಸಾಮ್ರಾಜ್ಯದ ಅಭ್ಯುದಯಕ್ಕಾಗಿ ಅನುಷ್ಠಾನವನ್ನು ಮಾಡಿದೆನು. ಈ ದಿನ ತಮ್ಮ ಅಪ್ಪಣೆಯಂತೆ ಅನುಷ್ಠಾನವನ್ನು ಸಮಾಪ್ತಗೊಳಿಸಿ ಭೈರೋಜಿಯ ಉತ್ಥಾಪನವನ್ನು ಮಾಡಬೇಕಾಗಿದೆ. ಕಾರಣ ನಮ್ಮಲ್ಲಿಯ ಪದ್ಧತಿಯಂತೆಬಲಿಹರಣವನ್ನು ಸಿದ್ಧಪಡಿಸಿಟ್ಟಿರುವೆನು. ಇದನ್ನು ಅರಿಷ್ಟನಿವಾರಣಾರ್ಥವಾಗಿ ಕಂದಕದ ಹೊರಬದಿಯಲ್ಲಿ ಚೆಲ್ಲತಕ್ಕದ್ದು; ನಮ್ಮ ಈ ಶಿಷ್ಯನು ಇದನ್ನು ತಕ್ಕೊಂಡು ಹೋಗುವನು. ಇವನಸಂಗಡ ತಮ್ಮ ಅಪ್ಪಣೆಯಚೀಟಿಯನ್ನು ಕೊಟ್ಟು ಕಳುಹಿಸಬೇಕು. ಅಂದರೆ ಕಾವಲುಗಾರರು ಇವನನ್ನು ಬಿಟ್ಟುಬಿಡುವರು" ಎಂದು ನುಡಿದನು. ಶಾಸ್ತ್ರಿಯು ನಮ್ಮವನೆಂದು ನಂಬಿದ್ದ ಭಾವೂಸಾಹೇಬನಲ್ಲಿ ಅನ್ಯವಿಚಾರಗಳು ಹುಟ್ಟಲಿಲ್ಲ; ಅರಿಷ್ಟನಿವಾರಣೆಯು ಬಲಿಹರಣವೇ ತನ್ನ ಅರಿಷ್ಟಕ್ಕೆ ಕಾರಣವಾದೀತೆಂಬ ಕಲ್ಪನೆಯು ಅವನಲ್ಲಿ ಬರಲಿಲ್ಲ. ಆದ್ದರಿಂದ ಆತನು ಅಂಥ ಶ್ರದ್ಧೆಯಿಂದ ಸಮ್ಮತಿಸಿ ಶಾಸ್ತ್ರಿಯ ಶಿಷ್ಯನಜೊತೆಗೆ ಆಜ್ಞಾಪತ್ರದೊಡನೆ ಒಬ್ಬ ಹುಜುರಾತಿಯವನನ್ನು ಕಳುಹಿಸಿದನು. ಕಾವಲುಗಾರರು ಶ್ರೀಮಂತರ ಅಪ್ಪಣೆಯನ್ನು ನೋಡಿ ಸುಮ್ಮನೆ ಬಿಟ್ಟರು. ಶಾಸ್ತ್ರಿಯ ಶಿಷ್ಯನು ಬಲಿಹರಣವನ್ನು ತಕ್ಕೊಂಡು ನಿರ್ವಿಘ್ನದಿಂದ ಕಂದಕವನ್ನು ದಾಟಿದನು. ಆಗ ಆತನು ಸಂಗಡ ಬಂದಿದ್ದ ಹುಜುರಾತಿಯವನಿಗೆಅಲ್ಲಿಯೇ ನಿಲ್ಲಹೇಳಿ ತಾನು ಮುಂದಕ್ಕೆ ಸಾಗಿದನು.

ಈ ವೇಳೆಗೆ ಅಗಳತದಿಂದ ಪಾರಾದ ಆ ಶಿಷ್ಯನು ದೇಹದ ಪರವಿಯಿಲ್ಲದೆ ಪಠಾಣರ ಛಾವಣಿಯಕಡೆಗೆ ಓಡತೊಡಗಿದನು. ಆತನು ಸುಮಾರು ಒಂದು ಮೈಲುದೂರ ಹೋಗುವಷ್ಟರಲ್ಲಿ ಪ್ರತಿನಿತ್ಯದ ಪದ್ಧತಿಯಂತೆ ಒಬ್ಬ ಕುದುರೆಯ ರಾವುತನು ಅಲ್ಲಿ ನಿಂತಿದ್ದನು. ಶಾಸ್ತ್ರಿಯ ಶಿಷ್ಯನು ತಾನು ತಂದಿದ್ದ ಮಹತ್ವದ ಸುದ್ದಿಯನ್ನು ಅವನಿಗೆ ಮುಟ್ಟಿಸಿ ಅದೇ ಕಾಲಮೇಲೆ ಹಿಂತಿರುಗಿದನು ಇತ್ತ ಶಾಸ್ತ್ರಿಯು ತನ್ನ ಮಂತ್ರವು ನಾಟಿತೆಂದು ಸಂತೋಷಬಡುತ್ತ ತನ್ನ ಆಟವನ್ನೆಲ್ಲ ಉಪಸಂಹರಿಸಿದನು.

ಪ್ರಿಯವಾಚಕರೇ, ನೋಡಿದಿರಾ, ಮೋಸದ ಆಟವು ಹ್ಯಾಗದೆ ಎಂಬದನ್ನು! ಇತ್ತ ಭಾವೂಸಾಹೇಬನು ಯಾವ ಪಾಪವನ್ನೂ ಅರಿಯದೆ ಇನ್ನೊಂದು ತಾಸೆರಡುತಾಸುಗಳಲ್ಲಿ ಅಬ್ದಾಲಿಯ ದೂಳವು ಹಾರುವದೆಂದು ಲೆಕ್ಕ ಹಾಕುತ್ತ ಸಂಗ್ರಾಮದ ಉಡಿಗೆತೊಡಿಗೆಗಳಿಂದ ಸಜ್ಜಾಗಹತ್ತಿದನು. ಆತನು ಮೊದಲು ಒಂದು ತಿಳುವಾದ ರೇಸ್ಮಿಯ ಬಂಡಿಯನ್ನು ತೊಟ್ಟು ಮೇಲೆ ಮತ್ತೊಂದು ಉಣ್ಣೆಯ ಅಂಗಿಯನ್ನು ಏರಿಸಿದನು; ಬಳಿಕ ಸಣ ಉಂಗುರದ ಆದರೆ ಬಹು ಭದ್ರವಾದ ಚಿಲಕತ್ತನ್ನು ಹಾಕಿಕೊಂಡು ಮೇಲೆ ಜರತಾರಿಯ ನಿಲುವಂಗಿಯನ್ನು ತೊಟ್ಟುಕೊಂಡನು. ಅವನು ಕಾಲಲಿ ಪಾಯಜಾಮೆಯನ್ನು ಏರಿಸಿದನು; ತಲೆಯಲ್ಲಿ ಕೆಂಪು ರೇಸ್ಮಿಯ ಬಹುಬೆಲೆಯುಳ್ಳ ಪಾಗೋಟಿಯನ್ನು ಹಾಕಿಕೊಂಡನು. ಆದರ ಬಲಪಾರ್ಶ್ವದಲ್ಲಿ ದೊಡ್ಡ ಮುತ್ತುಗಳ ಗೊಂಚಲವು ಇಳಿಬಿದ್ದಿತ್ತು. ವಜ್ರಮುಷ್ಟಿಯ ಖಡ್ಗವು ಆತನ ಟೊಂಕದಲ್ಲಿ ಅಲೆದಾಡುತ್ತಿತ್ತು. ಈಪ್ರಕಾರ ಭಾವೂಸಾಹೇಬನು ಪೋಷಾಕು ಹಾಕಿಕೊಳ್ಳುತ್ತಿರಲು, ಯುವರಾಜ ವಿಶ್ವಾಸರಾಯನು ಸಂಗ್ರಾಮೋಚಿತವಾದ ಪೋಷಾಕಿನಿಂದ ಅಲ್ಲಿಗೆ ಬಂದನು. ಆ ಚಿಕ್ಕ ಮಕ್ಕಳಿಬ್ಬರು ಅರಬೀಜಾತಿಯ ಒಂದೊಂದು ಕುದುರೆಯನ್ನೇರಿದರು. ರಾಜಸ್ತ್ರೀಯರಿಗಾಗಿ ಯಥೋಚಿತ ವಾಹನಗಳು ಸಿದ್ಧವಾಗತೊಡಗಿದವು; ಪ್ರಯಾಣಸೂಚಕವಾದ ಭೇರಿಯು ಹೊಡೆಯಲ್ಪಟ್ಟಿತು. ಆಗ ಭಾವೂಸಾಹೇಬನು ಸರದಾರಪರಿವಾರದೊಡನೆ ಸೂರ್ಯನು ಕ್ಷಿತಿಜದಮೇಲೆ ಬರುತ್ತಿರಲು ಅಗಳತವನ್ನು ದಾಟಿದನು. ಬಳಿಕ ಆತನ ಪ್ರಚಂಡಸೇನೆಯು ಒಂದು ಒಂದೂವರೆ ತಾಸಿನವರೆಗೆ ಬೇರೆ ಬೇರೆ ದಾರಿಗಳಿಂದ ಕಂದಕವನ್ನು ದಾಟಿತು. ಮೊದಲು ನಿರ್ಧರಿಸಿದಂತೆ ಒಮ್ಮೆಲೇ ಎಲ್ಲ ಸೈನ್ಯವು ಹೊರಟುಬಿಟ್ಟಿತು. ಛಾವಣಿಯಲ್ಲಿ ನಿರುಪಯುಕ್ತ ಪದಾರ್ಥಗಳನ್ನು ಮಾತ್ರ ಬಿಟ್ಟುಬಿಟ್ಟರು.

ಈ ಪ್ರಕಾರ ಹೊರಹೊರಟ ಸೈನ್ಯವು ಅಳತೆಗೆಟ್ಟ ಉಕ್ಕೇರಿದ ಸಮುದ್ರ

ದಂತೆ ಹಾಹಾಅನ್ನುವಷ್ಟರಲ್ಲಿ ಪಾನಿಪತ್ತದ ಬೈಲನ್ನು ವ್ಯಾಪಿಸಿತು. ಭಾವೂಸಾಹೇಬನ ಮನಸ್ಸಿನಲ್ಲಿ ದಕ್ಷಿಣಕ್ಕಿರುವ ಅಬ್ದಾಲಿಯನ್ನು ಪೂರ್ವಕ್ಕೆ ಮೂಡಿಕೊಳ್ಳುವದಿದ್ದದರಿಂದ ಆತನ ಅನುಮತಿಯಂತೆ ಕಂದಕದಿಂದ ೩-೪ ಮೈಲುಗಳ ಮೇಲೆ ಸಾಮ್ರಾಜ್ಯದ ಮುಖ್ಯ ನಿಶಾನಿಯು ನಿಲ್ಲಿಸಲ್ಪಟ್ಟಿತು. ಈ ಅವಾಢವ್ಯವಾದ ಸೈನ್ಯವು ಶಿಸ್ತಿನಿಂದ ಅರಣಸ್ತಂಭದ ಬಳಿಗೆ ಸಾಗಿತು. ದೊಡ್ಡ ದೊಡ್ಡ ಸರದಾರರು ತಮ್ಮ ತಮ್ಮ ಪಥಕಗಳನ್ನು ಹಿಂದೆ ಹಾಕಿಕೊಂಡು ಕ್ರಮದಿಂದ ನಿಂತುಕೊಂಡರು. ಆ ಜರೀಪಟಕದ ಧ್ವಜಸ್ತಂಭದ ಸುತ್ತುವರೆದು ಮೂರು ಮೈಲುಗಳ ವರೆಗಿನ ಪ್ರದೇಶವು ಆ ಸೈನ್ಯಕ್ಕೆ ಬೇಕಾಯಿತು. ಆಗ ಏಕಸಮಯಾವಚ್ಛೇದದಿಂದ ಎಲ್ಲ ಸರದಾರರೂ ಪಥಕದಾರರೂ ಶ್ರೀಮಂತ ಭಾವೂಸಾಹೇಬನಿಗೂ ವಿಶ್ವಾಸರಾಯನಿಗೂ ಮುಜುರೆಯನ್ನು ಮಾಡಿದರು. ಬಳಿಕ ಭಾವೂಸಾಹೇಬನು ತನಗಾಗಿಯೇ ಸಿದ್ಧಪಡಿಸಿದ್ದ ಗಜಶ್ರೇಷ್ಠನಮೇಲೆ ಏರಿ ಸುತ್ತುವರೆದು ನೋಡುತ್ತ ಒಳ್ಳೇ ಒಗರಿನಿಂದ, ಪದ್ಧತಿಯಂತೆ ನಿಂತಿರುವ ತಮ್ಮ ಸಾಮ್ರಾಜ್ಯ ಸಂರಕ್ಷಕ ಸೈನ್ಯವನ್ನು ಕಂಡು ಬಹು ಆನಂದಪಟ್ಟನು. ಇನ್ನು ಆತನು ತನ್ನ ಸರದಾರರನ್ನು ಕುರಿತು ಏನೋ ಮಾತನಾಡತಕ್ಕವನು? ಅಷ್ಟರಲ್ಲಿ ಸೈನ್ಯದ ತುಳಿತದಿಂದೆದ್ದ ಕೆಂಧೂಳಿಯು ನೆಲಕ್ಕೆ ಕುಳಿತು ಪಾನಿಪತಮೈದಾನವು ನಿಚ್ಚಳವಾಗಿ ಕಾಣಹತ್ತಿತು. ಆಗ ಪೂರ್ವದಲ್ಲಿ ಅಬ್ದಾಲಿಯ ದಂಡು ಯುದ್ಧಸನ್ನದ್ಧವಾಗಿ ನಿಂತಿರುವದು. ದೃಗ್ಗೋಚರವಾಯಿತು. ಕೂಡಲೆ ಭಾವೂಸಾಹೇಬನ ಆನಂದವು ಆ ಧೂಳಿಯ ಜೊತೆಗೇ ಲಯವನ್ನು ಹೊಂದಿತು. ಅವನು ಸಂತಾಪದಿಂದ ಕಣ್ಣು ಕೆಕ್ಕರಿಸಿ ಒಮ್ಮೆಲೆ ಹಾಯ್! ಘಾತವಾಯಿತು; ಈ ಮುಸುಂಡಿಗಳಿಗೆ ನಮ್ಮ ಈ ಸುದ್ದಿಯನ್ನು ಯಾರು ಹೇಳಿರಬಹುದು? ಹೀಗೆ ಆಯಿತ ಸಮಯಕ್ಕೆ ಘಾತಮಾಡಿದ ಮಹಾನೀಚನು ಇಷ್ಟುದಿನ ನಮ್ಮಲ್ಲಿಯೇ ಬೂದಿಮುಚ್ಚಿದ ಕೆಂಡದಂತೆ ಇದ್ದನಲ್ಲವೇ! ಎಂದು ನುಡಿದನು.

## ೧೫ನೆಯ ಪ್ರಕರಣ.

# ದೈವದುರ್ವಿಲಾಸ.



ಪಟಪಟುವಾದ ನಜೀಬಖಾನನು ತನ್ನ ರಾಹುಟಿಯಲ್ಲಿ ಆ ದಿನ ಬೆಳಗು ಮುಂಜಾವಿನಲ್ಲಿ ನಿಶ್ಚಿಂತೆಯಿಂದ ನಿದ್ರೆಗೈಯುತ್ತಲಿದ್ದನು. ಆತನ ಪರಿವಾರದವರೂ ಗೊರಕೆಯನ್ನು ಹೊಡೆಯುತ್ತಿದ್ದರು. ತೀರಬೆಳಗು ಬಂದಿದ್ದರೂ ಅವರನಿದ್ದೆಯು

ನೊಬಗು ತೀರಿದ್ದಿಲ್ಲ. ಅಷ್ಟರಲ್ಲಿ ಅವರ ಸುದ್ದಿಗಾರನು ಕುದುರೆಯನ್ನು ಓಡಿಸುತ್ತ ಬಂದು—"ಖಾವಿಂದ, ಮರಾಟರು ಕಂದಕದಿಂದ ಹೊರಹೊರಡತಕ್ಕವರಿರುವರು. ಕಿಂಬಹುನಾ ಹೊರಟಿದ್ದರೂ ಹೊರಟರಬಹುದು"ಎಂದು ಗಟ್ಟಿಯಾಗಿ ಕೂಗಿಖಾನನ ನಿದ್ರೆಯನ್ನು ಭಂಗಪಡಿಸಿದನು. ಈ ಭಯಂಕರವಾದ ಸುದ್ದಿಯು ಖಾನನಿಗೆ ಸ್ವಪ್ನವತ್ಭಾಸವಾಗಿ ಅವನು ಗಡಬಡಿಸಿ ಎದ್ದು—ಯಾರವರು? ಎಂದು ನುಡಿಯುತ್ತ ಹೊರಗೆಬಂದನು. ಆಗ ಸುದ್ದಿಗಾರನು ತ್ರ್ಯಂಬಕಶಾಸ್ತ್ರಿಯ ಶಿಷ್ಯನು ಹೇಳಿದ ಸಮಗ್ರಸಂಗತಿಯನ್ನು ಅರುಹಲು ನಜೀಬಖಾನನ ಎದೆಯು ಧಸ್ಸೆಂದಿತು. ಆದರೂ ಅವನು ಅಯುತಸಮಯಕ್ಕೆ ಮಹತ್ವದ ಸುದ್ದಿಯು ತಿಳಿದದ್ದರಿಂದ ಸಂತೋಷವನ್ನು ವ್ಯಕ್ತಪಡಿಸಿ ಸುದ್ದಿ ತಂದವನಿಗೆ ಇನಾಮುಕೊಟ್ಟು ಕಳಿಸಿದನು. ಬಳಿಕ ಆತನು ತಡಮಾಡದೆ ತನ್ನ ಸೈನಿಕರಿಗೆ ಯುದ್ಧದ ಸೌರಣೆಯನ್ನು ನಡಿಸಹೇಳಿ ತಾನು ಒಂದು ಕುದುರೆಯನ್ನೇರಿ ಅಬ್ದಾಲಿಯ ಬಳಿಗೆ ತೆರಳಿದನು.

ಅಹಮ್ಮದಶಹಾ ಅಬ್ದಾಲಿಯು ಆ ದಿನ ರಾತ್ರಿಯಲ್ಲಿ ಯಾವದೋ ಒಂದು ವಿಚಾರದಲ್ಲಿ ಬಹಳಹೊತ್ತನ್ನು ಕಳೆದದ್ದರಿಂದ ಈಗ ಆತನು ಇನ್ನೂಎದ್ದಿದ್ದಿಲ್ಲ; ಖೊಜ್ಜೆಯು ರಾವುಟಿಯ ಬಾಗಿಲಲ್ಲಿ ಪಹರೆಯನ್ನು ಮಾಡುತ್ತಿದ್ದನು. ನಜೀಬಖಾನನು ಕುದುರೆಯಿಂದಿಳಿದು ಬಾದಶಹನನ್ನು ಎಚ್ಚರಗೊಳಿಸುವಂತೆ ಆ ಖೋಜಾನಿಗೆಹೇಳಿದನು. ಆದರೆ ಆತನು ಆ ಕೆಲಸಕ್ಕೆ ಸಮ್ಮತಿಸಲಿಲ್ಲ. ಪ್ರಸಂಗವು ತೀರ ಮೈಮೇಲೆ ಬಂದದ್ದರಿಂದ ನಜೀಬಖಾನನು ಧೈರ್ಯದಿಂದ—"ಆಲಮ್‌ಪನಾಹ, ದುಸಮನ ತಯಾರಹೋಕರ ಜಂಗಪರ ಆತಾಹೈ. ತುಕಸೀಂ ವಾಸ್ಪನಹೆ, ನನ್ನಾಸಿಪಾಸೇ ಕಾನಹಿಹೈ,"ಎಂದು ಗಟ್ಟಿಯಾಗಿನುಡಿದನು. ನಜೀಬಖಾನನ ಈ ಮಾತುಗಳು ನಿದ್ದೆಯಲ್ಲಿದ್ದ ಬಾದಶಹನ ಕಿವಿಗಳಲ್ಲಿ ಕುದಿಯುವ ಎಣ್ಣೆಯನ್ನು ಹೊಯ್ದಂತಾದ್ದರಿಂದ ಅವನು ಅವಸರದಿಂದ ಹೊರಗೆ ಬಂದು ಖಾನನನ್ನು ಕೆಟ್ಟಗಣ್ಣಿನಿಂದ ನೋಡಿದನು. ಆಗ ನಜೀಬಖಾನನುಅಬ್ದಾಲಿಯ ಸಂಶಯವನ್ನು ತಿಳಿದು ಅವನಿಗೆ 'ಕುರ್ನಿಸಾ'ಮಾಡಿ—"ಖಾವಿಂದ, ಸುದ್ದಿಯು ಸುಳ್ಳಲ್ಲ; ವಿಕಲ್ಪಕ್ಕೆ ಆಸ್ಪದಕೊಡಬಾರದು" ಎಂದು ವಿನಯದಿಂದ ಮಾತಾಡಿದನು: ಆಗ ಅಬ್ದಾಲಿಯು ಹೆಚ್ಚಿನವಿಚಾರವನ್ನು ಮಾಡದೆ ಖಾಸಪಾಗಾದವರಾದ ದುರಾಣೀಸೈನಿಕರಿಗೂ ತನ್ನ ಎಲ್ಲಸರದಾರರಿಗೂ ಲಗಬಗೆಯಿಂದ ದಂಡಯಾತ್ರೆಗೆ ಹೊರಡಹೇಳಿ ತಾನೂಗಡಬಿಡಿಯಿಂದ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಸೇನೆಯಮಧ್ಯಭಾಗದಲ್ಲಿರುವ ನಿಶಾನೆಯ ಬಳಿಗೆ ಹೋದನು.

ಬಾದಶಹನ ಅಪ್ಪಣೆಯು ವಿದ್ಯುದ್ವೇಗದಿಂದ ಛಾವಣಿಯಲ್ಲೆಲ್ಲ ಪಸರಿಸಿತು

ಎಲ್ಲ ದಂಡಾಳುಗಳು ನ್ಯಾರಿಯನ್ನು ಮುಗಿಸಿಕೊಂಡು ತಮ್ಮಶಸ್ತ್ರಾಸ್ತ್ರಗಳನ್ನು ಝಳಪಿಸುತ್ತ ನಿಶಾನೆಯ ಬಳಿಯಲ್ಲಿ ಸುಳಿದಾಡಲಾರಂಭಿಸಿದರು. ಅಷ್ಟರಲ್ಲಿ ಸುಜಾಉದ್ದೌಲನು ಬಂದು ಬಾದಶಹನಿಗೆ ಕುರ್ನಿಸಾಮಾಡಿ ನಿಂತುಕೊಂಡನು. ಅವನ ಬಳಿಯಲ್ಲಿ ಮಧ್ಯರಾತ್ರಿಯ ಸಮಯಕ್ಕೆ ಬಂದ ಭಾವೂಸಾಹೇಬನ ಪತ್ರಗಳಿದ್ದವು. ಅವುಗಳನ್ನೋದಿ ಈಗ ಬಂದ ಸುದ್ದಿಯು ಸಟಿಯೋ ದಿಟವೋ ಎಂಬ ಸಂಶಯವು ಬಾದಶಹನಿಗೆ ಉಂಟಾಯಿತು. ಆಗ ಅವನು ನಿಜಸ್ಥಿತಿಯನ್ನು ಕಂಡು ಬರುವದಕ್ಕಾಗಿ ಒಳ್ಳೇನಂಬಿಗಸ್ಥನಾದ ಶಹಾಪಂಸದ ಖಾನನೆಂಬಸರದಾರನಿಗೆ ಅಪ್ಪಣೆಯನ್ನು ಮಾಡಿದನು. ಒಬ್ಬ ಮುಸಲ್ಮಾನ ಇತಿಹಾಸಕಾರನು ಶಹಾಪಂಸದ ಖಾನನು ಮರಾಟರ ಸುಳವನ್ನು ಗೊತ್ತುಹಚ್ಚುವದಕ್ಕೆ ಹೋದ ಸಂಗತಿಯನ್ನು ಕಣ್ಣಿಟ್ಟುನೋಡಿ ಬರೆದಿರುವದರಿಂದ ಆತನ ವರ್ಣನೆಯನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಡುವೆವು.

"ಸೂರ್ಯೋದಯವಾಗಿದ್ದರೂ ಮುಂಜಾವಿನ ಮಂಜುಹೊಗೆಯಂತೆ ಭೂಪೃಷ್ಠವನ್ನು ಆಚ್ಛಾದಿಸಿದ್ದರಿಂದ ಒಬ್ಬರಮೋರೆ ಮತ್ತೊಬ್ಬರಿಗೆ ಕಾಣುವದು ದುಸ್ತರವಾಗಿತ್ತು. ಅಂಥ ಹೊತ್ತಿನಲ್ಲಿ ಶಹಾಪಂಸದ ಖಾನನು ಬಾದಶಹನ ಅಪ್ಪಣೆಯಂತೆ ೧೫|೧೭ ಜನ ಆರಿಸಿದ ಕುದುರೆಯ ಸವಾರರನ್ನೂ ನನ್ನನ್ನೂ ಸಂಗಡ ಕರಕೊಂಡು ಹೊರಟನು. ನಮ್ಮ ಕುದುರೆಗಳು ಬಹುವೇಗಶಾಲಿಗಳಾಗಿದ್ದವು. ಮರಾಟರಿಗೂ ನಮಗೂ ಪ್ರತಿನಿತ್ಯಕದನವಾಗುತ್ತಿರುವದರಿಂದ ನಮಗೆ ಮರಾಟರ ಛಾವಣಿಯ ದಾರಿಗಳೆಲ್ಲ ಕಾಲಹೊಳೆಯಂತಾಗಿದ್ದವು; ಇಬ್ಬನಿಯು ಎಷ್ಟು ಅಂಧಕಾರವನ್ನುಂಟು ಮಾಡಿದ್ದರೂ ನಾವು ಅದನ್ನು ಗಣನೆಗೆ ತರದೆ ಬಂದು ಹರದಾರಿಯ ವರೆಗೆ ಹೋದೆವು. ಅಷ್ಟರಲ್ಲಿ ತೋಫುಗಳನ್ನು ಹೇರಿದ ಬಂಡಿಗಳ ಘಾಲಿಗಳ ಕರ್ರ ಕರ್ರ ಎನ್ನುವ ಸಪ್ಪಳವು ಕೇಳಿಸಿತು: ಆಗ ನಾವು ಗಕ್ಕನೆ ಕುದುರೆಗಳನ್ನು ತರುಬಿ ಸಪ್ಪಳ ಕೇಳಬರುವ ದಿಕ್ಕಿಗೆ ಕಿವಿಗೊಟ್ಟು ಕೇಳಿದೆವು. ಆಗ ಮರಾಟರು ತೀರ ಸನಿಯಕ್ಕೆ ಬಂದರೆಂದು ನಾವು ನಿಶ್ಚಯಿಸಿದೆವು. ಕೂಡಲೆ ನಾವು ಕುದುರೆಗಳನ್ನು ಹೊರಳಿಸಿ ನಮ್ಮ ಛಾವಣಿಯ ಕಡೆಗೆ ಕಾಲುಬಿಟ್ಟೆವು. ಆದರೆ ನಮ್ಮ ಕುದುರೆಗಳ ಕೊಳಗುಗಳ ಸಪ್ಪಳವು ಆ ತಂಪುಹೊತ್ತಿನಲ್ಲಿ ಮರಾಟರಿಗೆ ಕೇಳಿದ್ದರಿಂದ ಅವರು ನಮ್ಮ ಮೇಲೆ ಏಳ ಗುಂಡುಗಳನ್ನು ಹಾರಿಸಿದರು. ಸುದೈವದಿಂದ ಅವು ನಮಗೆ ಬಡಿಯಲಿಲ್ಲ. ಬಳಿಕ ನಾವು ನಮ್ಮ ಕುದುರೆಗಳನ್ನು ವೇಗವಾಗಿ ಓಡಿಸಿ ಬಾದಶಹನನ್ನು ಕಂಡೆವು. ನಾವುಬರುವಷ್ಟರಲ್ಲಿಯೇ ಮುಂಜಾಗ್ರತೆಯ ನಮ್ಮಬಾದಶಹನು ವ್ಯೂಹರಚನೆಯನ್ನು ಮಾಡಿಬಿಟ್ಟಿದ್ದನು. ಅದು ಹ್ಯಾಗೆಂದರೆ-ಸೈನ್ಯದಮಧ್ಯಭಾಗದಲ್ಲಿ ಮುಖ್ಯವ

ಜೀರನಾದ ಶಹಾವಲ್ಲಿಯು ತನ್ನ ದಳಭಾರದೊಡನೆ ನಿಂತುಕೊಂಡಿದ್ದನು. ಆತನಿಂದ ಸ್ವಲ್ಪ ಅಂತರದಮೇಲೆ ಮರಾಟರು ಬರುವಕಡೆಗೆ ೨ ಸಾವಿರ ಉಷ್ಟ್ರಾರುಢರು ಶಸ್ತ್ರಾಸ್ತ್ರಗಳನ್ನು ಧರಿಸಿ ಸಮಯವನ್ನು ಕಾಯುತ್ತಿದ್ದರು. ವಜೀರನ ಹಿಂಭಾಗದಲ್ಲಿ ೨೦ ಸಾವಿರ ದುರಾಣಿ ಕಾಲಾಳುಗಳು ಖಡ್ಗಗಳನ್ನು ಝಳಪಿಸುತ್ತಿದ್ದರು. ಸುಜಾಉದ್ದೌಲ, ಬರಖುದಾರಖಾನ ಇವರು ವಜೀರನ ಬಲಭಾಗದಲ್ಲಿಯೂ ನಜೀಬಖಾನ ಹಾಫಿಜರಹಿಮತ ಇವರು ಎಡಭಾಗದಲ್ಲಿಯೂ ತಮ್ಮ ತಮ್ಮ ಸಾಳಯಗಳೊಡನೆ ನಿಂತುಕೊಂಡಿದ್ದರು. ಖುದ್ದ ಬಾದಶಹನು ಖಾಸಪಾಗೆಯೊಡನೆ ವಜೀರನ ಹಿಂಭಾಗದಲ್ಲಿದ್ದನು. ಇದಲ್ಲದೆ ೧೦ ಸಾವಿರ ಕುದುರೆಯ ಸ್ವಾರರು ಛಾವಣಿಯಿಂದ ಸ್ವಲ್ಪ ಅಂತರದ ಮೇಲೆ ಪ್ರಸಂಗದಲ್ಲಿ ಉಪಯೋಗ ಬೀಳಬೇಕೆಂದು ನಿಲ್ಲಿಸಲ್ಪಟ್ಟಿದ್ದರು."

ಈಪ್ರಕಾರ ಅಬ್ದಾಲಿಯು ಸಜ್ಜಾಗಿ ನಿಂತಿರಲು ಭಾವೂಸಾಹೇಬನು ಹಿಂದೆ ಹೇಳಿದಂತೆ ಗೊತ್ತುಪಡಿಸಿದ ಸ್ಥಳದಲ್ಲಿ ತನ್ನ ಸೈನಿಕರು ನಿಲ್ಲಿಸಿದ ಭಗವಾನಿಶಾನಿಯ ಬಳಿಗೆ ಬಂದನು. ಆಗ ಗಗನಮಂಡಲದಲ್ಲಿ ಸುಳಿದಾಡುವ ಧೂಳಿಯು ಗಪ್ಪನೆ ನೆಲಕ್ಕೆ ಕೂಡ್ರಲು ಹಿಂದಿನ ಪ್ರಕರಣದ ಕೊನೆಯಲ್ಲಿ ಹೇಳಿದಂತೆ ಭಾವೂಸಾಹೇಬನಿಗೆ ಅಬ್ದಾಲಿಯ ಸಿದ್ಧತೆಯು ಒಮ್ಮೆಲೆ ದೃಷ್ಟಿಗೆ ಬಿದ್ದಿತು. ಆಗ ಅವನ ಕಲ್ಪನೆಯಲ್ಲಿ ತ್ರ್ಯಂಬಕ ಶಾಸ್ತ್ರಿಯ ಬಲಿಹರಣದ ವಿಷಯವು ಬಂದು ಹೋಯಿತು, ಅವನ ಮೈಕೂದಲುಗಳು ನೆಟ್ಟಗಾದವು. ಅನಿವಾರವಾದ ಸಿಟ್ಟು ಬಂದಿತು. ಆದರೆ ಆದು ಶಾಸ್ತ್ರಿಯನ್ನು ಶಿಕ್ಷಿಸುತ್ತ ಕೂಡ್ರುವ ಸಮಯವಲ್ಲದ್ದರಿಂದ ಆತನು ವಿಲಕ್ಷಣಗಾಂಭೀರ್ಯವನ್ನು ತಾಳಿ ತನಗೆ ಮುಜುರೆಯನ್ನು ಮಾಡುತ್ತಿರುವ ಸರದಾರರನ್ನು ಕುರಿತು—“ಮಿತ್ರರೆ, ಇಂದು ಮರಾಟರ ದೈವಪರೀಕ್ಷೆಯಿರುವದು; ನೋಡಿದಿರಾ, ಅಬ್ದಾಲಿಯ ಸಿದ್ಧತೆಯನ್ನು? ಗೋಮುಖವ್ಯಾಘ್ರನಾದ ನೀಚ ಶಾಸ್ತ್ರಿಯು ಮೆಲ್ಲಗೆ ಮಾತನಾಡಿ ಘಾತಮಾಡಿದನು! ಆದರೂ ಚಿಂತೆಯಿಲ್ಲ. ಖಂಭೀರರಾದ ಮರಾಟರ ಕೈಯನ್ನು ಆ ನೀಚ ಶಾಸ್ತ್ರಿಯೂ ಅಬ್ದಾಲಿಯೂ ಕೂಡಿಯೇ ನೋಡಲಿ!! ಶ್ರೀ ಅಂಬಾಭವಾನಿಯನ್ನು ಸ್ಮರಿಸಿ ಮುಂದಡಿಇಡಿರಿ; ಕೀರ್ತಿಯ ಕಡೆಗೆ ಲಕ್ಷವಿರಬೇಕೆಂದು ಪುನಃಪುನಃ ಹೇಳುವಕಾರಣವಿಲ್ಲ; ಜನಕೋಜೀಸರದಾರರೇ, ನೀವು ಪಾಳಯದ ತೆಂಕಣ ಭಾಗದಲ್ಲಿ ನಿಂತುಕೊಳ್ಳಿರಿ; ಮಲ್ಹಾರರಾವ ಹಾಗು ಯಶವಂತರಾಯ ಇವರು ನಿಮಗೆ ಸಹಾಯಮಾಡುವರು. ಪಿ:ಯೆ ಇಬ್ರಾಹಿಮಖಾನರೇ, ನೀವು ನಿಮ್ಮ ಸಮರ್ಥ ತೋಫಖಾನೆಯೊಡನೆ ನಮ್ಮ ಸೈನ್ಯದ ಉತ್ತರಭಾಗವನ್ನು ಸಂರಕ್ಷಿಸಿರಿ. ದಮಾಜಿರಾಯರು ನಿಮಗೆ ಸಹಾಯಮಾಡುವರು. ಸಮಶೇರಬಹದ್ದೂರನು ನಮ್ಮ

ಬಲಕ್ಕಿರಲಿ; ವಿಶ್ವಾಸರಾಯನೂ ವಿಠ್ಠಲಶಿವದೇವನೂ ನಮ್ಮ ಎಡಭಾಗದಲ್ಲಿದ್ದು ಸೈನಿಕರನ್ನು ಹುರಿದುಂಬಿಸಲಿ; ನಡೆಯಿರಿ ಇನ್ನು ತಡವೇತಕ್ಕೆ? ಹರಹರಮಹಾದೇವ” ಎಂದು ಗರ್ಜಿಸಿರಿ” ಎಂದುನುಡಿಯುತ್ತಿರಲು ಸುಜಾವುದ್ದೌಲನಿಂದ ಒಬ್ಬ ವಕೀಲನು ಪತ್ರತಕ್ಕೊಂಡು ಬಂದನು. ಅದರಲ್ಲಿ “ಈದಿನ ಯುದ್ಧವನ್ನು ಮಾಡಬಾರದು. ಸಂಧಿಯ ಪ್ರಸ್ತಾಪವನ್ನು ಬಗೆಹರಿಸುವೆನು!!” ಎಂದು ಬರೆದಿತ್ತು. ಪತ್ರವನ್ನೋದಿ ಭಾವೂಸಾಹೇಬನು ಸಂತಪ್ತನಾದನು. ತಮ್ಮಲ್ಲಿಯ ರಹಸ್ಯಸ್ಫೋಟನೆಯಿಂದ ಮೊದಲೇ ಕ್ರೋಧವಶನಾದ ಭಾವೂಸಾಹೇಬನಿಗೆ ಈ ಪತ್ರದಿಂದ ಉರಿಯುವದರಲ್ಲಿ ಹುಲ್ಲುಹಾಕಿದಂತಾಯಿತೆಂಬದರಲ್ಲಿ ಸಂದೇಹವಿಲ್ಲ. ಅವನು ಆ ಪತ್ರವನ್ನು ಹರಿದು ಚೂರು ಚೂರುಮಾಡಿ ಆಕಾಶದಲ್ಲಿ ತೂರಿಬಿಟ್ಟನು; ಅದರ ತುಂಡುಗಳು ಗಿರಕಿಯನ್ನು ಹೊಡೆಯುತ್ತ ಧೂಲಿಸೇವನಕ್ಕಾಗಿ ನೆಲಕ್ಕಿಳಿದವು.

ಬಳಿಕ ಭಾವೂಸಾಹೇಬನು ವಕೀಲನನ್ನು ಹೊರದೂಡಿಸಿ ಸೈನ್ಯವು ಮುಂದೆ ಸಾಗುವಂತೆ ಆಜ್ಞಾಪಿಸಿದನು. ಸೈನ್ಯವು ಮಹಾಸಮುದ್ರದಂತೆ ಘೋರ್ಗರೆಯುತ್ತ ಮಂದ ಮಂದವಾಗಿ ಮುಂದಕ್ಕೆ ಸಾಗಿತು. ಮರಾಟರ ಸೈನ್ಯವು ರಣಮಂಡಲದಲ್ಲಿ ಪಸರಿಸಿದಂತೆ ಪಠಾಣರ ದಂಡೂ ಪಸರಿಸತೊಡಗಿತು. ಆ ಉಭಯ ಪಕ್ಷಗಳು ಯುದ್ಧಾರಂಭದಲ್ಲಿ ಕಾಳಗದ ಕಣದಲ್ಲಿ ಹ್ಯಾಗೆ ನಿಂತಿದ್ದವೆಂಬದನ್ನು ವಾಚಕರ ಸೌಲಭ್ಯಕ್ಕಾಗಿ ಇಲ್ಲಿ ಉಲ್ಲೇಖಿಸುವೆವು.

ಸುಜಾಉದ್ದೌಲನ ಬಳಿಯಲ್ಲಿ ಕಾಶೀರಾಯನೆಂಬ ಒಬ್ಬ ಬ್ರಾಹ್ಮಣಮುತ್ಸದ್ದಿಯಿದ್ದನು. ಆತನು ಬರೆದಿಟ್ಟ ಕಾಗದಪತ್ರಗಳಮೇಲಿಂದ ಪಾಣಿಪತಕಾಳಗದ ಸಮಯದಲ್ಲಿ ಉಭಯ ಸೇನೆಗಳು ಹ್ಯಾಗೆ ನಿಂತಿದ್ದವೆಂಬದನ್ನು ತೋರಿಸುವಬಂದುನಕ್ಷೆಯನ್ನು ರಾಯಲ್ ಏಸಿಯಾಟಿಕ್ ಸೊಸಾಯಿಟಿಯವರು ಪ್ರಸಿದ್ಧಪಡಿಸಿರುವರು. ಆದರೆ ಆ ನಕ್ಷೆಯು ಕಾಶೀರಾಯನ ಅಭಿಪ್ರಾಯಕ್ಕೆ ಸ್ವಲ್ಪ ಭಿನ್ನವಾಗಿರುತ್ತದೆ. ಕಾಶೀರಾಯನು “ಮರಾಟರ ದಂಡಿನ ಮುಖವು ಪೂರ್ವಕ್ಕಿದ್ದು ಅಫಗಾನರ ದಂಡಿನ ಮುಖವು ಪಶ್ಚಿಮಕ್ಕಿತ್ತೆಂದು ಬರೆದಿರುವನು. ಆತನ ಈ ವಿಧಾನವು ವಾಸ್ತವವಾಗಿರುತ್ತದೆ. ಯಾಕಂದರೆ ಭಾವೂಸಾಹೇಬನ ಧೋರಣವು ಪಠಾಣರನ್ನು ಯಮುನೆಯ ಮಳಲಿನಲ್ಲಿ ತುಳಿಯಬೇಕೆಂದಿತ್ತು. ಆದ್ದರಿಂದ ಮರಾಟರು ಪೂರ್ವಾಭಿಮುಖವಾಗಿಯೇ ಹೊರಟಿದ್ದರೆಂದು ಹೇಳಬಹುದು. ಕಾಶೀರಾಯನ ಅಭಿಪ್ರಾಯದಂತೆ ಸುಧಾರಿಸಿದ ಆ ನಕ್ಷೆಯನ್ನು ನಮ್ಮ ವಾಚಕರು ಇದರಡಿಯಲ್ಲಿ ಕಾಣಬಹುದು.

# ಪಾಣಿಪತ್ತದ ಸಮರಾಂಗಣವು.



ಸುಮಾರು ೯ ಬಡಿಯುವ ಹೊತ್ತಿಗೆ ಉಭಯ ಪಕ್ಷಗಳಿಗೂ ಕೈಗೆ ಕೈಹತ್ತಿತು. ಇಬ್ರಾಹಿಮಖಾನನು ಒಮ್ಮೆಲೆ ೩೦೦ ತೋಫುಗಳಿಗೆ ಕೊಳ್ಳಿಯನ್ನು ಕೊಟ್ಟು ಏಕಾಪೋಶನಕ್ಕೆ ಅಸಂಖ್ಯ ಜನಪಠಾಣರನ್ನು ನಾಶಮಾಡಿದನು. ಆತನ ಪ್ರತಿಸ್ಪರ್ಧಿಯಾದ ಬರಖುದಾರನು ಚಕಿತನಾದನು. ಇಬ್ರಾಹಿಮಖಾನನ ತೋಫುಗಳು ಪ್ರಾರಂಭವಾದ ಕೂಡಲೆ ಮರಾಟರ ದಂಡಿನಲ್ಲಿ ರಣವಾದ್ಯಗಳು ಕಿವಿಗಳನ್ನು ಗಡಚಿಕ್ಕಿಸಿದವು. ಆ ವಾದ್ಯಧ್ವನಿಯಿಂದ ಶೂರರಲ್ಲಿ ವೀರಶ್ರೀಯು ತುಂಬಿತು. ಅಂಜುಬುರಕರು ನಡುಗಿದರು. ಕುದುರೆಗಳು ಥೈಥೈ ಕುಣಿದವು ಗಾಡಿಗಳನ್ನು ಎಳೆಯುವ ಎತ್ತುಗಳು ಡುರಿಕೆಯನ್ನು ಹಾಕಿದವು. "ಬಹುದಿವಸ ಶ್ರೀಮಂತರ ಅನ್ನವನ್ನುಂಡ ನಾವು ಈದಿನ ನಮ್ಮ ಕೀರ್ತಿಗೆ ಕಲಂಕತಗಲದಂತೆ ನಡಕೊಳ್ಳುವೆವು" ಎಂದು ಎಲ್ಲರೂ ಸಂಕಲ್ಪಮಾಡಿದರು. ಕಾಲಾಳುಗಳು ಕಾಲಾಳುಗಳಮೇಲೆ, ಉಷ್ಟ್ರಾರೂಢರ— ಉಷ್ಟ್ರಾರೂಢರಮೇಲೆ, ಗಜಪತಿಗಳು— ಗಜಪತಿಗಳ ಮೇಲೆ, ಹಯಪತಿಗಳು ಹಯಪತಿಗಳ ಮೇಲೆ ಏರಾಟವನ್ನು ನಡಿಸಿದರು. ಆಗ ಹೊಡಿ, ಬಡಿ, ಕಡಿ, ತಿವಿ, ಇರಿ, ಎಂಬ ಶಬ್ದಗಳಿಂದ ಭಯಂಕರವಾದ ಕಲಕಲಾಟವು ಎದ್ದಿತು. ಮನುಷ್ಯರ ಹಾಹಾಕಾರಗಳಿಂದಲೂ ಪಶುಗಳ ಕರ್ಕಶಧ್ವನಿಗಳಿಂದಲೂ ಆ ಕಲಕಲಾಟವು ಅತ್ಯುಗ್ರಸ್ಥಿತಿಯನ್ನು ಹೊಂದಿತು. ಪಠಾಣರಲ್ಲಿಯೂ ಆವೇಶವು ಹೆಚ್ಚಿತು. ಮರಾಟರ ಹುಜುರಾತಿಯವರಿಗೂ ವಜೀರನ ಖಾಸ ದಂಡಿಗೂ ಕದನವು ಬಿದ್ದಿತು. ಜನಕೋಜಿರಾಯನೂ, ನಜೀಬಖಾನ ಶಹಾಪಸಂದಖಾನರಿಗೆ ಗಂಟುಬಿದ್ದನು. ಭಾವೂಸಾಹೇಬನೂ ವಿಶ್ವಾಸರಾಯನೂ ಶೃಂಗರಿಸಿದ ಆನೆಗಳ ಮೇಲೆ ಕುಳಿತು ತಮ್ಮ ಸೈನಿಕರನ್ನು ಹುರಿದುಂಬಿಸುತ್ತಿದ್ದರು. ಮತ್ತು ನಡನಡುವೆ ತುಬಾಕಿಗಳನ್ನು ಹಾರಿಸುತ್ತಿದ್ದರು. ಮರಾಟರು ಅನಿವಾರವಾದ ಸ್ವಾಭಿಮಾನದಿಂದ ಜೀವದ ಹಂಗುಇಲ್ಲದೆ ಕಾದಲಾರಂಭಿಸಿದರು.

ಅಫಗಾಣರ ಬಳಿಯಲ್ಲಿ ಹೇಳಿಕೊಳ್ಳುವಂಥ ತೋಫಖಾನೆಗಳು ಇದ್ದಿಲ್ಲ. ಆದ್ದರಿಂದ ಆವರು ಯುರೋಪಿಯನ್ ಪದ್ಧತಿಯ ಮರಾಟರ ತೋಫುಗಳಿಗೆ ಬಹಳವಾಗಿ ಅಂಜಿದರು. ಇಬ್ರಾಹಿಮಖಾನನು ಫ್ರೆಂಚಜನರಲ್ ಬುಸಿಯ ಕೈಕೆಳಗೆ ನುರಿತವನಾದ್ದರಿಂದ ಆವನ ಉಪಟಳವನ್ನು ಪಠಾಣರು ಸಹಿಸದಾದರು. ಹುಟ್ಟುಗುಣವಿದ್ದರೆ ವಿದ್ಯೆಯು ಬರಲಿಕ್ಕೆ ತಡವಾಗುವದಿಲ್ಲ. ಇಬ್ರಾಹಿಮಖಾನನು ಮೊದಲು ಬುಸಿಯ ಪಲ್ಲಕ್ಕಿಯಮುಂದೆ ಓಡುವ ಸಿಪಾಯಿಯಾಗಿದ್ದನು. ಆವನ ಜಾಣತನವನ್ನು ಕಂಡು ಬುಸಿಯು ಆವನಿಗೆ ಗೋಲಂದಾಜನ ಕೆಲಸವನ್ನು

ಕೊಟ್ಟನು. ಆದರಲ್ಲಿ ಅವನ ಗುರಿಹೊಡೆಯುವ ನೈಪುಣ್ಯವನ್ನು ನೋಡಿ ಬುಸಿಯು ಪರಮಾನಂದಬಟ್ಟು ಅವನನ್ನು ತೋಫಖಾನೆಯ ಮುಖ್ಯ ಅಮಲದಾರನನ್ನಾಗ ಮಾಡಿದನು. ಹೀಗೆ ಖಾನನು ಬುಸಿಯ ಶಿಕ್ಷಣದಿಂದ ತೋಫಖಾನೆಯಲ್ಲಿ ಪರಿಶ್ರಮಮಾಡಿಕೊಳ್ಳುತ್ತಿರಲು ಬುಸಿಗೂ ನಿಜಾಮನಿಗೂ ಮನಸ್ತಾಪವಾಗಿ ಬುಸಿಯು ಹೊರಟುಹೋದನು. ಬಳಿಕ ಇಬ್ರಾಹಿಮಖಾನನು ನಿಜಾಮನ ಆಶ್ರಯವನ್ನು ಬಿಟ್ಟು ಪೇಶ್ವೆಯವರ ಬಳಿಗೆ ಬಂದನು. ಗುಣಜ್ಞನಾದ ಭಾವೂಸಾಹೇಬನು ತತ್‌ಕ್ಷಣವೇ ಖಾನನನ್ನು ಗೌರವಿಸಿ ಅವನಿಗೆ ಆಶ್ರಯ ಕೊಟ್ಟನು. ಹೀಗೆ ಒಮ್ಮನಸ್ಸಿನಿಂದ ಪೇಶ್ವೆಯವರನ್ನು ಅವಲಂಬಿಸಿದ ಇಬ್ರಾಹಿಮಖಾನನು ತನ್ನ ಕರಾಮತಿಯನ್ನು ಬೈಲಿಗಿಡುತ್ತಿರಲು, ದಮಾಜಿ ಮೊದಲಾದವರು ಎದೆಗೊಟ್ಟು ಕಾದುತ್ತಿರಲು ಉತ್ತರಭಾಗದಲ್ಲಿ ಮರಾಟರ ಕೈಯು ಮೇಲಾಗಹತ್ತಿತು. ಅಬ್ದಾಲಿಯ ಕಡೆಯ ಬರಖುರದಾರನು ರೇಗಿಗೆದ್ದು ಖಾನನ ತೋಫುಗಳಿಗೆ ಅಸಗೊಳ್ಳದೆ ಮುಂದೆ ಸುಗ್ಗಹತ್ತಿದನು. ಇತ್ತ ದಕ್ಷಿಣಸಿಟ್ಟನಲ್ಲಿ ಜನಕೋಜಿಯೂ, ಮಧ್ಯದಲ್ಲಿ ಹುಜರಾತಿಯವರೂ ಒಳ್ಳೇ ಕಸರತ್ತುಮಾಡಿದ್ದರಿಂದ ಪಠಾಣರಲ್ಲಿ ಅಸಂಖ್ಯ ಜನರು ಮಡಿದರು. ತನ್ನ ದಂಡಿನಲ್ಲಿ ಬಹಳ ಹಾಹಾಕಾರವೆದ್ದದ್ದನ್ನು ನೋಡಿ ಅಬ್ದಾಲಿಯು ಖತಿಗೊಂಡು ತನ್ನ ಜನರನ್ನು ಹುರುಪುಗೊಳಿಸಿದನು. ಚಳಿನ ದಿನ ಗಟ್ಟಿಗರಾದ ಆ ರಾಕ್ಷಸರು ಅತ್ಯಂತ ಆವೇಶದಿಂದ ಕಾದಿದರು. ಕ್ಷಣಮಾತ್ರದಲ್ಲಿ ಅಲ್ಲೋಲಕಲ್ಲೋಲವಾಯಿತು. ಅಬ್ದಾಲಿಯು ಮರಾಟರ ಪಣರಕ್ಕಸತನಕ್ಕೆ ಬೊಟ್ಟು ಕಚ್ಚಿದನು.

ಈ ಪ್ರಕಾರ ಎಷ್ಟು ಕಕ್ಕಸದಿಂದ ಕಾದಿದರೂ ಪಠಾಣರು ಹಿಂದಕ್ಕೆ ಸರಿಯದ್ದನ್ನು ಕಂಡು ಭಾವೂಸಾಹೇಬನು ಸಂತಾಪಗೊಂಡನು. ಸ್ವಾಭಿಮಾನಿಯಾದ ಅವನಿಗೆ ಅಫಗಾಣರ ಆವೇಶವು ಸಹನವಾಗಲಿಲ್ಲ. ಆಗ ಅವನು ಆನೆಯಿಂದಿಳಿದು ಕುದುರೆಯನ್ನು ಹತ್ತಿದನು; ಮತ್ತು ಸ್ವತಃ ಪಠಾಣರ ಸೈನ್ಯದಲ್ಲಿ ಧುಮುಕಿ ಅವರನ್ನು ಹಣಿಯಹತ್ತಿದನು; ಭಾವೂಸಾಹೇಬನ ಈ ಕೃತಿಯನ್ನು ಕಂಡು ತರುಣನಾದ ವಿಶ್ವಾಸರಾಯನೂ ಆನೆಯಿಂದಿಳಿದು ಅಶ್ವಾರೂಢನಾಗಿ ಕ್ಷಾತ್ರತೇಜಸ್ಸನ್ನು ಬೈಲಿಗಿಡಹತ್ತಿದನು. ಹೀಗೆ ಉಭಯ ಶ್ರೀಮಂತರು ಯುದ್ಧದಲ್ಲಿ ಪ್ರವೇಶಮಾಡಿದ್ದರಿಂದ ಉಳಿದ ಸೈನಿಕರಿಗೂ ಆವೇಶಬಂದು ಅವರು ಮೊದಲಿಗಿಂತ ಇಮ್ಮಡಿ ರೊಚ್ಚಿನಿಂದ ಕಾದತೊಡಗಿದರು. ಸುಮಾರು ನಾಲ್ಕು ತಾಸುಗಳವರೆಗೆ ಕಾದಿದ್ದರೂ ಮರಾಟರು ಶಕ್ತಿಗುಂದದೆ ಹೊಡಿ—

ಒಡಿಯುತ್ತ ಮುಂದಮುಂದಕ್ಕೆ ಹೆಜ್ಜೆಯನ್ನಿಕ್ಕಹತ್ತಿದರು. ಅದೇ ವೊಕ ವೀಸೆಗಳು ಒಡೆಯುತ್ತಿರುವ ವಿಶ್ವಾಸರಾಯನಂತೂ ಬಹಳ ಪೌರುಷವನ್ನು ವ್ಯಕ್ತಮಾಡಿದನು. ಖಡ್ಗವನ್ನು ತಿರುಗಿಸುವ ಆತನ ಕೈಚಮತವು ವರ್ಣಿಸಲಸದಳವು. ಅವನ ಶೌರ್ಯಸಾಹಸಗಳು ನಾ-ನಾ ಅನ್ನುವಯೋದ್ಧರರನ್ನೂ ಆಶ್ಚರ್ಯಗೊಳಿಸುತ್ತಿದ್ದವು. ಅಬ್ದಾಲಿಯುವಜೀರನಾದ ಶಹಾವಲ್ಲಿಯು ನಿರ್ವಿಣ್ಣನಾದನು. ಖುದ್ದಾಅಬ್ದಾಲಿಯ ಇಬ್ಬರು ಮಕ್ಕಳೂ ರಣದೇವಿಗೆ ಬಲಿಯಾದರು. ಹೀಗೆ ಪಠಾಣರು ಮರಾಟರ ಪೆಟ್ಟುಗಳನ್ನು ತಿನ್ನುತ್ತ ನಿರ್ವೀರ್ಯರಾಗುತ್ತನಡೆದಿರಲು ಜಯಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಒಳಗಾಗುವ ಸುಯೋಗವು ಇಲ್ಲದ್ದರಿಂದ ಮುಂದೆ ಒಂದು ಕ್ಷಣದಲ್ಲಿ ಅನರ್ಥವಾಯಿತು. ಸೈನ್ಯದಲ್ಲಿ ಆವೇಶದಿಂದ ಕಾದುತ್ತಿರುವ ವಿಶ್ವಾಸರಾಯನಿಗೆ ಎಲ್ಲಿಂದಲೋ ಒಂದು ಗುಂಡು ತಾಕಿತು. ಪೆಟ್ಟು ಆಯಕಟ್ಟಿಗೆ ಬಿದ್ದದರಿಂದ ಹಾಯ್, ಹಾಯ್ ಎನ್ನುತ್ತ ಅವನು ನೆಲಕ್ಕುರುಳಿದನು. ಮರಾಟರ ಭಾವೀರಾಜನೂ, ಮರಾಟರ ಹಾಗೂ ಭಾವೂಸಾಹೇಬನ ಪಂಚಪ್ರಾಣನೂ ಆದ ವಿಶ್ವಾಸರಾಯನು ಹೀಗೆ ಪಂಚತ್ವವನ್ನು ಹೊಂದಲು ಶೂರರ ಕೈಖಡ್ಗಗಳು ಮುಗ್ಗರಿಸಿದವು. ಮರಾಟರಲ್ಲಿ ಹಾ ಹಾಕಾರವೆದ್ದಿತು. ಆಗ ಎಲ್ಲರ ಕಣ್ಣಿಗೂ ಮರಾಟರ ದೈವದುರ್ವಿಲಾಸವು ಕಟ್ಟಿತು.

## ೧೬ನೇ ಪ್ರಕರಣ.

# ಶೂರರ ಕೆಚ್ಚೆದೆ.

ಮನುಷ್ಯನ ಪ್ರಯತ್ನಕ್ಕೆ ದೈವಸಹಾಯವು ದೊರೆಯದಿದ್ದರೆ ಅವನ ಪ್ರಯತ್ನವು ಹ್ಯಾಗೆ ನಿಷ್ಫಲವಾಗುವದೆಂಬದನ್ನು ಪ್ರಸ್ತುತದ ಕಾಳಗದಲ್ಲಿ ಕಾಣಬಹುದು. ಭಾವೂಸಾಹೇಬನು ಸ್ವಲ್ಪ ದುರಭಿಮಾನದಿಂದಲೇ ಆಗಲೊಲ್ಲದೇಕೆ, ಕ್ಷಾತ್ರತೇಜದ ಪರಮಾವಧಿಯನ್ನು ತೋರಿಸಿದನು. ಆದರೆ ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ವಿಶ್ವಾಸರಾಯನು ಮರಣಹೊಂದಲು ಮರಾಟರ ಹಿಂಗಾಲ ಕಸುವೇ ಕುಗ್ಗಿತು. ಇದಕ್ಕೆ ಮರಾಟರ ಕಿಂಬಹುನಾ ಹಿಂದೂನಿವಾಸಿಗಳ ಕ್ಷೀಣಪುಣ್ಯವೇ ಕಾರಣವೆಂದು ಹೇಳಲಾಗುವದು. ವಿಶ್ವಾಸರಾಯನ ಮರಣದಿಂದ ಬಹುತೇಕವಾಗಿ ಕಾಳಗದ ಬಣತಿಯೇ ಬೇರೆಯಾಯಿತು. ಮರಾಟರ ಸೈನ್ಯದಲ್ಲಿ ಹೆಂಗಸರು ಹುಡುಗರು ವಿಶೇಷವಾಗಿ ಇದ್ದದರಿಂದ ಶೋಕವು ಪರಮಾವಧಿಯಾಯಿತು. ಶ್ರೀಮಂತರ ಆಪ್ತ ಸ್ತ್ರೀಯರು ಗೋಳಿಟ್ಟರು. ಭಾವೂಸಾಹೇಬನ ಹೆಂಡತಿಯಾದ ಪಾರ್ವತೀಬಾಯಿಯು ಆನೆಯ ಮೇಲೆ ಕುಳಿತು ತನ್ನ ಪತಿಯ ಹಾಗೂ ಮಗನ ರಣರಕ್ಕಸತನವನ್ನು ಕೌತುಕದಿಂದ ನೋಡುತ್ತಿದ್ದಳು. ಆಕೆಯ ಬಳಿಯಲ್ಲಿ ನಾನಾಫಡಣವೀಸನ ತಾಯಿಯೂ ಹೆಂಡತಿಯೂ ಇದ್ದರು. ಕಾಳಗವು ಭರಕ್ಕೆ ಬಂದು ಮರಾಟರಿಗೆ ಜಯದೊರೆಯುವ ರಂಗು ತೋರಹತ್ತಿದಾಗ ಆ ಸ್ತ್ರೀಯ ಸಂಭ್ರಮಕ್ಕೆ ಪಾರಾವಾರವೇ ಇದ್ದಿಲ್ಲ. ಮರಾಟರ ಅಬ್ಬರಕ್ಕೆ ಅಂಜಿ ಅಬ್ದಾಲಿಯು ತನ್ನ ಛಾವಣಿಯಲ್ಲಿರುವ ಚೀಜವಸ್ತುಗಳನ್ನು ಯಮುನೆಯನ್ನು ದಾಟಿಸುವ ಯೋಚನೆಯಲ್ಲಿರುವನೆಂಬದನ್ನು ಕೇಳಿಯಂತೂ ಆಕೆಗೆ ಸ್ವರ್ಗವು ಮೂರು ಬೆರಳು ಉಳಿದಂತಾಯಿತು. ಹೀಗೆ ಆಕೆಯು ಆನಂದಾತಿಶಯದಿಂದ ಪರವಶಳಾಗಿರಲು, ವಿಶ್ವಾಸರಾಯನ ಮರಣವಾರ್ತೆಯು ಆಕೆಯ ಹೃದಯವನ್ನು ಒಮ್ಮೆಲೆ ಭೇದಿಸಿತು. ಆ ಹೃದಯದ್ರಾವಕಸಂಗತಿಯಿಂದ ಆ ಸ್ತ್ರೀಯು ತತ್ತರಿಸಿದಳು. ಆಕೆಯ ಕಣ್ಣಲ್ಲಿ ಕತ್ತಲುಗೂಡಿಸಿದ ಹಾಗಾಯಿತು. ತನ್ನ ಹೊಟ್ಟೆಯಲ್ಲಿ ಸಂತತಿಯಿಲ್ಲದಿರಲು ವಿಶ್ವಾಸರಾಯನೇ ತಮ್ಮ ಹೊಟ್ಟೆಯ ಮಗನೆಂದು ಪ್ರೀತಿಸುವ ಆ ಮಾತೃಪ್ರೇಮದ ಪಾರ್ವತೀಬಾಯಿಯ ಸ್ಥಿತಿಯು ಆಗಿನ ಕಾಲದಲ್ಲಿ ಹ್ಯಾಗಾಗಿರಬಹುದೆಂದನ್ನು ವರ್ಣಿಸಲು ಶಬ್ದಗಳಲ್ಲಿ ಸಾಮರ್ಥ್ಯವು

ಸಾಲದು; ಆ ಮಾವುಲಿಯು ತಾನು ಕುಳಿತ ಆನೆಯಿಂದಿಳಿದು ವಿಶ್ವಾಸರಾಯನ ಕಲೇವರದ ಬಳಿಗೆ ಬಂದಳು. ಆಕೆಯು ವೀರವನಿತೆಯಾಗಿದ್ದರೂ ವಿಶ್ವಾಸರಾಯನಂಥ ನರರತ್ನವು ಕೈಬಿಟ್ಟದ್ದಕ್ಕೆ ಆಕೆಯ ದುಃಖವು ನಿಲ್ಲಲಿಲ್ಲ. ದೇವನೇ, ನಮ್ಮ ವಿಶ್ವಾಸನನ್ನು ಒಯ್ದೆಯಾ? ಎಂದು ಆಕೆಯು ಪ್ರಲಾಪಿಸುತ್ತಿರಲು, ನಾನಾಫಡಣವೀಸನ ತಾಯಿಯು ಒಳ್ಳೇ ಸಂತಾಪದಿಂದ—“ಅವ್ವನವರೇ, ನೀವು ಹೀಗೆ ಅಳುತ್ತ ಕುಳಿತರೆ ಸೈನ್ಯದಗತಿಯೇನು? ಅಳುವದು ಇಲ್ಲಿಗೆ ತೀರಿತೆಂದು ತಿಳಿಯಬೇಡಿರಿ. ಮುಂದೆ ಯಾವ ಯಾವ ಪ್ರಸಂಗಗಳು ಬರುವವೋ ತಿಳಿಯದು! ನಿಮ್ಮ ಈ ಶೋಕದಿಂದ ಸೈನಿಕರೆಲ್ಲ ನಿರುತ್ಸಾಹಿಗಳಾಗಿದ್ದಾರೆ” ಎಂದು ನುಡಿಯಲು ತಿಳುವಳಿಕೆಯುಳ್ಳ ಪಾರ್ವತೀಬಾಯಿಯು ಅಳುವದನ್ನು ತಟ್ಟನೆ ನಿಲ್ಲಿಸಿಬಿಟ್ಟಳು. ವೀರವನಿತೆಗೆ ಒಪ್ಪಬಹುದಾದ ಲಕ್ಷಣವು ಆಕೆಯ ಮುಖವನ್ನು ಆವರಿಸಿತು. ಸ್ತ್ರೀಯಾದ ಪಾರ್ವತೀಬಾಯಿಯ ಸ್ಥಿತಿಯಲ್ಲಿ ಇಷ್ಟು ಅಭ್ಯಂತರವಾದದ್ದನ್ನು ನೋಡಿ, ದಂಡಾಳುಗಳು ಹುರುಪುಗೊಂಡರು. ವಿಶ್ವಾಸರಾಯನ ಮರಣದಿಂದ ಹತವೀರ್ಯರಾದ ಮರಾಟರು ಧಾರಾತೀರ್ಥದಲ್ಲಿ ದೇಹಪತನವಾಗುವವರೆಗೆ ಕಾದಬೇಕೆಂದು ಸಂಕಲ್ಪಮಾಡಿದರು. ಭಾವೂಸಾಹೇಬನೂ ಮೋಹವನ್ನು ಬಿಟ್ಟು ಅಬ್ದಾಲಿಯನ್ನು ಗೊತ್ತಿಗೆಹಚ್ಚಿಯೇ ತಿರುವನೆಂದು ರೊಚ್ಚಿಗೆದ್ದು ಆಪಡುಗಚ್ಚಿ ಪಠಾಣರಮೇಲೆ ಧುಮುಕಿದನು.

ಈ ಪ್ರಕಾರ ಭಾವೂಸಾಹೇಬನು ಕಡದಿಗೆ ಬಿದ್ದು ಪರಾಟಿಕೆಯನ್ನಾಡುತ್ತಿರಲು ಜನಕೋಜಿ, ಸಮಶೇರ, ಗಾರದಿ, ಗಾಯಕವಾಡ ಮೊದಲಾದವರೂ ಆವೇಶಗೊಂಡು ರಣಗರ್ಜನೆಯನ್ನು ಮಾಡುತ್ತ ಶತ್ರುಸಂಹಾರವನ್ನು ನಡಿಸಿದರು. ರಣಮಂಡಲವು ಅತ್ಯುಗ್ರವಾಯಿತು. ಅಷ್ಟರಲ್ಲಿ ಪಠಾಣರಕಾದಟ್ಟ ದಂಡು ಹೊಸ ಹುರುಪಿನಿಂದ ಸಾಗಿಬಂದಿತು. ಭಾವೂಸಾಹೇಬನು ಅದಕ್ಕೆ ಎದುರಾದನು. ಕದಾಚಿತ್ ಈ ದಿವಸ ವಿಪರೀತ ಪ್ರಸಂಗವೊದಗಿದಲ್ಲಿ ರಾಣೀವಾಸದ ಪರಿವಾರವನ್ನು ದಕ್ಷಿಣಕ್ಕೆ ಮುಟ್ಟಿಸುವದಕ್ಕಾಗಿ ಹೋಳಕರನಿಗೆ ಈ ಮೊದಲೇ ತಿಳಿಸಿದಂತೆ ಸದ್ಯದ ಸ್ಥಿತಿಯಮೇಲಿಂದ ಅವನೊಬ್ಬನಿಂದಲೇ ಆ ಕೆಲಸವು ಸಿದ್ಧಿಗೆ ಮುಟ್ಟಲಿಕ್ಕಿಲ್ಲವೆಂಬ ಅನುಮಾನ ಹುಟ್ಟಿ ಭಾವೂಸಾಹೇಬನು ೫೦೦ ಜನ ಕುರುಬರನ್ನು ನೆರವಿಗೆ ಕೊಟ್ಟು ವಿಸಾಜಿಜೋಗದಂಡ ಎಂಬ ನಂಬಿಗೆಯ ಮನುಷ್ಯನನ್ನು ನೇಮಿಸಿದನು. ಮತ್ತು ಅತನನ್ನು ಕುರಿತು—“ವಿಸಾಜೀ, ಪ್ರಸಂಗವು ಕಠಿಣವಿರುವದು; ಕುಟುಂಬವನ್ನು ಪಾರುಮಾಡುವದು ನಿನಗೆ ಅಶಕ್ಯವೆಂದು ತೋರಿದಲ್ಲಿ ಖಡ್ಗದಿಂದ ಚೂರುಚೂರು ಮಾಡಿ ಬಿಡು” ಎಂದು ಹೇಳಿದನು. ಒಡೆಯನ ಈ ಮಾತು

ಕೇಳಿ ವಿಸಾಜಿಗೂ, ಹೇಳುವಾಗ ಭಾವೂಸಾಹೇಬನಿಗೂ ಕಂಠವು ಬಿಗಿದು ಬಂದಿತೆಂಬುದನ್ನು ಬರೆದು ತೋರಿಸಲವಶ್ಯವಿಲ್ಲ. ಹೀಗೆ ಹೆಂಗಸರ ವ್ಯವಸ್ಥೆಯನ್ನು ಮಾಡಿ ಭಾವೂಸಾಹೇಬನು ಹಂಗುದೊರೆದು ಪಠಾಣರ ಹಿಂಡಿನಲ್ಲಿ ಸೇರಿದನು.

ಆದರೆ ಮರಾಟರ ಸಾಮರ್ಥ್ಯವು ಎಲ್ಲಿಯವರೆಗೆ ನಿಲುಕುವದು? ಒಂದು ವೇಳೆ ಕೂಳಿಲ್ಲದೆ ಕಾದಿ ಕಾದಿ ಬೇಸತ್ತಿದ್ದರೂ ವಿಸ್ವಾಸರಾಯನು ಸಾಯದಿದ್ದರೆ ಅವರು ಗಟ್ಟಿಮನಸ್ಸು ಮಾಡಿ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಆದರೆ ಆ ತರದ ಪ್ರಸೋಲ್ಲಾಸವು ಸರಿದು ಹೋಯಿತು. ಮೇಲಾಗಿ ಅವರು ೨೨ ದಿವಸಗಳ ವರೆಗೆ ಅರೆಹೊಟ್ಟೆ-ಅರೆಗೂಳು ತಿಂದು ಕಾಲಕ್ರಮಿಸಿದ್ದರಿಂದ ಅವರ ಶಕ್ತಿಯು ಕ್ಷೀಣವಾಗಿತ್ತು. ಇಂಥ ಸ್ಥಿತಿಯಲ್ಲಿ ಅವರಿಗೆ ಅರುಣೋದಯಕ್ಕೆ ತಿಂದ ಅನ್ನವು ಎಷ್ಟೊತ್ತಿನವರೆಗೆ ಶಕ್ತಿದಾಯಕವಾದೀತು? ದಾಕ್ಷಿಣಾತ್ಯರ ಶಕ್ತಿಯು ಮೂಲತಃ ಬೆಳಿನಾಡಿನ ಪಠಾಣರಿಗಿಂತ ಕಡಿಮೆ ಇದ್ದು ಅನ್ನ ನೀರುಗಳಿಲ್ಲದೆ ಅವರು ಕಂಗೆಟ್ಟು ಹೋಗಿದ್ದರು. ಇದಕ್ಕೆ ವಿಪರೀತವಾಗಿ ಅಫಗಾನರ ಸ್ಥಿತಿಯಿತ್ತು; ಅವರು ರಾಕ್ಷಸದೃಶರು. ಅವರಿಗೆ ಅನ್ನಸಾಮಗ್ರಿಯು ಕೊರತೆಯಿರಲಿಲ್ಲ; ಉಂಡು ತಿಂದು ಸಾಮರ್ಥ್ಯಸಂಚಯ ಮಾಡಿಕೊಂಡವರು. ಮೇಲಾಗಿ ಅವರಿಗೆ ಈ ದಿವಸ ಮುಂಜಾವಿನಲ್ಲಿ ಆಹಾರವು ಸಿಕ್ಕಿತ್ತು. ಆದ್ದರಿಂದ ಮರಾಟರಷ್ಟು ಅವರು ತ್ರಾಣಗುಂದಲಿಲ್ಲೆಂಬದು ಸಹಜವು; ಇಂಥ ವಿರುದ್ಧಪರಿಸ್ಥಿತಿಯಲ್ಲಿ ವಿಶ್ವಾಸರಾಯನು ಸತ್ತನೆಂಬ ವಾರ್ತೆಯಿಂದ ಮರಾಟರ ಪಕ್ಷವು ಕಳೆಗುಂದಿ ಅಫಗಾನರ ಪಕ್ಷವು ಪ್ರಬಲವಾದದ್ದರಲ್ಲಿ ಆಶ್ಚರ್ಯವೇನು? ಅಬ್ದಾಲಿಯು ಇಲ್ಲಿಯ ವರೆಗೆ ತನ್ನ ಅಳವನ್ನು ಮೀರಿ ಕಾಳಗಮಾಡಲಿಲ್ಲ. ಈಗ ಮಾತ್ರ ಅವನು ಸ್ಫೂರ್ತಿಗೊಂಡು ಇದೇ ಕಾವಿನಲ್ಲಿ ಮರಾಟರನ್ನು ಮಗ್ಗಲುಮುರಿಯಾಗಿ ಹೊಡೆಯಬೇಕೆಂದು ಹೇಚು ಪೇಚು ನೋಡದೆ ಮುಗಿಬಿದ್ದನು. 'ಗೂಳಿಬಿದ್ದ ಮೇಲೆ ಆಳಿಗೊಂದು ಕಲ್ಲು' ಎಂಬ ಕನ್ನಡಿಗರ ಗಾದೆಯಂತೆ ಅಫಗಾನರಲ್ಲಿ ಕೈಲಾಗದವರೂ ಮುಂದೆಬಿದ್ದರು.

ಈ ಯುದ್ಧದಲ್ಲಿ ಮರಾಟರ ಹುಜುರಾತಿಯವರು ಪಂಥವನ್ನು ಮಾಡಿದರು. ಜೇಬಿನಲ್ಲಿದ್ದಷ್ಟು ಕಡ್ಲಿಯನ್ನು ಮುಕ್ಕಿ ಒಂದು ಬೊಗಸೆ ನೀರು ಕುಡಿದು ಕಾಳಗಕ್ಕೆ ಅಣಿಯಾದರು. ಈ ಕಾಲಕ್ಕೆ ಬಳವಂತರಾಯನು ಜೀವದಿಂದಿದ್ದರೆ ಎಷ್ಟು ಸಹಾಯವಾಗುತ್ತಿತ್ತೆಂದು ಅವರು ಅಂದುಕೊಂಡರು. ಮರಾಟರರಾಜ್ಯವು ಉದಯಕ್ಕೆ ಬಂದಂದಿನಿಂದ ಇಲ್ಲಿಯವರೆಗೆ ನೂರುಗಟ್ಟಲೆ ಯುದ್ಧಗಳಾಗಿರಬಹುದು. ಆದರೆ ಅವರು ಈ ಪ್ರಕಾರ ಮಾತ್ರ ಜೀವದ ಹಂಗುದೊರೆದು ಎಂದೂ ಕಾದಿದ್ದಿಲ್ಲ. ಅಫಗಾನರು ಎಷ್ಟು ಕಸ್ತುಮಾಡಿ ಮುಂದಕ್ಕೆ ಬರಬೇಕೆಂದು ಹಾತೊರೆದರೂ ಹುಜು

ರಾತಿಯವರು ಹಾಯ ಗೊಡಲಿಲ್ಲ. ಭಾವೂಸಾಹೇಬನು ಒಳ್ಳೇ ಪೌರುಷದಿಂದ ಸೈನ್ಯದ ಮುಂಭಾಗವನ್ನು ಕಾಯ್ದುಕೊಂಡನು. ಹೀಗೆ ಭಾವೂಸಾಹೇಬನು ಯುದ್ಧಮಾಡುತ್ತಿರಲು, ಆತನ ಎಡಭಾಗದಲ್ಲಿದ್ದ ಯಶವಂತರಾವ ಪವಾರ ಸಮಸೇರ ಬಹದ್ದೂರರೆಂಬ ರಣಶೂರರು ರೋಹಿಲರಕೂಡ ಕಾದಾಡುತ್ತಿರುವಾಗ ಅಕಸ್ಮಾತ್ ಪವಾರನು ಮಡಿದನು. ಸಮಸೇರನು ಘಾಯಹೊಂದಿ ಬಿದ್ದನು. ಆವರಿಬ್ಬರ ಸೈನಿಕರೂ ನಿರ್ವಿಣ್ಣರಾದರು. ಹೀಗೆ ಮರಾಟರ ದುರ್ದೈವದಿಂದ ಈ ಎರಡು ಮದ್ದಾನೆಗಳು ಕೈಬಿಡಲು ಉತ್ತರದಲ್ಲಿ ಇಬ್ರಾಹಿಮಖಾನನು ಒಬ್ಬನೇ ಆದನು. ಆತನ ಪ್ರತಿಸ್ಪರ್ಧಿಯಾದ ಬರಖುರದಾರಖಾನನು ತನ್ನ ಸಹಾಯಕ್ಕೆ ಬಂದ ದುರಾಣೀಸ್ವಾರರ ಹಿಂಗಾಲಕಸುವಿನಿಂದ ಗಾರದಿಯ ತೋಫುಗಳಿಗೆ ಹಿಂಜರಿಯದೆ ಆತನ ಕವಾಯತಿಯ ಸೈನ್ಯವನ್ನುಹೊಕ್ಕು ಸಂಹರಿಸತೊಡಗಿದನು. ಖಾನನು ೧೦ಮಂದಿಯನ್ನು ಕೊಲ್ಲುವಷ್ಟರಲ್ಲಿ ಗಾರದಿಯು ೧೦೦ಮಂದಿಯನ್ನು ಕೊಲ್ಲುತ್ತಿದ್ದನು. ಅಲ್ಪಾವಕಾಶದಲ್ಲಿ ಉಭಯತರ ರಣಮಂಡಲವು ಭಣಗುಟ್ಟತೊಡಗಿತು. ಗಾರದಿಯ ಮಗ, ಮೊಮ್ಮಗ ಮೊದಲಾದವರು ಮರಣಹೊಂದಿದರು. ಖುದ್ದ ಇಬ್ರಾಹಿಮಖಾನನೂ ಘಾಯಹೊಂದಿ ಪರಾಧೀನನಾದನು. ಆದರೂ ಆತನು ಬಿದ್ದಲ್ಲಿಯೇ ಬಿದ್ದುಕೊಂಡು ತನ್ನ ಸೈನಿಕರನ್ನು ಹುರಿದುಂಬಿಸಹತ್ತಿದನು. ಆ ಖಾನನ ಸ್ವಾಮಿನಿಷ್ಠೆಯನ್ನು ನೋಡಿ ಅಫಗಾನರೂ ಮರಾಟರೂ ಬೊಟ್ಟುಕಚ್ಚಿದರು! ಜಾತಿಯಿಂದ ಮುಸಲ್ಮಾನನಿದ್ದ ಗಾರದಿಯು ಬ್ರಾಹ್ಮಣಸ್ವಾಮಿಯ ವಿಷಯವಾಗಿ ತಾಳಿದ ಏಕನಿಷ್ಠೆಯನ್ನು ನೋಡಿದರೆ ಆ ಕಾಲಕ್ಕೆ ಜಾತಿಮಾತ್ಸರ್ಯವು ಬಹ್ವಂಶದಿಂದ ಇರಲಿಕ್ಕಿಲ್ಲವೆಂದು ಸಹಜವಾಗಿ ತರ್ಕಿಸಬಹುದು! ಕೆಲವು ಜನ ಕಾದಂಬರಿಕಾರರು ಭಾವೂಸಾಹೇಬನ ಕಾಲಕಿರ್ದಿಯಲ್ಲಿ ಜಾತಿಮತ್ಸರವು ಬಹಳವಿತ್ತೆಂದು ಉಲ್ಲೇಖಿಸಿರುತ್ತಾರೆ. ಆದರೆ ಆವರ ಅಭಿಧಾನವು ನಿರಾಧಾರವೆಂದು ಹೇಳಲಾಗುವದು. ಯಾಕಂದರೆ ಪ್ರಸ್ತುತದ ಸಂಗ್ರಾಮದಲ್ಲಿ ಬ್ರಾಹ್ಮಣ, ಮುಸಲ್ಮಾನ, ಮರಾಟ, ಕುರುಬ ಇವರೇ ಮೊದಲಾದ ಹಲವುಜಾತಿಯ ಜನರು ಮರಾಟರಾಜ್ಯದ ಸಲುವಾಗಿ ಏಕನಿಷ್ಠೆಯಿಂದ ಆತ್ಮಾರ್ಪಣಮಾಡಿದ ಸಂಗತಿಯು ಅತ್ಯಂತ ಮಹತ್ವದ್ದಾಗಿರುತ್ತದೆ. ಪರಸ್ಪರರಲ್ಲಿ ಪ್ರೇಮದ ಬಳಿಕೆಯಿಲ್ಲದಿದ್ದರೆ ಹೀಗಾಗುವದು ಹ್ಯಾಗೆ ಶಕ್ಯವಾದೀತು? ಇರಲಿ;

ಮರಾಟರಲ್ಲಿಯ ಪ್ರಮುಖರು ಒಬ್ಬೊಬ್ಬರೇ ನೆಲಕ್ಕುರುಳಹತ್ತಿದರು: ದಮಾಜಿರಾಯನು ರೋಹಿಲರನ್ನು ತಡೆದು ನಿಲ್ಲಿಸುವ ಪ್ರಯತ್ನ ನಡಿಸಿದನು. ಯಶವಂತರಾಯನು ಮಡಿದದ್ದರಿಂದಲೂ, ಸಮಸೇರ, ಗಾರದಿ ಇವರು ಘಾಯವಾಗಿ ಬಿದ್ದದರಿಂದಲೂ ಮರಾಟರ ಸೈನ್ಯದಲ್ಲಿ ಹಲವು ಕಿಂಡಿಗಳು ಬಿದ್ದವು. ಹುಜು

ರಾತಿಯವರೂ ಹಾಯ್ ಹಾಯ್ ಎಂದು ಅನ್ನಲಾರಂಭಿಸಿದರು. ಸಿಂಧೇನ ದಂಡೂ ಹಣ್ಣಾಯಿತು. ಎಲ್ಲಿನೋಡಿದರೂ ದಂಡಿನವರ ಮೋರೆಯಮೇಲೆ ಚಿವುಟಿದರೂ ರಕ್ತಬಾರದಂಥ ಸ್ಥಿತಿಯು ಕಂಡುಬರಹತ್ತಿತು. ಆಗ ಮರಾಟರನ್ನು ಸೋಲೆಂಬ ರಾಕ್ಷಸಿಯು ಪ್ರೀತಿಸುತ್ತಿರುವಳೆಂಬಂತೆ ತೋರಿತು. ಇಂಥ ಅವನತಸ್ಥಿತಿಯಲ್ಲಿ ಓಡಿಹೋಗುವ ಬುದ್ಧಿಯು ಮೊದಲು ಹೋಳಕರನಲ್ಲಿ ಹುಟ್ಟಿತು. ಆತನು ತನ್ನ ಆಯುಷ್ಯದಲ್ಲಿ ಬಹುತೇಕವಾಗಿ ಇಂಥದನ್ನೇ ಆಚರಿಸುತ್ತ ಬಂದದರಿಂದ ಈಗ ಅವನಲ್ಲಿ ಹುಟ್ಟಿದ ಈ ಬುದ್ಧಿಯು ಸಹಜವೆನಿಸಿತು. ಇದರಿಂದ ಹೋಳಕರನು ರಣಹೇಡಿಯಿದ್ದನೆಂದು ವಾಚಕರು ಭಾವಿಸಬಹುದು; ಆದರೆ ಜಾತ್ಯಾಶೂರನಾಗಿದ್ದ ಮಲ್ಲಾರರಾಯನು ಇಂಥ ಪ್ರಸಂಗಗಳಲ್ಲಿ ಕೇವಲ ಅಂಜಿಕೆಯಿಂದ ಓಡುತ್ತಿರಲಿಲ್ಲ; 'ಅಪಜಯವು' ತಮ್ಮ ಪಾಲಿಗೆ ಕಟ್ಟಿದ್ದೇ ಎಂಬದು ತಿಳಿದಕೂಡಲೆ ಆತನು ಶತ್ರುಗಳಕೈಯಲ್ಲಿ ಸಿಕ್ಕು ಜಿಬ್ಬಿಯಾಗುವದಕ್ಕಿಂತಲೂ ಪಲಾಯನಹೇಳಿಸಿ ಪ್ರಸಂಗವಶಾತ್ ಸೇಡುತೀರಿಸಿಕೊಳ್ಳುವದು ಲೇಸೆಂದು ಅವನು ಎಣಿಸುತ್ತಿದ್ದನು. ಆತನ ದೃಷ್ಟಿಯಿಂದ ಈ ಮಾತು ಯೋಗ್ಯವಿದ್ದರೂ ಪ್ರಸ್ತುತದ ಕಾಳಗದಲಿ ಇನ್ನು ತಾಸೆರಡುತಾಸು ಹೋಳಕರನು ಕಾಲೂರಿನಿಂತುಕೊಂಡಿದ್ದರೆ ಉಭಯಪಕ್ಷಗಳ ನಿಜವಾದ ಪೌರುಷವು ಬೈಲಿಗೆ ಬೀಳದೆ ಇರುತ್ತಿದ್ದಿಲ್ಲ.

ಓಡಿ ಹೋಗುವ ಸುಸಂಧಿಯು ಮಲ್ಲಾರರಾಯನಿಗೆ ಚೆನ್ನಾಗಿಅವಗತವಿತ್ತು. ಆದ್ದರಿಂದ ಆತನು ಸಮಯ ಸಿಕ್ಕಕೂಡಲೆ ತನ್ನ ಜಾತಿಸ್ವಭಾವದಂತೆ ವಯಸ್ಸಿನನುಗುಣವಾಗಿ, ತನ್ನ ಪದ್ಧತಿಯ ಮೇರೆಗೆ ಸಂಜೆಯ ೪ ಘಂಟೆಯ ಸುಮಾರಕ್ಕೆ ರಣಭೂಮಿಯಿಂದ ಜಾರಿಕೊಂಡನು. ಆತನು ತಾನು ಪಲಾಯನಹೇಳುವ ಮೊದಲು ಭಾವೂಸಾಹೇಬನಿಗೆ ಒಂದು ಪತ್ರವನ್ನು ಒರೆದು "ನೀವು ವ್ಯರ್ಥವಾಗಿ ಜೀವಕ್ಕೆ ಎರವಾಗಬೇಡಿರಿ! ಪುನಃ ದಿಲ್ಲಿಯಲ್ಲಿ ಹೊಸಸೈನ್ಯ ಕೂಡಿಸಿ ನಮ್ಮ ಕಾರ್ಯವನ್ನು ಸಾಧಿಸಿಕೊಳ್ಳಬಹುದು"ಎಂದು ಕೇಳಿದನು. ಭಾವೂಸಾಹೇಬನು ಹೋಳಕರನ ಸ್ವಭಾವವನ್ನು ಬಲ್ಲವನಾದ್ದರಿಂದ ಅವನಿಗೆ ಬೇರೆ ಏನನ್ನೂ ಹೇಳದೆ ನಿಮ್ಮ ಇಚ್ಛೆಯಿದ್ದರೆ ಓಡಿ ಪಾರಾಗಿ ಹೋಗಬೇಕು. ನಾವು ಶತ್ರುವಿಗೆ ಬೆನ್ನು ತೋರಿಸಲರೆವು"ಎಂದು ಉತ್ತರ ಒರೆದನು. ಭಾವೂಸಾಹೇಬನ ಈ ಉತ್ತರವು ಮುಟ್ಟುವಷ್ಟರಲ್ಲಿಯೇ ಮಲ್ಲಾರರಾಯನು ಅವಶಿಷ್ಟ ದಂಡಿನೊಡನೆ ಹೋಗಿ ಬಿಟ್ಟಿದ್ದನು. ಹೋಳಕರನ ಈ ಪಲಾಯನದಿಂದ ಮರಾಟರನ್ನು ಭಯಂಕರವಾದ ವಿಪತ್ತು ಆವರಿಸಿತು. ತೆರವಾದ ಹೋಳಕರನ ಸ್ಥಳವನ್ನು ಪಠಾಣರು ಹಾಹಾ ಅನ್ನುವಷ್ಟರಲ್ಲಿ ಆಕ್ರಮಿಸಿ ಮರಾಟರ ಹೊಟ್ಟೆಯನ್ನು ಹರಿಯಹತ್ತಿ

ದರು. ಹೀಗೆ ಮಲ್ಹಾರರಾಯನು ಓಡಿಹೋಗಲು ವಿಠ್ಠಲಶಿವದೇವನೂ ದಮಾಜಿಯೂ ಕಾಲ್ತೆಗೆದರು. ಅದನ್ನು ಕಂಡು ದುರ್ಬಲರೂ ಮೈಗಳ್ಳರೂ ಆದ ಮರಾಟರು ಸದ್ದಿಲ್ಲದೆ ಕಣದಿಂದ ನುಸಳಿದರು. ಮರಾಟರ ದಂಡು ಹೀಗೆ ಹುಚ್ಚೆದ್ದು ಹರಿಯಹತ್ತಲು ಅಫಗಾನರು "ಓಡಿಹೋದವರ ಮನೆಯಲ್ಲಿ ಒಕ್ಕಲಾದಂತೆ" ತೆರವಾದ ಮರಾಟರ ಪ್ರದೇಶದಲ್ಲಿ ನಿರ್ಭಯದಿಂದ ನುಗ್ಗಿ ಗಾಯಹೊಂದಿ ನರಳುತ್ತಿರುವ ಇಬ್ರಾಹಿಮಖಾನನನ್ನೂ ಅಸಂಖ್ಯ ಜನರನ್ನೂ ಸೆರೆಹಿಡಿದರು. ಸ್ವಾಮಿನಿಷ್ಠೆಯಿದ್ದರೂ ಹೊತ್ತು ಬಂದಂತೆ ಕೊಡೆಹಿಡಿಯುವ ಕೆಲಜನರು ಓಡಿಹೋಗಿ ಮರಾಟರ ಇತಿಹಾಸದಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಯಾಗ ಮಾಡಿದರು. ಒಟ್ಟಿನ ಮೇಲೆ ಹೇಳತಕ್ಕದ್ದೇನಂದರೆ, ಆರೇಳು ತಾಸುಗಳ ಪೂರ್ವದಲ್ಲಿ ಸಮುದ್ರದಂತೆ ಗಂಭೀರವಾಗಿ ತೋರುತ್ತಿದ್ದ ಮರಾಟರ ಸೈನ್ಯವು ಈಗ ತ್ರಿವಿಧವಾಗಿ ಹಂಚಿ ಹೋಗಿ ಛಿನ್ನವಿಚ್ಛಿನ್ನವಾದ ಪರ್ವತಶ್ರೇಣಿಯಂತೆ ಅಮಂಗಲವಾಗಿ ತೋರಹತ್ತಿತು. ಮರಾಟರಸಿಟ್ಟಿನಲ್ಲಿ ಭಾವೂಸಾಹೇಬ–ಜನಕೋಜಿ, ಇವರಿಬ್ಬರೇ ಅರೆವಾಸಿಯಾದ ದಂಡಿನೊಡನೆ ಉಳಿದರು. ಹೀಗೆ ತಮ್ಮ ಹೆಬ್ಬಲವು ಮುರಿದು ಮುಕ್ಕಾಬಟ್ಟೆಯಾದರೂ ಆ ಶೂರರ ಕೆಚ್ಚೆದೆಗಳು ರವಷ್ಟಾದರೂ ಅದುರಲಿಲ್ಲ.

## ೧೩ನೆಯ ಪ್ರಕರಣ.

# ಅವನತಿಯ ಅಸ್ತಿವಾರ.

ಜನಕೋಜಿಸಿಂಧೇನಂಥ ಸ್ವಾಮಿನಿಷ್ಠನು ದೊರೆಯುವದು ದುರ್ಲಭವು; ಆತನು ವಯಸ್ಸಿನಿಂದಲೂ, ಪರಾಕ್ರಮದಿಂದಲೂ ದ್ವಾಪರಯುಗದಲ್ಲಿನ ಅಭಿಮನ್ಯುವನ್ನು ನೆನಪುಮಾಡಿಕೊಡುತ್ತಿದ್ದನು. ಆತನು ಸ್ಥೈರ್ಯದಲ್ಲಿ ಪರ್ವತದಂತೆ, ಧೈರ್ಯದಲ್ಲಿ ವ್ಯಾಘ್ರನಂತೆ, ಚಾಪಲ್ಯದಲ್ಲಿ ಕೋಲುಮಿಂಚಿನಂತೆ ಇದ್ದನು. ಆವನ ರೂಪವಾದರೂ ಮನ್ಮಥನಂತೆ ಸುಂದರವಾಗಿತ್ತು. ಆತನ ದರ್ಪವು ಪ್ರತಿಯೊಬ್ಬ ದಂಡಾಳಿನ ಮೇಲೂ ಇತ್ತು. ಅಂತೆಯೇ ಭಾವೂಸಾಹೇಬನು ಸೈನ್ಯದ ಸಮಗ್ರ ದಕ್ಷಿಣ ನಿಟ್ಟನ್ನು ಆತನಿಗೆ ಒಪ್ಪಿಸಿಬಿಟ್ಟಿದ್ದನು. ಆ ರಣಧೀರನು ತನ್ನ ದುರ್ಜಯ ಶಿಲೇದಾರರೊಡನೆ ತನ್ನ ವಂಶದ ಕೀರ್ತಿಯನ್ನು ಚನ್ನಾಗಿ ಕಾಯ್ದುಕೊಂಡನು. ಆತನು ತನ್ನ ಬೇರೆ ಬೇರೆ ಪಥಕದಾರರ ಸುತ್ತುವರೆದು ಸಣ್ಣ ಸಣ್ಣ ಆಗಳತಗಳನ್ನು ಕಡಿಸಿ ಪಠಾಣರ ಕಾಟವು ನಾಗದಂತೆ ವ್ಯವಸ್ಥೆಮಾಡಿದ್ದನು. ಹೀಗೆ ಆತನು ಯುಕ್ತಿಯಿಂದ ಪರಬಲವನ್ನು ಕುಗ್ಗಿಸಿ ಸ್ವಬಲವನ್ನು ರಕ್ಷಿಸಿಕೊಳ್ಳುತ್ತ ಸೈನ್ಯದ ಬೇರೆ ಬೇರೆ ಭಾಗಗಳಲ್ಲಿಯ ಸುದ್ದಿಯನ್ನು ತಿಳಿಯುತ್ತಿದ್ದನು. ವಿಶ್ವಾಸರಾಯನು ಬಿದ್ದ ಸಂಗತಿಯಿಂದ ಅವನಿಗೆ ಅತ್ಯಂತ ವ್ಯಸನವಾಯಿತು. ಆದರೆ ಆತನು ರಣದಲ್ಲಿಯ ಮರಣವು ಶೂರರಿಗೆ ಭೂಷಣವೆಂದು ಭಾವಿಸಿದನೇ ಹೊರತು ಕೈಕಾಲು ಕಳಕೊಳ್ಳಲಿಲ್ಲ. ಆಗ ಅವನು ವಿಲಕ್ಷಣ ಆವೇಶದಿಂದ ಶಹಾಪಸಂದಖಾನನ ಮೇಲೆ ನಾಗಿಹೋದನು. ಅಷ್ಟರಲ್ಲಿ ಯಶವಂತರಾಯನು ಕೈಬಿಟ್ಟನೆಂದು ಸುದ್ದಿಯು ಬಂದಿತು. ಮತ್ತೊಂದು ಕ್ಷಣದಲ್ಲಿ ಗಾರದಿಯು ಘಾಯಹೊಂದಿದ ಸಂಗತಿಯು ತಿಳಿಯಿತು. ಮುಂದೆ ನಾಲ್ಕು ಹೊಡಿಯುವ ಸುಮಾರಕ್ಕೆ ಮಲ್ಹಾರರಾಯನು ಓಡಿಹೋದ ಸಂಗತಿಯೂ ಗೊತ್ತಾಯಿತು. ಜನಕೋಜಿಯು ಇವೆಲ್ಲ ಸಂಗತಿಗಳನ್ನು ಕೇಳಿ ಕೇಳಿ ವಿಷಾದಪಡುತ್ತಿದ್ದರೂ ತನ್ನ ಒಗರನ್ನು ಬಿಡಲಿಲ್ಲ; ಆಗ ಆತನು ಸೈನ್ಯದ ಮಧ್ಯಭಾಗದಲ್ಲಿ ನಿಶಾನೆಯ ಹತ್ತರ ಹುಜುರಾತಿಯುವರೆಗೂ ದುರಾಣಿಯವರೆಗೂ ಘನಘೋರವಾದ ಕಾಳಗವು ಪ್ರಾರಂಭಿಸಿದ್ದನ್ನು ತಿಳಿದು

ತನ್ನ ಕುದುರೆಯನ್ನು ನೂಕುತ್ತ ಅತ್ತಸಾಗಿ ದಾರಿಯಲ್ಲಿದ್ದ ನಜೀಬಖಾನನ ಸಮಾಚಾರವನ್ನು ತಕೊಳ್ಳುವ ನಿಶ್ಚಯವನ್ನು ಮಾಡಿದನು.

ಬಳಿಕ ಆ ಪ್ರತಾಪಿಯು ತನ್ನ ಕಕ್ಕನನ್ನು ಕರೆದು ನುಡಿದನೇನಂದರೆ—ಕಾಕಾಸಾಹೇಬ, ಹೋಳಕರನು ತನ್ನ ಕೀರ್ತಿಗೆ ಕಾಡಿಗೆಯನ್ನು ತಿಕ್ಕಿಕೊಂಡು ಹೋದನು. ಉಳಿದ ಪ್ರಸಿದ್ಧವೀರರು ರಣದಲ್ಲಿ ಪತನಹೊಂದಿದರು. ಇನ್ನು ಮುಂದಿನ ನಮ್ಮ ಪರಿಣಾಮವು ಅಂಗೈಮೇಲಿನ ಗುಳ್ಳಿಯಂತೆ ಕಣ್ಣಿಗೆ ಕಂಡದ್ದೇ ಇರುವದು. ಭಾವೂಸಾಹೇಬನ ದೇಹವು ಬಿದ್ದಲ್ಲಿ ನನ್ನ ದೇಹವು ಬೀಳತಕ್ಕದ್ದೇ; ನನ್ನ ಪ್ರತಿಜ್ಞೆಯು ನಿಮಗೆ ಗೊತ್ತಿರುತ್ತದೆ. ಆದ್ದರಿಂದ ನೀವು ಇಲ್ಲಿಂದ ಕಾಲ್ತೆಗೆದು ನಮ್ಮ ವಂಶವೃಕ್ಷವನ್ನು ಸಂರಕ್ಷಿಸಬೇಕು. ಮತ್ತ್ಯಾರಿಗಾದರೂ ರಣಮಂಡಲದಿಂದ ಹೊರಟು ಹೋಗುವ ಇಚ್ಛೆಯಿದ್ದರೆ ಅವರನ್ನು ಕರಕೊಂಡು ಹೋಗಬೇಕು. ನಾನು ಇನ್ನು ಮೇಲೆ ನಜೀಬಖಾನನ ಮೇಲೆ ಕುದುರೆಯನ್ನು ನೂಕಿ ಭಾವೂಸಾಹೇಬನ ಸಹಾಯಕ್ಕೆ ಹೋಗುವೆನು. ಯಾರು ಯಾರಿಗೆ ಧೈರ್ಯವಿರುವದೋ ಅವರು ನನ್ನ ಸಂಗಡ ಬರಲಿ!!

ಜನಕೋಜಿಯು ಈ ಮಾತುಗಳನ್ನು ಕೇಳಿ ಸಮಸ್ತರೂ ಆವೇಶದಿಂದ—"ಮಹಾರಾಜ, ತಮ್ಮ ಪಾದರಕ್ಷೆಗಳಿದ್ದಲ್ಲಿ ನಮ್ಮ ತಲೆಯು ಇರತಕ್ಕದ್ದೇ; ನಾವು ನಜೀಬಖಾನನ ಮೇಲೆ ಅಂಜಿಕೆಯಿಲ್ಲದೆ ಕುದುರೆಯನ್ನು ನೂಕುವೆವು. ನಾವು ಯಾರೂ ಇಲ್ಲಿಂದ ತಿರುಗಿಹೋಗಲಾರೆವು"ಎಂದು ನುಡಿಯಲು ಜನಕೋಜಿಗೆ ಪರಮಾನಂದವಾಯಿತು. ಆಗ ಮಹದಾಜಿಯು ವಿನಯದಿಂದ—"ಮಹಾರಾಜ, ತಮ್ಮ ವಯಸ್ಸು ಇನ್ನೂ ಚಿಕ್ಕದಿರುವದು. ತಮ್ಮ ಸಂಸಾರವು ಮುಂದೆ ಆಗತಕ್ಕದ್ದಿರುವದು. ಆದ್ದರಿಂದ ತಾವು ತಿರುಗಿ ಹೋಗಬೇಕು. ನಾನು ತಮ್ಮ ಪ್ರತಿಜ್ಞೆಯನ್ನು ಪೂರ್ಣವಾಗಮಾಡುವೆನು" ಎಂದುನುಡಿಯಲು, ಜನಕೋಜಿಯು—ಕಾಕಾನವರೇ, ಸಿಂಧೆಸರದಾರನು ಓಡಿಹೋದನೆಂಬ ಅಪಕೀರ್ತಿಯು ಆಚಂದ್ರಾರ್ಕವಾಗಿ ಉಳಿದು ನಮ್ಮ ಗೌರವವೇ ಅಳಿದು ಹೋದೀತು. ನಾನು ಶ್ರೀಮಂತರ ಮುಂದೆ ಪ್ರತಿಜ್ಞೆಮಾಡಿರುವೆನಾದ್ದರಿಂದ ಅದಕ್ಕೆ ಕಾಲತ್ರಯದಲ್ಲೂ ಭಂಗಬರುವಹಾಗಿಲ್ಲ, ಎಂದು ನಿರ್ಧಾರದಿಂದ ಹೇಳಿ ಮಹದಾಜಿಗೆ ಹೊರಟು ಹೋಗಲು ಒತ್ತಾಯ ಮಾಡಿದನು. ನಿರ್ವಾಹವಿಲ್ಲದೆ ಆತನು ರಣಾಂಗಣದಿಂದ ಹೊರಟು ಹೋದನು.

ಮಹಾದಾಜಿಯು ಅತ್ತಹೋಗಲು ತರುಣನಾದ ಜನಕೋಜಿಯು ತನ್ನ ಕುದುರೆಯನ್ನು ಚಪ್ಪರಿಸಿ "ಹರಹರ ಮಹಾದೇವ" ಎಂದು ಗರ್ಜಿಸುತ್ತ ಖಾನನ

ಮೇಲೆ ಧುಮುಕಿದನು. ಆತನ ಆವೇಶವನ್ನು ನೋಡಿ ಸಾವಿರಾರು ಜನ ಕುದುರೆಯ ಸ್ವಾರರು ಆವನನ್ನು ಹಿಂಬಾಲಿಸಿದರು. ಆಗ ಅವರೆಲ್ಲರ ರಣಗರ್ಜನೆಯಿಂದ ಮರಾಟರಲ್ಲಿ ನವಜೀವನವು ತುಂಬಿದಂತಾಯಿತು. ಐದು ಸಾವಿರ ಕುದರೆಯ ರಾಹುತರು ಮರಮಳೆಯಂತೆ ಗುಂಡುಗಳನ್ನು ಎಸೆಯುತ್ತ ಭಲ್ಲೆ-ಬರ್ಚಿ ಖಡ್ಗಗಳನ್ನು ತಿವಿಯುತ್ತ ಪಠಾಣರು ಅಲ್ಲನನ್ನು ಸ್ಮರಿಸುವ ಹಾಗೆ ಗೊಂದಲವನ್ನೆಬ್ಬಿಸಿದರು. ಆ ಕಾಲಕ್ಕೆ ಆಕಾಶದಲ್ಲಿ ಧೂಳಿಯು ಮುಸುಕಿ ಖಾನನದಂಡು ಕಾಣದಂತಾಯಿತು. ಮುಹೂರ್ತಮಾತ್ರ ಕಾಲವು ಕ್ರಮಿಸಿದ ಬಳಿಕ ಧೂಳಿಯು ನೆಲಕ್ಕೆ ಕುಳಿತಿತು. ಆಗ ರಣಮಂಡಲದ ನೋಟವನ್ನು ವರ್ಣಿಸಲಳವಲ್ಲ; ಮುಷ್ಟಿಪ್ರಾಯರಾದ ಮರಾಟರು ಖಾನನ ದಂಡನ್ನು ಹರಿಗಡಿದು ಚೆಲ್ಲಿದರು; ಒಂದು ಮೈಲಿನ ವರೆಗೆ ನಿಟ್ಟಹಿಡಿದು ಹೆಣಗಳು ಬಿದ್ದವು; ಕಾಲುಮುರುಕ, ಕೈಮುರುಕ, ನೋಟಿಪುರಕ, ಅನಾರುಂಡ ಶ್ರವಗಳು ಅಳ್ಳೆದೆಯವರಿಗೆ ಅಂಜಿಕೆಯನ್ನುಂಟು ಮಾಡಿದವು. ಈ ರೀತಿಯಾಗಿ ಖಾನನ ದಂಡಾಳುಗಳ ಸೊಲ್ಲಡಗಿಸಿ ಜನಕೋಜಿಯು ಮುಂದಕ್ಕೆ ಸಾಗಿದನು. ಸವಾಪಾತಳಿಯ ಆ ಮೈದಾನದಲ್ಲಿ ಸಿಂಧೆಯ ಶಿಲೇದಾರರು ಕುದರೆಯನ್ನು ಓಡಿಸಿ ಹಾಹಾ ಅನ್ನುವಷ್ಟರಲ್ಲಿ ಹುಚ್ಚುರಾತಿಯುವರನ್ನು ಕೂಡಿಕೊಂಡರು. ಜನಕೋಜಿಯ ಈ ಅದ್ವಿತೀಯ ಪರಾಕ್ರಮವನ್ನು ಕಂಡು ಭಾವೂಸಾಹೇಬನು ದೂರಿನಿಂದಲೇ ಆತನಿಗೆ ಕೈಸನ್ನೆಯಿಂದ ಭಾಪು! ಭಾಪು! ಎನ್ನುವ ಭಾವವನ್ನು ತಿಳಿಸಿದನು.

ಆವೇಶದಿಂದ ಕಾದಿಕಾದಿ ಭಾವೂಸಾಹೇಬನ ಮುಖಮುದ್ರೆಯು ಅತ್ಯುಗ್ರವಾಗಿತ್ತು. ಆತನ ಸರ್ವಾಂಗವು ಧೂಲಿಮಯವಾಗಿತ್ತು; ಆತನು ಕುದುರೆಯ ಮೇಲೆ ಸ್ವಾರನಾಗಿದ್ದು ಕೈಯಲ್ಲಿ ಖಡ್ಗವನ್ನು ಧರಿಸಿದ್ದನು. ಅದು ರಕ್ತದಲ್ಲಿ ಎದ್ದಿದಂತೆ ಕೆಂಪಗಾಗಿದ್ದು ಸ್ವಾಭಾವಿಕ ಶುಭ್ರವರ್ಣವನ್ನು ಕಳಕೊಂಡಿತ್ತು. ಜನಕೋಜಿಯು ಅಫಗಾನರನ್ನು ಹಿಂದಕ್ಕೆ ಅಟ್ಟಿದ್ದರಿಂದ ಆತನು ಸಂತುಷ್ಟನಾಗಿ ಸೈನಿಕರಿಗೆ ಹುರುಪು ಬರಬೇಕೆಂದು ಜಯ ಭೇರಿಯನ್ನು ಹೊಡೆಯಿಸಿದನು. ಆ ಜಯಭೇರಿಯ ಸಪ್ಪಳವನ್ನು ಕೇಳಿ ಕಣದಿಂದ ಓಡುತ್ತಿದ್ದ ಎಷ್ಟೋ ಜನ ಮರಾಟರು ಹಿಂತಿರುಗಿದರು ಜನಕೋಜಿರಾಯನು ಭಾವೂಸಾಹೇಬನನ್ನು ನೋಡಿದ ಕೂಡಲೆ ಕುದರೆಯಿಂದ ಜಿಗಿದು ಧಾವಿಸಿ ಆತನ ಚರಣಗಳನ್ನು ಮುಟ್ಟಿ ನಮಸ್ಕರಿಸಿದನು. ಆಗ ಆ ತರುಣ ಸರದಾರನ ಸುಂದರ ರೂಪ, ಚಿಕ್ಕವಯಸ್ಸು, ಅಪ್ರತಿಮ ಪರಾಕ್ರಮ ಇವು ವಿಕಸವ ಯೂಚ್ಛೇದದಿಂದ ಭಾವೂಸಾಹೇಬನ ಮನಸ್ಸಿನಲ್ಲಿ ಬಂದು ಆತನ ಅತ್ಯುಗ್ರರೂಪವು ಕೂಡ ಶಾಂತವಾಗಿ ಆತನಲ್ಲಿ ಮಂದ

ಸ್ಮಿತವು ಮೊಳೆದೋರಿತು. ಕಂಠತ್ರಾಣವು ಕುಗ್ಗಿದ್ದರೂ ಆಗ ಆತನು—"ಜನಕೋಜಿ, ನಮ್ಮ ವಿಶ್ವಾಸನು ಹೋದನು. ನಮ್ಮ ಮೈಮೇಲೆ ಮುಗಿಲೇಹರಿದು ಬಿದ್ದ ಹಾಗಾಗಿದೆ. ನೀನು ಅಗ್ನಿಯಲ್ಲಿ ಹಾರಿಕೊಳ್ಳುವ ಸಾಹಸಮಾಡುತ್ತಿರುವೆ. ಇದು ನೆಟ್ಟಗಲ್ಲ; ನೀನು ನನಗೆ ಪುತ್ರನಂತೆ ಪ್ರಿಯನಿರುತ್ತೀ; ನೀನು ಧಾರಾತೀರ್ಥದಲ್ಲಿ ಪತನಹೊಂದುವದನ್ನು ಕಣ್ಣಿಟ್ಟು ನೋಡಲಾರೆನು! ಅಪ್ಪಾ, ಜನಕೋಜೀ, ನಿನ್ನ ಸ್ವಾಮಿನಿಷ್ಠೆಗೆ ಜಗತ್ತೇದಂಗಾಗಬಹುದು. ನಿನ್ನಂಥ ಸುಕುಮಾರನನ್ನು ರಣದೇವತೆಗೆ ಬಲಿಯಾಗಿ ಅರ್ಪಿಸಲು ನನ್ನ ಮನಸ್ಸು ಒಪ್ಪಲೊಲ್ಲದು; ಆದ್ದರಿಂದ ನೀನು ಈಗಿಂದೀಗಲೇ ಹೊರಟು ಹೋಗು. ನಿನ್ನನ್ನು ನಿನ್ನ ಪ್ರತಿಜ್ಞೆಯಿಂದ ಮುಕ್ತನನ್ನಾಗ ಮಾಡಿರುತ್ತೇನೆ. ಹೂ! ಹೋಗು, ಶ್ರೀಮಂತರನ್ನು ಸಂರಕ್ಷಿಸು; ವ್ಯರ್ಥವಾಗಿ ಪ್ರಾಣವನ್ನು ಕಳಕೊಳ್ಳಬೇಡ; ಎಂದು ನುಡಿಯಲು, ಜನಕೋಜಿಯು ನಿಶ್ಚಯಾತ್ಮಕ ಸ್ವರದಿಂದ ನುಡಿದನೇನಂದರೆ–ಭಾವೂಸಾಹೇಬ, ನಿಮ್ಮನ್ನು ರಣಮಂಡಲದಲ್ಲಿ ಬಿಟ್ಟುಕೊಟ್ಟು ಓಡಿಹೋಗುವ ರಣಹೇಡಿಯು ಈ ಜನಕೋಜಿಯಲ್ಲೆಂಬದನ್ನು ತಮಗೆ ಒಡೆದು ಹೇಳುವ ಕಾರಣವಿಲ್ಲ. ಪ್ರಸಿದ್ಧ ಜಾಯಪ್ಪನ ಹೊಟ್ಟೆಯಲ್ಲಿ ಹುಟ್ಟಿ ಬಂದದ್ದಕ್ಕೆ ಇದೇ ಏನು ನನ್ನ ಪೌರುಷವು? ನೀವು ನನ್ನ ಪ್ರತಿಜ್ಞೆಯಿಂದ ನನ್ನನ್ನು ಮುಕ್ತನನ್ನಾಗ ಮಾಡಿದರೂ ನನ್ನ ಜೀವವಿರುವವರೆಗೆ ನಾನು ನನ್ನ ಕರ್ತವ್ಯದಿಂದ ಮುಕ್ತನಾಗಲಾರೆನು. ಆಕಾಶ ಕಳಚಿಬಿದ್ದಿದ್ದನ್ನು ನಾನು ಬಲ್ಲೆನ; ಶತ್ರುಗಳನ್ನು ಸಂಹರಿಸುತ್ತ ಜಯವನ್ನು ಸಂಪಾದಿಸೋಣ, ಇಲ್ಲವೆ ಮರಣವನ್ನಾದರೂ ಹೊಂದೋಣ."

ಜನಕೋಜಿಯ ಭಾಷಣವನ್ನು ಕೇಳಿ ಭಾವೂಸಾಹೇಬನು ಬಹಳ ಆನಂದಪಟ್ಟು–ಶಾಬಾಸ್! ವತ್ಸಾ ಶಾಬಾಸ್, ನಿನ್ನಂಥ ಕುಲದೀಪಕನು ಹುಟ್ಟುವದು ದುರ್ಲಭವು; ನಿನ್ನಂಥ ವೀರಪುತ್ರನನ್ನು ಹಡೆದ ತಾಯಿತಂದೆಗಳು ಧನ್ಯರೇ ಸರಿ. ಇತ್ತನೋಡು; ಶತ್ರುಗಳು ಏರಿಬರುವರು! ನಮ್ಮ ಎಡಭಾಗವು ಸಂಪೂರ್ಣವಾಗಿ ಪಖಾಳಾಯಿತು. ಆಗಲಿ. ಈ ಪಠಾಣರಿಗೆ ನಾನೂ—ನೀನೂ ಇಬ್ಬರೇ ಇದ್ದರೂ ಸಾಕು. ನೋಡೋಣ; ಇವರನ್ನು ಬಂದುಕ್ಕೆ ...... ಎಂದು ಮಾತಾಡುತ್ತಿರುವಷ್ಟರಲ್ಲಿ ಅಫಗಾಣರು ತೀರ ಸಮೀಪಕ್ಕೆ ಬಂದರು. ಆಗ ಆ ವೀರಪುಂಗವರಿಬ್ಬರು ತಮ್ಮ ತಮ್ಮ ಕುದುರೆಗಳನ್ನು ಮುಂದಕ್ಕೆ ನೂಕಿದರು. ಆದರೆ ಸೋನಜೀಭಾಪಕರನು ಮುಂದರಿದು ಭಾವೂಸಾಹೇಬನನ್ನು ಅಡ್ಡಗಟ್ಟಿ—ಸರಕಾರ, ಹೀಗೆ ಸಾಹಸಮಾಡಬಾರದು. ಇನ್ನು

ನಮ್ಮ ಪಾಲಿಗೆ ಜಯದ ಆಶೆಯು ಉಳಿಯಲಿಲ್ಲ; ಮರಣದ ಎಡೆಯೊಂದು ಮಾತ್ರ ಬಡಿಸಿ ಸಿದ್ಧವಿರುವದು. ಆದ್ದರಿಂದ ತಾವು ಕಾಲ್ತೆಗೆಯುವದು ಉಚಿತವು; ಜನಕೋಜಿರಾಯರೂ ತಮ್ಮ ಸಂಗಡ ಹೋಗಲಿ; ನಾನು ಈ ಅಫಗಾಣರ ಏರಾಟಿಕೆಯನ್ನು ತಡೆಯುತ್ತೇನೆ, ಎಂದು ನುಡಿಯುತ್ತಿರಲು ತುಕೋಜಿಸಿಂಧೆಯು ನಡುವೇ ಬಾಯಹಾಕಿ— ಮಹಾರಾಜ, ಸೋನೋಜಿಯ ಮಾತು ನಿಜವಾಗಿರುವವು. ತಾವು ಬದುಕಿ ಉಳಿದರೆ ಶತ್ರುಗಳ ಪಾರುಪತ್ಯಮಾಡಲಿಕ್ಕೆ ಬಂದೀತು? ಈಗ ಆಯುತಶತ್ರುಗಳ ಕೈಯಲ್ಲಿ ಸಿಕ್ಕು ಮರಣಹೊಂದುವದಕ್ಕಿಂತ ಹೊರಡುವದು ಮೇಲು ಎಂದು ನುಡಿದನು. ಹೀಗೆ ಇವರಿಬ್ಬರು ಮಾತಾಡುವದನ್ನು ಕೇಳಿ ಭಾವೂಸಾಹೇಬನು— ಸರದಾರರೇ, ನಿಮ್ಮ ಮಾತುಗಳು ಯೋಗ್ಯವಿದ್ದರೂ, ಈ ಭಾವೂವಿನಿಂದ ಶತ್ರುಗಳಿಗೆ ಬೆನ್ನು ತೋರಿಸುವ ಕೆಲಸವಾಗದು. ನಮ್ಮ ವಿಶ್ವಾಸರಾಯನು ಮಡಿದುಹೋದನು. ಈ ಬಗ್ಗೆ ಶ್ರೀಮಂತರಿಗೆ ಏನು ಉತ್ತರಕೊಡಲಿ? ದೌಲತ್ತಿನ ಫಲವಾಗಿ ಜೀವಕ್ಕೆ ಜೀವ ಕೊಡುವ ಪ್ರಿಯ ಸರದಾರರನ್ನು ನೀಗಲಾರದೆ ಅಪಜಯವನ್ನು ಪದರಿನಲ್ಲಿ ಕಟ್ಟಿಕೊಂಡು ನಾನಾಸಾಹೇಬನಿಗೆ ಏನೆಂದು ಮೋರೆಯನ್ನು ತೋರಿಸಲಿ? ಇಬ್ರಾಹಿಮಖಾನನು ಕೇವಲ ಜವಿಂಧನು, ಶತ್ರುಗಳ ಜ್ಞಾತಿಬಾಂಧವನು; ಹೀಗಿದ್ದು ಅವನು ಸ್ವಾಮಿಭಕ್ತಿಯಿಂದ ರಣರಂಗಣದಲ್ಲಿ ದೇಹಬಿಟ್ಟನು. ಯಶವಂತರಾಯನು ಸತ್ತನು. ಸಮಸೇರನು ಆಗವಿಲ್ಲದೆ ಬಿದ್ದನು. ಅಂದಬಳಿಕ ಸರದಾರರೇ, ನಮ್ಮಂಥವರು ಪ್ರಾಣಕ್ಕೆ ಅಂಜುವದೇ? ಹುಟ್ಟಿದ ಮನುಷ್ಯನು ಒಂದಿಲ್ಲೊಂದು ದಿನ ಸಾಯತಕ್ಕದ್ದು ನಿಶ್ಚಯವಿರುತ್ತಿರಲು, ಧಾರಾತೀರ್ಥದಲ್ಲಿ ದೇಹಬಿಟ್ಟು ಕೀರ್ತಿಶೇಷರಾಗುವದು ವೀರರಿಗೆ ಶ್ರೇಯಸ್ಕರವಾದದ್ದಲ್ಲವೆ? ನಾವು ನಮ್ಮ ಶಕ್ತಿಮೀರಿ ಹೆಣಗಿದೆವು. ಸದ್ಯಕ್ಕೆ ಹೆಣಗುತ್ತಿರುವೆವು. ದೇವರ ಮನಸಿಗೆ ಬಾರದಿದ್ದಬಳಿಕ ಮಾಡುವದೇನು? ಮರಾಟರ ಸಾಮ್ರಾಜ್ಯವು ಹಬ್ಬಬೇಕು, ಛತ್ರಪತಿಯ ಕೀರ್ತಿಯು ದಿಗಂತವಾಗಿ ಬೆಳೆಯಬೇಕು, ಎಂದು ನಾವೆಲ್ಲ ಮನಸ್ಸಿನಲ್ಲಿ ಮಂಡಿಗೆಯನ್ನು ಮಾಡಿದೆವು. ಪರಮೇಶ್ವರನ ಇಚ್ಛೆ; ತುಕೋಜಿರಾವ, ಇದು ಕುರುಕ್ಷೇತ್ರವಷ್ಟೇ; ಕೌರವ-ಪಾಂಡವರ ಯುದ್ಧದಲ್ಲಿ ಹದಿನೆಂಟು ಅಕ್ಷೋಹಿಣೀ ದಂಡಾಳುಗಳು ಇಲ್ಲಿ ಮಡಿದು ಕೀರ್ತಿಶೇಷರಾಗಿರುವರು. ಇಂಥ ಪುಣ್ಯಕ್ಷೇತ್ರದಲ್ಲಿ ವಿರೋಚಿತ ಮರಣಪ್ರಾಪ್ತಿಯು ದುರ್ಲಭವೇ ಸರಿ. ಅಗೋ ಶತ್ರುಗಳು ಬಂದರು. ವೀರರಾದವರು ನನ್ನ ಸಂಗಡ ಹೊರಡಿರಿ. ಅಫಗಾನ್ಯರಿಗೆ ಕೈತೋರಿಸಿ ಹಿರಿಯರಕೀರ್ತಿಯನ್ನು ಕಾಯ್ದುಕೊಳ್ಳಿರಿ! ಈ ಸಮಯ

ದಲ್ಲಿ ಹಿಂದುಳಿದವನು ನಿಜವಾಗಿಯೂ ರಣಹೇಡಿಯೆಂದು ತಿಳಿಯತಕ್ಕದ್ದು” ಎಂದು ನುಡಿದು ಕುದುರೆಯನ್ನು ಬಿಟ್ಟನು. ಆತನ ಕಡೆಯಶಬ್ದಗಳನ್ನು ಕೇಳಿ ತುಕೋಜಿಯು ಆವೇಶದಿಂದ ಶತ್ರುಗಳಮೇಲೆ ಕುದುರೆಯನ್ನು ಹಾಕಿದನು. ಮತ್ತು ಕ್ಷಾತ್ರಧರ್ಮದ ಪರಮಾವಧಿಯನ್ನು ತೋರಿಸಿದನು. ಅಷ್ಟರಲ್ಲಿ ಒಂದುಗುಂಡು ತಗಲಿ ತುಕೋಜಿಯ ಪ್ರಾಣವು ಹೋಯಿತು. ಆಗ ಭಾವೂಸಾಹೇಬನು ತ್ವೇಷದಿಂದ ಹೊಡೆಯಿರಿ, ಕಡಿಯಿರಿ ಎಂದು ಉಚ್ಚರಿಸುತ್ತ ಮುಂಗೆಬೀಳಲು ಹುಜುರಾತಿಯವರೂ, ಸಿಂಧೇನ ದಂಡಾಳುಗಳೂ ಅಫಗಾನರಮೇಲೆ ಬಿದ್ದರು.

ಅಲ್ಪ ಸಂಖ್ಯಾಕರಾದ ಮರಾಟರು ಹೀಗೆ ಕಸ್ತಮಾಡುವದನ್ನು ನೋಡಿ ಅಬ್ದಾಲಿಯು ಚಕಿತನಾದನು. ಆತನು ತನ್ನ ಸೈನಿಕರನ್ನು ಒಳಿತಾಗಿ ಬೈದನು, ಮರ್ಮಭೇದಕ ಮಾತುಗಳನ್ನಾಡಿದನು. ಶಹಾಪಸಂದಖಾನಾದಿಯವರು ವೀರಾವೇಶಗೊಂಡು ಮರಾಟರಮೇಲೆ ಮುಗಿಬಿದ್ದರು. ಕೇವಲ ಅಂತ್ಯಕಾಲವೇ ಪ್ರಾಪ್ತವಾದ್ದರಿಂದ ಮರಾಟರು ಏನೂ ಕಸರಿಡಲಿಲ್ಲ. ಒಂದು ಗಳಿಗೆಯವರೆಗೆ ತುಮುಲಯುದ್ಧವಾಯಿತು. ಪಠಾಣರಲ್ಲಿ ಅಸಂಖ್ಯಜನರು ಮಡಿದರು. ಜನಕೋಜಿರಾಯನು ಶತ್ರುಗಳಿಗೆ ಸಾಕು ಸಾಕೆನಿಸಿಬಿಟ್ಟನು. ಉಭಯಪಕ್ಷದವರು ತೋಫು ತುಬಾಕಿಗಳನ್ನು ಬಿಟ್ಟು ಶಸ್ತ್ರಯುದ್ಧಕ್ಕೆ ನಿಂತರು. ಮರಾಟರ ರಣಗರ್ಜನೆಯು ಮುಸಲ್ಮಾನರಿಗಿಂತಲೂ ಉಚ್ಚಸ್ವರದಿಂದ ಕೇಳಬರಹತ್ತಿತು. ಭಾವೂಸಾಹೇಬನ ದನಿಯು ಪೂರಾ ಬಿದ್ದುಹೋಗಿದ್ದರೂ ಆತನು ಕೈಸನ್ನೆಯಿಂದ ಸೈನಿಕರಿಗೆ ಅಪ್ಪಣೆಗಳನ್ನು ಮಾಡುತ್ತಿದ್ದನು. ಪಠಾಣರು ‘ಯಾ ಅಲ್ಲಾ’ ಎನ್ನುತ್ತ ಬೆನ್ನತೋರಿಸಲಾರಂಭಿಸಿದರು. ಆದರೆ ದೈವದಮುಂದೆ ಯಾರು ಓಡುವರು? ಮರಾಟರ ಜರಿಪಟಕಾ ನಿಶಾನೆಯು ಒಂದು ಆನೆಯಮೇಲೆ ಇತ್ತಷ್ಟೆ! ನಂಬಿಗಸ್ತನಾದ ಒಬ್ಬ ಮಾವುತನು ಆನೆಯನ್ನು ಭಾವೂಸಾಹೇಬನ ಬೆನ್ನಬಿಡದೆ ಒಯ್ಯುತ್ತಿದ್ದನು. ನಿಶಾನೆಯು ಆನಂದದಿಂದ ನರ್ತಿಸುವದನ್ನು ಕಂಡು ಮರಾಟರು ಉತ್ಸಹಗೊಳ್ಳುತ್ತಿದ್ದರು. ಆನೆಯ ಮೇಲಿನ ಆ ಮಾವುತನು ಕೌಶಲ್ಯದಿಂದ ಖಡ್ಗಗಳ ಪೆಟ್ಟುಗಳನ್ನು ತಪ್ಪಿಸಿಕೊಳ್ಳುತ್ತ ಬಿದ್ದಪೆಟ್ಟುಗಳನ್ನು ತಾಳಿಕೊಳ್ಳುತ್ತ ಆನೆಯನ್ನು ನಡಿಸುತ್ತಿರಲು, ಮರಾಟರ ದುರ್ದೈವದಿಂದ ಅವನು ಕಡತಹತ್ತಿ ನೆಲಕ್ಕುರುಳಿದನು. ಮಾವುತನು ಬಿದ್ದದ್ದನ್ನು ಕಂಡು ಆ ಮದಾಂಧ ಪ್ರಾಣಿಯು ಅಸಗೊಳ್ಳದಾಯಿತು. ನಿಶಾನೆಯವನು ಜಾಣತನ ಮಾಡಿ ಆನೆಯ ಮೇಲಿನ ನಿಶಾನೆಯನ್ನು ಕುದುರೆಯ ಮೇಲೆ ಕೊಟ್ಟನು. ಹೀಗೆ ನಿಶಾನೆಯನ್ನು ಕಡುಕಷ್ಟದಿಂದ ಸಂರಕ್ಷಿಸುತ್ತಿರಲು ಭಾವೂಸಾಹೇಬನ ಕುದುರೆಗೆ ಶತ್ರುಗಳ ಪೆಟ್ಟು ಪೂರೈಸಿ ಅದು ಪಂಚತ್ವವನ್ನು

ಹೊಂದಿತು. ಆಯಿತು! ಕಪಿಲಾಷಷ್ಠಿಯ ಯೋಗವೇ ಕೂಡಿದಂತಾಯಿತು!! ಆಗ ಆತನು ಪಾದಚಾರಿಯಾಗಿ ಖಡ್ಗವನ್ನು ನೆಗಹಿ ದುರಾಣೀಜನರ ದಟ್ಟಣೆಯಲ್ಲಿ ಸೇರಿದನು. ಆತನು ಸಾವಿರಾರುಜನ ಪಠಾಣರ ರುಂಡಗಳನ್ನು ಕಡಿಯುತ್ತ ಕಡಿಯುತ್ತ ಸಾಗಿರಲು ಒಮ್ಮಿಂದೊಮ್ಮೆ ಕಾಣದಂತಾದನು. ಜನಕೋಜಿಯೂ ಅಸ್ತನಾದನು. ಆಗ ನಿಶಾನಿಯುವನು ಗಾಬರಿಯಾಗಿ ಭಾವೂಸಾಹೇಬನನ್ನು ಗೊತ್ತು ಹಚ್ಚುವದಕ್ಕಾಗಿ ಅತ್ತ ಇತ್ತ ಓಡಾಡುತ್ತಿರಲು, ಅವನೂ ಕತ್ತಿಯ ಬಾಯಿಗೆ ಆಹುತಿಯಾದನು. ನಿಶಾನೆಯು ಆಧಾರತಪ್ಪಿ ನೆಲಕ್ಕೆ ಬಿದ್ದಿತು. ಹೀಗೆ ನಿಶಾನಿಯು ಬಿದ್ದದ್ದನ್ನು ಕಂಡು ಪಠಾಣರು ಜಯಭೇರಿಯನ್ನು ಹೊಡೆದರು. ಮರಾಟರು ಚದರಿ ಓಡತೊಡಗಿದರು. ಕಾಳಗವು ಗಕ್ಕನೆ ನಿಂತುಬಿಟ್ಟಿತು. ಆಗ ತಾಸುರಾತ್ರಿಯ ಸಮಯವಾಗಿರಬಹುದು. ಮುಂಜಾನ ಮೂರುತಾಸು ಹೊತ್ತು ಏರಿದಾಗ ಪ್ರಾರಂಭವಾದ ಕಾಳಗವು ನಡುವೆ ವಿರಾಮವಿಲ್ಲದೆ ಸಂಜೆಯ ತಾಸುರಾತ್ರಿಯವರೆಗೆ ನಡೆದು ಕಡೆಗೆ ಮರಾಟರನ್ನು ದುಃಖಾಂಧಕಾರದಲ್ಲಿ ನೂಕಿಬಿಟ್ಟಿತು. ಇಂದಿನವರೆಗೆ ಭರತಖಂಡದ ಏಕಛತ್ರಾಧಿಪತ್ಯವನ್ನು ಅಪೇಕ್ಷಿಸುತ್ತಿದ್ದ ಮರಾಟರ ಏಳ್ಗೆಯು ಕಳೆಗುಂದಿ ಇಂದಿನದಿನ ಅವರ ಅವನತಿಯು ಆಸ್ತಿವಾರಕ್ಕೆ ಪ್ರಾರಂಭವಾಯಿತು.

## ೧೮ನೆಯ ಪ್ರಕರಣ.

# ಉಪಸಂಹಾರ.

ಭಾವೂಸಾಹೇಬ ಹಾಗು ಜನಕೋಜಿರಾಯರಿಬ್ಬರೂ ಕಾಣದಂತಾಗಿ ಮರಾಟರ ನಿಶಾನೆಯು ಭೂದೇವಿಗೆ ನಮಸ್ಕಾರ ಹಾಕಲು, ಅಳತೆಗೆಟ್ಟು ಉಬ್ಬಿಹೋದ ಪಠಾಣರು ನಡಿಸಿದ ಅತ್ಯಾಚಾರಗಳನ್ನು ವರ್ಣಿಸಲು ನಮ್ಮ ಲೇಖಣಿಯ ಸಾಮರ್ಥ್ಯವು ಸಾಲದು. ಜಾತ್ಯಕಾರರಿಂದ ಅವರಿಗೆ ಎರಡು ಮೂರು ತಿಂಗಳುಗಟ್ಟಲೆ ಚಳ್ಳಹಣ್ಣು ತಿನ್ನಿಸಿದ ಮರಾಟರ ಮೇಲಿನ ರೊಚ್ಚೊಂದು ಕೂಡಲು ಅವರ ಶೌರ್ಯವೃತ್ತಿಗೆ ಸೀಮೆಯೇ ಉಳಿಯಲಿಲ್ಲ. ತಮ್ಮ ನಿಯಾಮಕನು ಗುಪ್ತನಾದನೆಂದು ಮರಾಟರ ಅವಶಿಷ್ಟ ದಂಡಾಳುಗಳು ದಾರಿಸಿಕ್ಕತ್ತ ಓಡುತ್ತಿರಲು ಪಠಾಣರು ಬೆನ್ನಾಟವಮಾಡಿದಂತೆ ಮಾಡಿ ಅವರಲ್ಲಿ ಅನೇಕರನ್ನು ಕೊಂದರು. ದ್ರವ್ಯಾಪೇಕ್ಷಿಗಳು ದ್ರವ್ಯಸಂಗ್ರಹವನ್ನು ಮಾಡತೊಡಗಿದರು; ಕಾಮುಕರು ಹರೆಯದ ಹೆಂಗಸರನ್ನು ಹಿಡಿಕಹತ್ತಿದರು. ಹಿಂಸೆಯಲ್ಲಿ ಇಷ್ಟವುಳ್ಳವರು ಮನಸೋಕ್ತವಾಗಿ ಮರಾಟರ ಶಿರಗಳನ್ನು ಧರಿತ್ರಿಗೆರಗಿಸಿದರು. ಕೆಲವರು ಮರಾಟರ ಛಾವಣಿಯಿದ್ದಡೆಗೆ ಧಾವಿಸಿದರು. ಹೀಗೆ ಅವರು ಬಗೆ ಬಗೆಯ ಕೃತಿಗಳಲ್ಲಿ ತೊಡಗಿರಲು, ತೀರ್ಥಯಾತ್ರೆಗಳಿಗೆಂದು ಶ್ರೀಮಂತರ ಬೆನ್ನಹತ್ತಿ ಬಂದ ಸಾವಿರಾರುಜನ ಹೆಂಗಸರು ಮುಸಲ್ಮಾನರ ಪಾಲಾದರು. ಪತಿವ್ರತೆಯರಾದ ಹಲವುಜನ ತರುಣಸ್ತ್ರೀಯರು ಪಠಾಣರಿಂದ ವಿಟಂಬನೆಯನ್ನು ಹೊಂದಿ ಗೋಳಿಟ್ಟರು. ಹಾಯ್! ಹಾಯ್! ಆಗಿನಪ್ರಸಂಗವನ್ನು ಹೇಳಲಾಸಲ್ಲ; ಕೇಳಲಾಸಲ್ಲ; ಎತ್ತನೋಡಿದತ್ತ ಓಡುವಜನರೇ ಕಂಡುಬರುತ್ತಿದ್ದರು. ಮರಾಟರ ಕೊಲೆಯಾಗುವದನ್ನು ನೋಡುತ್ತಲೂ, ಅವರ ಹೆಂಗಸರು ಗೋಳಿಡುವದನ್ನು ಕೇಳುತ್ತಲೂ ದುರ್ಜನರಲ್ಲಿ ದುರ್ಜನನಾದ ನಜೀಬಖಾನನು ಹಿ, ಹಿ, ಹಿ ಎಂದು ನಗುತ್ತಿದ್ದನಂತೆ!

ಪ್ರಸ್ತುತ ಕಾಳಗದಲ್ಲಿ ಆದಷ್ಟು ಅನರ್ಥವು ಮರಾಟರ ಯಾವ ಯುದ್ಧದಲ್ಲಿಯೂ ಆಗಿರಲಿಕ್ಕಿಲ್ಲವೆಂದು ಹೇಳಬಹುದು. ಈ ಯುದ್ಧದಿಂದ ಭಾರತೀಯರ ಪಾದಾಕ್ರಾಂತವಾಗದಿದ್ದರೂ ಮಾನಧನವು ಸೆರೆಸೂರೆಯಾಯಿತೆಂದು ಹೇಳಲಾಗುವದು. ಇಂಥ ಅನರ್ಥಕ್ಕೆ ಭಾವೂಸಾಹೇಬನ ಅತಿ ಗರ್ವವೇ ಕಾರಣವೆಂದು ಕೆಲವರ ಮತವಿದ್ದರೂ ನಿಜವಾದ ಇತಿಹಾಸಜ್ಞರು ಆ ನರಪುಂಗವನಮೇಲೆ ಸಂಪೂರ್ಣತಪ್ಪು ಹೊರಿಸಲಾರರು! ಪ್ರತ್ಯಕ್ಷ ಸಾಮ್ರಾಜ್ಯವೃದ್ಧಿಯ ಕೆಲಸದಲ್ಲಿ ಮನಸ್ಸುಹಾಕಿದ

ಭಾವೂಸಾಹೇಬನು ಕೆಲವು ಪ್ರಸಂಗಗಳನ್ನು ಹೊರತುಪಡಿಸಿ ಆಚರಿಸಿದ ಆಚರಣೆಗಳು ಪ್ರಸಂಗೋಚಿತವಾದವುಗಳೆಂತಲೇ ಹೇಳಬಹುದು. ಒಂದುವೇಳೆ ಪಾನಿಪತ್ತ ಸಂಗ್ರಾಮದ ಪರಿಣಾಮವು ಅವನತಿಕರವಾಗದೆ ಉನ್ನತಿಕರವಾಗಿದ್ದರೆ ಭಾವೂಸಾಹೇಬನಂಥ ಚಾಣಾಕ್ಷಮುತ್ಸದ್ದಿಯು ಹುಟ್ಟಿಬೆಳೆಯುಲಿಕ್ಕೆ ಅಪರೂಪವೆಂದು ಎಲ್ಲರೂ ಏಕಕಂಠದಿಂದ ಅಭಿಪ್ರಾಯಪಡದೆ ಇರುತ್ತಿದ್ದಿಲ್ಲ. ಆದರೆ ದೈವದುರ್ವಿಲಾಸದಿಂದಲೋ ಅಥವಾ ಈಶ್ವರೇಚ್ಛೆಯಿಂದಲೋ ಆತನಪಾಲಿಗೆ ಕೀರ್ತಿಬರಲಿಲ್ಲ; ಆದರೂ ಆತನು ಪಟ್ಟ ಸಾಹಸವನ್ನು ನೋಡಿದರೆ "ಯತ್ನೇಕೃತೆಯದಿನಸಿಧ್ಯತಿ ಕೋತ್ರದೋಷಃ" ಎಂಬಂತೆ ಅವನು ನಿರ್ದೋಷಿಯೇ ಎಂದು ನಿರ್ವಿವಾದವಾಗಿ ಹೇಳಬಹುದು!

ಭಾವೂಸಾಹೇಬನು ಕೈಮುಟ್ಟಿ ಬರೆದ ಪತ್ರಗಳು ಬರದಿದ್ದರೂ ವಿಶ್ವಾಸರಾಯನ ಗುಪ್ತಚಾರರು ತಿಳಿಸಿದ ಸುದ್ದಿಯಿಂದ ಶ್ರೀಮಂತ ನಾನಾಸಾಹೇಬನು ಪುಣೆಯಿಂದ ಹೊರಟು ಈ ಕಾಲಕ್ಕೆ ನರ್ಮದೆಯವರೆಗೆ ಬಂದಿದ್ದನು. ಆತನು ಯಾವ ಪಾಪವನ್ನೂ ಅರಿಯದೆ ನರ್ಮದೆಯತೀರದಲ್ಲಿ ವಿಶ್ರಾಂತಿಗಾಗಿ ಬೀಡುಬಿಟ್ಟುಕೊಂಡಿರಲು ಸಂಗ್ರಾಮದಲ್ಲಿ ಬದುಕಿ ಉಳಿದ ಮರಾಟರು ಒಬ್ಬೊಬ್ಬರೇ ಬರಹತ್ತಿದರು. ಅವರ ಕೃಷ್ಣಮುಖವನ್ನು ನೋಡಿ ನಾನಾಸಾಹೇಬನ ದಂಡಿನವರು ಬೆದರಿದರು. ಆಗ ಇತ್ಥಂಭೂತಸಂಗತಿಯು ತಿಳಿಯಲು ಸೈನಿಕರು ಗಾಬರಿಪಟ್ಟು ಶ್ರೀಮಂತರಿಗೆ ಎಲ್ಲ ಸಂಗತಿಯನ್ನು ನಿವೇದಿಸಿದರು. ಭೃತ್ಯವತ್ಸಲನೂ, ಪುತ್ರವತ್ಸಲನೂ ಆದ ಆ ಹೆಣ್ಣುಗಳ್ಳನ ನಾನಾಸಾಹೇಬನು ಸಿಡಿಲುಬಡಿದ ಕದಳೀವೃಕ್ಷದಂತೆ ಕಂದಿ ನೆಲಕ್ಕೆ ಬಿದ್ದನು. ಕ್ಷಣಕಾಲತ್ತಿನವರೆಗೆ ಆತನ ಮೈಮೇಲೆ ಸ್ಮೃತಿಯಿರಲಿಲ್ಲ. ಸೇವಕರು ಧಾವಿಸಿಬಂದು ನೆತ್ತಿಗೆ ನೀರುಬಡಿದು ಶೈತ್ಯೋಪಚಾರಗಳನ್ನು ಮಾಡುತ್ತಿರಲು, ಆತನು ಶುದ್ಧಿಯ ಮೇಲೆ ಬಂದು "ಹಾಯ್! ವಿಶ್ವಾಸ, ಹಾಯ್! ಭಾವೂ ನನ್ನನ್ನು ಅಗಲಿ ಹೋದಿರ! ರಾಜಕಾರಣದಲ್ಲಿ ನೀವು ನನಗೆಷ್ಟು ನೆರವಾಗುತ್ತಿದ್ದಿರಿ? ನಿಮ್ಮಂಥ ರತ್ನಗಳನ್ನು ಕಳಕೊಂಡು ನಾನು ಹ್ಯಾಗೆ ಜೀವಧಾರಣಮಾಡಲಿ? ಹರ! ಹರ! ಎಂದು ಪ್ರಲಾಪಿಸತೊಡಗಿದನು.

ಹೀಗೆ ಹೊರಗೆ ಬಲಗದಲ್ಲಿ ನಾನಾಸಾಹೇಬನು ಗೋಳಿಡುತ್ತಿರಲು ಈದುಷ್ಟವಾರ್ತೆಯು ಅಂತಃಪುರವನ್ನು ಪ್ರವೇಶಿಸಿತು. ಶ್ರೀಮಂತ ಗೋಪಿಕಾಬಾಯಿಯವರು ಆಗ ಮೈಕತೆಳಿಯುತ್ತಾ ಕುಳಿತಿದ್ದರು. ದಾಸಿಯರು ಬೆಳ್ಳಿಯ ತಂಬಿಗೆಯಿಂದ ನೀರುಹಣಿಸುತ್ತಿದ್ದರು. ಕೆಲವರು ಗಂಧದ್ರವ್ಯಗಳನ್ನು ಹಚ್ಚಿ

ವ್ಯೈತಿಕುಕ್ಕತಿತ್ತಿದ್ದರು. ಅಷ್ಟರಲ್ಲಿ ಈ ಹಾಲಾಹಲವಿಷವು ಕುದಿಯುತ್ತ ಹೃದಯವನ್ನು ಭೇದಿಸಲು ಆ ಹೆಣ್ಣುಮಗಳು ಸ್ಮೃತಿದಪ್ಪಿ ಉಟ್ಟ ಬಟ್ಟೆಯಿಂದಲೇ ನೆಲದಮೇಲೆ ಹೊರಳಾಡಿ ಅಳಹತ್ತಿದಳು. ಶ್ರೀಮಂತ ಪರಿವಾರವೆಲ್ಲವೂ ಗೋಳಿಟ್ಟಿತು. ಎಲ್ಲರಮುಖದಿಂದಲೂ ಹಾಯ್! ಹಾಯ್! ಎಂಬ ಶಬ್ದದ ಹೊರತು ಮತ್ತಾವ ಶಬ್ದವೂ ಹೊರಡದಂತಾಯಿತು. ಹೀಗೆ ಅವರ ದುಃಖವು ವಿಕೋಪಕ್ಕೆ ಹೋಗಿರಲು ಅಪಜಯಹೊಂದಿದ ಸಿಪಾಯಿಗಳು ಶ್ರೀಮಂತರನ್ನು ಕಂಡರು. ಆಗ ನಾನಾಸಾಹೇಬನು ಆತ್ಮೀತ್ಯ ಶೋಕದ ಭರವು ತೆಗ್ಗಿದ ಬಳಿಕ ಆ ಸಿಪಾಯಿಗಳನ್ನು ಕುರಿತು—ಸಾಗ್ರ ಸಂಗತಿಯನ್ನು ಕೇಳಿಕೊಂಡನು. ಸಿಪಾಯಿಗಳು ಹೇಳಿದ್ದೇನಂದರೆ— ಸರಕಾರ! ಎಷ್ಟು ಹೇಳಿದರೂ ವ್ಯರ್ಥವು; ಕಡೆಗೆ ಕೃಷ್ಣವದನವನ್ನು ತಮಗೆ ತೋರಿಸಿ ತಮ್ಮನ್ನು ಶೋಕಸಾಗರದಲ್ಲಿ ನೂಕಬೇಕಾಯಿತು, ಸರಕಾರ; ನಮ್ಮ ಭಾವೂಸಾಹೇಬರ ಹಾಗು ರಾವಸಾಹೇಬರ ಪರಾಕ್ರಮಕ್ಕೆ ಬೆಲೆಯಿಲ್ಲ; ಮಹಾರಾಜ, ನಮ್ಮ ಪಕ್ಷವು ಮೊದಲು ಮುಂದೆ ಬಂದಷ್ಟು ಪರಿಣಾಮದಲ್ಲಿ ಅನರ್ಥವನ್ನು ಹೊಂದಿತು. ನಮ್ಮಲ್ಲಿಯ ಸಾವಿರಾರು ಜನಹೆಂಗಸರು ಮುಸಲ್ಮಾನರ ಕಾವಾಗ್ನಿಗೆ ಆಹುತಿಯಾದರು. ಅಸಂಖ್ಯ ಕುದುರೆಗಳೂ ಆನೆಗಳೂ ಅವರ ಕೈಸೇರಿದವು. ನಮ್ಮ ಛಾವಣಿಯ ಸರ್ವ ಸಾಮಾನುಗಳನ್ನು ಆ ಲಂಡರು ಹರಣಮಾಡಿದರು. ಛಾವಣಿಯ ಕಂದಕವೆಲ್ಲ ನಮ್ಮ ಜನರ ಹೆಣಗಳಿಂದಲೇ ತುಂಬಿಹೋಯಿತು, ಎಂದು ಸಂಗ್ರಾಮದ ವರ್ಣನೆಯನ್ನು ಯಥಾರ್ಥವಾಗಿ ಮಾಡಿದನು. ಅವರ ಮುಖದಿಂದ ಅಸಂಗತಿಗಳನ್ನು ಕೇಳುತ್ತ ಹೋದಂತೆ ನಾನಾಸಾಹೇಬನ ಮನಸ್ಸು ಕೇವಲ ಉದಾಸವಾಗತೊಡಗಿತು. ಪುತ್ರವಿಯೋಗ, ಭ್ರಾತೃವಿಯೋಗ, ಆಪ್ತೇಷ್ಟರ ವಿಯೋಗ, ಕೀರ್ತಿವಿಯೋಗ ಮೊದಲಾದ ವಿಯೋಗ ಪೂರ್ವಕವಾದ ದುಃಖಗಳು ಅವನನ್ನು ಹಣ್ಣುಮಾಡಿಬಿಟ್ಟವು.

ಮುಂದೆ ಸ್ವಲ್ಪದಿವಸಗಳಲ್ಲಿ ನಾರೋಶಂಕರ, ವಿಠ್ಠಲಶಿವದೇವ ವಿಂಚೂರಕರ ಮುಂತಾದ ಸರದಾರರು ಭಾವೂಸಾಹೇಬನ ಹೆಂಡತಿಯಾದ ಪಾರ್ವತೀಬಾಯಿಯನ್ನು ಸುರಕ್ಷಿತವಾಗಿಕರಕೊಂಡು ಬಂದರು. ಅಸಂಖ್ಯ ಜನ ಹೆಂಗಸರುಮುಸಲ್ಮಾನರ ಕೈಸೇರಿದ್ದರೂ ಖುದ್ದುಭಾವೂಸಾಹೇಬನ ಹೆಂಡತಿಯು ಸುಖರಾಗಿ ಬಂದದ್ದಕ್ಕೆ ಮರಾಟರಿಗೆ ಒಂದು ಬಗೆಯ ಸಮಾಧಾನವೆನಿಸಿತು. ರಾಘೋಬಾದಾದಾ, ಹೋಳಕರ ಮೊದಲಾದವರು ಬಹುವಿಧವಾಗಿ ನಾನಾಸಾಹೇಬನ ಸಮಾಧಾನವನ್ನು ಮಾಡಿದರು. ಆದರೆ ಸಂಗ್ರಾಮದ ಮಹಾದುಃಖದಿಂದ ಬೆಂದುಬೆಂಡಾಗಿ ಹೋಗಿದ

ಆತನ ಮನಸ್ಸು ಸ್ವಸ್ಥವನ್ನು ಹೊಂದಲಿಲ್ಲ. ಅವನನ್ನು ಆ ಹೃದ್ರೋಗವು ಪೂರ್ಣವಾಗಿ ಆಕ್ರಮಿಸಿತು.

ಅಬ್ದುಲಿಯು ತನ್ನ ಪುತ್ರನು ತೀರಿ ಹೋದನೆಂಬ ಸುದ್ದಿಯನ್ನು ಕೇಳಿ ನಾನಾ ವೇದನಾ ತಾಪಗಳಿಗೆ ಬಂದನು. ಇದರ ಮೇಲೆ ಅವನು ಬಹಳ ದಿವಸ ಬದುಕಲಿಲ್ಲ. ಆರೇಳು ದಿನಗಳಲ್ಲಿ ಆ ಮಹಾದುಃಖದಿಂದ ಮುಕ್ತನಾದನು. ಶಿವ! ಶಿವ! ಮುಂದೆ ದಿಲ್ಲೀಶ್ವರ ವಂಶದ ಸ್ವಾಮಿಗಳು ಹುಟ್ಟಿ ಪ್ರಯತ್ನಪಟ್ಟರೂ ಮೊದಲಿನ ಗೌರವವು ತುಂಬಲಿಲ್ಲ. ಭರದಿಂದ ಊರ್ಧ್ವಗತಿಯನ್ನು ಹಿಡಿದಿದ್ದ ಮೊಗಲರ ಸಾಮ್ರಾಜ್ಯದ ಬೆಳವಣಿಗೆಯು ಒಮ್ಮೆ ಅಧೋಮುಖವಾದದ್ದು ಆಗಲೇಯಾಯಿತು! ದೈವಲೀಲೆಯು ವಿಚಿತ್ರವು!!